ಕರ್ನಾಟಕ ಸರ್ಕಾರ

ಪುರಂದರ ಸಾಹಿತ್ಯ ದರ್ಶನ

ಸಂಪುಟ ೪

ಕೀರ್ತನ ದರ್ಶನ

ಪುರಂದರ ಸಾಹಿತ್ಯ ದರ್ಶನ–ಸಂಪುಟ ೪

ಕೀರ್ತನ ದರ್ಶನ

ಸಂಪಾದಕರು

ವಿದ್ಯಾಲಂಕಾರ ಪ್ರೊ॥ ಸಾ. ಕೃ. ರಾಮಚಂದ್ರರಾವ್

ಸಹಾಯಕ ಸಂಪಾದಕರು

ಪ್ರೊ॥ ಅ. ರಾ. ಮಿತ್ರ

ರತ್ನಾ ಶಿವಶಂಕರ್

ಪ್ರಕಾಶನ

ಶ್ರೀ ಪುರಂದರದಾಸರ ಐದನೆಯ ಶತಮಾನೋತ್ಸವದ ಸಂದರ್ಭದಲ್ಲಿ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

೧೪-೩ಎ, ನೃಪತುಂಗ ರಸ್ತೆ, ಬೆಂಗಳೂರು ೫೬೦ ೦೦೨

PURANDARA SAHITYA DARSHANA (in 4 Volumes)—Collection of Purandaradasa's compositions with Annotations, and a Critical Estimate of his Personality, Times and Works : Vol. 1 : Jivana-Darshana (Compositions pertaining to his life and travel) ; Vol. 2 : Adhyatma-Darshana (Philosophical compositions) ; Vol. 3 : Samaja-Darshana (Compositions dealing with social and ethical problems) ; Vol. 4 : Kirtana-Darshana (Compositions dealing with Krishna ; Suladis, Ugabhogas and Udayaragas) ; Edited by Prof. S. K. Ramachandra Rao, and Associate Editors Prof. A. R. Mitra and Smt. Ratna Shivashankar ; Published by Sri A. R. Chandrahasa Gupta, I.A.S., for The Directorate of Kannada and Culture, Government of Karnataka, 14-3A, Nrupathunga Road, Bangalore 560002, on the occasion of the 500th Birth Anniversary of Sri Purandaradasa, 1985.

Pp. 397 + iv

© ಕರ್ನಾಟಕ ಸರ್ಕಾರ

ಛಾಯಾ ಚಿತ್ರಗಳು : ಬಿ. ಕೇಸರ್‌ಸಿಂಗ್

ಮೊದಲ ಮುದ್ರಣ : 1985. ಶ್ರೀ ಪುರಂದರದಾಸರ ಐದನೆಯ ಶತಮಾನೋತ್ಸವ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಪರವಾಗಿ, ಶ್ರೀ ಅ. ರಾ. ಚಂದ್ರಹಾಸಗುಪ್ತ, ಐ.ಎ.ಎಸ್., ಅವರಿಂದ ಪ್ರಕಟಿತ. ಐಬಿಎಚ್ ಪ್ರಕಾಶನ ಪ್ರಿಂಟರಿ, ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು 560 054ರ ಪರವಾಗಿ ಎಚ್. ಎಸ್. ಎನ್. ರಾವ್, ಅವರಿಂದ ಮುದ್ರಣವಾದದ್ದು.

ಪರಿವಿಡಿ

ಪ್ರಸ್ತಾವನೆ

ಪುರಂದರದಾಸರ ಕೀರ್ತನ ಪ್ರಕಾರಗಳು

ಭಾಗ ೧ : ಕೃಷ್ಣಲೀಲೆ

ಗೋಪಿಯರ ಕಾಮನೆ-ಯಶೋದೆಯ ಭಾಗ್ಯ-ತುಂಟಾಟಕ್ಕೆ ದೂರು-ಕೃಷ್ಣನಿಗಾಗಿ ಹುಡುಕಾಟ-ಯಶೋದೆಯ ಮುದ್ದಾಟ-ಕೃಷ್ಣನ ಅಳಲು-ಗೀತನರ್ತನ ಲೀಲೆ-ಜೋಗುಳ-ಶೋಭನ.

ಭಾಗ ೨ : ಸುಳಾದಿಗಳು

ಭಾಗ ೩ : ಉಗಾಭೋಗಗಳು

ಲೋಕನೀತಿ – ಹರಿಸ್ಮರಣೆ – ಹರಿದಾಸರು – ಹರಿದಾಸ್ಯ – ಆಹ್ನೀಕ-ಆಚಾರ – ಭಕ್ತಿ – ಮುಕ್ತಿ – ಫಲಶ್ರುತಿ.

ಭಾಗ ೪ : ಸಂಕೀರ್ಣ ಪ್ರಕರಣ

ಉದಯರಾಗ – ಗಜೇಂದ್ರ ಮೋಕ್ಷ – ನೂರೆಂಟು ನಾರಾಯಣ – ಕೇಶವ ನಾಮ – ಮಂಗಳ.

ಪರಿಶಿಷ್ಟ : ಪುರಂದರದಾಸರನಂತರ ಹರಿದಾಸಪರಂಪರೆ

ಪದಾರಂಭದ ಅಕಾರಾದಿ

ಪ್ರಸ್ತಾವನೆ

ಪುರಂದರದಾಸರ ಕೀರ್ತನ ಪ್ರಕಾರಗಳು

1

ಪುರಂದರದಾಸರು ಬದುಕಿ ಬಾಳಿದ ಕನ್ನಡನಾಡಿನಲ್ಲಿ ವೈದಿಕ ಸಂಪ್ರದಾಯಕ್ಕೆ ಸೇರಿದ ಧಾರ್ಮಿಕ ಸಾಹಿತ್ಯ ಬಹುಮಟ್ಟಿಗೆ ಸಂಸ್ಕೃತದಲ್ಲೇ ಇದ್ದಿತು. ಆ ವೇಳೆಗೆ ಕನ್ನಡ ಸಾಹಿತ್ಯವೇನೋ ಬೆಳೆದು ಬಹುದೂರ ಸಾಗಿ ಬಂದಿದ್ದಿತು. ಪಂಪ, ರನ್ನ, ಪೊನ್ನ, ನಾಗವರ್ಮ, ನಾಗಚಂದ್ರ, ಚಾವುಂಡರಾಯ, ಬಸವೇಶ್ವರ, ಹರಿಹರ, ರಾಘವಾಂಕ, ನೇಮಿಚಂದ್ರ, ಜನ್ನ, ಕುಮುದೇಂದು ಮೊದಲಾದ ಮಹಾಕವಿಗಳು ಕನ್ನಡದ ಭಂಡಾರವನ್ನು ತುಂಬಿದ್ದರು. ಆದರೆ ಬಸವೇಶ್ವರರನ್ನು ಬಿಟ್ಟರೆ ಉಳಿದವರ ಕೃತಿಗಳೆಲ್ಲ ಸಾಮಾನ್ಯ ಜನರ ಹಿಡಿತಕ್ಕೆ ಸಿಗುವಂತಿರಲಿಲ್ಲ ; ಜನರು ತಮ್ಮ ಧಾರ್ಮಿಕ ಕಲ್ಪನೆಗಳನ್ನೂ ಆಚಾರಗಳನ್ನೂ, ರೀತಿ ನೀತಿಗಳನ್ನೂ ಈ ಕಾವ್ಯಗಳಿಂದ ರೂಪಿಸಿ ಕೊಳ್ಳುವುದು ಸಾಧ್ಯವಿರಲಿಲ್ಲ. ಬಸವೇಶ್ವರ, ಅಲ್ಲಮಪ್ರಭು, ಚೆನ್ನಬಸವ, ಅಕ್ಕ ಮಹಾದೇವಿ ಇವರ ವಚನಗಳೇನೋ ಬೇಗ ಮತ್ತು ಬಹುವಾಗಿ ಜನಪ್ರೀತಿಯನ್ನು ಗಳಿಸಿಕೊಂಡುವು. ಆದರೆ ಅವುಗಳ ಪ್ರಭಾವ ವೈದಿಕ ಸಂಪ್ರದಾಯದೊಳಗೆ ನುಸುಳಿ ಕೊಂಡು ಬರಲಿಲ್ಲ. ಈ ಸಂಪ್ರದಾಯಗಳ ಜನರು ಧರ್ಮದ ವಿವರಣೆಗೆ, ನಿರೂಪಣೆಗೆ, ಉಪದೇಶಕ್ಕೆ ಸಂಸ್ಕೃತ ಗ್ರಂಥಗಳನ್ನೇ ಅವಲಂಬಿಸುತ್ತಿದ್ದರು.

ಆದರೆ ನೆರೆಯ ತಮಿಳುನಾಡಿನಲ್ಲಿ ಆಳ್ವಾರರ ದಿವ್ಯಪ್ರಬಂಧಗಳೆಂದು ಹೆಸರಾದ ತಮಿಳು ಪಾಶುರಗಳು ಈ ಕೊರತೆಯನ್ನು ತುಂಬಿದ್ದುವು. ಅಲ್ಲಿ ಅವು ವೈದಿಕ ಸಂಪ್ರದಾಯದ ನಿಷ್ಠಾವಂತರಿಗೆ ಕೂಡ ಸಂಸ್ಕೃತ ಗ್ರಂಥಗಳಷ್ಟೇ ಮಾನ್ಯವಾಗಿದ್ದುವು. ಸ್ವಯಂ ರಾಮಾನುಜಾಚಾರ್ಯರೇ ಅವನ್ನು ಗೌರವದಿಂದ ಕಂಡು, ಜನರ ನಡುವೆ ಅವುಗಳ ಪ್ರಚಾರವಾಗಬೇಕೆಂದು ಆಶಿಸಿದರು. ಅವರ ನೇರವಾದ ಶಿಷ್ಯರು ಅವಕ್ಕೆ ವೈದಿಕ ಪದ್ಧತಿಯ ಪ್ರಮಾಣಗ್ರಂಥಗಳಿಗಿದ್ದ ಮೇಲ್ಮೆಯನ್ನೇ ಒದಗಿಸಿದರು ; ತಮಿಳು ಪ್ರಬಂಧಗಳನ್ನು ದ್ರಮಿಡೋಪನಿಷತ್ತೆಂದು ಕಾಣಿಸಿದರು. ಪುರಂದರದಾಸರ ಪರಮ ಗುರುಗಳಾದ ಶ್ರೀಪಾದರಾಜರು (ಮರಣ 1480) ತಮಿಳುನಾಡಿನ ಶ್ರೀರಂಗದಲ್ಲಿದ್ದ ವರು. ಶ್ರೀರಂಗವು ರಾಮಾನುಜ ಸಂಪ್ರದಾಯದ ವೈಷ್ಣವರಿಗೆ ಭೂವೈಕುಂಠ ; ಆಳ್ವಾರರ ಪಾಶುರಗಳ ಸಂಕಲನ ನಡೆದದ್ದು ಅಲ್ಲಿಯೇ, ಪ್ರಚಾರ ನಡೆದದ್ದು ಅಲ್ಲಿಂದಲೇ. ಶ್ರೀರಂಗದ ದೇವಾಲಯದಲ್ಲಿ ಮೊದಲನೆಯ ಕುಲೋತ್ತುಂಗ ಚೋಳನ

ಕಾಲದಲ್ಲಿ, ಕ್ರಿಸ್ತಾಬ್ದ 1117 ರಷ್ಟು ಹಿಂದೆಯೇ, ತಮಿಳು ಪ್ರಬಂಧಗಳನ್ನು ವೇದ ಮಂತ್ರಗಳಿಗೆ ಸರಿಸಮಾನವಾಗಿ ಹಾಡುವ ವಾಡಿಕೆ ಬಂದಿತು; ಸೌರ ಪಂಚಾಂಗದ ಮಾರ್ಗಳಿ ಮಾಸದ ಶುಕ್ಲ ಏಕಾದಶಿಯಿಂದ ಮೊದಲುಮಾಡಿ ಹತ್ತು ದಿನಗಳವರೆಗೆ ತಮಿಳು ಪಾಶುರಗಳನ್ನು ಗುಡಿಯಲ್ಲಿ ಆರೈಯಾರೆಂಬ ಗಾಯಕರು ಅಧ್ಯಯನ ಮಾಡುವುದು ಪದ್ಧತಿ.

ಈ ಪದ್ಧತಿಯು ಕಾಲಕ್ರಮದಲ್ಲಿ ತಪ್ಪಿಹೋಗಿದ್ದಿತೆಂದೂ, ರಾಮಾನುಜ ಸಂಪ್ರದಾಯದಲ್ಲಿ ಸುಪ್ರಸಿದ್ಧ ಸಂತರಾದ ವೇದಾಂತ ದೇಶಿಕರು 1360ರ ಸುಮಾರಿಗೆ ಮತ್ತೆ ಇದನ್ನು ಶ್ರೀರಂಗದಲ್ಲಿ ಬಳಕೆಗೆ ತಂದರೆಂದೂ ಉಲ್ಲೇಖವಿದೆ. ಶ್ರೀಪಾದ ರಾಜರು ತಮ್ಮ ಆಶ್ರಮಗುರುಗಳಾದ ಸ್ವರ್ಣವರ್ಣತೀರ್ಥರೊಂದಿಗೆ (ಮಧ್ವಾ ಚಾರ್ಯರ ನೇರವಾದ ಶಿಷ್ಯರಾದ ಪದ್ಮನಾಭ ತೀರ್ಥರಿಂದ ಏಳನೆಯವರು, ಶ್ರೀರಂಗ ದಲ್ಲೇ ಅವರ ಮಠವಿದ್ದಿತು) ಶ್ರೀರಂಗದಲ್ಲೇ ಇದ್ದವರು. ಆ ವೇಳೆಗಾಗಲೇ ತಮಿಳು ಪ್ರಬಂಧಗಳ ಮೇಲೆ ರಾಮಾನುಜರ ಶಿಷ್ಯರಾದ ತಿರುಕ್ಕುರುಕೈಪ್ಪಿರಾನ್ ಪಿಳ್ಳೈ ಮತ್ತು ನಂಜೀಯರ್ (ವೇದಾಂತಿ ಜೀಯರ್), ಪೆರಿಯ ಆಚ್ಚನ್ ಪಿಳ್ಳೈ, ವಡಕ್ಕು ತಿರುವೀಧಿಪಿಳ್ಳೈ ಮೊದಲಾದವರು ವ್ಯಾಖ್ಯಾನಗಳನ್ನು ರಚಿಸಿ (1220 ರಿಂದ 1360ರ ವರೆಗೆ) ಪ್ರಬಂಧಗಳ ಪ್ರಚಾರಕ್ಕೆ ನೆರವಾಗಿದ್ದರು. ಶ್ರೀಪಾದರಾಜರ ಕಾಲದಲ್ಲೇ, ಶ್ರೀರಂಗದಲ್ಲೇ ಇದ್ದ ತಿರುಮಲೈ ಆಳ್ವಾನ್ (ತಿರುವಾಯ್ಮೊಳಿ ಪಿಳ್ಳೈ, ಪಿಳ್ಳೈ ಲೋಕಾಚಾರ್ಯರ ಮಗ) ಎಂಬುವರು ಪೆರಿಯ ಆಳ್ವಾರರ ತಿರುಮೊಳಿಯ ಮೇಲೆ ವ್ಯಾಖ್ಯಾನವೊಂದನ್ನು ರಚಿಸಿದರು.

ಹೀಗಿರುವಾಗ ಶ್ರೀಪಾದರಾಜರು ತಮಿಳು ಪ್ರಬಂಧಗಳ ಸ್ವಾರಸ್ಯವನ್ನು ಸವಿಯದಿರುವುದು ಸಾಧ್ಯವಿಲ್ಲ. ಅವರ ರಚನೆಗಳಲ್ಲಿ ಪ್ರಬಂಧಗಳ ಪ್ರಭಾವವನ್ನು ಸುಲಭವಾಗಿ ಗುರುತಿಸಬಹುದು. ಮತ್ತು ಶ್ರೀಪಾದರಾಜರ ಕಾಲದಲ್ಲೇ ಶ್ರೀರಂಗ ದಲ್ಲಿ ಮತ್ತೊಂದು ಪದ್ಧತಿ ಮೊದಲಾಯಿತು. ಇದು 'ಇಯಲ್' ಮತ್ತು 'ಇಶೈ' ಎಂಬ ಪ್ರಕಾರಗಳಲ್ಲಿರುವ ಭೇದವನ್ನು ಕುರಿತದ್ದು. ತಮಿಳಿನಲ್ಲಿ 'ಇಯಲ್' ಎಂದರೆ ಸಾಹಿತ್ಯ ಪ್ರಧಾನವಾದ, ವೈದಿಕವಾಙ್ಮಯದ ಪ್ರಭಾವವನ್ನೊಳಗೊಂಡ, ಪಾಠಕ್ರಮ; ವೇದಮಂತ್ರಗಳನ್ನು ಹೇಳುವಂತೆ, ಉಚ್ಚಾರಣೆಯ ಕಡೆ ಗಮನವಿರಿಸಿ, ತಮ್ಮ ಕಲ್ಪನೆಗೆ ಅವಕಾಶವಿಲ್ಲದಂತೆ ತಮಿಳು ಪದಗಳನ್ನು ಪಠಿಸುವುದು. ಇದು 'ಇಯಲ್ ಸೇವೈ' ಎನಿಸಿಕೊಳ್ಳುತ್ತದೆ. ದೇವರ ಉತ್ಸವ ಗುಡಿಯಿಂದ ಬಿಜಯಮಾಡುವಾಗ ಹಲವರು ಪಾಠಕರು ಸಾಲಾಗಿ ನಿಂತು ಈ ಪದ್ಧತಿಯನ್ನು ಹಿಡಿದು ಪಾಠ ಮಾಡುತ್ತ ಉತ್ಸವದ ಜೊತೆ ನಡೆದುಹೋಗುವರು. ನಿರ್ದಿಷ್ಟವಾದ ಪಾಠಕ್ರಮವಿರುವುದರಿಂದ ಗೋಷ್ಠಿಯಲ್ಲಿ ಈ ಸೇವೆ ಸಲ್ಲಿಸುವರು. ಇನ್ನೊಂದು ಪ್ರಕಾರವಾದ 'ಇಶೈ' ಸಂಗೀತ ಪ್ರಧಾನವಾದುದು. ತಮಿಳು ಪ್ರಬಂಧಗಳನ್ನು ರಾಗತಾಳಗಳಲ್ಲಿ ಹಾಡುವರು; ಸಂಗೀತ ವಾದ್ಯಗಳೊಂದಿಗೆ ಸೇರಿಸುವರು. ಇಲ್ಲಿ ರಾಗವಿಸ್ತಾರ, ಕಲ್ಪನೆಗಳಿಗೆ

ಅವಕಾಶವುಂಟು ; ಕೆಲವೊಮ್ಮೆ ಹಾಡುಪವರು ಅಭಿನಯವನ್ನೂ ಬಳಸುವರು. ಶ್ರೀಪಾದರಾಜರು ಶ್ರೀರಂಗದಲ್ಲಿ ಈ ಪದ್ಧತಿಯ ಉಗಮವನ್ನು ಕಣ್ಣಾರೆ ಕಂಡಿದ್ದಿರಬೇಕು. ಅವರ 'ಲಕ್ಷ್ಮೀನೃಸಿಂಹಪ್ರಾದುರ್ಭಾವದಂಡಕ'ವೆನ್ನುವ ರಚನೆ ಪಾಠಪ್ರಧಾನವಾದ 'ಇಯಲ್' ಪ್ರಕಾರಕ್ಕೆ ಹೊಂದಿಕೊಳ್ಳುವುದನ್ನು ಗಮನಿಸಬೇಕು ; ಉಳಿದ ಪದಗಳು, ಸುಳಾದಿಗಳು ಗೇಯ ರೂಪವಾದ 'ಇಶೈ' ಪ್ರಕಾರಕ್ಕೆ ಸೇರುವುವು.

ಶ್ರೀರಂಗದಲ್ಲಿ ಒದಗಿದ ಪ್ರಭಾವವನ್ನು ಸ್ಮರಿಸಿಯೇ ಶ್ರೀಪಾದರಾಜರು ತಮ್ಮ ಮುದ್ರಿಕೆಯನ್ನು 'ಶ್ರೀರಂಗವಿಠಲ'ನೆಂದು ಗ್ರಹಿಸಿದರೆಂದು ತೋರುತ್ತದೆ. ಇದಕ್ಕೆ ನಿದರ್ಶನವಾಗಿ ಶ್ರೀರಂಗನಾಥನ ವರ್ಣನೆಯಾದ 'ಶ್ರೀರಂಗವಿಠಲನ ಶ್ರೀ ಮುಕುಟಕೆ ಶರಣು' ಎಂಬ ಕೃತಿಯನ್ನು ನೋಡಬಹುದು. ಸ್ವರ್ಣವರ್ಣತೀರ್ಥರು ಕಾಲವಾದ ಮೇಲೆ ಶ್ರೀಪಾದರಾಜರು ಕೆಲವು ವರ್ಷಗಳು ಶ್ರೀರಂಗದಲ್ಲೇ ಇದ್ದು ಅನಂತರ ಮುಳುಬಾಗಿಲಿಗೆ ಬಂದು ಅಲ್ಲಿ ತಮ್ಮ ಮಠವನ್ನು ಏರ್ಪಡಿಸಿಕೊಂಡರಷ್ಟೆ. ಆಗ ಆಳ್ವಾರರ ಪಾಶುರಗಳಂತೆ ಕನ್ನಡದಲ್ಲೂ ಪದಗಳಿದ್ದರೆ ಈ ಕಡೆ ಭಕ್ತಿಯ ಪ್ರಚಾರ ಸುಲಭವಾಗಿ ಆದೀತೆಂದು ಬಗೆದು ದಾಸಸಾಹಿತ್ಯವನ್ನು ಮೊದಲು ಮಾಡಿದರೋ ಏನೋ. ಅವರಿಗೆ ಪೂರ್ವದಲ್ಲಿ ಹರಿದಾಸರಿದ್ದರೋ, ದಾಸಪಂಥವಿದ್ದಿತೋ ಹೇಳುವುದು ಕಷ್ಟ. ನರಹರಿತೀರ್ಥರ ಹೆಸರನ್ನೇನೋ ಹೇಳುತ್ತಾರೆ. ಆದರೆ ಅವರ ರಚನೆಗಳು ಅಲ್ಪ, ಮತ್ತು ಬಿಡಿಯಾದುವು. ಶ್ರೀಪಾದರಾಜರು ಕೀರ್ತನ ಪದ್ಧತಿಯಲ್ಲೇ ವಿಪುಲವಾಗಿ ರಚನೆಗಳನ್ನು ಮಾಡಿದರು ; ಸುಳಾದಿ, ಉಗಾಭೋಗ, ವೃತ್ತನಾಮ, ದಂಡಕ ಮೊದಲಾದ ಹಲವು ಪ್ರಕಾರಗಳನ್ನು ಕೀರ್ತನ ಪದ್ಧತಿಗೆ ಅಳವಡಿಸಿಕೊಂಡರು. ತಮಿಳು ಪಾಶುರಗಳಿಗಿಂತ ಹೆಚ್ಚಿನ ವೈವಿಧ್ಯವನ್ನು ದಾಸ ಸಾಹಿತ್ಯದಲ್ಲಿ ಕಾಣುತ್ತೇವೆ. ಇದು ಶ್ರೀಪಾದರಾಜರ ಪ್ರಯತ್ನದ ಫಲವೇ ; ಮುಂದೆ ವ್ಯಾಸರಾಯಸ್ವಾಮಿಗಳೂ ಪುರಂದರದಾಸರೂ ಇದನ್ನು ರೂಢಿಸಿದರು.

ಶ್ರೀಪಾದರಾಜರು ಶಿವಶರಣರ ವಚನಗಳಿಂದ ಪ್ರಭಾವಿತರಾಗಿದ್ದರೋ ಇಲ್ಲವೋ ನಿಶ್ಚಯವಿಲ್ಲ. ವಚನಗಳಂತೂ ಬಳಕೆಯಲ್ಲಿದ್ದುದು ದಿಟ ; ಉಗಾಭೋಗಗಳು ವಚನಗಳಂತೆ ಮೈದಳೆದದ್ದೂ ದಿಟ. ಇದರ ವಿಮರ್ಶೆ ಮುಂದೆ ಬರುತ್ತದೆ. ಆದರೆ ಚಂದ್ರಗಿರಿಯಲ್ಲಿ ಶ್ರೀಪಾದರಾಜರು ಇದ್ದಾಗ (ಸಾಳುವ ನರಸಿಂಹನ ಕರೆಯನ್ನು ಮನ್ನಿಸಿ ಅಲ್ಲಿ ಕೆಲವು ವರ್ಷಗಳನ್ನು ಕಳೆದ ಉಲ್ಲೇಖವಿದೆ), ತೆಲುಗು ವಾಙ್ಮಯದ ಪರಿಚಯವನ್ನು ಪಡೆದಿರುವುದು ಸಾಧ್ಯ. ಪೋತನ ಕವಿಯ ಆಂಧ್ರ ಮಹಾಭಾಗವತ ಆಗಲೇ ಪ್ರಸಿದ್ಧವಾಗಿದ್ದಿತು. ಕನ್ನಡನಾಡಿನಲ್ಲಿ ಹರಿದಾಸರು ಭಾಗವತವನ್ನು ಹೆಚ್ಚಾಗಿ ಅವಲಂಬಿಸುವಂತೆ ಮಾಡಿದವರು ಶ್ರೀಪಾದರಾಜರೇ ಎಂಬುದನ್ನು ನೆನಪಿಗೆ ತಂದುಕೊಳ್ಳಬೇಕು. ಆದರೆ ಆಂಧ್ರ ಭಾಗವತದ ನೇರವಾದ ಪ್ರಭಾವ ಶ್ರೀಪಾದರಾಜರ ರಚನೆಗಳಲ್ಲಿ ಕಾಣುವುದಿಲ್ಲ.

ಕಾಕತೀಯ ರಾಜನಾದ ಇಮ್ಮಡಿ ಪ್ರತಾಪರುದ್ರನ ಕಾಲದಲ್ಲಿ (1295–1326) ತೆಲುಗು ವಚನ ಸಂಗೀತ ಪದ್ಧತಿಯ ಪ್ರವರ್ತಕನಾದ ಕೃಷ್ಣಮಾಚಾರ್ಯನೆಂಬ ಕವಿಯ ಕೃತಿಗಳು ಶ್ರೀಪಾದರಾಜರ ಕಾಲದಲ್ಲಿ ಪ್ರಚಾರದಲ್ಲಿದ್ದುವು. ಈತನು ಒಂದು ಲಕ್ಷಕ್ಕಿಂತ ಹೆಚ್ಚು ವಚನಗಳನ್ನು ರಚಿಸಿದ್ದನಂತೆ. ಬಹುಮಟ್ಟಿಗೆ ಸಿಂಹಾಚಲದ ವರಾಹ ನರಸಿಂಹನನ್ನು ಕುರಿತ ವಚನಗಳು. ಈತನ ವಚನಗಳನ್ನು ಹಲವಾರು ರಾಗಗಳಲ್ಲಿ ಹಾಡುತ್ತಿದ್ದರು. ಅಹೋಬಲ ಮತ್ತು ಸಿಂಹಾಚಲದ ಗುಡಿಗಳಲ್ಲಿ ಸಂಕೀರ್ತನ ಕಾರರು ಇವನ್ನು ಹಾಡುತ್ತಿದ್ದುದನ್ನು ಶ್ರೀಪಾದರಾಜರು ಕೇಳಿರಬಹುದು. ಭಕ್ತಿಯ ಭಾವವನ್ನು ಹೊರಸೂಸುವ ಈ ರಚನೆಗಳನ್ನು ತಾಳ್ಳಪಾಕ ಅಣ್ಣಮಾ ಚಾರ್ಯರೂ ಪ್ರಶಂಸಿಸಿದ್ದಾರೆ. ಇದೇ ಕವಿಯ 'ಶತಕೋಪವಿನ್ನಪಮು' ಎಂಬ ಗೇಯ ರಚನೆಯೂ ಪ್ರಸಿದ್ಧವಾಗಿದ್ದಿತು.

ತಾಳ್ಳಪಾಕ ಅಣ್ಣಮಾಚಾರ್ಯರು (1408–1507) ಶ್ರೀಪಾದರಾಜರ ಸಮ ಕಾಲಿಕರು. ಚಂದ್ರಗಿರಿಯಲ್ಲಿರುತ್ತಿದ್ದ ಶ್ರೀಪಾದರಾಜರು ಅಲ್ಲಿಂದ ಮೂರುನಾಲ್ಕು ಮೈಲು ದೂರವಿರುವ ತಿರುಪತಿಬೆಟ್ಟದ ಮೇಲಿರುತ್ತಿದ್ದ ಅಣ್ಣಮಾಚಾರ್ಯರನ್ನು ಸಂಧಿಸದಿರುವುದು ಸಾಧ್ಯವಿಲ್ಲ. ಶ್ರೀಪಾದರಾಜರ ರಚನೆಗಳಿಂದ ಅಣ್ಣಮಾಚಾರ್ಯರು ಸ್ಫೂರ್ತಿಪಡೆದರೆಂಬ ಉಲ್ಲೇಖ ತೆಲುಗು ಸಾಹಿತ್ಯ ಚರಿತ್ರೆಯಲ್ಲೇ ಬರುತ್ತದೆ. ಅಣ್ಣಮಾಚಾರ್ಯರ ಶೃಂಗಾರ ಸಂಕೀರ್ತನ, ಭಕ್ತಿಗೀತ, ವೈರಾಗ್ಯ ಪದ್ಧತಿಗಳೂ ಶ್ರೀಪಾದರಾಜರ ರಚನೆಗಳೂ ಹೊಂದಾಣಿಕೆಗೆ ದೊರಕುತ್ತವೆ. ಪರಸ್ಪರ ಪ್ರಭಾವದ ವಿಚಾರವಾಗಿ ಏನನ್ನೂ ನಿರ್ದಿಷ್ಟವಾಗಿ ಹೇಳುವುದು ಸಾಧ್ಯವಿಲ್ಲವಾದರೂ ಅವರಿಬ್ಬರ ಸಂಬಂಧವಿದ್ದುದು ತಿಳಿದುಬರುತ್ತದೆ. ಶ್ರೀಪಾದರಾಜರ ಪ್ರಶಿಷ್ಯರಾದ ಪುರಂದರ ದಾಸರೂ ಅಣ್ಣಮಾಚಾರ್ಯರನ್ನು ಬೆಟ್ಟದ ಮೇಲೆ ಕಂಡಿದ್ದ ವಿಚಾರ ಆಗಲೇ ಪ್ರಸ್ತಾಪಕ್ಕೆ ಬಂದಿದೆ.

ಅಣ್ಣಮಾಚಾರ್ಯರು ಬೆಟ್ಟದ ಮೇಲಿನ ಗುಡಿಯಲ್ಲಿ ಸಂಕೀರ್ತನ ಸೇವೆ ನಡೆಸುವಾಗ ಹರಿದಾಸ ವೇಷವನ್ನು ಧರಿಸುತ್ತಿದ್ದರೆಂಬುದು, ಗುಡಿಯಲ್ಲಿ ಒಳ ಪ್ರಾಕಾರದಲ್ಲೇ ಇರುವ ಸಂಕೀರ್ತನ ಭಂಡಾರದ ಹೊರಗೆ ಇರುವ ಅವರ ಶಿಲ್ಪ ಪ್ರತಿಕೃತಿಯಿಂದ ತಿಳಿದು ಬರುತ್ತದೆ. ಗೀತನರ್ತನಕ್ಕೆ ಅನುಕೂಲವಾಗುವಂತೆ ಕೈಯಲ್ಲಿ ದಂಡಿಗೆ (ಸಣ್ಣ ತಂಬೂರಿ), ಕಾಲಲ್ಲಿ ಗೆಜ್ಜೆಗಳನ್ನು ಗುರುತಿಸಬಹುದು ; ತಲೆಯ ಮೇಲೆ ಆ ಕಾಲದ ಟೊಪ್ಪಿಗೆಯಿದೆ. ಶ್ರೀರಂಗದ ಗುಡಿಯಲ್ಲಿ ತಮಿಳು ಪ್ರಬಂಧಗಳನ್ನು ಹಾಡುವವರು ತಲೆಗೆ ದೇವರ ಶೇಷವಸ್ತ್ರವನ್ನು ರುಮಾಲಿನಂತೆ ಸುತ್ತಿಕೊಳ್ಳುತ್ತಿದ್ದರು ; ಕೈಯಲ್ಲಿ ತಂಬೂರಿ, ಕಾಲಲ್ಲಿ ಗೆಜ್ಜೆ ; ತಾಳಕ್ಕೆ ಚಿಟಿಗೆ. ಕನ್ನಡನಾಡಿನ ಹರಿದಾಸರು ಈ ಪದ್ಧತಿಯನ್ನೇ ಹಿಡಿದವರು. ಈ ಪದ್ಧತಿಗೆ ಮೂಲ ವೆಲ್ಲಿಯದೋ ತಿಳಿದುಬರುವುದಿಲ್ಲ. ಅಂತೂ ಶ್ರೀಪಾದರಾಜರ ಕಾಲದಿಂದ ಹರಿದಾಸರ

ವೇಷ ಇದೇ ಆಗಿ ಉಳಿದು ಬಂದಿದೆ. ತ್ಯಾಗರಾಜರು ಉಂಛ ವೃತ್ತಿಗೆ ಹೋಗು ವಾಗಲೂ ಇದೇ ವೇಷವನ್ನು ಧರಿಸುತ್ತಿದ್ದರು.

ಅದು ಹಾಗಿರಲಿ. ಶ್ರೀಪಾದರಾಜರು ಹರಿದಾಸ ಪದ್ಧತಿಯನ್ನು ಕನ್ನಡನಾಡಿನಲ್ಲಿ ಬೇರೂರಿಸುವ ಸಂದರ್ಭದಲ್ಲಿ ಜಾನಪದ ಗೇಯಪ್ರಕಾರಗಳಲ್ಲಿ ಹಲವನ್ನು ಬಳಸಿ ಕೊಂಡುದಕ್ಕೆ ನಿದರ್ಶನಗಳಿವೆ. ಇದೇ ಕೆಲಸವನ್ನು ಅಣ್ಣಮಾಚಾರ್ಯರೂ ಮಾಡಿ ದರು ; ಅವರಿಗಿಂತ ಮುಂಚೆ ಕೃಷ್ಣಮಾಚಾರ್ಯರೂ ಮಾಡಿದ್ದರು ; ಮುಂದೆ ಶ್ರೀಪಾದರಾಜರ ಪ್ರಭಾವದಿಂದ ವ್ಯಾಸರಾಯಸ್ವಾಮಿಗಳೂ ಪುರಂದರದಾಸರೂ ವಿಶೇಷವಾಗಿ ಮಾಡಿದರು. ಮಂಗಳದ ಹಾಡುಗಳು, ಉದಯರಾಗ, ಲಾಲಿ, ಜೋಗುಳ, ಎಚ್ಚರಿಕೆ, ಶೋಭನ, ಸುವ್ವಿ, ಧವಳ, ನಿವಾಳಿಸುವ ಪದಗಳು ಮೊದಲಾಗಿ ಹಲವು ಗೇಯ ಪ್ರಕಾರಗಳನ್ನು ಜಾನಪದ ನೆಲೆಯಿಂದ ಎತ್ತಿಕೊಂಡು ಅವಕ್ಕೆ ಮಾರ್ಗೀ ಸಂಗೀತದ ಕಳೆಯನ್ನು ಅಳವಡಿಸಿದರು. ವಿಜಯನಗರ ಸಂಸ್ಕೃತಿಯ ಮುಖ್ಯ ಪ್ರವೃತ್ತಿಯೇ ದೇಶಿಯನ್ನು ಮಾರ್ಗಿಯನ್ನಾಗಿ ಪರಿವರ್ತಿಸುವುದೆಂದು ಹಿಂದೆಯೇ ಹೇಳಿದೆನಷ್ಟೆ. ಈ ಸಂಸ್ಕೃತಿಯ ಸ್ಫೂರ್ತಿಯಿಂದಲೇ ಹೊರಹೊಮ್ಮಿದ ಹರಿದಾಸರು ಮಾಡಿದ ಕೆಲಸವನ್ನು ಈ ಚೌಕಟ್ಟಿನಲ್ಲಿ ಗುರುತಿಸಬೇಕು.

ಲಾಲಿ, ಜೋಗುಳ, ಸುವ್ವಿ, ಉಯ್ಯಾಲೆ ಹಾಡುಗಳು, ಮಂಗಳದ ಹಾಡುಗಳು ಮೊದಲಾದವು ತೆಲುಗು ಕನ್ನಡ ಸಾಹಿತ್ಯಗಳೆರಡರಲ್ಲೂ ವಿಶೇಷವಾಗಿ ಸೇರಿಬಂದುದು ಆ ಕಾಲದಲ್ಲೇ. ಅದಕ್ಕೆ ಅನುಗುಣವಾದ ಸಂಗೀತ ಸಂಯೋಜನೆಯೂ ಸಿದ್ಧವಾಯಿತು. ಮಗುವನ್ನು ಮಲಗಿಸಲು 'ರೀಸಾ' ಎಂಬ ಸ್ವರಕ್ರಮವನ್ನನುಸರಿಸಿ 'ಲಾಲಿ' ಹಾಡು ಗಳು ಹೆಚ್ಚಾಗಿ ಶ್ರಮಪ್ರಧಾನವಾದ ಆನಂದಭೈರವಿ, ನವರೋಜು, ಶ್ರೀರಾಗ ಗಳಲ್ಲಿಯೂ, ಮಲಗಿದ್ದ ಮಗುವನ್ನು ಎಬ್ಬಿಸಲು ಉತ್ಸಾಹಭರಿತವಾದ ಭೂಪಾಳಿ, ಬೌಳಿ ಮೊದಲಾದ ರಾಗಗಳಲ್ಲಿಯೂ ರಚನೆಗೊಂಡುದು ಸಹಜವೇ. ಹರಿದಾಸರು ಸ್ವೀಕರಿಸಿದ ಜಾನಪದ ಪದ್ಧತಿಯ ಗೇಯಪ್ರಕಾರಗಳು ಬಹುಮಟ್ಟಿಗೆ ಲಯಪ್ರಧಾನ ವಾದುವು. ರಚನೆಗಳು ತ್ರಿಶ್ರ, ಚತುರಶ್ರ, ಖಂಡಗತಿಗಳಲ್ಲಿ ನಡೆಯುವಾಗ ಸಂಕೀರ್ತನೆಗೆ ಅನುಕೂಲವಾಗುತ್ತವೆ. ಈ ಗುಣವನ್ನು ಹರಿದಾಸರು ಜಾಣ್ಮೆಯಿಂದ ಬಳಸಿಕೊಂಡರು. ಕೃಷ್ಣಮಾಚಾರ್ಯರ ವಚನಗಳು ಲಯಪ್ರಧಾನವಾಗಿದ್ದವು ; ಅವು ರಚನೆಯಲ್ಲಿ ಛಂದೋಬದ್ಧವಾಗಿ, ತಾಳಬದ್ಧವಾಗಿರುತ್ತಿದ್ದುವು. ಇವರೂ ಅಣ್ಣಮಾಚಾರ್ಯರೂ ತಮ್ಮ ರಚನೆಗಳನ್ನು ಜಾನಪದ ಸಂದರ್ಭದಿಂದ ಎತ್ತಿಕೊಂಡ ಕೊಂಡಮಲಹರಿ, ಯರಕುಲ ಕಾಂಬೋದಿ, ದೇಶಾಳ, ಪಾಡಿ, ಭೌಳಿ, ಮುಖಾರಿ, ಪಂತು, ಸಾಳಂಗ, ಗೀತನಟ್ಟ, ಅಚಾಲಿ, ಅಮರಸಿಂಧು ಮೊದಲಾದ ರಾಗಗಳಲ್ಲೇ ಸಿದ್ಧಪಡಿಸಿದರೆಂಬು ದನ್ನೂ ಗಮನಿಸಬೇಕು. ಈ ರಾಗಗಳು ಬಹುಮಟ್ಟಿಗೆ ಹರಿದಾಸರ ರಚನೆಗಳಲ್ಲೂ ತೋರಿಕೊಳ್ಳುತ್ತವೆ.

ಹೀಗೆ ದಾಸಕೂಟದ ಕಲ್ಪನೆಗೆ ಕಾರಣರೆನ್ನಬಹುದಾದ ಶ್ರೀಪಾದರಾಜರು ದೇಶ ಭಾಷೆಯಾದ ಕನ್ನಡದಲ್ಲಿ ತಾವೇ ರಚನೆಗಳನ್ನು ಮಾಡಿದುದಲ್ಲದೆ, ಹರಿದಾಸರ ವ್ಯವಹಾರದಲ್ಲಿ ಕನ್ನಡ ಕೃತಿಗಳಿಗೇ ಹೆಚ್ಚಿನ ಬೆಲೆಯನ್ನು ಒದಗಿಸಿಕೊಟ್ಟರು. ಅಷ್ಟು ಮಾತ್ರವಲ್ಲದೆ, ಜನಸಾಮಾನ್ಯರ ಅಭಿರುಚಿಗಳನ್ನೂ ಅಗತ್ಯವನ್ನೂ ಗಮನಿಸಿ ಜಾನಪದ ನೆಲೆಯಿಂದ ಗೇಯಪ್ರಕಾರಗಳನ್ನೂ ಗಾನಪ್ರಕ್ರಿಯೆಗಳನ್ನೂ ತಮ್ಮ ರಚನೆಗಳಲ್ಲಿ ಅಳವಡಿಸಿಕೊಂಡರು. ಇದೊಂದು ಕ್ರಾಂತಿಯೇ ಎನ್ನಬಹುದು. ಕನ್ನಡನಾಡಿನ ಆಧ್ಯಾತ್ಮಿಕರಂಗದಲ್ಲಿ ವೈದಿಕ ನಿಷ್ಠೆಯ ಹಂದರದಲ್ಲಿ ಈ ಪ್ರಯೋಗವನ್ನು ನಡೆಸಿದವರು ಶ್ರೀಪಾದರಾಜರೇ. ಇವರ ಪ್ರಭಾವಕ್ಕೆ ಒಳಗಾದ ವ್ಯಾಸರಾಯಸ್ವಾಮಿಗಳು ಇವರ ಪ್ರಯೋಗವನ್ನು ಇನ್ನಷ್ಟು ರೂಢಿಸಿದರು. ವ್ಯಾಸರಾಯಸ್ವಾಮಿಗಳಿಂದ ಸ್ಫೂರ್ತಿಯನ್ನು ಪಡೆದುಕೊಂಡ ಪುರಂದರದಾಸರು ಈ ಪ್ರಯೋಗಕ್ಕೆ ವಿಶಿಷ್ಟವಾದ ಸಾಫಲ್ಯವನ್ನು ತಂದುಕೊಟ್ಟರು. ಪುರಂದರದಾಸರು ಶಾಸ್ತ್ರೀಯ ಸಂಗೀತದಲ್ಲೂ ನುರಿತದವರಾಗಿದ್ದುದರಿಂದ ಅವರಿಗೆ ರಾಗ ತಾಳ ಪ್ರಕಾರಗಳಲ್ಲಿ ದೇಶಿಯನ್ನು ಮಾರ್ಗಿಯಾಗಿ ಮಾರ್ಪಡಿಸುವುದು ಸುಲಭವಾಯಿತು. ಆಗತಾನೆ ಚಿಗುರೊಡೆದು ಕಾಣಿಸಿಕೊಳ್ಳುತ್ತಿದ್ದ ಹೊಸಗನ್ನಡ ಶೈಲಿಗೆ ಇದು ಪೂರಕವಾಯಿತು. ಪುರಂದರದಾಸರು ವೃತ್ತನಾಮ, ತ್ರಿಪದಿ, ಚೌಪದಿ, ಷಟ್ಪದಿ, ತತ್ತ್ವಸುವ್ವಾಲಿ, ಸಾಂಗತ್ಯ, ಕಂದ, ಸೀಸಪದ್ಯ, ಗದ್ಯ ಮೊದಲಾದ ಕಾವ್ಯ ಪ್ರಭೇದಗಳಲ್ಲೂ ಪ್ರಯೋಗ ನಡೆಸಿದರು ; ಭಾವಗೀತೆಗಳನ್ನೂ ರಚಿಸಿದರು. ಇವಕ್ಕೆಲ್ಲ ಸಂಗೀತದ ಉಡುಗೆಯನ್ನು ತೊಡಿಸಿ ಸಾಹಿತ್ಯ–ಸಂಗೀತಗಳೆರಡರಲ್ಲೂ ಹೊಸ ದಾರಿಯನ್ನು ತೋರಿಸಿದರು.

ಹೀಗೆ ಹರಿದಾಸರು ನಡೆಸಿದ ಕ್ರಾಂತಿಯ ಸ್ವಭಾವಕ್ಕೆ ಅನುಗುಣವಾಗಿ, ಪುರಂದರ ದಾಸರು ಜನಸಾಮಾನ್ಯರನ್ನೇ ಗಮನದಲ್ಲಿರಿಸಿಕೊಂಡು ತಮ್ಮ ಪದಗಳನ್ನು ರಚಿಸಿದರು, ತಮ್ಮ ಸಾಮಾಜಿಕ ಕೈಂಕರ್ಯವನ್ನು ಕೈಗೊಂಡರು. ಆದುದರಿಂದಲೇ ಅವರ ರಚನೆಗಳಲ್ಲಿ ಕ್ಲಿಷ್ಟವೆಂಬ ಪದಗಳಾಗಲಿ, ಸುದೀರ್ಘವಾದ ಸಮಾಸಗಳಾಗಲಿ ತೀರ ವಿರಳ. ಸರಳವಾದ ಮಾತು, ಸ್ವಭಾವೋಕ್ತಿ, ಮಧುರವಾದ ಪದಪುಂಜ, ಲಯಬದ್ಧವಾದ ಪಂಕ್ತಿಗಳು, ಅಲ್ಲಲ್ಲಿ ಉಚಿತವಾದಷ್ಟು ಪ್ರಾಸಗಳು (ಆದ್ಯಕ್ಷರ ಪ್ರಾಸ, ದ್ವಿತೀಯಾಕ್ಷರ ಪ್ರಾಸ, ಅಂತ್ಯಾಕ್ಷರ ಪ್ರಾಸ), ನೆನಪಿಗೆ ನೆರವಾಗುವಷ್ಟೇ ಸಾಲುಗಳು ಇವು ಅವರ ರಚನೆಗಳಲ್ಲಿ ಎದ್ದು ಕಾಣುತ್ತವೆ. ಸಾಮಾನ್ಯವಾಗಿ ಅವರ ಪದಗಳಿಗೆ ವಿವರಣೆಯ ಅಗತ್ಯವೇ ಇರದು. ಆದರೆ ಅವರ ಕಾಲವಾಗಿ ಐನೂರು ವರ್ಷಗಳಷ್ಟು ಕಳೆದಿರುವುದರಿಂದ, ಅವರು ಬಳಸಿರುವ ಹಲವು ಮಾತುಗಳು ಇಂದು ಬಳಕೆಯಿಂದ ಜಾರಿವೆ ; ಅವರು ಮಾತುಗಳನ್ನು ಬಳಸಿರುವ ರೀತಿ ಇಂದು ವಿಚಿತ್ರವಾಗಿ ತೋರುತ್ತದೆ.ಮತ್ತು ಆ ಕಾಲಕ್ಕೆ ಜನಸಾಮಾನ್ಯರೆಲ್ಲರಿಗೆ ತಿಳಿದಿದ್ದ ಪುರಾಣ ಸಂದರ್ಭಗಳು, ಕಥಾಪ್ರಸಂಗಗಳು ಇಂದಿನವರಿಗೆ ಬಹುಮಟ್ಟಿಗೆ ತಿಳಿದಿರುವುದಿಲ್ಲ. ಇದರಿಂದ ಪ್ರಸ್ತುತ ಸಂಪುಟಗಳಲ್ಲಿ ಪದಗಳಿಗೆ ವಿವರಣೆಗಳನ್ನು ಕೊಡಬೇಕಾದ ಅಗತ್ಯ ಕಾಣಿಸಿಕೊಂಡಿತು,

ಅಷ್ಟೆ. ಪುರಂದರದಾಸರ ಕಾಲದಲ್ಲಾಗಲಿ, ಅನಂತರ ಇನ್ನೂರು ಮುನ್ನೂರು ವರ್ಷಗಳವರೆಗಾಗಲಿ, ಅವರ ಪದಗಳಿಗೆ ವಿವರಣೆಯು ಅಗತ್ಯವಿರಲಿಲ್ಲ.

ಪುರಂದರದಾಸರು ಪಂಡಿತರಾಗಿದ್ದರೆನ್ನುವುದರಲ್ಲಿ ಸಂಶಯುವಿಲ್ಲ. ಶಾಸ್ತ್ರ ಪರಿಶ್ರಮದಲ್ಲಿ ಪ್ರಗಲ್ಭರು ; ಕಾವ್ಯ ಪ್ರಯೋಗದಲ್ಲೂ ಅವರು ಪರಿಣತ ಮತಿಗಳು ; ಮತ್ತೆ ಶಾಸ್ತ್ರೀಯ ಸಂಗೀತ ತಜ್ಞರು. ಆದರೆ ಇವು ಯಾವುವನ್ನೂ ಮೇಲೇರಿಸಿಕೊಂಡು ಹೋಗಲಿಲ್ಲ. ಸಾಮಾನ್ಯ ಜನರಂತೆಯೇ ಬದುಕಿ ಬಾಳಿ, ಜನ ಸಾಮಾನ್ಯರಿಗೆ ನೇರವಾಗಿ ತಿಳಿಯುವಂಥ ಶೈಲಿಯನ್ನೇ ಬಳಸಿ, ಅಧ್ಯಾತ್ಮದಲ್ಲಿ ಎಲ್ಲರಿಗೂ ಒಲುವನ್ನು ಒದಗಿಸುವುದೇ ತಮ್ಮ ಬಾಳ ಉದ್ದೇಶವೆಂದು ಭಾವಿಸಿದವರು. ಪಂಡಿತರು ಅವರ ರಚನೆಗಳಲ್ಲಿ ವೇದಾಂತ ಶಾಸ್ತ್ರದ ಪ್ರಮೇಯಗಳನ್ನೆಲ್ಲ ಗುರುತಿಸುವುದು ಸಾಧ್ಯ; ಆದರೆ ನಿರೂಪಣೆಯಲ್ಲಿರುವ ಸರಳತೆ ಯಾರ ಮನಸ್ಸನ್ನೂ ಸೂರೆಗೊಂಡೀತು. ಪಾಂಡಿತ್ಯದ ಕ್ಲೇಶ ಕಾಣಿಸುವುದಿಲ್ಲ. ಕನ್ನಡವನ್ನೇ ಬಳಸಿದರು, ಆದರೆ ಪಂಡಿತರ ಕನ್ನಡವನ್ನಲ್ಲ. ಜನರು ದಿನನಿತ್ಯ ಬಳಸುವ ಆಡುಮಾತನ್ನೇ ಎತ್ತಿಕೊಂಡರು.

ಪುರಂದರದಾಸರ ರಚನೆಗಳು ಶಾಸ್ತ್ರನಿಷ್ಠವೆಂಬ ನಾಗರಿಕ ಸಾಹಿತ್ಯ ಪ್ರಕಾರಕ್ಕೂ ಸೇರಬಲ್ಲುವು, ಜಾನಪದ ಸಾಹಿತ್ಯಕ್ಕೂ ಸೇರಬಲ್ಲವು. ಗದ್ಯಕ್ಕಿಂತಲೂ ಪದ್ಯ ಪ್ರಭಾವಶಾಲಿಯಾದುದೆಂಬುದನ್ನು ಮನಗಂಡು ಹಾಡುಗಳನ್ನೇ ಹೆಣೆದರು ; ಭಕ್ತಿಗೆ ಸಂಗೀತ ನೆರವಾದೀತೆಂದು ಬಗೆದು ಹಾಡುಗಳಿಗೆ ಶಾಸ್ತ್ರೀಯ ಸಂಗೀತದ ಪರಿಮಳವನ್ನೂ ಸೇರಿಸಿದರು. ಆದರೆ ಶಾಸ್ತ್ರೀಯ ಸಂಗೀತದ ಮೇಲಾಟವಿರದಂತೆ ಎಚ್ಚರವಹಿಸಿದರು. ಅವರ ಕೃತಿಗಳಲ್ಲಿ ಕೆಲವು ಮಾತ್ರ ಶುದ್ಧಸಂಗೀತದ ಪ್ರಕಾರಕ್ಕೆ ಸೇರುತ್ತವೆ ; ಮತ್ತೆ ಕೆಲವು ನಾಟ್ಯಪದ್ಧತಿಗೆ ಸಾಮಗ್ರಿಯಾಗುತ್ತವೆ. ಉಳಿದಂತೆ, ಸಾಹಿತ್ಯದ ಸೊಗಸನ್ನು ಎತ್ತಿ ಕಾಣಿಸುವಷ್ಟೇ ಸಂಗೀತದ ಬಳಕೆ. ಸಂಗೀತದಲ್ಲಿ ಅನಭಿಜ್ಞರಾದವರೂ ಈ ಹಾಡುಗಳ ಧಾಟಿಯನ್ನು ಬೇಗನೆ ಹಿಡಿಯಬಹುದು. ಮನೆಗಳಲ್ಲಿ ಹೆಂಗಸರು ಹಬ್ಬಹರಿದಿನಗಳಲ್ಲಿ, ಹಸೆ ಪೂಜೆ ಸಂಸ್ಕಾರ ವಿಧಿಗಳಲ್ಲಿ ಪಾಲ್ಗೊಳ್ಳುವಾಗ, ಗಂಡಸರು ಪೂಜೆಗೆ ಸಿದ್ಧಮಾಡಿಕೊಳ್ಳುವಾಗ, ದಾಸರು ಯಾವ ಪೂರ್ವ ಸಿದ್ಧತೆಯೂ ಇಲ್ಲದೆ, ಬೀದಿಗಳಲ್ಲಿ ಉಪಾದಾನಕ್ಕೆ ಹೋಗುತ್ತಿರುವಾಗ ಇವರ ಹಾಡುಗಳನ್ನು ಹಾಡಿಕೊಳ್ಳುವಷ್ಟು ಸುಲಭವಾಗಿ, ಸುಬೋಧವಾಗಿ ಇರುತ್ತವೆ. ಮತ್ತು ಒಮ್ಮೆ ಕೇಳಿದರೆ ಮರೆಯದಿರುವಂಥ ಮಾತುಗಳು, ಒಕ್ಕಣೆ ; ಎಲ್ಲರಿಗೂ ಪ್ರಸಕ್ತವಾದ ವಿಚಾರವೇ ; ಪಂಡಿತರಿಗಾಗಲಿ ಪಾಮರರಿಗಾಗಲಿ ಮನಮುಟ್ಟುವಂಥ ಬೋಧೆ ; ತಿಳಿಯಾದ ಮಾತು, ಆಳವಾದ ಭಾವ. ಹೀಗಿರುವುದರಿಂದಲೇ ಪುರಂದರದಾಸರು ಜನಜೀವನದ ಮೇಲೆ ಪ್ರಭಾವವನ್ನು ಬೀರುವುದು ಸಾಧ್ಯವಾಯಿತು. ಶ್ರೀಪಾದರಾಜರಿಗಾಗಲಿ, ವ್ಯಾಸರಾಯಸ್ವಾಮಿಗಳಿಗಾಗಲಿ, ಪುರಂದರದಾಸರಾದ ಮೇಲೆ ಬಂದ ಹರಿದಾಸರಿಗಾಗಲೀ ಈ ಸೌಲಭ್ಯವಿರಲಿಲ್ಲ.

2

ಜನರ ನಡುವೆ ಓಡಿಯಾಡುವ ಹರಿದಾಸರ ಆಚಾರ, ವಿಚಾರ, ಧೋರಣೆ, ಒಕ್ಕಣೆ ಎಲ್ಲಕ್ಕೂ ಜನಪ್ರಿಯವಾದ ಪುರಾಣಗಳೇ ಆಧಾರವಾದುದು ಸಹಜವೇ. ಈ ಮೊದಲೇ ಪ್ರಾಸಂಗಿಕವಾಗಿ ಪುರಾಣಗಳ ಸಂಕ್ಷಿಪ್ತ ಸಮಾಲೋಚನೆಯೂ ಬಂದಿದೆ. ಇಲ್ಲಿ ಅದೇ ವಿಚಾರವನ್ನು ಇನ್ನಷ್ಟು ಹರವಿನ ವಿವೇಚನೆಗೆ ಎತ್ತಿಕೊಳ್ಳಬೇಕಾದ ಅಗತ್ಯ ವಿದೆ. ಈ ಸಂಪುಟದಲ್ಲಿ ಕೃಷ್ಣಲೀಲೆಯನ್ನು ಕುರಿತು ಪುರಂದರದಾಸರು ರಚಿಸಿರುವ ಪದಗಳ ಸಂಗ್ರಹವಿದೆ. ಕೃಷ್ಣಲೀಲೆಗೆ ಪುರಾಣಗಳೇ ಆಕರ (ವಿಷ್ಣುಪುರಾಣ, ಭಾಗ ವತ ಪುರಾಣಗಳು) ಆದುದರಿಂದ ಪುರಾಣದ ಹಿನ್ನೆಲೆಯನ್ನು ಅರಿತುಕೊಳ್ಳಬೇಕಾಗು ತ್ತದೆ. ಮತ್ತು, ಈ ಸಂಪುಟದಲ್ಲಿ ಸೇರಿರುವ ಸುಳಾದಿಗಳಿಗೂ, ಹಲವು ಉಗಾಭೋಗ ಗಳಿಗೂ, ಉದಯರಾಗಗಳಿಗೂ ಪುರಾಣಗಳೇ ಸಾಮಗ್ರಿಯನ್ನು ಒದಗಿಸಿವೆ. ಸುಳಾದಿ ಮತ್ತಿತರ ಗೇಯ ಪ್ರಕಾರಗಳು ಸಂಕೀರ್ತನ ಪದ್ಧತಿಗೆ ಸೇರಿದುವು ; ಹರಿದಾಸರಿಗೆ ಪ್ರಿಯವಾದ ಸಂಕೀರ್ತನ ಪದ್ಧತಿಗೂ ಪುರಾಣಗಳೇ ಸ್ಫೂರ್ತಿಯನ್ನೂ ಸಾಮಗ್ರಿ ಯನ್ನೂ ಶೈಲಿಯನ್ನೂ ಒದಗಿಸಿದುವು.

ನಮ್ಮ ಜನಜೀವನದಲ್ಲಿ ಪುರಾಣಗಳ ಪ್ರಭಾವ ಹೆಚ್ಚಿನದೇ. ಸುಮಾರು ಒಂದು ಸಾವಿರ ವರ್ಷಗಳಿಂದ ಹಿಂದೂ ಧರ್ಮದ ಸ್ವರೂಪ ಪೌರಾಣಿಕ ಚೌಕಟ್ಟಿನಲ್ಲಿ ಸಿದ್ಧ ವಾದುದು. ನಮ್ಮ ದಿನನಿತ್ಯದ ಪೂಜೆ ಪುನಸ್ಕಾರಗಳು, ಗುಡಿಗುಂಡಾರಗಳು, ಹಬ್ಬ ಹರಿದಿನಗಳು, ವಿಧಿ ನಿಷೇಧಗಳು, ಯಾತ್ರೆ ತೀರ್ಥಗಳು, ವ್ರತಕಲ್ಪಗಳು, ನಂಬಿಕೆಗಳು, ಕಲ್ಪನೆಗಳು ಇವೆಲ್ಲವೂ ಪುರಾಣಗಳಿಂದ ಮೂಡಿಬಂದುವೇ. ಇವಕ್ಕೆಲ್ಲ ವೈದಿಕ ಸಾಹಿತ್ಯದಲ್ಲಿ ಸಮರ್ಥನೆಯನ್ನು ಕಾಣಿಸುವುದು ಕಷ್ಟ. ದಾನದ ಮಹಿಮೆ, ತೀರ್ಥ ಯಾತ್ರೆಯ ಫಲ, ಕ್ಷೇತ್ರಗಳ ಮಾಹಾತ್ಮ್ಯ, ವರ್ಣಾಶ್ರಮ ಧರ್ಮಗಳ ಅಗತ್ಯ, ಭಕ್ತಿಯ ಬಗೆ ಇವೆಲ್ಲ ಪುರಾಣಗಳಲ್ಲಿ ಬರುವ ವಿವರಗಳೇ. ಪುರಂದರದಾಸರೂ, ಅವರ ಗುರುಗಳಾದ ವ್ಯಾಸರಾಯಸ್ವಾಮಿಗಳೂ, ಅವರ ಗುರುಗಳಾದ ಶ್ರೀಪಾದ ರಾಜರೂ ತಮ್ಮ ಸಾಹಿತ್ಯಕ್ಕೆ ಸಾಮಗ್ರಿಯನ್ನು ಪುರಾಣಗಳಿಂದಲೇ ಆಯ್ದುಕೊಂಡರು. ನಾಡಿನ ಇತರ ಸಂತರೂ (ಚೈತನ್ಯ, ರಾಮಾನಂದ, ವಲ್ಲಭ, ನಾಮದೇವ, ಜ್ಞಾನೇಶ್ವರ, ಸೂರದಾಸ, ಮೀರಾಬಾಯಿ ಮತ್ತಿತರರು) ಹೀಗೆಯೇ ಪುರಾಣಗಳಿಂದ ಪ್ರಭಾವಿತ ರಾದವರೇ.

ಪುರಾಣಗಳ ಪ್ರಾಚೀನತೆ ಎಷ್ಟೆಂದು ಹೇಳುವುದು ಕಷ್ಟ. ಆದರೆ ವೇದ, ಉಪನಿಷತ್ತು, ಬ್ರಹ್ಮಸೂತ್ರ ಇವುಗಳನ್ನೆಲ್ಲ ಬದಿಗಿರಿಸಿ ಪುರಾಣವೇ ಜನರಿಗೆ ಮುಖ್ಯ ವಾದುದು ಒಂದು ಸಾವಿರ ವರ್ಷಗಳಿಂದೀಚೆಗೇ ; ಸುಮಾರು ಆರೇಳು ನೂರು ವರ್ಷ ಗಳಿಂದ ಅದರ ಪ್ರಭಾವ ಹೆಚ್ಚುತ್ತ ಬಂದಿತೆಂದು ತೋರುತ್ತದೆ. ವೈದಿಕ ಧರ್ಮದ ಯಜ್ಞಯಾಗಾದಿಗಳು ಸಾಮಾನ್ಯ ಜನರಿಗೆ ಕಷ್ಟಸಾಧ್ಯವಾಗಿ, ಉಪನಿಷತ್ತಿನ ಧ್ಯಾನ

ದುಸ್ತರವಾಗಿ, ಬ್ರಹ್ಮಸೂತ್ರಗಳ ಜಿಜ್ಞಾಸೆ ಅಸಾಧ್ಯವಾಗಿ ಕಾಣಿಸಿಕೊಂಡಾಗ ಸುಲಭವಾದ ದಾರಿಯನ್ನು ಪುರಾಣಗಳು ತೋರಿಸಿದುವು. ಯಜ್ಞಯಾಗಾದಿಗಳು ಯಾವ ಫಲವನ್ನು ನೀಡುವುವೋ ಅದೇ ಫಲವನ್ನು, ಅದಕ್ಕಿಂತ ಹೆಚ್ಚಿನ ಫಲವನ್ನು, ಪಡೆದುಕೊಳ್ಳುವ ಸುಲಭ ಮಾರ್ಗವನ್ನು ಪುರಾಣಗಳು ಸೂಚಿಸಿದುವು. 'ಅಲ್ಪೇನೈವ ಪ್ರಯಾಸೇನ ಧರ್ಮಾಃ ಸಿಧ್ಯಂತಿ ವೈ ಕಲೌ' ಎಂದು ವಿಷ್ಣುಪುರಾಣ, ಮತ್ಸ್ಯಪುರಾಣಗಳಲ್ಲಿ ಮಾತಿದೆ. ಕಲಿಯುಗದಲ್ಲಿ ಬಹುಶ್ರಮವಿಲ್ಲದೆ ಸಿದ್ಧಿ ದೊರೆಯುವುದೆಂದು ತಾತ್ಪರ್ಯ. ಈ ಭರವಸೆ ಪುರಾಣಗಳ ಜನಪ್ರೀತಿಗೆ ಕಾರಣವಾಯಿತು. ನಾಮಸ್ಮರಣೆ, ಸಂಕೀರ್ತನೆ, ಭಜನೆ ಇಷ್ಟೇ ಇಹಪರಗಳೆರಡರಲ್ಲೂ ಸುಖಕ್ಕೆ ಕಾರಣವಾಗಬಹುದೆಂದು ಪುರಾಣಗಳು ಹೇಳಿದುವು. ಕಡೆಗೆ ಪುರಾಣ ಕಥೆಗಳನ್ನು ಕೇಳುವುದೇ ಸಾಕು ಸಿದ್ಧಿಗಳಿಗೆ, ಎಂದೂ ಪ್ರತೀತಿ ಬೆಳೆಯಿತು ! 'ಹರಿಕಥಾ ಶ್ರವಣ ಮಾಡೋ ನಿರಂತರ' ಎನ್ನುವುದು ನಮ್ಮ ಹರಿದಾಸರ ಬೋಧೆ ಮಾತ್ರವಲ್ಲ ; ನಾಡಿನ ಎಲ್ಲ ಸಂತರೂ ಇದನ್ನು ಎತ್ತಿ ಹಿಡಿದರು.

ಸುಮಾರು ಸಾವಿರ ವರ್ಷಗಳಿಂದೀಚೆಗೆ ಪುರಾಣವೆಂಬುದು ಸ್ಪಷ್ಟವಾದ, ನಿರ್ದಿಷ್ಟವಾದ ಒಂದು ಧಾರ್ಮಿಕ ಸಾಹಿತ್ಯ ಪ್ರಕಾರವಾಗಿದೆ. ಆದರೆ ಅದಕ್ಕೆ ಮೊದಲು ಪುರಾಣ ಎಂದರೆ ಏನಾಗಿದ್ದಿತು, ಅದರ ಪ್ರಾಮಾಣ್ಯ ಎಷ್ಟರಮಟ್ಟಿಗಿದ್ದಿತು ಹೇಳುವುದು ಕಷ್ಟ. ಪುರಾಣವೆಂಬ ಕಲ್ಪನೆಯೇನೋ ಶತಪಥ ಬ್ರಾಹ್ಮಣದಷ್ಟು ಹಳೆಯದು. ರಾಜಸೂಯಯಾಗದಲ್ಲಿ ಪಾರಿಪ್ಲವವೆಂಬ ಅಂಗವಿಧಿಯಿದೆ. ಅದರ ಒಂಬತ್ತನೆಯ ದಿನದಂದು ಹೋತೃವಾದವನು ಯಾವುದಾದರೊಂದು ಪುರಾಣ ಪ್ರಸಂಗವನ್ನು ಪಠಿಸಬೇಕೆಂಬ ವಿಧಿ ಶತಪಥ ಬ್ರಾಹ್ಮಣದಲ್ಲಿ (೧೩, ೪, ೩) ಕಂಡು ಬರುತ್ತದೆ. ಹೀಗೆ ಹೇಳುವಾಗ 'ಇತಿಹಾಸ ಪುರಾಣ'ವೆಂದು ಜೋಡಿಸಿ ಹೇಳಿರುವುದು ಸ್ವಾರಸ್ಯವಾಗಿದೆ. ತೈತ್ತಿರೀಯ ಆರಣ್ಯಕವು (೨, ೧೦) ಪುರಾಣದೊಂದಿಗೆ ಬ್ರಾಹ್ಮಣ, ಇತಿಹಾಸ, ಕಲ್ಪ, ಗಾಥಾ, ನಾರಾಶಂಸಿಗಳನ್ನೂ ಜೋಡಿಸುತ್ತದೆ. ನಾರಾಶಂಸಿಯೆಂದರೆ ಖ್ಯಾತಿವೆತ್ತ ಮನುಷ್ಯರನ್ನು ಕುರಿತು ಮಾಡಿದ ಪ್ರಶಂಸೆ. ಇದು ಋಗ್ವೇದದಲ್ಲೇ ಕಂಡುಬರುವ ಭಾಗ, ಮುಂದೆ ಬೆಳೆಯಿತೆಂದು ತೋರುತ್ತದೆ. ಗಾಥೆ (ಗಾಹೆ) ಯೆಂದರೆ ಯಾವುದಾದರೊಂದು ಪ್ರಸಂಗವನ್ನು ಕುರಿತು, ಯಾರೊಬ್ಬರ ಸಾಹಸವನ್ನು ಕುರಿತು ಮಾಡಿದ ಹಾಡುಗಬ್ಬ ; ಸಾಮಾನ್ಯವಾಗಿ ವೀರಗಾಥೆಗಳು. ಕಲ್ಪವೆಂಬ ಸಾಹಿತ್ಯ ಪ್ರಕಾರದಲ್ಲಿ ಮನುಷ್ಯರೂ ದೇವತೆಗಳೂ ಸೇರಿದಾಗ ಜರುಗುವ ಅದ್ಭುತ ಪ್ರಸಂಗಗಳು ಮುಖ್ಯ ವಿಷಯ. ಇತಿಹಾಸವೆಂದರೆ ತೀರ ಹಿಂದೆ ನಡೆದ ಒಂದು ಪ್ರಮುಖವಾದ ಪ್ರಸಂಗ, ಅದರ ಹಿನ್ನೆಲೆ, ಅದರಲ್ಲಿ ಪಾಲ್ಗೊಂಡವರು, ಅದರಿಂದ ಒದಗಿದ ಪ್ರಯೋಜನ ಇವನ್ನು ಕುರಿತು ವಿವರವಾಗಿ ಹೇಳುವುದು. ಮಹಾಭಾರತ ಒಂದು ಇತಿಹಾಸವೇ.

ಇನ್ನು ಪುರಾಣವೆಂದರೇನು ? ಪುರಾಣವೆಂಬ ಮಾತಿಗೆ ಹಳೆಯ ಕಾಲದ ವಿಚಾರಗಳನ್ನು ಹೇಳುವುದು ('ಪುರಾ ಅನಕ್ತಿ') ಅಥವಾ ಹಳೆಯ ಕಾಲದಲ್ಲಿ ಸಿದ್ಧವಾದುದು, ಹಿಂದೆ ಒದಗಿ ಬಂದುದು ('ಪುರಾ ಭವಂ') ಎಂಬ ಅರ್ಥವೇ ಹಳೆಯದು. 'ಹಳೆಯದಾದರೂ ಹೊಸದು' ('ಪುರಾಪಿ ನವಂ') ಎನ್ನುವ ಒಕ್ಕಣೆ ಹೊಸದೇ ! ಮತ್ತು ಪ್ರಾಚೀನ ಉಲ್ಲೇಖಗಳಲ್ಲಿ 'ಪುರಾಣಂ' ಎಂದು ಏಕವಚನ ಪ್ರಯೋಗವೇ ಇರುವುದರಿಂದ, ಮೊದಲಿಗೆ ಪುರಾಣವೆಂಬ ಒಂದೇ ಸಾಹಿತ್ಯಭಾಗ ಇದ್ದಿತೆಂದು ಹೇಳಬಹುದು. 'ಪುರಾಣಂ ಏಕಮೇವಾಸೀತ್ ಸರ್ವಕಲ್ಪೇಷು' ಎಂಬ ವಾಕ್ಯವೂ ಇದೆ. ಮನುಸ್ಮೃತಿಯಲ್ಲಿಯೂ ಕುಮಾರಿಲಭಟ್ಟರ ತಂತ್ರವಾರ್ತಿಕದಲ್ಲಿಯೂ ಇದೇ ಗ್ರಹಿಕೆಯಿದೆ. ಮನುಸ್ಮೃತಿಯ ಒಂದು ಮಾತು

'ಪುರಾಣಂ ಮಾನವೋ ಧರ್ಮಃ ಸಾಂಗೋ ವೇದಾಶ್ಚಿಕಿತ್ಸಿತಂ ।
ಆಜ್ಞಾಸಿದ್ಧಾನಿ ಚತ್ವಾರಿ ನ ಹಂತವ್ಯಾನಿ ಹೇತುಭಿಃ ॥'

ಎನ್ನುವುದು. ಪುರಾಣ, ಮನುಧರ್ಮಶಾಸ್ತ್ರ, ವೇದ, ವೈದ್ಯ ಈ ನಾಲ್ಕು ಸ್ವತಃ ಪ್ರಮಾಣಭೂತವಾದುವು ; ಅವುಗಳನ್ನು ನಮ್ಮ ಯುಕ್ತಿಯಿಂದ ಪರೀಕ್ಷಿಸಲು ತೊಡಗಬಾರದು ಎಂದು ಈ ಮಾತಿನ ತಾತ್ಪರ್ಯ. ಈ ನಾಲ್ಕಕ್ಕೆ ಸಮನಾದ ಪ್ರಾಮಾಣ್ಯವಿದೆ ಎಂದು ಕುಮಾರಿಲಭಟ್ಟರ ಒಕ್ಕಣೆ ('ಇತಿ ಹಿ ತುಲ್ಯವತ್ ಪ್ರಾಮಾಣ್ಯಸ್ಮರಣಂ'). ಅದು ಹೇಗಾದರಿರಲಿ, 'ಪುರಾಣಂ' ಎಂದು ಏಕವಚನದಲ್ಲಿ ಹೇಳಿರುವುದನ್ನು ಗಮನಿಸಬೇಕು. ಮನುಸ್ಮೃತಿಗೆ ವ್ಯಾಖ್ಯಾನವನ್ನು ಬರೆದ ಮೇಧಾತಿಥಿಯೂ ಹಲವು ವೇಳೆ 'ಪುರಾಣ'ದಿಂದ ಮಾತುಗಳನ್ನು ಉದ್ಧರಿಸುತ್ತಾನೆ ; ಹಾಗೆ ಮಾಡುವಾಗಲೆಲ್ಲ 'ಯಥಾ ಪುರಾಣೇ ಉಕ್ತಂ' ಎಂದಷ್ಟೇ ಹೇಳಿ ಯಾವ ಪುರಾಣವೆಂದು ನಿರ್ದಿಷ್ಟವಾಗಿ ಸೂಚಿಸುವುದಿಲ್ಲ.

ಆದರೆ ಮುಂದೆ ಪುರಾಣಗಳಲ್ಲಿ ವಿಭಜನೆ ತೋರಿಕೊಂಡಿತು. 'ಮಿತಾಕ್ಷರ' ಎಂಬ ಸುಪ್ರಸಿದ್ಧ ಧರ್ಮಶಾಸ್ತ್ರಗ್ರಂಥ ಸಿದ್ಧವಾದ ಕಾಲಕ್ಕೆ ಆರು ಪುರಾಣಗಳಿದ್ದುವು. ಅಪರಾರ್ಕನ ಕಾಲಕ್ಕೆ ಇಪ್ಪತ್ತು ಪುರಾಣಗಳಾದುವು; ಸ್ಮೃತಿಚಂದ್ರಿಕೆಯು ಇಪ್ಪತ್ತೆರಡು ಪುರಾಣಗಳನ್ನು ಉಲ್ಲೇಖಿಸಿದೆ. ಮಧ್ಯಯುಗೀನ ಧರ್ಮಶಾಸ್ತ್ರನಿಬಂಧಗಳಲ್ಲಿ ಒಟ್ಟು ನಲವತ್ತು ಬೇರೆ ಬೇರೆ ಪುರಾಣಗಳ ಪ್ರಸ್ತಾಪವನ್ನು ಗುರುತಿಸಬಹುದು. ಪುರಾಣಗಳಲ್ಲಿ ಮಹಾಪುರಾಣ, ಉಪಪುರಾಣಗಳೆಂಬ ಭೇದವೂ ಬಳಕೆಗೆ ಬಂದಿದೆ. ಹದಿನೆಂಟು ಮಹಾಪುರಾಣಗಳನ್ನೂ ಹದಿನೆಂಟು ಉಪಪುರಾಣಗಳನ್ನೂ ಎಣಿಸುವುದು ವಾಡಿಕೆ. ಮತ್ಸ್ಯಪುರಾಣ, ಭಾಗವತ ಪುರಾಣ ಮೊದಲಾದ ಪುರಾಣಗಳಲ್ಲೇ ಈ ಎಣಿಕೆಯಿದೆ. ಆದರೆ ಹದಿನೆಂಟು ಪುರಾಣಗಳು ಯಾವುವು ಎಂಬ ವಿಚಾರವಾಗಿ ಒಮ್ಮತವಿಲ್ಲ. ಅವುಗಳ ಗಾತ್ರವೂ ಅಷ್ಟೇ ಅನಿಶ್ಚಿತ. ಮತ್ಸ್ಯಪುರಾಣವು ಹದಿನೆಂಟು ಪುರಾಣಗಳನ್ನು ಹೆಸರಿಸಿ ಅವುಗಳೆಲ್ಲದರ ಪರಿಮಿತಿ ನಾಲ್ಕು ಲಕ್ಷ ಶ್ಲೋಕಗಳೆಂದು ಹೇಳುತ್ತದೆ. ಆದರೆ

ವಿಷ್ಣುಪುರಾಣದ ಪರಿಮಿತಿಯನ್ನು ಇಪ್ಪತ್ತನಾಲ್ಕು ಸಾವಿರ, ಇಪ್ಪತ್ತು ಸಾವಿರ, ಹತ್ತು ಸಾವಿರ, ಎಂಟು ಸಾವಿರ ಶ್ಲೋಕಗಳೆಂದು ಬಗೆಬಗೆಯಾಗಿ ಹೇಳುವುದಿದೆ. ಆದರೆ ಈ ಪುರಾಣಕ್ಕೆ ವ್ಯಾಖ್ಯಾನ ಮಾಡಿರುವವನು ಆರು ಸಾವಿರಶ್ಲೋಕಗಳನ್ನು ಮಾತ್ರ ಗ್ರಹಿಸಿದ್ದಾನೆ! ಹೀಗೆಯೇ ಇತರ ಪುರಾಣಗಳ ಪರಿಮಿತಿಯೂ ಸಂದಿಗ್ಧವಾದುದು. ಪುರಾಣಗಳು ಕಾಲಕಾಲಕ್ಕೆ ಹಿಗ್ಗುತ್ತ ಬಂದುವೆಂದು ತೋರುತ್ತದೆ.

ವಿಷ್ಣುಪುರಾಣವು (ಪದ್ಮೋತ್ತರಖಂಡ, ೪೩) ಹದಿನೆಂಟು ಪುರಾಣಗಳನ್ನು ಮೂರು ವರ್ಗಗಳಾಗಿ ವಿಂಗಡಿಸಿ ವಿಷ್ಣು, ನಾರದೀಯ, ಭಾಗವತ, ಗರುಡ, ಪದ್ಮ, ವರಾಹ ಈ ಪುರಾಣಗಳು ಸಾತ್ತ್ವಿಕವೆಂದೂ; ಬ್ರಹ್ಮಾಂಡ, ಬ್ರಹ್ಮವೈವರ್ತ, ಮಾರ್ಕಂಡೇಯ, ಭವಿಷ್ಯ, ವಾಮನ, ಬ್ರಾಹ್ಮ ಇವು ರಾಜಸ ಪುರಾಣಗಳೆಂದೂ; ಮತ್ಸ್ಯ, ಕೂರ್ಮ, ಲೈಂಗ, ಶೈವ, ಸ್ಕಾಂದ, ಆಗ್ನೇಯ ಈ ಪುರಾಣಗಳು ತಾಮಸವೆಂದೂ ಎಣಿಸುತ್ತದೆ. ಸಾತ್ತ್ವಿಕ ಪುರಾಣಗಳ ಫಲ ಮೋಕ್ಷವೆಂದೂ, ರಾಜಸ ಪುರಾಣಗಳ ಫಲ ಸ್ವರ್ಗವೆಂದೂ, ತಾಮಸ ಪುರಾಣಗಳು ನಿರಯಪ್ರಾಪ್ತಿಗೆ ಕಾರಣಗಳೆಂದೂ ಅಲ್ಲಿಯೇ ಹೇಳಿದೆ. ವಾದಿರಾಜರು ಆರು ಪುರಾಣಗಳು ವಿಷ್ಣುವಿನದೆಂದೂ, ಇನ್ನಾರು ಶಿವನದೆಂದೂ, ಮತ್ತಾರು ಬ್ರಹ್ಮನದೆಂದೂ ಹೇಳಿದ್ದಾರೆ. ವಿಷ್ಣು ಸಾತ್ತ್ವಿಕ ದೇವತೆ, ಬ್ರಹ್ಮ ರಾಜಸ ದೇವತೆ, ಶಿವನು ತಾಮಸ ದೇವತೆ ಎಂದು ಬಗೆಯುವುದನ್ನು ನೆನಪಿಗೆ ತಂದುಕೊಂಡರೆ ಮೇಲಿನ ವಿಭಾಗ ಸಮಂಜಸವಾಗುತ್ತದೆ. ಆದರೆ ಕಡೆಯ ವರ್ಗದ ಪುರಾಣಗಳು ನರಕಕ್ಕೆ ದಾರಿಯಾಗುವುವೆಂದು ಹೇಗೆ ಸಮರ್ಥಿಸಿಕೊಳ್ಳುವರೋ ತಿಳಿಯದು. ತಾಮಸವರ್ಗವು ದೈತ್ಯರಿಗೆ ಮೋಹಕವಾಗಿ, ಅವರನ್ನು ನರಕಕ್ಕೆ ಒಯ್ಯುವುದಕ್ಕೇ ಸಿದ್ಧವಾದುದೆಂದು ಸಮಾಧಾನ ಹೇಳಿದರೂ ಪುರಾಣಗಳ ಪ್ರಯೋಜನ ಮನುಷ್ಯರಿಗೇ ಆಗಿರುವುದರಿಂದ ಈ ವಾದದಲ್ಲಿ ಬಲ ಕಡಮೆ. ಜೀವತ್ರೈವಿಧ್ಯವನ್ನು ಅನುಸರಿಸಿ, ಸಾತ್ತ್ವಿಕ ಜೀವರಿಗೆ ಮುಕ್ತಿಪ್ರದವಾದುವು ಸಾತ್ತ್ವಿಕ ಪುರಾಣಗಳು, ರಾಜಸ ಜೀವರಿಗೆ ಮಿಶ್ರಫಲವನ್ನೊದಗಿಸಲು ರಾಜಸ ಪುರಾಣಗಳು, ತಾಮಸ ಜೀವರಿಗೆ ತಮಸ್ಸನ್ನು ಒದಗಿಸಲು ತಾಮಸ ಪುರಾಣಗಳು ಎಂದು ಹರಿದಾಸರು ಹೇಳುವುದೇನೋ ಉಂಟು. ಆದರೆ ಎಲ್ಲ ಪುರಾಣಗಳೂ ವೇದಾರ್ಥದ ಉಪಬೃಂಹಣಕ್ಕಾಗಿ ವೇದವ್ಯಾಸರಿಂದಲೇ ರಚಿತವಾದುವು ಎಂದ ಮೇಲೆ, ಎಲ್ಲ ಪುರಾಣಗಳಲ್ಲೂ 'ಸರ್ವಾರ್ಥಸಂಚಯ' ವಿದೆ ಎಂದಮೇಲೆ ಜೀವಸ್ವರೂಪ, ಯೋಗ್ಯತೆಗಳನ್ನನುಸರಿಸಿ ಪುರಾಣಗಳು ಸಿದ್ಧವಾದುವೆಂದು ಸಾಧಿಸುವುದು ಕಷ್ಟವಾಗುತ್ತದೆ. ಮೇಲಾಗಿ ಮಧ್ವಾಚಾರ್ಯರು ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಪ್ರಮಾಣಗಳನ್ನು ಪಟ್ಟಿಮಾಡುತ್ತ 'ಅಶೇಷ ಪುರಾಣೇಭ್ಯಃ' ಎಂದು ಎಲ್ಲ ಪುರಾಣಗಳನ್ನು ಸೇರಿಸಿಯೇ ಹೇಳಿದ್ದಾರೆ.

ಶಿವರಹಸ್ಯ (ಸಂಭವಕಾಂಡ) ದಲ್ಲಿ ದೇವತೆಗಳಿಗನುಗುಣವಾಗಿ ಪುರಾಣಗಳನ್ನು ವಿಂಗಡಿಸಿರುವುದನ್ನು ಕಾಣಬಹುದು. ಹತ್ತು (ಶಿವಪುರಾಣ, ಭವಿಷ್ಯಪುರಾಣ,

ಮಾರ್ಕಂಡೇಯಪುರಾಣ, ಲಿಂಗಪುರಾಣ, ವರಾಹಪುರಾಣ, ಸ್ಕಂದಪುರಾಣ, ಮತ್ಸ್ಯಪುರಾಣ, ಕೂರ್ಮಪುರಾಣ, ವಾಮನಪುರಾಣ ಮತ್ತು ಬ್ರಹ್ಮಾಂಡಪುರಾಣ) ಶಿವದೇವತಾಕವಾದುವೆಂದೂ, ನಾಲ್ಕು (ವಿಷ್ಣುಪುರಾಣ, ಭಾಗವತಪುರಾಣ, ನಾರದೀಯಪುರಾಣ, ಗರುಡಪುರಾಣ) ವಿಷ್ಣುಪರವಾದುವೆಂದೂ, ಎರಡು (ಬ್ರಹ್ಮ ಪುರಾಣ, ಪದ್ಮಪುರಾಣ) ಬ್ರಹ್ಮಪರವಾದುವೆಂದೂ, ಒಂದು (ಅಗ್ನಿಪುರಾಣ) ಅಗ್ನಿ ದೇವತಾಕವಾದುದೆಂದೂ, ಒಂದು (ಬ್ರಹ್ಮವೈವರ್ತಪುರಾಣ) ಪಿತೃದೇವತಾಕವಾದು ದೆಂದೂ ಇಲ್ಲಿ ಬರುವ ಒಕ್ಕಣೆ. ಆದರೆ ಹೀಗೆ ಸ್ಪಷ್ಟವಾಗಿ ಎಲ್ಲ ಪುರಾಣಗಳಲ್ಲೂ ದೇವತಾ ಪಕ್ಷಪಾತ ಕಾಣಬರುವುದಿಲ್ಲ. ಬಹುಮಟ್ಟಿಗೆ ಪುರಾಣಗಳಲ್ಲಿ ಎಲ್ಲ ದೇವತೆ ಗಳ ಹಿರಿಮೆಯೂ ಪ್ರಸ್ತಾಪಕ್ಕೆ ಬರುತ್ತದೆ. ಕೆಲವೇನೋ (ವಿಷ್ಣುಪುರಾಣ, ಭಾಗವತ ಪುರಾಣಗಳಂತೆ) ವೈಷ್ಣವ ಪುರಾಣಗಳೆಂದೇ ಸಿದ್ಧವಾಗಿವೆಯೆನ್ನಿ.

ಪುರಾಣಗಳ ಪ್ರಯೋಜನವನ್ನು ಕುರಿತು ಹಳೆಯ ಅಭಿಪ್ರಾಯ ಅವು ನಾಲ್ಕು ವೇದಗಳಲ್ಲಿರುವ ತಾತ್ಪರ್ಯವನ್ನು ಜನಸಾಮಾನ್ಯರಿಗೆ ಮನದಟ್ಟುಮಾಡಿಕೊಡುವು ದೆಂಬುದು. 'ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್' ಎಂಬ ಮಾತನ್ನು ಎಲ್ಲ ಶಾಸ್ತ್ರಕಾರರೂ ಮತ್ತೆ ಮತ್ತೆ ಉದ್ಧರಿಸಿದ್ದಾರೆ. ಎಂದ ಮೇಲೆ ವೇದಗಳು, ವೇದಾಂಗಗಳು, ಮತ್ತು ಅವನ್ನು ಅವಲಂಬಿಸಿ ಸಿದ್ಧವಾದ ಶಾಸ್ತ್ರಗಳು ಇವು ಮುಖ್ಯ. ಅವುಗಳ ಉಪಬೃಂಹಣರೂಪವಾದ ಪುರಾಣಗಳು ಗೌಣ ಎಂದಾ ಯಿತು. ಮುಖ್ಯವಾದ ಶಾಸ್ತ್ರಭಾಗಕ್ಕೆ ಅಧಿಕಾರವಿಲ್ಲದವರಿಗೆ ಗೌಣವಾದ ಸಾಹಿತ್ಯ ಭಾಗ ಅಷ್ಟೆ. ಪುರಾಣಗಳಿಗೆ ಸ್ವತಂತ್ರವಾದ ಬೆಲೆಯಿರದು. ಅಪರಾರ್ಕವೆಂಬ ಸ್ಮೃತಿ ಕಾರನು ಇದನ್ನು ಸ್ಪಷ್ಟಪಡಿಸಿ ವೇದಗಳಿಂದ ಸಿದ್ಧವಾದ ಧರ್ಮ ಹೆಚ್ಚಿನದು; ಪುರಾ ಣಾದಿಗಳಿಂದ ಸಿದ್ಧವಾದ ಧರ್ಮ ಕೆಳಮಟ್ಟದ್ದು ಎಂದು ಹೇಳಿದ್ದಾನೆ,

> 'ಅತಃ ಸಪರಮೋ ಧರ್ಮೋ ಯೋ ವೇದಾದಧಿಗಮ್ಯತೇ ।
> ಅವರಃ ಸ ತು ವಿಜ್ಞೇಯೋ ಯಃ ಪುರಾಣಾದಿಷು ಸ್ಥಿತಃ ॥'

ಆದರೆ ಈ ಪರಿಸ್ಥಿತಿ ಹತ್ತನೇ ಶತಮಾನದಿಂದ ಮುಂದೆ ಮಾರ್ಪಟ್ಟಂತೆ ತೋರುತ್ತದೆ. ಯಾಜ್ಞವಲ್ಕ್ಯಸ್ಮೃತಿಯಲ್ಲಿ (೧,೧೫) ಹದಿನಾಲ್ಕು ವಿದ್ಯೆಗಳನ್ನು ಎಣಿಕೆ ಮಾಡುವಾಗ ತಾರತಮ್ಯಕ್ರಮವನ್ನನುಸರಿಸಿ ಪುರಾಣ, ನ್ಯಾಯ, ಮೀಮಾಂಸೆ, ಧರ್ಮಶಾಸ್ತ್ರ, ಆರು ವೇದಾಂಗಗಳು, ನಾಲ್ಕು ವೇದಗಳನ್ನು ಪಟ್ಟಿಮಾಡಿದ್ದಾರೆ ; ಪುರಾಣವನ್ನೇ ಮೊದಲು ಹೇಳಿ, ಉಳಿದೆಲ್ಲ ವಿದ್ಯೆಗಳಿಗಿಂತ ಅದು ಮಿಗಿಲಾದುದು ಎಂದು ಕಾಣಿಸಿ ದ್ದಾರೆ ; ಎಂದರೆ ವೇದಗಳಿಗಿಂತಲೂ ಪುರಾಣ ಹೆಚ್ಚು ಮಾನ್ಯವಾಯಿತು ! ಮಧ್ವಾ ಚಾರ್ಯರೂ ಭಾರತತಾತ್ಪರ್ಯನಿರ್ಣಯದಲ್ಲಿ

'ಇತ್ಯಶೇಷ ಪುರಾಣೇಭ್ಯಃ ಪಂಚರಾತ್ರೇಭ್ಯ ಏವ ಚ ।
ಭಾರತಾಚ್ಚೈವ ವೇದೋಭ್ಯೋ ರಾಮಾಯಣಾದಪಿ ॥'

ಎಂದು ಪ್ರಮಾಣಗಳಲ್ಲಿ ಪುರಾಣಗಳನ್ನೇ ಮೊದಲು ಎಣಿಸಿದ್ದಾರೆ ಈ ಪಟ್ಟಿಯಲ್ಲಿ ಪ್ರಾಮಾಣ್ಯ ತಾರತಮ್ಯವನ್ನೇನೋ ಸೂಚಿಸಿಲ್ಲವೆನ್ನಿ. ಆದರೂ ಪುರಾಣಕ್ಕೆ ಅವರು ಹೆಚ್ಚಿನ ಒತ್ತನ್ನು ಕೊಟ್ಟುದಿದೆ. 'ಕೃತ್ಯಕಲ್ಪತರು' ಮೊದಲಾದ ಸ್ಮೃತಿಗ್ರಂಥಗಳಲ್ಲಿ ಪುರಾಣವೇ ಎಲ್ಲ ಧರ್ಮಶಾಸ್ತ್ರ ಗ್ರಂಥಗಳಿಗೂ ಆಧಾರವೆಂದು ಬಗೆಯಲಾಗಿದೆ.

ಹೀಗೆ ಮಧ್ಯಯುಗದಲ್ಲಿ ಪುರಾಣಗಳು ಮುಖ್ಯವಾದುವು. ಈ ಪ್ರಾಮುಖ್ಯತೆಗೆ ಭಾಗವತಪುರಾಣವು ಗಳಿಸಿಕೊಂಡ ಜನಪ್ರೀತಿಯೂ ಕಾರಣವಾಯಿತೆಂದು ಹೇಳ ಬಹುದು. ಆರೇಳು ನೂರು ವರ್ಷಗಳಿಂದ ನಮ್ಮ ದೇಶದ ಸಂತರೆಲ್ಲ ಭಾಗವತ ಪುರಾಣವನ್ನು ಹೆಚ್ಚು ಹೆಚ್ಚಾಗಿ ಅವಲಂಬಿಸುತ್ತ ಬಂದಿದ್ದಾರೆ. ಮುಖ್ಯವಾಗಿ ಭಾಗವತವು ಕೃಷ್ಣನನ್ನು ಕುರಿತ ಗ್ರಂಥವಾದುದರಿಂದ ಕೃಷ್ಣಪೂಜೆ ಪ್ರಚಲಿತವಾಗಿರುವ ಕಡೆಗಳಲ್ಲೆಲ್ಲ ಭಾಗವತದ ಕೈ ಮೇಲಾಯಿತು. ಕರ್ನಾಟಕ, ಕೇರಳ, ಆಂಧ್ರದೇಶ ಗಳಲ್ಲೂ ಸೌರಾಷ್ಟ್ರ, ಬಂಗಾಳ, ಉತ್ತರ ಪ್ರದೇಶಗಳಲ್ಲಿಯೂ ಭಾಗವತಕ್ಕೆ ವಿಶೇಷ ವಾದ ಆದರ ಒದಗಿಬಂದಿತು. ಆದರೆ ಭಾಗವತವೇನು ಪ್ರಾಚೀನ ಪುರಾಣಗಳ ಲ್ಲೊಂದಲ್ಲ. ಅದರ ಕಾಲ ಈಚೀಚೆಗೇ. ಶಂಕರಾಚಾರ್ಯರಿಗೆ ಭಾಗವತದ ಪರಿಚಯ ವಿರಲಿಲ್ಲ ; ರಾಮಾನುಜಾಚಾರ್ಯರೂ ಭಾಗವತವನ್ನು ಸ್ಪಷ್ಟವಾಗಿ ಉಲ್ಲೇಖಿಸಿಲ್ಲ. ಆಚಾರ್ಯರಲ್ಲಿ ಮಧ್ವಾಚಾರ್ಯರೇ ಮೊಟ್ಟಮೊದಲಿಗೆ ಭಾಗವತವನ್ನು ಆದರದಿಂದ ಕಂಡು ಅದರ ತಾತ್ಪರ್ಯನಿರ್ಣಯವೊಂದನ್ನು ಬರೆದರು. ಭಾಗವತಕ್ಕೆ ಬಳಿಕೆ ಯಲ್ಲಿರುವ ವ್ಯಾಖ್ಯಾನಗಳಲ್ಲಿ ಮಧ್ವಾಚಾರ್ಯರ ಪರಂಪರೆಗೆ ಸೇರಿದ ವಿಜಯಧ್ವಜ ತೀರ್ಥರ ವ್ಯಾಖ್ಯಾನವೇ ಮುಖ್ಯವಾದುದು. ಹರಿದಾಸರು ಇದನ್ನು ಹೆಚ್ಚಾಗಿ ಅವಲಂಬಿಸಿರುವುದು ಸಹಜವೇ. ಮುಂದೆ ವಲ್ಲಭಾಚಾರ್ಯರು ಭಾಗವತವು ಉಪ ನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರಗಳಷ್ಟೇ ಪ್ರಮಾಣಭೂತವಾದುದೆಂದು ಸಿದ್ಧ ಪಡಿಸಿದರು. ಭಾಗವತವು ಬಹುಮಟ್ಟಿಗೆ ವಿಷ್ಣುಪುರಾಣವನ್ನವಲಂಬಿಸಿ ಸಿದ್ಧವಾದ ಪುರಾಣ.

ಪುರಾಣವನ್ನು ಪಂಚಲಕ್ಷಣಿಯೆಂದು ಬಣ್ಣಿಸುತ್ತಾರೆ. ಸರ್ಗ (ಸೃಷ್ಟಿ), ಪ್ರತಿಸರ್ಗ, ವಂಶ, ವಂಶಾನುಚರಿತ, ಮನ್ವಂತರ ಇವೇ ಐದು ಲಕ್ಷಣಗಳು. ಬ್ರಹ್ಮ ವೈವರ್ತಪುರಾಣವು ಪುರಾಣವನ್ನು 'ಪಂಚಲಕ್ಷಣಾನ್ವಿತಶಾಸ್ತ್ರ'ವೆಂದು ಕರೆಯುತ್ತದೆ. ಮಹಾಪುರಾಣಗಳಿಗೆ ದಶಲಕ್ಷಣಗಳನ್ನೂ ಹೇಳುತ್ತಾರೆ, ಮೇಲೆ ಹೇಳಿದ ಐದು ಲಕ್ಷಣಗಳ ಜೊತೆಗೆ ವೃತ್ತಿ, ರಕ್ಷಾ, ಸಂಸ್ಥಾ, ಹೇತು, ಅಪಾಶ್ರಯ ಎಂದು ಇನ್ನೈದು ಲಕ್ಷಣಗಳನ್ನು ಸೇರಿಸಿ. ಇವುಗಳ ವಿವರಣೆ ಇಲ್ಲಿ ಅನಗತ್ಯ. ಆದರೆ ನಾವು ಪುರಾಣ ಗಳಲ್ಲಿ ಸಾಮಾನ್ಯವಾಗಿ ಕಾಣುವ ವಿವರಗಳು ಆಚಾರ, ಆಹ್ನಿಕ, ಆಶೌಚ, ಆಶ್ರಮ–

ಧರ್ಮ, ಶುದ್ಧಿ. ಪ್ರಾಯಶ್ಚಿತ್ತ, ಕರ್ಮವಿಪಾಕ, ನೀತಿ, ಪಾತಕ, ನರಕ, ಸಂಸ್ಕಾರ, ಭಕ್ಷ್ಯಾಭಕ್ಷ್ಯವಿವೇಕ, ಶಾಂತಿ, ತೀರ್ಥ, ದಾನ ಮೊದಲಾದವು. ಮುಖ್ಯವಾಗಿ ಪುರಾಣಗಳ ಪ್ರಯೋಜನವನ್ನು ಧರ್ಮಾಧರ್ಮಪರಿಜ್ಞಾನ, ಸದಾಚಾರಪ್ರವರ್ತನ, ಮೋಕ್ಷ, ಮತ್ತು ಭಗವಂತನಲ್ಲಿ ಭಕ್ತಿ ('ಪರಮಾ ಗತಿಃ ತದ್ಭಕ್ತಿಃ ಭಗವತಿ ಪ್ರಭೌ'). ಭಕ್ತಿ ಪಂಥಕ್ಕೆ ಪುರಾಣವೇ ಮೂಲಾಧಾರವಾದುದು ಸಹಜವೇ. ಮಧ್ಯಯುಗದಲ್ಲಿ ಜ್ಞಾನಮಾರ್ಗ, ಕರ್ಮಮಾರ್ಗಗಳಿಗಿಂತ ಹೆಚ್ಚಾಗಿ ಭಕ್ತಿಮಾರ್ಗ ಹರಡಿಕೊಂಡುದು ಪುರಾಣಗಳ ಹೆಗ್ಗಳಿಕೆಗೆ ಕಾರಣವಾಯಿತು.

ಪುರಾಣಗಳು 'ಸರ್ವಲೋಕೋಪಕಾರಕ', ಎಂದರೆ ಲೋಕದ ಎಲ್ಲ ಜನರಿಗೂ ನೆರವಾಗುವಂಥದು. 'ಎಲ್ಲ ಜನರೆ'ಂದರೆ ಜಾತಿಮತಗಳ, ಅಧಿಕಾರದ, ಸ್ತ್ರೀಪುರುಷ ವಿಭಾಗದ ಭೇದವಿಲ್ಲದಂತೆ. ಇದು ಮುಖ್ಯವಾದ ವಿಚಾರ. ಉಳಿದೆಲ್ಲ ವಿದ್ಯೆಗಳಿಗಿಂತ ಪುರಾಣ ಹೆಚ್ಚು ಜನಪ್ರಿಯವಾದುದು ಈ ಕಾರಣದಿಂದಲೇ. ಹೀಗೆ ಜನಸಾಮಾನ್ಯರಿಗೆ ಉಪಯುಕ್ತವಾಗುವಂತೆ ಸಿದ್ಧವಾದ ಪುರಾಣ 'ನಾನಾಕಲ್ಪಸಮುದ್ಭವ', 'ನಾನಾಕಥಾಸಮಾಯುಕ್ತ'ವಾಯಿತು. ಲೋಕವನ್ನು ದುಃಖದಿಂದ ಕಡೆಗಾಣಿಸಲೆಂದೇ ನಾರಾಯಣನು ವ್ಯಾಸರೂಪದಲ್ಲಿ ಬಂದು ಪುರಾಣಗಳನ್ನು ರಚಿಸಿದನೆಂದು ಪದ್ಮಪುರಾಣ ಹೇಳುತ್ತದೆ

'ನಿಸ್ತಾರಾಯ ತು ಲೋಕಾನಾಂ ಸ್ವಯಂ ನಾರಾಯಣಃ ಪ್ರಭುಃ ।
ವ್ಯಾಸರೂಪೇಣ ಕೃತವಾನ್ ಪುರಾಣಾನಿ ಮಹೀತಲೇ ॥'

ಹೀಗೆ ರಚನೆ ಮಾಡುವಾಗ ಅನೇಕ ಕಥೆಗಳನ್ನೂ ಪ್ರಸಂಗಗಳನ್ನೂ ಹಾಡುಗಬ್ಬಗಳನ್ನೂ ಜನಪ್ರತೀತಿಗಳನ್ನೂ ಬಳಸಿಕೊಂಡನೆಂದು ಅಲ್ಲೇ ಒಕ್ಕಣೆಯಿದೆ ('ಆಖ್ಯಾನೈರುಪಾಖ್ಯಾನೈಃ ಗಾಥಾಭಿಃ ಕಲ್ಪಶುದ್ಧಿಭಿಃ...ಪುರಾಣಸಂಹಿತಾಂ ಚಕ್ರೇ'). ಇವೆಲ್ಲ ಜನಪ್ರೀತಿಯ ಮೂಲಸ್ತಂಭಗಳು. ಬಹುಜನರ ಹಿತಕ್ಕೆ, ಬಹುಜನರ ಸುಖಕ್ಕೆ ಸಿದ್ಧವಾದುದು ಪುರಾಣಸಂಸ್ಕೃತಿ. ವೈದಿಕಸಂಸ್ಕೃತಿ ಖಿಲವಾಗುತ್ತ ಬಂದಂದು ಪುರಾಣ ಸಂಸ್ಕೃತಿ ತಲೆಯೆತ್ತಿಕೊಂಡಿತು. ಹರಿದಾಸರ ಪಂಥ ಈ ಪುರಾಣಸಂಸ್ಕೃತಿಯ ಫಲವೇ.

ಹರಿದಾಸರ ಪುರಾಣಸಂಸ್ಕೃತಿಯ ಧೋರಣೆಯಲ್ಲಿ ಎದ್ದು ಕಾಣುವ ವಿವರಗಳು: ಹರಿಸರ್ವೋತ್ತಮತ್ವ, ಉಳಿದೆಲ್ಲ ದೇವತೆಗಳೂ ತರತಮ ಭಾವದಲ್ಲಿ ಅವನಿಗೆ ಅಧೀನರೆಂಬ ಕಲ್ಪನೆ, ಭಕ್ತಿಯೇ ಭಗವಂತನ ಸಾಕ್ಷಾತ್ಕಾರಕ್ಕೆ ಹೆದ್ದಾರಿಯೆಂಬ ತತ್ತ್ವ, ನಾಮಸ್ಮರಣೆಯ ಹಿರಿಮೆ, ಸಂಕೀರ್ತನ ಪದ್ಧತಿಯ ಸಾಫಲ್ಯ. ಇವೆಲ್ಲವನ್ನೂ ಒಳಗೊಂಡು, ಭಕ್ತಭಾಗವತರ ಹೆಗ್ಗಳಿಕೆಯನ್ನು ಸೂಚಿಸುವಂಥ ಕಥೆಗಳು ಹರಿದಾಸರಿಗೆ ಸ್ಫೂರ್ತಿಯ ಸೆಲೆಗಳು. ಗಜೇಂದ್ರ ಮೋಕ್ಷ, ದ್ರೌಪದೀಮಾನ ಸಂರಕ್ಷಣೆ, ಅಜಾಮಿಳೋದ್ಧಾರ, ಪ್ರಹ್ಲಾದಸಂರಕ್ಷಣೆ, ಧ್ರುವಚರಿತ್ರೆ, ಅಂಬರೀಷ ಪ್ರಸಂಗ, ರುಕ್ಮಾಂಗದ ಪ್ರಕರಣ ಮೊದಲಾದುವು ಎಲ್ಲ ಹರಿದಾಸರ ರಚನೆಗಳಲ್ಲೂ ಕಾಣಿಸಿಕೊಳ್ಳುತ್ತವೆ.

ಹರಿದಾಸರು ಭಾಗವತಪುರಾಣವನ್ನೇ ಹೆಚ್ಚಾಗಿ ಅವಲಂಬಿಸುವುದರಿಂದ ವಿಷ್ಣುವಿನ ದಶಾವತಾರಗಳ ಮೇಲೆ ಆದರ ಹೆಚ್ಚು ; ಅದರಲ್ಲೂ ಕೃಷ್ಣಾವತಾರವೆಂದರೆ ಎಣೆಯಿಲ್ಲದ ಆದರ. ಕೃಷ್ಣಭಕ್ತಿಯ ಚೌಕಟ್ಟಿನಲ್ಲೇ ಹರಿದಾಸಪಂಥ ಬೆಳೆಯಿತು ಎಂದರೆ ತಪ್ಪಾಗದು.

ಆದುದರಿಂದ ಹರಿದಾಸರ ರಚನೆಗಳಲ್ಲಿ ಕೃಷ್ಣಲೀಲೆಯ ವರ್ಣನೆ ಮುಖ್ಯವಾಗಿ ಬರುವ ವಿವರ. ಕೃಷ್ಣನ ಅದ್ಭುತರಮಣೀಯ ಕಥೆಗಳಿಗೆ ಭಾಗವತಪುರಾಣ, ವಿಷ್ಣು ಪುರಾಣ, ಹರಿವಂಶ ಇವೇ ಆಕರ. ಇಲ್ಲಿ ಕಾಣಸಿಗದ ರಾಧೆಯ ಪ್ರಸಂಗ ಬ್ರಹ್ಮ ವೈವರ್ತ ಪುರಾಣದಲ್ಲಿ ಬರುತ್ತದೆ. ಇದರ ಪ್ರಭಾವ ಹರಿದಾಸಸಾಹಿತ್ಯದ ಮೇಲೆ ಕಡಮೆಯೇ ; ಗೋಪಿಕಾಸ್ತ್ರೀಯರ ಒಡನಾಟವಿದ್ದರೂ ರಾಸಮಂಡಲದ ಕಲ್ಪನೆ ಹರಿದಾಸರಿಗಿರಲಿಲ್ಲ. ರಾಧೆಯು ಕೃಷ್ಣಚೈತನ್ಯರ ಗೌಡೀಯ ವೈಷ್ಣವಸಂಪ್ರದಾಯ ದಲ್ಲಿ ಪ್ರಮುಖಪಾತ್ರವನ್ನು ವಹಿಸಿದ್ದಾಳೆ. ಹರಿದಾಸರಿಗೆ ಪ್ರಿಯವಾದುದು ಬಹುಮಟ್ಟಿಗೆ ಕೃಷ್ಣನ ಬಾಲಲೀಲೆಗಳೇ. ಪುರಂದರದಾಸರು ಕೃಷ್ಣಲೀಲೆಗಳನ್ನು ಕುರಿತು ರಚಿಸಿರುವ ಪದಗಳಿಗೆಲ್ಲ ಭಾಗವತಪುರಾಣವೇ ಆಧಾರ ; ಮತ್ತು ತಮ್ಮ ಗುರುಗಳಾದ ವ್ಯಾಸತೀರ್ಥರ, ಅವರ ಗುರುಗಳಾದ ಶ್ರೀಪಾದರಾಜರ ರಚನೆಗಳೇ ಸ್ಫೂರ್ತಿ. ಪುರಂದರದಾಸರ ಈ ಪ್ರಕಾರದ ಕೃತಿಗಳು, ಅವರ ಗುರುಗಳ, ಪರಮ ಗುರುಗಳ ರಚನೆಗಳ ಸಾಮಗ್ರಿ, ಭಾವ, ಕಲ್ಪನೆಗಳನ್ನು ಒಳಗೊಂಡಿವೆ.

ಭಾಗವತವು ಶುಕಮಹರ್ಷಿಯು ಪರೀಕ್ಷಿದ್ರಾಜನಿಗೆ ಏಳು ದಿನಗಳ ಕಾಲ ಹೇಳಿದ ಹನ್ನೆರಡು ಸ್ಕಂಧಗಳ, ಹದಿನೆಂಟು ಸಾವಿರ ಶ್ಲೋಕಗಳ ಪುರಾಣ. ಇದರಲ್ಲಿ ಕೃಷ್ಣ ಭಕ್ತಿಯೇ ಮೋಕ್ಷಕ್ಕೆ ಸುಲಭವಾದ ಉಪಾಯವೆಂಬ ತತ್ತ್ವ ಹಾಸುಹೊಕ್ಕಾಗಿ ಬಂದಿದೆ. ಈ ಕಾರಣದಿಂದ ಇದನ್ನು ಸಾತ್ತ್ವತ ಸಂಹಿತೆಯೆಂದೂ ಪಾರಮಹಂಸ್ಯ ಸಂಹಿತೆಯೆಂದೂ ಕರೆಯುವುದಿದೆ. ಇದನ್ನು 'ಸಕಲಶ್ರುತಿಸಾರ'ವೆಂದೂ 'ತಾಪತ್ರ ಯೋನ್ಮೂಲನ'ವೆಂದೂ 'ನಿಗಮಕಲ್ಪತರು ಫಲ'ವೆಂದೂ ಭಾವುಕರು ಬಣ್ಣಿಸುತ್ತಾರೆ. ಕಾವೇರಿ ತೀರದಲ್ಲಿ ವಾಸಮಾಡುವ ಜನರಲ್ಲೇ ಭಕ್ತಿಯು ಪ್ರಬಲವಾಗಿರುವುದೆಂಬ ಮಾತು ಈ ಪುರಾಣದ ಹನ್ನೊಂದನೆಯ ಸ್ಕಂಧದಲ್ಲಿ ಬಂದಿದೆ. ಇದು ಸಿದ್ಧ ವಾದದ್ದು ಈ ಪ್ರದೇಶದಲ್ಲಿ ಎಂಬ ಸಂಶಯಕ್ಕೆ ಇದು ಎಡೆಗೊಡುತ್ತದೆ. ಈ ಪುರಾಣದ ದಶಮ ಸ್ಕಂಧ ಕೃಷ್ಣನ ಚರಿತ್ರೆಯಿರುವುದರಿಂದ ಜನರ ಆದರವನ್ನು ಸೂರೆಗೊಂಡಿದೆ. ಜನಪ್ರಿಯ ಭಾಗಗಳಾದ ಗೋಪಿಕಾ ಗೀತೆ, ಭ್ರಮರಗೀತೆ, ಉದ್ಧವ ಗೀತೆಗಳು ಇಲ್ಲಿಯೇ ಕಾಣಸಿಗುತ್ತವೆ. ಕೃಷ್ಣನ ಬಾಲಲೀಲೆ, ವ್ರಜದಲ್ಲಿ ಬೃಂದಾವನ ದಲ್ಲಿ ಮಧುರೆಯಲ್ಲಿ ದ್ವಾರಕೆಯಲ್ಲಿ ಕೃಷ್ಣನ ಚರಿತ್ರೆ ಇವು ಮುಖ್ಯವಾಗಿ ಬರುವ ವಿಚಾರಗಳು. ಹನ್ನೊಂದನೆಯ ಸ್ಕಂಧದಲ್ಲಿ ಭಾಗವತ ಧರ್ಮದ ವಿಸ್ತಾರವಾದ ನಿರೂಪಣೆಯಿದ್ದು ಭಕ್ತಿಯೋಗವೇ ಸರ್ವಜನ ಸಾಧಾರಣವಾದುದೆಂದೂ, ಸುಲಭ ವಾದುದೆಂದೂ, ಶ್ರೇಷ್ಠವಾದುದೆಂದೂ ಹೇಳಿದೆ. ಜಾತಿ ಮತ ಭೇದವಿಲ್ಲದೆ ಕೃಷ್ಣನು

ಎಲ್ಲರಿಗೂ ಆಶ್ರಯಣೀಯನೆಂಬುದನ್ನು ಉಲ್ಲೇಖಿಸಿ ಶರಣಾಗತಿಯನ್ನು ಕೃಷ್ಣನೇ ಬೋಧಿಸಿದಂತೆ ತಿಳಿಸಿದೆ—

'ಮಾಮೇಕಮೇವ ಶರಣಮಾತ್ಮಾನಂ ಸರ್ವದೇಹಿನಾಂ
ಯಾಹಿ ಸರ್ವಾತ್ಮಭಾವೇನ ಮಯಾ ಸ್ಯಾದಕುತೋಭಯಂ'

ಹರಿದಾಸರು ಈ ಪುರಾಣವನ್ನು ಆಸರೆಯಾಗಿ ಆರಿಸಿಕೊಂಡಾಗ ತಮ್ಮ ರಚನೆಗಳಿಗೆ ಸಾಮಗ್ರಿಯನ್ನು ಪಡೆದುಕೊಂಡುದಷ್ಟೇ ಅಲ್ಲ. ಅಲ್ಲಿ ಬರುವ ಉದಾರವಾದ ಮನೋಧರ್ಮವನ್ನೂ ಅಳವಡಿಸಿಕೊಂಡರು. ಜಾತಿ ಮತಗಳ ಕಟ್ಟುಪಾಡಿನಿಂದ ಕೊಸರಿಕೊಂಡು ಹೊರಬಂದು ಭಕ್ತರೆಲ್ಲರೂ ತಮ್ಮ ಬಾಂಧವರೇ ಎಂಬ ಧೋರಣೆಯನ್ನು ಹರಿದಾಸರು ಹಿಡಿಯುವುದು ಸಾಧ್ಯವಾದದ್ದು ಈ ಪುರಾಣವನ್ನು ಅವಲಂಬಿಸಿದ್ದರಿಂದಲೇ.

3

ಪುರಂದರದಾಸರ ರಚನೆಗಳಲ್ಲಿ ಕೃಷ್ಣಲೀಲೆಯನ್ನು ಕುರಿತ ಪದಗಳು ಅನೇಕ ಇವೆ. ಬಹುಮಟ್ಟಿಗೆ ಕೃಷ್ಣನ ಬಾಲಲೀಲೆಯೇ ಅವರ ಗಮನವನ್ನು ಸೆಳೆದಿರುವುದು. ಕೃಷ್ಣನ ಸಾಕುತಾಯಿಯಾದ ಯಶೋದೆ ತನ್ನ ಪ್ರಾಣಪ್ರಿಯನಾದ ಕೃಷ್ಣನನ್ನು ಮುದ್ದುಮಾಡುವ ಬಗೆ, ಕೃಷ್ಣನು ಸಣ್ಣವನಾಗಿ ಮಾಡಿದ ಸಾಹಸ ಕೃತ್ಯಗಳು, ಶಿಶುಸಹಜವಾದ ಆಟಪಾಟಗಳು, ಮುಗ್ಧಭಾವದಿಂದ ಬಂದ ಗೋಪಿಯರನ್ನು ಅವನು ತುಂಟತನದಿಂದ ಕಾಡಿದ ರೀತಿ, ಅವರು ಯಶೋದೆಯ ಬಳಿ ಬಂದು ದೂರುವುದು, ಯಶೋದೆ ತನ್ನ ಕಣ್ಮಣಿಯಾದ ಕೃಷ್ಣನನ್ನು ಮನಸ್ಸಿಲ್ಲದ ಮನಸ್ಸಿನಿಂದ ಗದರಿಸುವುದು ಇವೆಲ್ಲ ಅವರ ಪದಗಳಲ್ಲಿ ಸ್ವಾರಸ್ಯವಾಗಿ ಮೂಡಿಬಂದಿವೆ. ಪುರಂದರದಾಸರ ಭಾವುಕತೆ, ಕವಿತಾ ಸಾಮರ್ಥ್ಯ, ಉಕ್ತಿ ವೈಚಿತ್ರ್ಯಗಳನ್ನು ಇಲ್ಲಿ ನೋಡಬಹುದು. ಆದರೆ ಜಾನಪದ ಶೈಲಿಯನ್ನೇ ಹಿಡಿದು ಅವರು ಪದರಚನೆ ಮಾಡಿರುವುದರಿಂದ ಆಡುಮಾತನ್ನೇ ಬಳಸಿಕೊಂಡಿದ್ದಾರೆ. ಮತ್ತು ಮಕ್ಕಳ ಮಾತನ್ನೇ ಅನುಸರಿಸಿ 'ಬೂಚಿ ಬಂದಿದೆ', 'ಪಾಚಿಕೊಳ್ಳೊ', 'ಗುಮ್ಮನ ಕರೆಯದಿರೆ', 'ಅಮ್ಮಿಯ ಬೇಡೆನು ಮಮ್ಮು ತಿನ್ನುವೆನು', 'ಪೋಪು ಹೋಗೋಣ' ಮೊದಲಾದ ಪ್ರಯೋಗಗಳನ್ನು ಸೊಗಸಾಗಿ ಮಾಡಿದ್ದಾರೆ. ತಾಯಿಗೆ ಮಗುವಿನ ಬಗ್ಗೆ ಇರುವ ಅತಿಶಯವಾದ ಪ್ರೀತಿಯಿಂದ ಒದಗುವ ಆತಂಕವನ್ನು "ಪೋಗದಿರೆಲೊ ರಂಗ", "ಮನೆಯೊಳಗಾಡೊ" ಮೊದಲಾದ ಪದಗಳಲ್ಲಿ ಕಾಣಬಹುದು. "ಆಡಿಸಿದಳೆಶೋದೆ" ಎಂಬ ಪದ ಪ್ರಖ್ಯಾತವಾಗಿದೆಯಷ್ಟೆ ; ಅದರಲ್ಲಿ ಸೂಸುವ ವಾತ್ಸಲ್ಯ ಎಣೆಯಿಲ್ಲದ್ದು.

ಕೃಷ್ಣಪರವಾಗಿರುವ ಪದಗಳಲ್ಲಿ ವಿಶೇಷವಾದ ಮೋಹಕತೆಯಿದೆ. ಅವುಗಳಲ್ಲಿ ಗ್ರಾಂಥಿಕವೆನ್ನಬಹುದಾದ ಛಂದಸ್ಸಿನ ಬಿಗಿ ಕಾಣುವುದಿಲ್ಲ. ಅವೆಲ್ಲ ಭಾವಗೀತ ರೂಪದಲ್ಲಿದ್ದು ಬಹುಮಟ್ಟಿಗೆ ಲಲಿತ, ಮಂದಾನಿಲ, ಉತ್ಸಾಹಲಯಗಳನ್ನೇ ಬಳಸಿಕೊಂಡಿವೆ. ಗೇಯ ಪ್ರಧಾನವಾಗಿದ್ದು ತಂಬೂರಿಯ ಝಂಕಾರಕ್ಕೆ ಹೊಂದಿಕೊಂಡು, ತಾಳಲಯಕ್ಕೆ ಸರಿಯಾಗಿ, ಸರಳವಾದ ಮಾತುಗಳ ಓಟಕ್ಕೆ ಅಡ್ಡಿ ಬರದೆ, ಪ್ರಾಸಗಳಲ್ಲಿ ತೊಡಕಿರದೆ ಸಾಗಿಬರುವುದು ಈ ರಚನೆಗಳ ವೈಶಿಷ್ಟ್ಯ. ಪ್ರಾಸದ ವಿಚಾರವಾಗಿ ಹೇಳಬೇಕಾದುದಿಷ್ಟು. ಪುರಂದರದಾಸರ ರಚನೆಗಳಲ್ಲಿ ಪ್ರಾಸವೆಂಬ ಪ್ರಕಾರವನ್ನು ಬಹುವಾಗಿ ಬಳಸಿಕೊಂಡಿರುವುದು ಕಾಣುತ್ತದೆ. ಪ್ರಾಸವು ಕಾವ್ಯಧರ್ಮವೆಂಬ ಕಾರಣದಿಂದ ಹಲವು ಕವಿತೆಗಳಲ್ಲಿ ಪ್ರಯತ್ನಪೂರ್ವಕವಾಗಿ ಪ್ರಾಸವನ್ನು ತುರುಕುವುದುಂಟು. ಆದರೆ ಪುರಂದರದಾಸರ ರಚನೆಗಳಲ್ಲಿ ಪ್ರಾಸವು ಲೀಲಾಜಾಲವಾಗಿ ಬಂದೊದಗುತ್ತದೆ ; ಅದಕ್ಕಾಗಿ ಅವರು ಶ್ರಮಿಸಿಲ್ಲವೆಂಬುದು ತಟ್ಟನೆ ಸ್ಪಷ್ಟವಾಗುತ್ತದೆ. ಭಾಷೆಯ ಮೇಲಿರುವ ಅವರ ಪ್ರಭುತ್ವ ಎದ್ದು ಕಾಣುತ್ತದೆ.

ಮೇಲಾಗಿ, ಊರೂರು ಕೇರಿ ಕೇರಿ ತಿರುಗಾಡಿ, ಜನರೊಡನೆ ಬೆರೆತು ಅವರ ಕಷ್ಟಸುಖಗಳಲ್ಲಿ ಪಾಲ್ಗೊಂಡು, ಅವರೆಲ್ಲರೊಂದಿಗೆ ಸರಿಸಮರಾಗಿ ಇದ್ದರಾಗಿ ಅವರು ಹಲವು ಸ್ತರಗಳ ಜನರ ಭಾಷೆ, ಹಲವು ವೃತ್ತಿಗಳ ಪರಿಭಾಷೆಗಳನ್ನು ಚೆನ್ನಾಗಿ ಅರಿತಿದ್ದರು. ಈ ಲೋಕಾನುಭವದ ಮೂಸೆಯಿಂದ ಹೊರಬಂದ ಕವಿತೆಗಳಲ್ಲಿ ಜನಸಾಮಾನ್ಯರ ನುಡಿ ತಾನೇ ತಾನಾಗಿ ಮೆರೆಯುವುದು ಸಹಜವೇ. ಈ ಗುಣವನ್ನು ನಾವು ಕನಕದಾಸರೊಬ್ಬರನ್ನು ಬಿಟ್ಟರೆ ಉಳಿದ ಹರಿದಾಸರಲ್ಲಿ ಅಷ್ಟಾಗಿ ಕಾಣಲಾರೆವು. ಕನಕದಾಸರು ಜಾತಿಯಲ್ಲೂ ವೃತ್ತಿಯಲ್ಲೂ ಕುರುಬರೇ ಆಗಿದ್ದುದರಿಂದ ಹಳ್ಳಿಯ ಭಾಷೆ ಅವರಿಗೆ ಸಹಜವಾಗಿಯೇ ಒದಗಿಬಂದಿದೆ. ಪುರಂದರದಾಸರು ನಾಗರಿಕರು ; ಪೂರ್ವ ಜೀವನದಲ್ಲೂ ನಗರದಲ್ಲೇ ಇದ್ದವರು, ಹರಿದಾಸರಾದ ಮೇಲೂ ಬಹುಮಟ್ಟಿಗೆ ವಿಜಯನಗರದ ರಾಜಧಾನಿಯಲ್ಲೇ ಇದ್ದವರು. ಅವರ ಶಿಷ್ಯವೃತ್ತಿ ಪ್ರಖ್ಯಾತ ಸಂಸ್ಕೃತ ಪಂಡಿತರಾಗಿ ವರಿಷ್ಠರೆನಿಸಿಕೊಂಡ ವರ್ಗದ ಮಾನ್ಯ ಮಠವೊಂದರ ಸ್ವಾಮಿಗಳಲ್ಲಿ (ವ್ಯಾಸರಾಯ ಸ್ವಾಮಿಗಳಲ್ಲಿ) ; ಅವರ ಸಂಪರ್ಕ ಪಂಡಿತರೊಂದಿಗೇ ಬಹುಮಟ್ಟಿಗೆ ಇದ್ದಿರಬೇಕು. ಅವರು ಅಧ್ಯಯನ ಮಾಡಿದ್ದು ಮಾಧ್ವ ಸಿದ್ಧಾಂತ ಗ್ರಂಥಗಳನ್ನು. ಅವರಿಗೆ ಸಂಸ್ಕೃತ ಭಾಷೆಯ ಮೇಲೂ ಒಡೆತನವಿದ್ದಿತೆನ್ನಲು ಅದೇ ಭಾಷೆಯಲ್ಲಿ ಅವರು ರಚಿಸಿರುವ ಕೆಲವು ಕೃತಿಗಳಿಂದಲೂ, ಕನ್ನಡ ಪದಗಳಲ್ಲಿ ಅವರು ಮೂಡಿಸಿರುವ ಹಲವಾರು ಪ್ರಗಲ್ಭ ಪ್ರಯೋಗಗಳಿಂದಲೂ ಸ್ಪಷ್ಟವಾಗುತ್ತದೆ. ಇಷ್ಟಾದರೂ ಅವರು ಯಥೇಚ್ಛವಾಗಿ ಮತ್ತು ಸಹಜವಾಗಿ ಬಳಸಿರುವ ದೇಸಿ ಪದಗಳು, ಗ್ರಾಮ್ಯ ಒಕ್ಕಣೆಗಳು, ಹಲವು ಜನಾಂಗಗಳ ಆಡು ಮಾತುಗಳು, ಗಾದೆಗಳು ಇವನ್ನೆಲ್ಲ ನೋಡಿದಾಗ ಸೋಜಿಗವೆನಿಸುತ್ತದೆ.

ಪುರಂದರದಾಸರ ಕೃತಿಗಳಲ್ಲಿ ಮೆಚ್ಚಬೇಕಾದ ಗುಣ ಇದು. ಪಂಡಿತರಾದರೂ ಪಾಂಡಿತ್ಯದ ಹೊರೆಯನ್ನು ತಮ್ಮ ಪದಗಳಲ್ಲಿ ಇಳಿಸಿಲ್ಲ. ಶಾಸ್ತ್ರ ಬಲ್ಲವರಾದರೂ ಶಾಸ್ತ್ರದ ಪ್ರಕ್ರಿಯೆಗಳನ್ನು ತಮ್ಮ ರಚನೆಗಳಲ್ಲಿ ತುರುಕಿಲ್ಲ. ಶಿಷ್ಟರೆನಿಸಿಕೊಂಡ ವರ್ಗಕ್ಕೆ ಸೇರಿದವರಾದರೂ ಅದರಲ್ಲಿ ಹೆಮ್ಮೆಯನ್ನು ತಳೆದಿಲ್ಲ. ತಮಗೆ ಪ್ರತಿಭೆಯಿದ್ದುದನ್ನು ತಮ್ಮ ಗುರುಗಳೇ ಹಾಡಿ ಹೊಗಳಿದರಾದರೂ, ಅದರ ಅರಿವನ್ನು ಮೆರೆದಿಲ್ಲ. ಅವರ ರಚನೆಗಳಿಂದ ಅವರು ಎಲ್ಲಿಯವರು, ಅವರ ಆರ್ಥಿಕಸ್ಥಿತಿ ಯಾವ ಮಟ್ಟದ್ದು, ಸಾಮಾಜಿಕ ನೆಲೆ ಏನಾಗಿದ್ದಿತು, ಪಾಂಡಿತ್ಯದ ಹರವು ಏನು, ಕೌಟುಂಬಿಕ ಸುಖ ಎಷ್ಟರಮಟ್ಟಿಗಿತ್ತು, ಶಿಷ್ಯ ಸಂಪತ್ತು ಎಷ್ಟಿತ್ತು, ಜನಪ್ರೀತಿ ಎಂತಿದ್ದಿತು ಇವು ಯಾವುವನ್ನೂ ಊಹಿಸಲಾರೆವು. ತಮ್ಮ ವ್ಯಕ್ತಿತ್ವವನ್ನು ಹರಿದಾಸ್ಯದಲ್ಲಿ ಮುಳುಗಿ ಸಿದ್ದುದು ಮಾತ್ರ ಎದ್ದು ಕಾಣುತ್ತದೆ. ಸುಮಾರು ಒಂದು ಸಾವಿರ ಕೃತಿಗಳನ್ನು ರಚಿಸಿ ತಮ್ಮ ಸ್ವಂತ ವಿಚಾರವನ್ನು ಇಷ್ಟೂ ಪ್ರಕಟಪಡಿಸಿಲ್ಲವೆಂದರೆ ಆಶ್ಚರ್ಯವೇ, ಸಾಹಸವೇ.

'ಜಯಜಯವದೆ ಈ ಮನೆತನಕೆ' ಎಂಬ ಅವರ ಶಕುನದ ಹಾಡನ್ನು ನೋಡಿ. ಆಕರ ತಿಳಿಯದಿದ್ದರೆ, ಅದನ್ನು ಹಕ್ಕಿ ಶಕುನ ಹೇಳುವ ಜನಾಂಗಕ್ಕೆ ಸೇರಿದವನೇ ಒಬ್ಬ ರಚಿಸಿದನೆಂದು ಧಾರಾಳವಾಗಿ ಹೇಳಿಯೇವು ! 'ಊರ ದೇವರ ಮಾಡಿ' ಎನ್ನುವ ಅವರ ಹಾಡನ್ನು ನೋಡಿದಾಗ ಹಳ್ಳಿಯವನೇ ಬರೆದ ಹಾಡೆಂದು ಶಪಥ ಮಾಡಿ ಹೇಳಿಯೇವು ! 'ಜಂಗಮರು ನಾವು' ಎಂಬ ಅವರ ಹಾಡನ್ನು ವೀರಶೈವ ನಲ್ಲದವನು ರಚಿಸುವುದು ಸಾಧ್ಯವೇ ಇಲ್ಲವೆಂದು ಭಾವಿಸಬಹುದು ! 'ಕಟ್ಟಬೇಕು ಕಾಟದೆಮ್ಮೆ' ಎನ್ನುವ ಪದವನ್ನು ಓದಿದಾಗ, ಬರೆದವರು ಗೊಲ್ಲರಲ್ಲವೆಂದು ಯಾರು ಭಾವಿಸಿಯಾರು ? 'ತಾರಕ್ಕ ಬಿಂದಿಗೆ', 'ದೂರು ಮಾಡುವರೇನೆ', 'ಕಂದನ ಕಂಡಿರೇನೆ', 'ಹಾಲು ಮಾರಲು ಬಂದೆನಮ್ಮ' ಮೊದಲಾದ ಪದಗಳು ಹೆಂಗಳೆಯರೇ ಹೇಳಿದಂತೆ ಇರುವುವಷ್ಟೆ ; ಅವನ್ನು ಓದಿದಾಗ ಹೆಣ್ಣು ಹೇಳಿದಂತೇ ತೋರುವುದು. 'ಗುಮ್ಮನ ಕರೆಯದಿರೆ' ಮೊದಲಾದ ಕವಿತೆಗಳು ಮಕ್ಕಳ ಭಾಷೆಯಲ್ಲಿರುವುದು ಮಾತ್ರವಲ್ಲ, ಮಗುವೇ ಹೇಳುತ್ತಿರುವಂತೆ ಭಾಸವಾಗುತ್ತದೆ. ಇದು ಪುರಂದರದಾಸರ ರಚನೆಗಳ ಸ್ವಾರಸ್ಯ.

ಭಕ್ತಿಯ ಭಾವುಕತೆ, ಆರ್ತನ ಅಳಲು, ಅಪರೋಕ್ಷಜ್ಞಾನದ ಅನುಭಾವ, ನೀತಿಯ ಉನ್ನತಿ, ಶೀಲದ ಆಗ್ರಹ ಇವು ಇವರ ಪದಗಳಲ್ಲಿ ಕಾಣುವಂತೆಯೇ ಶೃಂಗಾರದ ಸೊಗಸು, ಅನ್ಯೋಕ್ತಿಯ ಸ್ವಾರಸ್ಯ, ಹಾಸ್ಯ, ಕುಚೋದ್ಯಗಳೂ ಇವೆ. ಸಂದರ್ಭೋಚಿತವಾಗಿ ವರ್ಣನೆ, ನಿರೂಪಣೆ, ಶಬ್ದಸಂಪತ್ತು, ಭಾವಬಂಧ. ಯಾವುದೇ ಸಂದರ್ಭವಾದರೂ ಸ್ವಭಾವೋಕ್ತಿಯೇ ; ಮಾತಿನಲ್ಲಾಗಲಿ ಶೈಲಿಯಲ್ಲಾಗಲಿ ಕೃತಕತೆ ಕಾಣುವುದಿಲ್ಲ. ಒಡಲು ಕದಡಿದ್ದಾಗ ಮೂಡಿಕೊಳ್ಳುವ ದುಗುಡವಾಗಲಿ, ಮನಸ್ಸಿನಲ್ಲಿ ಗೆಲುವಿದ್ದು ಹರಿಯುವ ಹರ್ಷದ ಹೊನಲಾಗಲಿ ಅದನ್ನು

ಹೊರಸೂಸುವ ಮಾತಿಗೇನು ಅವರಲ್ಲಿ ಕೊರತೆಯಿಲ್ಲ. ನಡತೆಗೆಟ್ಟ ಗಂಡಸಾಗಲಿ ಹೆಂಗಸಾಗಲಿ ಇವರ ಗಮನಕ್ಕೆ ಬಂದರೆ ಕಟುವಾದ ಟೀಕೆ ಕಟ್ಟಿಟ್ಟದ್ದೇ : ಕಡೆಗೆ, ಬಯ್ಗುಳ ಸುರಿಮಳೆಯೂ ತಪ್ಪುವುದಿಲ್ಲ ! ಇವರ ಕಣ್ಣು ತಪ್ಪಿಸಿ ಜಾರಿಕೊಳ್ಳುವ ನಡತೆಯೇ ಸಮಾಜದಲ್ಲಿರದು. ಅವರ ನೋಟ ಎಲ್ಲವನ್ನೂ ಒಳಗೊಳ್ಳುವಂಥದು, ಅವರ ಮಾತು ಯಾವ ಸನ್ನಿವೇಶಕ್ಕೂ ಸಿದ್ಧವಾದುದೇ.

ನಮಗೆ ಈವರೆಗೆ ದೊರಕಿರುವ ಪುರಂದರಸಾಹಿತ್ಯದಲ್ಲಿ ಬಿಡಿಪದಗಳೇ ಹೆಚ್ಚು. ಅವುಗಳಲ್ಲಿ ಹರಿಭಕ್ತಿ, ಅಧ್ಯಾತ್ಮ, ಕ್ಷೇತ್ರದೇವತೆಗಳು, ಯೋಗಸಾಧನೆ, ಶೃಂಗಾರ, ನೀತಿಬೋಧೆ, ತತ್ತ್ವ, ಸಮಾಜ ಶುದ್ಧಿ, ಸದಾಚಾರ ಮೊದಲಾದ ವಿಚಾರಗಳೆಲ್ಲ ಬರುತ್ತವೆ. ಒಂದೊಂದು ಪದದಲ್ಲೂ ವಿಭಿನ್ನವಾದ ವಿಚಾರಗಳು ಬೆರೆತಿರುವುದರಿಂದ ಪದಗಳ ವರ್ಗೀಕರಣ ಸುಲಭವಲ್ಲ. ಸಂದರ್ಭೋಚಿತವಾಗಿ ಪದಗಳು ಮೂಡಿ ಬಂದಿರುವುದರಿಂದ ಸಮಯ ಸ್ಫೂರ್ತಿಗೆ ಒತ್ತು ಹೆಚ್ಚು : ಬಹುಮಟ್ಟಿಗೆ ಇವೆಲ್ಲ ಆಶುಕವಿತೆಗಳೆಂದೇ ತೋರುತ್ತದೆ. ಆದುದರಿಂದ ಪದಬಂಧದಲ್ಲಿ, ಪ್ರಾಸಯೋಜನೆಯಲ್ಲಿ, ಪಂಕ್ತಿ ವಿಂಗಡಣೆಯಲ್ಲಿ ತೊಡಕು ಆಗಾಗ ಕಾಣಿಸಿಕೊಳ್ಳುವುದು ಸಹಜ. ಕೆಲವೊಮ್ಮೆ ತೀರಗ್ರಾಮ್ಯವೆನಿಸುವ, ಅಸಭ್ಯವೆನಿಸುವ ಪದಗಳ ಪ್ರಯೋಗವೂ ಕಾಣಸಿಗುತ್ತದೆ. ಹಲವು ವೇಳೆ ಕೇವಲ ಹುಡುಗಾಟಿಕೆಯ ಮಾತುಗಳು, ಕುಚೋದ್ಯದ ಒಕ್ಕಣೆಗಳನ್ನು ಕಾಣಬಹುದು. ಪದರಚನೆಯಲ್ಲಿ ಮಾತ್ರೆಗಿಂತ ಲಯಕ್ಕೆ ಹೆಚ್ಚಿನ ಗಮನ ; ಲಯದಲ್ಲೂ ಅಂಶಲಯಕ್ಕಿಂತ ತಾಳಲಯಕ್ಕೆ ಹೆಚ್ಚಿನ ಗಮನ.

ಬಿಡಿ ಪದಗಳಲ್ಲಿ ಸಾಮಾನ್ಯವಾಗಿ ಪಲ್ಲವಿಯೊಂದಿದ್ದು, ಅದರ ತಾತ್ಪರ್ಯವನ್ನು ಮುಂದಿನ ಕೆಲವು ನುಡಿಗಳು (ಚರಣಗಳು) ವಿಸ್ತರಿಸಿ ಹೇಳುತ್ತವೆ. ಪಲ್ಲವಿಗೆ ಹೊಂದಿಕೊಳ್ಳುವ ಅನುಪಲ್ಲವಿಯನ್ನೂ ಈಗ ಕಾಣುತ್ತೇವೆ ; ಆದರೆ ಪಲ್ಲವಿಯ ಮಾತುಗಳನ್ನು ನೋಡಿದರೆ ಅನುಪಲ್ಲವಿ ಮೊದಲಿಗೆ ಪ್ರತ್ಯೇಕವಾಗಿ ಇರಲಿಲ್ಲವೆಂದು ತೋರುತ್ತದೆ. ನುಡಿಗಳ ಸಂಖ್ಯೆಯಲ್ಲಿ ನಿಗದಿಯೇನಿಲ್ಲ. ಸಾಧಾರಣವಾಗಿ ಮೂರರಿಂದ ಐದಾರು ನುಡಿಗಳಿರುವುದು ವಾಡಿಕೆ. ಕೆಲವು ಪದಗಳಲ್ಲಿ ಇಪ್ಪತ್ತಕ್ಕಿಂತ ಹೆಚ್ಚು ನುಡಿಗಳಿರುವುದೂ ಉಂಟು ; ಆದರೆ ವಿರಳ. ಪದಗಳಿಗೆ ರಾಗ, ತಾಳಗಳ ನಿರ್ದೇಶನ ಮಾಡುವುದಿದೆ. ಆದರೆ ಇದು ಪುರಂದರದಾಸರ ಕಾಲದಲ್ಲೇ ಸಿದ್ಧವಾಗಿ ನಮ್ಮವರೆಗೆ ಬಂದಿದೆಯೆಂದು ಹೇಳಲು ಬರುವುದಿಲ್ಲ. ಪುರಂದರದಾಸರ ಪದಗಳನ್ನು ಯಾರಾದರೂ ಅವರ ಕಾಲದಲ್ಲೇ ಬರೆದಿಟ್ಟರೋ, ಸ್ವರಪ್ರಸ್ತಾರವನ್ನು ಅಳವಡಿಸಿದ್ದರೋ ಎನ್ನುವುದೂ ತಿಳಿದುಬಂದಿಲ್ಲ. ದಾಸಕೂಟದಲ್ಲಿ ಬಾಯ ಪರಂಪರೆಯಿಂದ ಬಂದುವೆಂಬುದೇ ದಿಟವಿದ್ದೀತು. ಪುರಂದರದಾಸರ ಕಾಲಕ್ಕೂ ಅವರ ಪದಗಳನ್ನು ಪ್ರಚಾರಕ್ಕೆ ತಂದ ವಿಜಯದಾಸರ ಕಾಲಕ್ಕೂ ನೂರಾರು ವರ್ಷಗಳ ಅಂತರ ಇದ್ದಿತಾಗಿ ಗಾಯನ ಪ್ರಕಾರದ ನಿರ್ದೇಶನ ಮಾರ್ಪಟ್ಟಿರುವುದು ಸಾಧ್ಯ. ಮೇಲಾಗಿ ನಮಗೆ ಉಪಲಬ್ಧವಿರುವ ಪುರಂದರದಾಸರ ಪದಗಳ ಕೈಬರಹದ ಪ್ರತಿಗಳು ಈಚಿನವು ; ಸುಮಾರು

ನೂರೈವತ್ತು ವರ್ಷಗಳಿಗಿಂತ ಹೆಚ್ಚು ಹಿಂದಕ್ಕೆ ಸಲ್ಲಲಾರವು. ಈಗ ಕಾಣಸಿಗುವ ರಾಗ–ತಾಳಗಳ ನಿರ್ದೇಶನ ಎಷ್ಟರಮಟ್ಟಿಗೆ ಬಾಯುಪರಂಪರೆಯನ್ನು ಪ್ರತಿನಿಧಿಸುತ್ತದೆ ಎನ್ನುವುದು ಸಂದಿಗ್ಧವಾದ ವಿಚಾರವೇ. ಈ ವಿಚಾರವನ್ನು ಮತ್ತೆ ಎತ್ತಿಕೊಳ್ಳುತ್ತೇನೆ.

ಬಿಡಿ ಪದಗಳನ್ನು ಬಿಟ್ಟರೆ ಕೆಲವು ಪ್ರಕರಣ ಪ್ರಬಂಧಗಳೂ ಪುರಂದರದಾಸರ ಹೆಸರಿನಿಂದ ಪ್ರಸಿದ್ಧವಾಗಿವೆ. ದ್ರೌಪದೀವಸ್ತ್ರಾಪಹರಣ ಮತ್ತು ಗಜೇಂದ್ರ ಮೋಕ್ಷ ಎಂಬೆರಡು ಉದಯರಾಗ ಪದ್ಧತಿಯಲ್ಲಿರುವ ಪ್ರಕರಣಗಳು. ದ್ರೌಪದೀವಸ್ತ್ರಾಪಹರಣ ಹದಿನೈದು ನುಡಿಗಳ ಹಾಡು. ಆದರೆ ಇದನ್ನು ಕನಕದಾಸರದ್ದೆಂದೂ ಹೇಳುವುದಿದೆ. ಕೆಲವು ಪ್ರತಿಗಳ ಕಡೆಯ ನುಡಿಯಲ್ಲಿ 'ಮಂಗಳಂ ಶ್ರೀಯರಸ ಪುರಂದರವಿಠಲಗೆ ಮಂಗಳಂ ಜಯಮಂಗಳಂ' ಎಂದೂ, ಮತ್ತೆ ಕೆಲವು ಪ್ರತಿಗಳಲ್ಲಿ'ಮಂಗಳಂ ಸಿರಿ ಕಾಗಿನೆಲೆಯಾದಿ ಕೇಶವಗೆ ಮಂಗಳಂ ಗಿರಿವಾಸಗೆ' ಎಂದೂ ಇರುವುದು ಈ ಗೊಂದಲಕ್ಕೆ ಕಾರಣವಾಗಿದೆ. ಮಹಾಭಾರತ ಪ್ರಸಂಗವೊಂದರಲ್ಲಿ ದುಃಶಾಸನನಿಂದ ಅವಮಾನಕ್ಕೆ ಪಕ್ಕಾದ ದ್ರೌಪದಿಯ ಮಾನವನ್ನು ಕೃಷ್ಣನು ಕಾಪಿಟ್ಟ ಸಂದರ್ಭ ಇಲ್ಲಿನ ವಸ್ತು. ಪ್ರಸಂಗದ ನಿರೂಪಣೆ ಸ್ವಾರಸ್ಯವಾಗಿ ಬಂದಿದೆ. ಭಾಗವತಪುರಾಣದಲ್ಲಿ ಬರುವ ಗಜೇಂದ್ರಮೋಕ್ಷದ ಕಥೆ ಎರಡನೆಯ ಪ್ರಕರಣದ ವಸ್ತು. ಇದರಲ್ಲಿ ಹನ್ನೊಂದು ನುಡಿಗಳಿವೆ. ಪಾಂಡ್ಯ ದೇಶದ ಅರಸನಾದ ಇಂದ್ರದ್ಯುಮ್ನನು ಹರಿಭಕ್ತನಾಗಿದ್ದು, ಅಗಸ್ತ್ಯಋಷಿಯ ಶಾಪದಿಂದ ಆನೆಯಾದದ್ದೂ, ಹೂಹೂ ಎಂಬ ಗಂಧರ್ವನೂ ದೇವಲ ಮುನಿಯ ಶಾಪದಿಂದ ಮೊಸಳೆಯಾದದ್ದೂ, ಮೊಸಳೆಯು ಆನೆಯ ಕಾಲನ್ನು ಹಿಡಿದು ಹಿಂಸಿಸಿದಾಗ, ಆನೆಯು ಆದಿಮೂಲನಿಗೆ ಮೊರೆಯಿಡಲು ಆನೆ ಮೊಸಳೆಗಳೆರಡೂ ಶಾಪದಿಂದ ಮುಕ್ತಿಗೊಂಡದ್ದೂ ಈ ಪ್ರಕರಣದಲ್ಲಿ ಬರುತ್ತದೆ.

ದಂಡಕ ಪದ್ಧತಿಯಲ್ಲಿ "ಅನಂತಕೋಟಿ ಬ್ರಹ್ಮಾಂಡನಾಯಕ" ಎಂದು ಮೊದಲಾಗುವ ಗದ್ಯವೊಂದು ಅವರ ರಚನೆಯೇ. ಇದರಲ್ಲಿ ಒಂದು ನೂರು ಎಂಬತ್ತೊಂದು ದಿವ್ಯನಾಮಗಳಿದ್ದು ನಾಮಾವಳಿ ಪ್ರಕಾರಕ್ಕೆ ಸೇರಿದ ರಚನೆ. ಇದರಲ್ಲಿ ಬರುವ ದೇವರ ನಾಮಗಳು ಶಾಸ್ತ್ರಗ್ರಂಥಗಳಿಂದಲೂ, ಭಾಗವತಾದಿ ಪುರಾಣಗಳಿಂದಲೂ, ಭಕ್ತರ ಚರಿತ್ರೆಗಳಿಂದಲೂ ಆಯ್ದುಕೊಂಡವು. ಇದೇ ಗೋತ್ರಕ್ಕೆ ಸೇರಿದ 'ಕೇಶವನಾಮ' ಎಂಬ ಮತ್ತೊಂದು ರಚನೆಯಲ್ಲಿ ಕೇಶವಾದಿಚತುರ್ವಿಂಶತಿನಾಮಗಳ ಉಲ್ಲೇಖವಿದ್ದು ಒಂದೊಂದು ನಾಮಕ್ಕೂ ಒಂದೊಂದು ನುಡಿಯ ವಿವರಣೆಯಿದೆ. ಇದರಲ್ಲಿ ಮಧ್ಯಮಾವತಿ ರಾಗ, ಅಟ್ಟತಾಳವೆಂಬ ನಿರ್ದೇಶನವೂ ಇದೆ. ದಾಸರ ಇಂಥ ರಚನೆಗಳು ಮೊದಲಿಗೆ ಹೆಚ್ಚು ಬಳಕೆಯಲ್ಲಿದ್ದುದರಿಂದ ದಾಸರ ಪದಗಳಿಗೆ 'ದೇವರ ನಾಮ'ಗಳೆಂಬ ಹೆಸರು ವಾಡಿಕೆಯಲ್ಲಿದ್ದಿತೆಂದು ತೋರುತ್ತದೆ. ಆದರೆ ಈ ಬಗೆಯ ಕೃತಿಗಳು ಪುರಂದರದಾಸರ ಹೆಸರಿನಲ್ಲಿ ಈಗ ಉಳಿದಿರುವುವು ಕಡಮೆ. 'ದೇವರನಾಮ'ಎಂಬ ಹೆಸರೇನೋ ಉಳಿದುಬಂದಿದೆ !

ಹರಿದಾಸರ ಸುಳಾದಿಗಳು, ಉಗಾಭೋಗಗಳನ್ನು ಬಿಟ್ಟರೆ ಇತರ ರಚನೆಗಳಿಗೆ ಪದಗಳೆಂಬ ನಿರ್ದೇಶನವೇ ಸಮರ್ಪಕವಾದುದೆಂದು ತೋರುತ್ತದೆ ; ಮೊದಲಿಗಿದ್ದ ಹೆಸರೂ ಇದೇ. ಅವೆಲ್ಲವೂ 'ದೇವರನಾಮ'ಗಳೇನೂ ಅಲ್ಲ. ಅವನ್ನು 'ಪದ್ಯ' ಗಳೆಂದೂ ಹೇಳಲಾಗದು. ಪದ್ಯದಲ್ಲಿ ಛಂದಸ್ಸು ('ಛಂದೋಬದ್ಧಪದಂ ಪದ್ಯಂ'), ವೃತ್ತ ಅಥವಾ ಜಾತಿಗನುಣವಾಗಿ ಸಾಲುಗಳ ನಿಯಮ ('ಪದ್ಯಂ ಚತುಷ್ಪದೋ ತಚ್ಚ ವೃತ್ತಂ ಜಾತಿರಿತಿ ದ್ವಿಧಾ') ಮುಖ್ಯವಾಗುತ್ತವೆ. ದಾಸರ ರಚನೆಗಳಲ್ಲಿ ಇದನ್ನು ಎಲ್ಲೆಡೆಗಳಲ್ಲೂ ಕಾಣುವುದಾಗದು. ಇನ್ನು 'ಹಾಡು'ಗಳೆನ್ನುವುದೂ ಹಳೆಯ ಹೆಸರೇ; ಆದರೆ ಎಲ್ಲವೂ ಹಾಡಿಕೆಗೆ ಬರುವಂಥವಲ್ಲ. ಕೀರ್ತನೆಗಳೆಂದರೂ ಸರಿಯಾಗುವುದಿಲ್ಲ; ಎಲ್ಲವೂ ಕೀರ್ತನ ಪದ್ಧತಿಗೆ ಹೊಂದುವುದಿಲ್ಲ. ಪದವೆನ್ನುವುದು ಏಕಾರ್ಥಬೋಧಕ ವಾದ ಅನ್ವಿತವರ್ಣಗಳುಳ್ಳ ರಚನೆ. ಇದರಲ್ಲಿ ವಸ್ತುನಿರ್ದೇಶನವಾಗಲಿ ವೃತ್ತ ನಿರ್ದೇಶನವಾಗಲಿ, ಛಂದೋಬಂಧವಾಗಲಿ ಇರಬೇಕಾದುದಿಲ್ಲ. ಮಾತುಗಳಲ್ಲಿ ಹೊಂದಾಣಿಕೆ ಇದ್ದರೆ ಸಾಕು ; ಇಡೀ ಮಾತುಗಳ ಸಮುದಾಯಕ್ಕೆ ಒಟ್ಟಾರೆ ಒಂದು ತಾತ್ಪರ್ಯವಿದ್ದರೆ ಆಯಿತು. ಈ ಲಕ್ಷಣ ದಾಸರ ರಚನೆಗಳಿಗೆ ಒಪ್ಪುತ್ತದೆ, ಸುಳಾದಿಗಳು ಪ್ರಾಚೀನ ಪ್ರಬಂಧಗಳ ಪ್ರಕಾರಕ್ಕೆ ಸೇರಿದ ರಚನೆ ; ಉಗಾಭೋಗವೂ ಪದಕ್ಕಿಂತ ಬೇರೆಯೇ. ಇವುಗಳ ವಿಚಾರ ಮುಂದೆ ಬರುತ್ತದೆ.

'ಭಗವದ್ಗೀತಾಸಾರ'ವೆಂಬ ಪುರಂದರದಾಸರ ಕೃತಿಯೂ ಒಂದಿದೆ. ಇದಕ್ಕೆ 'ಹೃದಯಕಮಲವಿವರಮಾನಸಪೂಜೆ' ಎನ್ನುವ ಹೆಸರೂ ಇದೆ. ಇದು ಬಿಂಬೋ ಪಾಸನೆಗೆ ಸಂಬಂಧಿಸಿದ ರಚನೆ. ಭಗವದ್ಗೀತೆಯಲ್ಲಿ ಬರುವ ವಿವರಗಳೇನು ಇಲ್ಲಿ ಕಾಣಸಿಗುವುದಿಲ್ಲ : 'ಭಗವದ್ಗೀತಾಸಾರ'ವೆಂಬ ಹೆಸರು ಹೇಗೆ ಬಂದಿತೋ ತಿಳಿಯು ವುದಿಲ್ಲ. ಆದರೆ ಇಲ್ಲಿ ಬರುವ ಯೋಗವನ್ನು ಕೃಷ್ಣನು ಅರ್ಜುನನಿಗೆ ಹೇಳಿದನೆಂಬ ಮಾತು ಬರುತ್ತದೆ. ಇದರಲ್ಲಿ ೧೭ ಸಂಸ್ಕೃತ ಶ್ಲೋಕಗಳಿದ್ದು ಅವಕ್ಕೆ ಸಂಗ್ರಹಾರ್ಥ ವನ್ನು ಹೇಳುವ ಕನ್ನಡ ಪದಗಳು ಇವೆ. ಕೆಲವು ಸಂಸ್ಕೃತ ಶ್ಲೋಕಗಳನ್ನೇನೋ ಪುರಾಣಗಳಿಂದ ಎತ್ತಿಕೊಂಡಿರುವುದನ್ನು ಅಲ್ಲಿಯೇ ಕಾಣಿಸಿದ್ದಾರೆ. ಇತರ ಶ್ಲೋಕ ಗಳ ಆಕರ ತಿಳಿಯುವುದಿಲ್ಲ ; ಅವು ಪುರಂದರದಾಸರದ್ದೇ ರಚನೆಗಳೋ ಎಂಬುದೂ ಸ್ಪಷ್ಟವಾಗುವುದಿಲ್ಲ. ಈ ರಚನೆ ಸಂಪೂರ್ಣವಾಗಿ ತಾಂತ್ರಿಕ ಪ್ರಕ್ರಿಯೆಗಳನ್ನೂ ಆಚಾರ್ಯರ 'ತಂತ್ರಸಾರಸಂಗ್ರಹ'ದ ಒಕ್ಕಣೆಯನ್ನೂ ಅನುಸರಿಸಿದೆ. ಇದೊಂದು ವಿಶಿಷ್ಟ ಜಾತಿಯ ರಚನೆ. ಹಿಂದೆ ಚಾಜರಹಾಡು ಎಂಬೊಂದು ಪ್ರಕಾರವಿದ್ದಂತೆ ಉಲ್ಲೇಖವಿದೆ. ಸೋಮೇಶ್ವರನ 'ಅಭಿಲಷಿತಾರ್ಥ ಚಿಂತಾಮಣಿಯು' (ಮಾನಸೋಲ್ಲಾಸ)ಇದನ್ನು ಚರ್ಚರೀ ಎಂದು ಕರೆದಿದೆ; ಪಾಣಿನಿಯ 'ಅಷ್ಟಾಧ್ಯಾಯಿ' ಯಲ್ಲಿ 'ಚರ್ಚರೀಕ' ಎಂದು ಉಲ್ಲೇಖಗೊಂಡಿರುವುದು ಇದೇ ಇದ್ದೀತು. ಆಂಧ್ರ ದೇಶದಲ್ಲಿ ಇದು ಬಳಕೆಯಲ್ಲಿದ್ದಿತು. ಈ ಬಗೆಯ ರಚನೆಗಳಲ್ಲಿ ಮೊದಲು ಸಂಸ್ಕೃತ ಶ್ಲೋಕ, ಅನಂತರ ಪ್ರಾಕೃತಗಾಹೆ, ಅನಂತರ ತೆಲುಗು ಪದ್ಯ ಮತ್ತೆ ಸಂಸ್ಕೃತ ಶ್ಲೋಕ

ಹೀಗೆ ವರಸೆಯಾಗಿ ಬರುವುದು ವಿಶೇಷ. ಪುರಂದರದಾಸರ ಈ ಕೃತಿಯಲ್ಲಿ ಪ್ರಾಕೃತಗಾಹೆಯ ಭಾಗವಿಲ್ಲ. ಸಂಸ್ಕೃತ ಶ್ಲೋಕ, ಕನ್ನಡದ ಪದ್ಯ ಮತ್ತೆ ಸಂಸ್ಕೃತ ಶ್ಲೋಕ, ಕನ್ನಡ ಪದ್ಯ ಹೀಗೆ ಬರುತ್ತವೆ. ಕನ್ನಡ ಪದ್ಯಗಳಿಗೆ ರಾಗ, ತಾಳಗಳನ್ನು ಸೂಚಿಸಿದ್ದಾರೆ. ಪುರಂದರ ಸಾಹಿತ್ಯದಲ್ಲಿ ಇದೊಂದೇ ಕೃತಿ ಈ ಬಗೆಯದು.

4

ಹರಿದಾಸರ ರಚನೆಗಳಲ್ಲಿ ಸುಳಾದಿಗಳು, ಉಗಾಭೋಗಗಳು ಪ್ರಸಿದ್ಧವಾಗಿವೆ. ಕನ್ನಡದಲ್ಲಲ್ಲದೆ ಬೇರೆ ಭಾಷೆಗಳಲ್ಲಿ ಈ ಬಗೆಯ ರಚನೆಗಳಿಲ್ಲ ; ತೆಲುಗಿನಲ್ಲಿದ್ದುವೆಂದು ಹೇಳುತ್ತಾರೆ. ಕನ್ನಡದಲ್ಲೂ ಹರಿದಾಸ ಸಾಹಿತ್ಯಕ್ಕೇ ಮೀಸಲಾದುವು ಈ ರಚನೆಗಳು ; ಇತರ ವಾಙ್ಮಯಪ್ರಕಾರಗಳಲ್ಲಿ ಕಾಣಸಿಗುವುದಿಲ್ಲ. ಶ್ರೀಪಾದರಾಜರೇ ಇವೆರಡು ಪ್ರಕಾರಗಳಿಗೂ ಪ್ರವರ್ತಕರೆಂಬ ಪ್ರತೀತಿಯಿದೆ ; ವ್ಯಾಸರಾಯಸ್ವಾಮಿಗಳೂ ಸುಳಾದಿಗಳನ್ನೂ ಉಗಾಭೋಗಗಳನ್ನೂ ರಚಿಸಿದ್ದರು. ಆದರೆ ಇವೆರಡು ಪ್ರಕಾರಗಳಿಗೂ ವಿಶೇಷವಾದ ಗಮನವನ್ನು ಹರಿಸಿದವರು ಪುರಂದರದಾಸರು. ತಾವು ಹದಿನಾಲ್ಕು ಸಾವಿರ ಸುಳಾದಿಗಳನ್ನು ರಚಿಸಿದುದನ್ನು ಹೇಳಿಕೊಂಡಿದ್ದಾರೆ ; ಅವರು ಎಪ್ಪತ್ತೈದು ಸಾವಿರ "ಅಹನ್ನೇಕ ಏಕಾದಶೀ…ಉಗಾಭೋಗಾದಿ" ಕೃತಿಗಳನ್ನು ರಚಿಸಿದ್ದಾರೆಂದು ವಿಜಯದಾಸರು ಹೇಳಿದ್ದಾರೆ. ಉಗಾಭೋಗವೆಂಬ ಮಾತು ಪುರಂದರದಾಸರ ಈ ಕೃತಿಗಳಲ್ಲೆಲ್ಲೂ ಕಾಣಸಿಗುವುದಿಲ್ಲ. ಅದು ಮೊಟ್ಟಮೊದಲು ನಮ್ಮ ಕಣ್ಣಿಗೆ ಬೀಳುವುದು ವಿಜಯದಾಸರ ಕಾಲದಲ್ಲೇ. ಆದರೆ ಆ ಬಗೆಯ ರಚನೆ ಬಹು ಹಿಂದಿನಿಂದ ಇದ್ದಿತೆನ್ನುವುದೇನೋ ದಿಟ.

ಸುಳಾದಿ ಮತ್ತು ಉಗಾಭೋಗಗಳೆಂಬ ರಚನೆಗಳನ್ನೂ ಕುರಿತು ನಾಲ್ಕು ಮಾತುಗಳನ್ನು ಹೇಳಬೇಕು. ಇವೆರಡು ಮಾತುಗಳನ್ನು ಕುರಿತು ಹಲವಾರು ವಿವರಣೆಗಳಿವೆ. ಆದರೆ ಅವುಗಳಲ್ಲಿ ಹುರುಳು ಕಡಮೆ. ಅನಭಿಜ್ಞರಾದವರ ವಿವರಣೆಗಳನ್ನು ಬಿಟ್ಟರೆ, ಗಟ್ಟಿಯಾಗಿ ಉಳಿಯುವುವು ಎರಡು ವಿಮರ್ಶೆಗಳು: ಕಿನ್ನರಿ ವಿದ್ವಾಂಸರಾಗಿದ್ದ ಹು ಲ ಗೂ ರು ಕೃಷ್ಣಾಚಾರ್ಯರದ್ದೊಂದು ('ಕರ್ನಾಟಕ ಸಂಗೀತವೂ ದಾಸ ಸಾಹಿತ್ಯವೂ', ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, 1951), ಮಹಾಮಹೋಪಾಧ್ಯಾಯ ರಾ. ಸತ್ಯನಾರಾಯಣ ಅವರದ್ದಿನ್ನೊಂದು (ಧಾರವಾಡದ 'ಶ್ರೀ ಪುರಂದರದಾಸರ ಸಾಹಿತ್ಯ' ಭಾಗ ೪ 'ಕೃಷ್ಣಲೀಲಾ' 1965, ಅವತರಣಿಕೆಯಾಗಿ ಬರೆದಿರುವ ಇಂಗ್ಲೀಷ್ ಪ್ರಬಂಧ). ಸತ್ಯನಾರಾಯಣ ಅವರು ಆಳವಾಗಿ ಅಭ್ಯಾಸಮಾಡಿ ಹಲವಾರು ಸ್ವಾರಸ್ಯವಾದ ವಿಚಾರಗಳನ್ನು ಹೊರಗೆಡಹಿದ್ದಾರೆ ; ಹುಲಗೂರು ಕೃಷ್ಣಾಚಾರ್ಯರ ಹಲವು ವಿವರಣೆಗಳನ್ನು ನಿರಾಕರಿಸಿದ್ದಾರೆ. ಆದರೆ ಸುಳಾದಿ, ಉಗಾ

ಭೋಗಗಳನ್ನು ಕುರಿತಂತೆ ಕಡೆಯುಮಾತೆಂಬುದು ಇನ್ನೂ ಮೂಡಿಬಂದಿಲ್ಲ. ಅವುಗಳ ಉಗಮ, ಸ್ವರೂಪ, ಪ್ರಯೋಜನಗಳು ಇನ್ನೂ ಸಂದಿಗ್ಧವಾಗಿಯೇ ಉಳಿದಿವೆ.

ಮೊದಲಲ್ಲಿ, ಆ ಮಾತುಗಳ ದಿಟವಾದ ಅರ್ಥವೇನು ಎಂದುದೇ ಸ್ಪಷ್ಟವಾಗಿಲ್ಲ. 'ಸುಳಾದಿ'ಯನ್ನು 'ಸೂಡಾದಿ'ಯೆಂಬ ಮಾತಿನಿಂದ ಬಂದುದೆಂದು ಭಾವಿಸಿ, ಸೂಡಾದಿ ಯೆಂದರೆ ಸೂಡಾದಿ ಸಪ್ತತಾಳಗಳನ್ನು ಸೂಚಿಸುವುದೆಂದು ಹೇಳುವುದು ವಾಡಿಕೆ. 'ಸೂಡ' ಎನ್ನುವುದು ಗೀತ ಸಮೂಹ ವಿಶೇಷವಾಚಿಯಾದ ದೇಶೀಶಬ್ದವೆಂದು ಚತುರ ಕಲ್ಲಿನಾಥ (ಶಾರ್ಙ್ಗದೇವನ 'ಸಂಗೀತ ರತ್ನಾಕರ'ಕ್ಕೆ ವ್ಯಾಖ್ಯಾನ ಬರೆದವನು) ಮತ್ತು ವೇಂಕಟಮುಖಿ ('ಚತುರ್ದಂಡಿ ಪ್ರಕಾಶಿಕೆ'ಯನ್ನು ಬರೆದವನು) ಹೇಳಿದ್ದಾರೆ. ಇದು ಕನ್ನಡದ್ದೇ ಮಾತಿದ್ದೀತೆಂಬ ಊಹೆಯೂ ಇದೆ. ಗಾಯನಕ್ಕೆಂದು ಸಿದ್ಧಪಡಿಸುತ್ತಿದ್ದ ಪ್ರಬಂಧಗಳಲ್ಲಿ ಸೂಡ, ಆಲಿಕ್ರಮ, ವಿಪ್ರಕೀರ್ಣಗಳೆಂದು ಮೂರು ಬಗೆಗಳಿದ್ದು, ಸೂಡ ಪ್ರಬಂಧಗಳಲ್ಲಿ ಶುದ್ಧ (ಏಳೆ ಮೊದಲಾದವು), ಛಾಯಾಲಗ (ಧ್ರುವವೇ ಮೊದಲಾದುವು) ಎಂಬ ಎರಡು ರೀತಿಗಳಿದ್ದುದು ಸಂಗೀತ ಶಾಸ್ತ್ರ ಗ್ರಂಥಗಳಿಂದ ತಿಳಿದು ಬರುತ್ತದೆ. ಎರಡನೆಯ ರೀತಿಯಾದ ಛಾಯಾಲಗವೇ ಮುಂದೆ 'ಸಾಲಗ ಸೂಡ'ವೆಂದು ಹೆಸರಾಯಿತು. 'ಸಾಲಗಸೂಡ'ವೇ ಸುಳಾದಿಯ ಮೊದಲ ರೂಪ ವೆಂದು ಹೇಳುತ್ತಾರೆ. ಶುದ್ಧ ಸೂಡದಲ್ಲಿ ಶಾಸ್ತ್ರೋಕ್ತವಾಗಿ ಮಾರ್ಗೀಪದ್ಧತಿಯೂ, ಸಾಲಗ ಸೂಡದಲ್ಲಿ ಜನಪ್ರಿಯವಾದ ದೇಶೀ ಪದ್ಧತಿಯೂ ಮುಖ್ಯವಾದ ವಿವರಗಳು.

ಸುಳಾದಿಗಳು ಬೇರೆ ಯಾವ ಭಾಷೆಯಲ್ಲೂ ಇಲ್ಲದೆ, ಕನ್ನಡದಲ್ಲಿ ಮಾತ್ರ ಇವೆ; ಅದೂ ಹರಿದಾಸರ ಸಾಹಿತ್ಯದಲ್ಲಷ್ಟೆ. ಪುರಂದರದಾಸರೂ ಅವರ ಗುರುಗಳಾದ ವ್ಯಾಸರಾಯಸ್ವಾಮಿಗಳೂ, ಅವರ ಗುರುಗಳಾದ ಶ್ರೀಪಾದರಾಜರೂ ಸುಳಾದಿಗಳನ್ನು ರಚಿಸಿದವರು ; ಪುರಂದರದಾಸರೇ ಸುಳಾದಿಗಳನ್ನು ಹೆಚ್ಚು ಸಂಖ್ಯೆಯಲ್ಲಿ ರಚಿಸಿದ ವರು. ಬಹುಕಾಲದವರೆಗೆ ಇವರ ಸುಳಾದಿಗಳೇ ಬಳಕೆಯಲ್ಲಿದ್ದುವು. ಕ್ರಿ. 1730 ರಲ್ಲಿ ಸಂಗೀತ ಸಾರಾಮೃತವನ್ನು ಬರೆದ ತುಳಜಾಜಿಯೂ ಸುಳಾದಿಗಳನ್ನು ಹೇಳು ವಾಗ ಪುರಂದರದಾಸರ ಸುಳಾದಿಗಳನ್ನೇ ನಿದರ್ಶನವಾಗಿ ಎತ್ತಿಕೊಂಡಿದ್ದಾನೆ. ಪುರಂದರ ದಾಸರು 'ಸುಳಾದಿ'ಯೆಂಬ ಹೆಸರನ್ನೂ ಹೇಳಿದ್ದಾರೆ ; ಶ್ರೀಪಾದರಾಜರಾಗಲಿ ವ್ಯಾಸ ರಾಯಸ್ವಾಮಿಗಳಾಗಲಿ ಹೇಳಲಿಲ್ಲ. ಹರಿದಾಸ ವಾಙ್ಮಯವಲ್ಲದೆ, ಕನ್ನಡ ಸಾಹಿತ್ಯ ದಲ್ಲಿ ನಾವು ಸೂಡಾದಿ (ಸುಳಾದಿ)ಯೆಂಬ ಹೆಸರನ್ನು ಮೊಟ್ಟಮೊದಲು ಕಾಣುವುದು ಪದ್ಮಣಾಂಕನೆಂಬ ಕವಿಯ 'ಪದ್ಮರಾಜ ಪುರಾಣ'ದಲ್ಲಿ (ಕ್ರಿಸ್ತಾಬ್ದ 1400ರ ಸುಮಾರು "ಸುಪ್ರಬಂಧಮುರು ಮಾರ್ಗಬದ್ಧಂ... ಸೂ ಡಾ ದಿ ಸದ್ರುಮಣೀಯಂ"). ಇಲ್ಲಿ 'ಮಾರ್ಗಬದ್ಧ'ಕ್ಕಿಂತ ಬೇರೆಯಾಗಿ 'ಸೂಡಾದಿ'ಯನ್ನು ಎಣಿಸಿರುವುದನ್ನು ಗಮನಿಸ ಬೇಕು. ಸೂಡವೆಂದರೆ ದೇಶಿಯೆಂದು ಆಗಲೇ ಹೇಳಿದೆವಷ್ಟೆ. ಇದು ಪ್ರಧಾನವಾಗಿ ತಾಳಗಳಿಗೆ ಸಂಬಂಧಿಸಿದ ಮಾತೆಂಬುದು ಕ್ರಿಸ್ತಾಬ್ದ 1180ರಲ್ಲಿ ಸುಮಾರಿಗೆ 'ಚಂದ್ರ ಪ್ರಭ ಪುರಾಣ'ವನ್ನು ಬರೆದ ಅಗ್ಗಳ ಕವಿಯ ಉಲ್ಲೇಖದಿಂದ ತಿಳಿಯುತ್ತದೆ.

ಅವನು ಏಕ, ಧ್ರುವ, ತ್ರಿವುಡ (ತ್ರಿಪುಟ), ಮಟ್ಟೆಯ (ಮಂಠಕ), ಝಂಪೆ, ಅಟ್ಟ (ಅಂಡ), ರೂಪಕ ಎಂಬ ಏಳು ತಾಳಗಳನ್ನು ಹೆಸರಿಸಿ ಅವನ್ನು 'ಸೂತ್ರ' ತಾಳಗಳೆಂದು ಕರೆದು, ಶಾಸ್ತ್ರೋಕ್ತವಾದ ನೂರೆಂಟು ಮಾರ್ಗೀ ತಾಳಗಳನ್ನು 'ನ್ಯಾಸ' ತಾಳಗಳೆಂದು ಕರೆದಿದ್ದಾನೆ. 'ನ್ಯಾಸ'ವೆಂದರೆ ಗ್ರಂಥದಲ್ಲಿರುವುದು ('ಯಥಾ ನ್ಯಾಸಂ'); 'ಸೂತ್ರ'ವೆಂದರೆ ದಾ ರ ದ ಂ ತೆ ಹರಡಿಕೊಂಡಿರುವುದು. 'ಸೂತ್ರ'ವೆನ್ನುವುದೇ ದೇಶೀಯ ಭಾಷೆಯಲ್ಲಿ 'ಸೂಡ'ವೆಂದಾಯಿತೋ ಏನೋ ಎನ್ನುವ ಶಂಕೆ ಮೂಡುವುದು ಸಹಜ.

ಆದರೆ 'ಸಾಲಗ ಸೂಡ' ಎಂದು ಸಂಸ್ಕೃತ ಗ್ರಂಥಗಳಲ್ಲಿ ಕಂಡುಬರುವ ಮಾತನ್ನು ಕನ್ನಡದ ಕವಿಗಳು 'ಸಾಲಗ ಸೂಳೆ'ವೆಂದು ಕರೆದಿರುವುದಿದೆ. ಕ್ರಿಸ್ತಾಬ್ದ 1430ರಲ್ಲಿ ಚಂದ್ರಶೇಖರನು "ಸಾಳಗ ಸೂಳವುಂ ಪಾಡುವಲ್ಲಿ" ('ಪಂಪಾಸ್ಥಾನವರ್ಣನ') ಎಂದು ಪ್ರಸ್ತಾಪಿಸಿದ್ದಾನೆ. ಆದುದರಿಂದ 'ಸೂಳ್' ಎನ್ನುವ ಕನ್ನಡದ ಪದವೇ (ದೊಡ್ಡದಾಗಿ ಶಬ್ದಮಾಡು ಎಂಬರ್ಥದಲ್ಲಿ) 'ಸೂಡ' ಎಂಬುದಕ್ಕೆ ಮೂಲವೆಂದು ತೋರುತ್ತದೆ. ಸೂಡವೆಂಬ ಮಾತು ಸಂಸ್ಕೃತದಲ್ಲಿ ಬಂದಿದ್ದರೂ ಅದರ ಅರ್ಥವಾಗಲಿ ನಿಷ್ಪತ್ತಿಯಾಗಲಿ ಸ್ಪಷ್ಟವಾಗಿಲ್ಲ. 'ಸೂಳ'ವೇ 'ಸೂಡ'ವಾಗಿ ಸೂತ್ರವಾಗಿರುವುದು ಸಾಧ್ಯ. ಇದು ಹೇಗಾದರಿರಲಿ, ಇದು ಹಾಡಿಕೆಯ ಪ್ರಕಾರವಷ್ಟೇ ವಿನಾ ತಾಳದ ಸೂಚನೆಯಲ್ಲ. ಸೂಡವೆನ್ನುವುದು ಒಂದು ಪ್ರಬಂಧ ವಿಶೇಷ. ಮಾರ್ಗೀ ಪದ್ಧತಿಯನ್ನನುಸರಿಸಿ ಗ್ರಾಮ, ಮೂರ್ಛನೆಗಳ ಚೌಕಟ್ಟಿನಲ್ಲಿ ರಾಗವನ್ನು ಬಳಸಿಕೊಂಡ ಪ್ರಬಂಧ 'ಶುದ್ಧಸೂಡ' ; ದೇಶ್ಯ ರಾಗಗಳನ್ನು ಬಳಸಿಕೊಂಡ ಪ್ರಬಂಧ 'ಸಾಲಗ ಸೂಡ' (ಛಾಯಾಲಗಸೂಡ). ಎರಡನೆಯ ಬಗೆಯ ಪ್ರಬಂಧಕ್ಕೇ ವ್ಯವಹಾರದಲ್ಲಿ 'ಸೂಡ'ವೆಂಬ ಹೆಸರು ಬಳಕೆಗೆ ಬಂದಂತೆ ತೋರುತ್ತದೆ. ಮೊದಲನೆಯ ಬಗೆಯ ಪ್ರಬಂಧವೇ ಬಳಕೆಯಿಂದ ಜಾರಿಹೋದಂತೆಯೂ ತೋರುತ್ತದೆ. ಸೂಡವೆನಿಸಿಕೊಂಡ ಈ ಬಗೆಯ ಪ್ರಬಂಧವನ್ನು ಹಿಡಿದು ಅದಕ್ಕೆ ಹಲವು ತಾಳಗಳನ್ನು ಅಳವಡಿಸಿದರೆ 'ಸೂಡಾದಿ'ಯಾಯಿತು ; ಆ ತಾಳಗಳಿಗೆ 'ಸೂಡಾದಿ ತಾಳ'ಗಳೆಂದು ಹೆಸರಾಯಿತು. ಇಲ್ಲಿ 'ಆದಿ'ಯೆಂಬ ಮಾತಿಗೆ "ಮೊದಲಾಗಿ" ಎಂದು ಅರ್ಥವಲ್ಲ ; "ಅವಲಂಬಿಸಿ" "ಮೊದಲಲ್ಲಿ ಹಿಡಿದು" ಎಂದರ್ಥ. ಸೂಡವನ್ನು ಅವಲಂಬಿಸಿದ ತಾಳಗಳು ಸೂಡಾದಿ ತಾಳಗಳು ; ಸೂಡವೆಂಬುದೇ ತಾಳದ ಹೆಸರಲ್ಲ.

ಶಾಸ್ತ್ರಗ್ರಂಥಗಳು ಹೇಳುವ ನೂರೆಂಟು ತಾಳಗಳಲ್ಲಿ ಕನ್ನಡ ನಾಡಿನ ಹರಿದಾಸರು ತಮ್ಮ "ಸೂಳ ಪ್ರಬಂಧ" ರಚನೆಯಲ್ಲಿ ಏಳು ತಾಳಗಳನ್ನು ಮಾತ್ರ ಆರಿಸಿಕೊಂಡರು. ಪುಂಡರೀಕವಿಟ್ಠಲನ 'ನರ್ತನ ನಿರ್ಣಯ'ದಲ್ಲಿ 'ಸಪ್ತಸೂಡಾದಿರಿತ್ಯುಕ್ತಃ ಲಕ್ಷ್ಯ ಲಕ್ಷಣಕೋವಿದೈಃ' ಎನ್ನುವ ಮಾತಿದೆ. ಗ್ರಂಥಕಾರನು ಏಳು 'ಸೂಡಾದಿ'ಗಳನ್ನು ಇಲ್ಲಿ ಉಲ್ಲೇಖಿಸಿದ್ದಾನೆ. 'ಸೂಡಾದಿ'ಯೆಂದರೆ ದಿಟವಾಗಿ ತಾಳವೆಂಬ ಅರ್ಥವಿಲ್ಲದಿದ್ದರೂ, ಇಲ್ಲಿ 'ಸೂಡಾದಿ'ಯೆನ್ನುವಾಗ 'ಸೂಡಾದಿ' ತಾಳಗಳನ್ನೇ ಹೇಳಿದನೆಂಬುದು

ಮುಂದೆ ಬರುವ ಧ್ರುವಕ, ಮಂಠಕ, ರೂಪಕ, ಝಂಪಕ, ತ್ರಿವಿಡ, ಅಂಡ, ಏಕ ಎಂಬ ಏಳು ತಾಳಗಳ ಹೆಸರಿನಿಂದ ಸ್ಪಷ್ಟವಾಗುತ್ತದೆ. ಸೂಡವೆಂದರೆ ರಾಗ, ಅದರಲ್ಲಿ ಹಾಡುವಾಗ ಏಳು ತಾಳಗಳನ್ನೂ ಬಳಸಿದರೆ ಅದು 'ಸೂಡಾದಿ' ಅಥವಾ 'ಸೂಡಾದಿ' ತಾಳಗಳು. ಸೋಮನಾರ್ಯನ 'ಸ್ವರರಾಗ ಸುಧಾರಸ'ದಲ್ಲಿ ಬರುವ ಈ ಒಕ್ಕಣೆ ಏಳು ತಾಳಗಳ ಎಣಿಕೆಯನ್ನು ಸಮರ್ಥಿಸುತ್ತದೆ: "ಧ್ರುವಾದಿ ಸಪ್ತ ತಾಳೈಶ್ಚ ಸ್ವರರಾಗೈಃ ಪ್ರಗಾಯಂತೆ ಸುಳಾದಿರಿತಿ ಕಥ್ಯತೇ". ಈ ವೇಳೆಗಾಗಲೇ (ಕ್ರಿಸ್ತಾಬ್ದ 1550ರ ಸುಮಾರು) 'ಸುಳಾದಿ'ಯೆಂಬ ಹೆಸರೇ ಪ್ರಚಲಿತವಾಗಿದ್ದಿತು. ಇಲ್ಲಿ ಸುಡಾದಿಯಲ್ಲಿ 'ಸ್ವರರಾಗ'ದ ಭಾಗವೂ 'ಸಪ್ತತಾಳ'ಗಳ ಭಾಗವೂ ಇದ್ದಂತೆ ಸೂಚನೆಯಿದೆ. ಇದಕ್ಕೆ ಒಂದು ನೂರು ವರ್ಷಗಳ ಮುಂಚೆಯೇ ಚತುರ ಕಲ್ಲಿನಾಥನು 'ಪದತಾಳ ಬಂಧತ್ವಾತ್ ಧ್ವ್ಯಂಗಃ' ಎಂದು ಹೇಳಿ ಪದವೂ (ಎಂದರೆ ರಾಗವನ್ನು ಹೊಂದಿಸಿದ ಸಾಹಿತ್ಯ) ತಾಳವೂ ಸೇರಿರುವುದರಿಂದ ಎರಡು ನಿರ್ದಿಷ್ಟ ಭಾಗಗಳಿದ್ದುದನ್ನು ಹೇಳಿದ್ದನು.

ಸಾಹಿತ್ಯದಲ್ಲಿ ಏಕಾರ್ಥವಾಗಲಿ ಏಕಸೂತ್ರವಾಗಲಿ ಇದ್ದು, ಎಲ್ಲವನ್ನೂ ಒಂದೇ ರಾಗದಲ್ಲಿ (ಯಾವುದಾದರೊಂದು ದೇಶೀ ರಾಗದಲ್ಲಿ) ಅಳವಡಿಸಿ, ಸಾಹಿತ್ಯದ ಬೇರೆ ಬೇರೆ ಖಂಡಗಳನ್ನು (ನುಡಿಗಳನ್ನು) ಬೇರೆಬೇರೆ ತಾಳಗಳಲ್ಲಿ (ಏಳು ದೇಶೀ ತಾಳಗಳಲ್ಲಿ ಯಾವುದಾದರೊಂದರಲ್ಲಿ) ಹೆಣೆದರೆ ಅದು ಸುಳಾದಿಯ ಸ್ವರೂಪ. ಇದಕ್ಕೆ ಶಾಸ್ತ್ರದ ಆಧಾರವೇನಿದ್ದಿತೋ ಸ್ಪಷ್ಟವಾಗುವುದಿಲ್ಲ ; ಆದರೆ ಪ್ರಯೋಗದಲ್ಲಂತೂ ಇದು ಸಿದ್ಧವಾಯಿತು. ಶಾಸ್ತ್ರದ ವಿಧಿಗೂ ಪ್ರಯೋಗದ ಬಗೆಗೂ ಹೊಂದಾಣಿಕೆಯಿಲ್ಲದಿರುವುದನ್ನೂ ಗಮನಿಸಬಹುದು. 'ಸಂಗೀತಸಾರಾಮೃತ'ವನ್ನು ಬರೆದ ತುಳಜಾಜಿಯ ಉಲ್ಲೇಖ ಆಗಲೇ ಬಂದಿತಷ್ಟೆ. ಇವನು ಪುರಂದರದಾಸರು ಕಾಲವಾಗಿ ಒಂದನೂರು ಐವತ್ತು ವರ್ಷಗಳು ಕಳೆದ ಮೇಲೆ ಕಾಣಿಸಿಕೊಂಡವನು. ಆದರೆ ಪುರಂದರದಾಸರ ಸುಳಾದಿಗಳು ಪ್ರಸಿದ್ಧವಾಗಿ, ಇನ್ನೂ ಬಳಕೆಯಲ್ಲಿದ್ದುವು. ಈ ಸುಳಾದಿಗಳಲ್ಲಿ ಶಾಸ್ತ್ರೋಕ್ತವಾದ ಲಕ್ಷಣಗಳು ಕಾಣಿಸದೆ ಇದ್ದುದನ್ನು ತುಳಜಾಜಿ ಗಮನಿಸಿದ್ದನು. ಈ ಲೋಪದೋಷಕ್ಕೆ ಸಮಾಧಾನವನ್ನು ಹೇಳಲು ಯತ್ನಿಸಿದನಾದರೂ ಅವನ ವಿವರಣೆ ಅಷ್ಟೇನು ಸಮರ್ಪಕವಾಗಲಿಲ್ಲ—

ಶ್ರೀ ಪುರಂದರದಾಸಾದ್ಯೈರಭಿಯುಕ್ತೈಃ ಪುರಾತನೈಃ ।
ಪ್ರಯುಕ್ತೇಷು ಪ್ರಸಿದ್ಧೇಷು ಲಕ್ಷ್ಯೇಷು ವಿವಿಧೇಷ್ವಪಿ ॥
ಧ್ರುವಾದಿಷು ತ್ವದುಕ್ತಾನಿ ಲಕ್ಷಣಾನಿ ಮಹಾಮತೇ
ನ ದೃಶ್ಯಂತೇ ತತ್ ಕಥಂ ಲಕ್ಷ್ಯ ಲಕ್ಷಣ ಸಂಗತಿಃ ॥

ಎಂಬ ಸಮಸ್ಯೆ ಅವನನ್ನು ಕಾಡಿತು. 'ಪುರಂದರದಾಸರ ಕೃತಿಗಳು (ಮುಖ್ಯವಾಗಿ ಸುಳಾದಿಗಳು) ಲಕ್ಷ್ಯಸಂಗೀತ ; ಪ್ರಯೋಗಪರವಾದುದು. ಶಾಸ್ತ್ರಗ್ರಂಥಗಳಲ್ಲಿ

ಬರುವುದು ಲಕ್ಷಣ ಸಂಗೀತ. ಪುರಂದರದಾಸರು ಸುಳಾದಿಗಳನ್ನು ರಚಿಸಿರುವ ರೀತಿ ಶಾಸ್ತ್ರದಲ್ಲಿ ಹೇಳಿರುವ ಲಕ್ಷಣಕ್ಕಿಂತ ಬೇರೆಯಾಗಿದೆಯೆಂಬುದೇ ತುಳಜಾಜಿಯ ಸಮಸ್ಯೆ. ಅವನು ಈ ಸಮಸ್ಯೆಗೆ ಸಮಾಧಾನವನ್ನು ನೀಡುತ್ತ "ಅಸ್ಯೋದಾಹರಣಂ ಪುರಂದರದಾಸಾನಾಂ ಸೂಳಾದಿಃ ದೇವಗಾಂಧಾರರಾಗೇ ರಾಸತಾಳೇ" ಎಂದು 'ಹಸು ಗಳ ಕರೆವ ಧ್ವನಿ' ಎಂಬ ಸುಳಾದಿಯನ್ನು ವಿಮರ್ಶೆಗೆ ಎತ್ತಿಕೊಂಡಿದ್ದಾನೆ. ಅವನು ನೀಡಿರುವ ಸಮಾಧಾನ ನಮಗಿಲ್ಲಿ ಪ್ರಸಕ್ತವಲ್ಲ. ಸುಳಾದಿಯ ರಚನೆ ಶಾಸ್ತ್ರಸಂಗೀತದ ವಿಧಿಯನ್ನು ಅನುಸರಿಸದೆ ಇದ್ದುದು ಮುಖ್ಯ ; ಅಥವಾ ಅನುಸರಿಸುವುದಿಲ್ಲವೆಂದು ಕೆಲವರು ತಜ್ಞರು ಆ ಕಾಲದಲ್ಲಿ ಬಗೆದಿದ್ದರೆನ್ನುವುದಷ್ಟೇ ಸಾಕು.

ಇದರಿಂದ ಎರಡು ವಿಚಾರಗಳು ಹೊರಡುತ್ತವೆ. ಪುರಂದರದಾಸರು ಸುಳಾದಿ ಗಳ ರಚನೆಯಲ್ಲಿ ಹೊಸದೊಂದು ಹಾದಿಯನ್ನು ತುಳಿದರೆನ್ನುವುದು ; ಸುಳಾದಿಯ ರಚನೆಯೇ ಶಾಸ್ತ್ರದ ಕಟ್ಟುಪಾಡಿನಿಂದ ಹೊರಗಿದ್ದಿತೆನ್ನುವುದು. ಸುಳಾದಿಯ ಪ್ರಬಂಧದ ಭಾಷೆ ಪ್ರಾಕೃತ (ಕನ್ನಡ) ; ಅದಕ್ಕೆ ಬಳಸುವ ರಾಗ ದೇಶೀ ಪದ್ಧತಿ ಯಂದು ; ತಾಳಗಳೂ ಮಾರ್ಗೀ ಪದ್ಧತಿಗೆ ಸೇರಿದುವಲ್ಲ ಶ್ರೀಪಾದರಾಜರೂ, ವ್ಯಾಸರಾಯಸ್ವಾಮಿಗಳೂ, ಪುರಂದರದಾಸರೂ ಆ ಕಾಲದ ಶಾಸ್ತ್ರೀಯ ಸಂಗೀತವನ್ನು ಚೆನ್ನಾಗಿ ಬಲ್ಲವರು ; ಶಾಸ್ತ್ರಗ್ರಂಥಗಳ ಆಳವಾದ ಪರಿಚಯವನ್ನು ಹೊಂದಿದ್ದವರು. ಇದು ಅವರ ರಚನೆಗಳಿಂದಲೇ ಸ್ಪಷ್ಟವಾಗುತ್ತದೆ. ಶಾಸ್ತ್ರ ವಿಧಿಗಳನ್ನು ಅನುಸರಿಸಿ ಪದಗಳನ್ನೂ ದಂಡಕವೇ ಮೊದಲಾದ ಪ್ರಬಂಧಗಳನ್ನೂ ರಚಿಸಿದರು. ಶಾಸ್ತ್ರವಿಧಿ ಗಳನ್ನು ಒತ್ತಟ್ಟಿಗಿರಿಸಿ ಸುಳಾದಿಗಳನ್ನು ರಚಿಸಿದರು. ಶ್ರೀಪಾದರಾಜರು ಧೈರ್ಯ ದಿಂದ ಈ ಹೊಸ ಹಾದಿಯನ್ನು ಹಾಕಿಕೊಟ್ಟರೆಂದೇ ಈ ಹಾದಿಯನ್ನು "ಗಟ್ಟಿಯಾಗಿ ಹಾಡುವ ಹಾದಿ" (ಸೂಳ್ ಹಾದಿ) ಎಂದರೆ ಅಷ್ಟಾಗಿ ತಪ್ಪೆನಿಸದು. ದಾಸಕೂಟ ದವರು ಸುಳಾದಿಯೆನ್ನುವ ಮಾತಿಗೆ 'ಸುಳುಹಾದಿ', 'ಸುಲಭವಾದ ಹಾದಿ'ಯೆಂದು ಅರ್ಥಮಾಡುವುದಿದೆ ; ಆದರೆ ಸುಳಾದಿಯ ರಚನೆಯೂ ಸುಲಭವಲ್ಲ, ವಿನಿಕೆಯೂ ಸುಲಭವಲ್ಲ ಎಂದು ಅವರಿಗೂ ತಿಳಿದಿದೆ ! ಹರಿದಾಸರ ಹೊಸ ರಚನಾಪದ್ಧತಿ ಯೆನ್ನುವುದು ಹೊಂದಿಕೊಳ್ಳುತ್ತದೆ.

ಶ್ರೀಪಾದರಾಜರ ಸುಳಾದಿಯೊಂದು 'ನಿನ್ನಧೀನ ಶರೀರಕರಣ ಚೇಷ್ಟೆಗಳೆಲ್ಲ' ಎಂದು ಆರಂಭವಾಗಿ ಆರು ನುಡಿಗಳಲ್ಲಿ ಮುಗಿಯುತ್ತದೆ ; ಕಡೆಯ ನುಡಿಯೇನೋ ಜೊತೆ. ಉಳಿದ ಐದು ನುಡಿಗಳು ಬೇರೆ ಬೇರೆ ತಾಳಗಳಲ್ಲಿರುವುದು ಮಾತ್ರವಲ್ಲ ಬೇರೆ ಬೇರೆ ರಾಗಗಳಲ್ಲೂ ಇವೆ. ಮೊದಲ ನುಡಿಯೂ ಜೊತೆಯೂ ಸಾಳಂಗ ರಾಗದಲ್ಲಿವೆ. ಇದು ರಾಗತಾಳಮಾಲಿಕೆಯಾಯಿತು. ಇಂಥ ಕೃತಿಗಳನ್ನು ತಾಳ್ಲಪಾಕ ಅಣ್ಣಮಾಚಾರ್ಯರೂ ರಚಿಸಿದ್ದಾರೆಂದು ಹೇಳುತ್ತಾರೆ. ನನ್ನ ಗುರುಗಳೂ, ಈ ವಿಚಾರವಾಗಿ ತುಂಬ ಪರಿಶ್ರಮ ಇದ್ದವರೂ ಆದ ರಾಳ್ಲಪಲ್ಲಿ ಅನಂತಕೃಷ್ಣ ಶರ್ಮರು ಹೀಗೆ ಹೇಳುತ್ತಿದ್ದರು. ನಿದರ್ಶನಗಳು ನನ್ನ ಗಮನಕ್ಕೆ ಬಂದಿಲ್ಲವಾಗಿ ಏನೂ

ಹೇಳಲಾರೆ. ಆದರೆ ಶ್ರೀಪಾದರಾಜರು ತಾವೇ ಈ ಪದ್ಧತಿಯನ್ನು ಕೈಬಿಟ್ಟು ಸುಳಾದಿಯು 'ಏಕರಾಗನಿವೇಶಿತ'ವಾಗಿರಬೇಕೆಂದು ದಾರಿತೋರಿಸಿದಂತೆ ಕಾಣುತ್ತದೆ. ಅವರ ಉಳಿದ ಎರಡು ಸುಳಾದಿಗಳೂ ('ಈ ವನದೆಡೆಗಳು' ಎಂಬ ಹತ್ತು ನುಡಿಗಳ ಸುಳಾದಿ, ಮತ್ತು 'ಅನಂತಕಾಲದಲ್ಲಿ' ಎಂಬ ಒಂಬತ್ತು ನುಡಿಗಳ ಸುಳಾದಿ) ಏಕರಾಗ ನಿವೇಶಿತ ವಾಗಿಯೇ ಇವೆ (ಮೊದಲನೆಯದು ಭೈರವಿಯಲ್ಲಿ, ಎರಡನೆಯದು ನಟ್ಟದಲ್ಲಿ). ಎರಡರಲ್ಲೂ ಎಂಟು ತಾಳಗಳನ್ನು ಬಳಸಿದ್ದಾರೆ ; ಧ್ರುವ, ಮಟ್ಟ, ತ್ರಿವಿಡೆ, ರೂಪಕ ಎಂಬ ಕ್ರಮವನ್ನೂ ಅನುಸರಿಸಿದ್ದಾರೆ. ಕಡೆಗೆ ತಾಳವಿಲ್ಲದೆ 'ಜೊತೆ'ಯೂ ಕಾಣ ಸಿಗುತ್ತದೆ. ಮೊದಲನೆಯ ಸುಳಾದಿಯಲ್ಲಿ ಏಕತಾಳವನ್ನು ಎರಡು ಬಾರಿ ಬಳಸಿದ್ದಾರೆ. ಪುರಂದರದಾಸರು ಏಳು ತಾಳಗಳ ಬಳಕೆಯನ್ನು ಹೆಚ್ಚಾಗಿ ತಂದರೆಂದು ಹೇಳಬಹುದು. ಶ್ರೀಪಾದರಾಜರ ಪ್ರಯೋಗದಿಂದ ಪುರಂದರದಾಸರ ವ್ಯವಸಾಯದಿಂದ ಸುಳಾದಿಯ ಸ್ವರೂಪ (ಧ್ರುವಾದಿ ಸಾಲಗಸೂಡ) ಸಿದ್ಧವಾಯಿತೆಂದು ಹೇಳಬಹುದು.

ಎಟ್ಟಿಯಾಪುರದ ಸುಬ್ಬರಾಮದೀಕ್ಷಿತರು ತಮ್ಮ 'ಸಂಗೀತ ಸಂಪ್ರದಾಯ ಪ್ರದರ್ಶಿನಿ'ಯಲ್ಲಿ (1904) ಪುರಂದರದಾಸರ ಮೂರು ಸುಳಾದಿಗಳನ್ನು ಸ್ವರ ಸಹಿತ ಕೊಟ್ಟಿರುವುದಲ್ಲದೆ ಸುಳಾದಿಯೆಂಬ ಮಾತಿಗೆ ಲಕ್ಷಣವನ್ನೂ ಹೇಳಿದ್ದಾರೆ. ಸುಳಾದಿ ಎನ್ನುವುದು ಅಲಂಕಾರಕ್ಕೆ ಹೆಸರಾದ ಏಳು ತಾಳಗಳಲ್ಲಿ ಮಾಡಿದ ಕೃತಿಯೆಂದು ಅವರ ಒಕ್ಕಣೆ. ಸೂಡಾದಿಸಪ್ತತಾಳಗಳ ಉಲ್ಲೇಖ ಬಹು ಹಿಂದಿನಿಂದ ಬಂದಿದೆ. ಹನ್ನೆರಡನೆಯ ಶತಮಾನದಿಂದಲೇ ಕನ್ನಡದಲ್ಲಿ ಏಳು ಸೂಳಾದಿ ತಾಳಗಳ ಎಣಿಕೆಯಿದೆ: ಏಕ, ದ್ರೂವ (ಧ್ರುವ), ತ್ರಿಪಿಡೆ (ತಿವಡೆ, ತ್ರಿಪುಡೆ, ತ್ರಿಪುಟ), ಮಟ್ಟೆಯ (ಮಟ್ಟ, ಮಠ್ಠ, ಮಂಠ, ಮಂಠಕ), ಝುಂಪೆ, ಅಟ (ಅಟ್ಟ, ಅಂಡ), ರೂಪಕ. ಈ ಏಳಕ್ಕೆ ಝೋಂಪಟವನ್ನು ಸೇರಿಸಿ ಎಂಟೆಂದೂ, ರಗಣಮತ್ಯವನ್ನು ಸೇರಿಸಿ ಒಂಬತ್ತೆಂದೂ ಎಣಿಕೆಗಳಿವೆ. ಅಗ್ಗಳ ಕವಿಯು (ಕ್ರಿಸ್ತಾಬ್ದ 1189) ಏಕ, ಧ್ರುವ, ತ್ರಿವುಡೆ, ಮಟ್ಠೆಯ, ಅಟ, ರೂಪಕ "ಮೊದಲಾದ ಸೂಡತಾಳಂಗಳೆ"ಂದು ಉಲ್ಲೇಖಿಸುತ್ತಾನೆ; ಸಂಖ್ಯೆಯನ್ನು ನಿರ್ದೇಶಿಸುವುದಿಲ್ಲ.

ಆದರೆ ಹರಿದಾಸರು ಸುಳಾದಿಗಳನ್ನು ರಚನೆಮಾಡಿ ಬಳಕೆಗೆ ತಂದಾಗ ಏಳು ತಾಳಗಳನ್ನು ಎತ್ತಿಕೊಂಡರು. ಅವರು ಸುಳಾದಿಗಳನ್ನು ತಾಳಮಾಲಿಕೆಗಳೆಂದೇ ಕಾಣಿಸಿದರು. ಒಂದು ರಾಗವನ್ನೇ ಮೊದಲಿಂದ ಕಡೆಯುವರೆಗೆ ಹಿಡಿದು ('ಏಕರಾಗ ನಿವೇಶಿತಃ' ಎಂಬ ಲಕ್ಷಣವಿರುವುದನ್ನು ನೆನಪಿಗೆ ತಂದುಕೊಳ್ಳಬಹುದು), ಮೊದಲಿನ ನುಡಿಯನ್ನು ಧ್ರುವತಾಳದಲ್ಲಿಯೂ, ಎರಡನೆಯದನ್ನು (ರಗಣ) ಮತ್ಯದಲ್ಲಿಯೂ ಹಾಡಿ, ಮುಂದೆ ಐದು ಅಥವಾ ಆರು ಇತರ ದೇಶಿತಾಳಗಳಲ್ಲಿ (ಮೇಲೆ ಹೆಸರಿಸಿದವು) ಇತರ ನುಡಿಗಳನ್ನು ಅಳವಡಿಸುವ ವಾಡಿಕೆ ಹಳೆಯದು. ಈ ನುಡಿಗಳಲ್ಲಿ ಇಷ್ಟೇ ಸಾಲುಗಳಿರಬೇಕೆಂಬ ನಿಯಮವೇನು ಇರದು. ಎಲ್ಲ ಏಳು (ಅಥವಾ ಎಂಟು) ತಾಳ ಗಳನ್ನೂ ಬಳಸಲೇಬೇಕೆಂಬ ವಿಧಿಯೇನಿರದು. ಆದರೆ ಧ್ರುವ ಮತ್ತು ಮತ್ಯ (ಮಟ್ಟ)

ತಾಳಗಳಿಲ್ಲದೆ ಸುಳಾದಿಯೇ ಇಲ್ಲ ; ರೂಪಕವೂ ಬಹುಮಟ್ಟಿಗೆ ಅನಿವಾರ್ಯವೇ. ಸುಳಾದಿಗಳಲ್ಲಿ ಐದು ನುಡಿಗಳಿಗೆ ಕಡಮೆಯಿರುವುದಿಲ್ಲ ; ಎಂಟಕ್ಕೆ ಹೆಚ್ಚು ಇರುವುದಿಲ್ಲ. ತಾಳದಿಂದಲೇ ನುಡಿಗಳು ನಿರ್ದೇಶಗೊಳ್ಳುತ್ತವೆ.

ಹೀಗೆ ತಾಳನಿರ್ದಿಷ್ಟ ನುಡಿಗಳು ಮುಗಿದ ಮೇಲೆ ಕೊನೆಯಲ್ಲಿ ಜೊತೆ (ಯತಿ, ಜತೆ, ಜತಿ) ಎಂಬ ಎರಡೇ ಸಾಲುಗಳ ತುಣುಕು ಇರುವುದು ವಾಡಿಕೆ. ಈ ಭಾಗದಲ್ಲಿ ಎರಡು ಸಾಲುಗಳೆಂಬ ನಿಯಮವಿದ್ದು, ನಡುವೆ ವಿರಾಮ ಇರುವುದರಿಂದ ಇದನ್ನು 'ಜೊತೆ'ಯೆಂದು ಕರೆಯುವುದೇ ಸರಿಯಾದುದು ; 'ಯುತ' ಅಥವಾ 'ಯುಕ್ತ' ಎಂಬ ಸಂಸ್ಕೃತಪದದ ತದ್ಭವವಾಗಿ ಜೊತೆ. ಮತ್ತು ಈ ಬಗೆಯ ರಚನೆಗಳನ್ನು ಹಾಡುವಾಗ ವಾದ್ಯದ ವಿನಿಕೆಗೆಂದೇ ಗೊತ್ತಾದ ಗೀತಭಾಗವನ್ನು ಕಡೆಯಲ್ಲಿ ಅಳವಡಿಸುತ್ತಿದ್ದರು ; ಇದಕ್ಕೆ ಜಕ್ಕವೆಂದು ಹೆಸರಿದ್ದಿತು. ವಾದ್ಯದ ಜೊತೆಗೆ ಈ ಭಾಗವನ್ನು ಹಾಡುತ್ತಿದ್ದರಾಗಿ ಇದು ಜೊತೆಯೆಂದೇ ಹೆಸರಾಯಿತು. ಸುಳಾದಿಯ ಈ ಭಾಗಕ್ಕೆ ಮೂರ್ಛನೆಯೆಂಬ ಹೆಸರೂ ಇದೆ. ಹಲವರು ಗಾಯಕರಿದ್ದರೆ ಎಲ್ಲರೂ ಜೊತೆಯಾಗಿ ಈ ಭಾಗವನ್ನು ಹಾಡುವರು. ಸುಳಾದಿಯ ಪ್ರಕರಣಾರ್ಥವನ್ನು ಸಂಗ್ರಹವಾಗಿ ನಿರೂಪಿಸುವ ಈ ಭಾಗ, ಪದದಲ್ಲಿ ಪಲ್ಲವಿಯಿದ್ದಂತೆ. ಇದಕ್ಕೆ ತಾಳದ ಕಟ್ಟುಪಾಡಿಲ್ಲ.

ಸುಳಾದಿಗಳ ರಚನೆಯಲ್ಲಿ ಪುರಂದರದಾಸರದ್ದೇ ಸಿದ್ಧಹಸ್ತ. ಅದರ ಪದಭಾಗದಲ್ಲಿ (ಎಂದರೆ ಸಾಹಿತ್ಯಭಾಗದಲ್ಲಿ) ಶ್ರುತಿಯ ತಾತ್ಪರ್ಯವನ್ನೋ ಭಗವನ್ಮಹಿಮೆಯನ್ನೋ ಕ್ಷೇತ್ರವೈಶಿಷ್ಟ್ಯವನ್ನೋ ಐದಾರು ನುಡಿಗಳಲ್ಲಿ ಸಂಗ್ರಹವಾಗಿ ಸ್ವಾರಸ್ಯವಾಗಿ ನಿರೂಪಿಸುವ ಜಾಣ್ಮೆ ಅವರ ವೈಶಿಷ್ಟ್ಯ. ಸುಳಾದಿಗಳ ಒಳಕೆ ದಾಸಕೂಟದಲ್ಲಿ ಹೆಚ್ಚಲು ಅವರೇ ಕಾರಣ. ಅವರ ಕಾಲದ ನಂತರ ವಿಜಯದಾಸರೂ ಬೇಕಾದಷ್ಟು ಸುಳಾದಿಗಳನ್ನು ರಚಿಸಿದರು. ಆದರೆ ಬರುಬರುತ್ತ ಸುಳಾದಿಗಳನ್ನು ಹಾಡುವ ಪದ್ಧತಿ ಮರೆಯಾಗುತ್ತ ಬಂದಿತು. ಪದಗಳಿಗಿಂತ ಸುಳಾದಿಯು ಕ್ಲಿಷ್ಟವಾದ ಗೇಯಪ್ರಕಾರವಾದುದರಿಂದಲೂ, ಸುಳಾದಿಯಲ್ಲಿ ವಾದ್ಯದ ನೆರವು ಅಗತ್ಯವಾದುದರಿಂದಲೂ ಮುಂದಿನ ಕಾಲದ ಹರಿದಾಸರಿಗೆ ಅದು ಅಷ್ಟಾಗಿ ಕೈಗೂಡಲಿಲ್ಲ. ಈಚೆಗೆ ಅದರ ವಿನಿಕೆ ತಪ್ಪಿಯೇ ಹೋಗಿದೆ. ಸುಳಾದಿಯಲ್ಲಿ ಸಾಹಿತ್ಯ ಸುದೀರ್ಘ, ಸ್ವರಸಂಚಾರಗಳು ವಿಸ್ತೃತ, ತಾಳಗಳ ಹಿಡಿತ ಕ್ಲಿಷ್ಟ. ಈ ಕಾಲಕ್ಕೆ ಅದು ಸೊಗಸುವುದೂ ಕಡಮೆಯೇ ಇದ್ದೀತು. ಎಟ್ಟಿಯಾಪುರದ ಸುಬ್ಬರಾಮದೀಕ್ಷಿತರು ತಮ್ಮ 'ಸಂಗೀತ ಸಂಪ್ರದಾಯ ಪ್ರದರ್ಶಿನಿ'ಯಲ್ಲಿ ಸ್ವರಸಂಯೋಜನೆಮಾಡಿ ಕೊಟ್ಟಿರುವ ಪುರಂದರದಾಸರ ಸುಳಾದಿಗಳಿಂದ ಈ ಶತಮಾನದ ಆದಿಭಾಗದಲ್ಲಿ ಸುಳಾದಿಗಳನ್ನು ಹೇಗೆ ಹಾಡುತ್ತಿದ್ದರೆಂಬುದನ್ನು ತಕ್ಕಮಟ್ಟಿಗೆ ಊಹಿಸಿಕೊಳ್ಳಬಹುದು. ಅಲ್ಲಿ ಕೊಟ್ಟಿರುವ ಸುಪ್ರಸಿದ್ಧವಾದ' ಹಸುಗಳ ಕರೆವ ಧ್ವನಿ' ಇಂಬ ದೇವಗಾಂಧಾರರಾಗದ ಸುಳಾದಿಯನ್ನು ಮೈಸೂರಿನ ಮಹಾಮಹೋಪಾಧ್ಯಾಯ ರಾ. ಸತ್ಯನಾರಾಯಣ ಅವರು ಪಾಠಶುದ್ಧಿ

ಯೊಂದಿಗೆ ಸಂಗೀತಸಂಸ್ಕರಣವನ್ನೂ ಮಾಡಿದ್ದಾರೆ. ಬೇಲೂರು ಕೇಶವದಾಸರು ತಮ್ಮ 'ಹರಿದಾಸ ಸಾಹಿತ್ಯ'ದಲ್ಲಿ ಪುರಂದರದಾಸರ ಬ್ರಹ್ಮಾನಂದ ಸುಳಾದಿಯನ್ನು ('ಆ ಪಾದ ಆನಂದ ನಖ') ದಾಸಕೂಟದಲ್ಲಿ ಹಾಡಿಕೆಯಲ್ಲಿರುವಂತೆ ಸ್ವರಸಹಿತ ಕೊಟ್ಟಿದ್ದಾರೆ.

5

ಇನ್ನು ಉಗಾಭೋಗವನ್ನು ಕುರಿತು ನಾಲ್ಕು ಮಾತು. ಉಗಾಭೋಗವೆಂಬ ಹೆಸರನ್ನು ಪುರಂದರದಾಸರೂ ಬಳಸಿಲ್ಲ ; ಅವರ ಕಾಲವಾಗಿ ನೂರಾರು ವರ್ಷಗಳು ಕಳೆದ ಮೇಲೆ ವಿಜಯದಾಸರ ಪದವೊಂದರಲ್ಲೇ ಪುರಂದರದಾಸರು ಸಾವಿರಾರು 'ಉಗಾಭೋಗ'ಗಳನ್ನು ರಚಿಸಿದ್ದರೆಂದು ತಿಳಿದುಬರುವುದು. ಉಗಾಭೋಗವೆಂಬ ಹೆಸರು ನಮಗೆ ಮೊಟ್ಟಮೊದಲು ಕಾಣುವುದು ಇಲ್ಲಿಯೇ (ನೋಡಿ, ಸಂಪುಟ ೧, ಪು. 75–76).

'ನಿಷ್ಠ ಅಹನ್ನೀಕ ಏಕಾದಶೀ ಜನ್ಮ
ಅಷ್ಟಮಿಾನಿರ್ಣಯ ಗಂಡಕಿ ಶಿಲೆಗಳ
ನಿಷ್ಠ ಶೋಧಕ ಉಗಾಭೋಗಾದಿ
ಕಷ್ಟಹರ ಬಲ್ಲರೆ ಕಥೆ ಪೀಯೂಷ
ವಷ್ಟು ಎಪ್ಪತ್ತೈದು ಸಾವಿರ ಮಿಳಿತವು'

ವಿಜಯದಾಸರ ಈ ಸುಳಾದಿಯಲ್ಲಿ 'ಸುಳಾದಿಗಳು ಅರವತ್ತುನಾಲ್ಕುಸಾವಿರ' ಎಂದು ಸುಳಾದಿಗಳನ್ನೇ ಪ್ರತ್ಯೇಕವಾಗಿ ಎಣಿಕೆಮಾಡಿರುವುದನ್ನೂ, ಉಳಿದ ಹಲವು ಪ್ರಕಾರದ ರಚನೆಗಳೊಂದಿಗೆ ಉಗಾಭೋಗಗಳನ್ನು ಸೇರಿಸಿರುವುದನ್ನೂ ಗಮನಿಸಬೇಕು. ಸುಳಾದಿಗೆ ಹೋಲಿಸಿದರೆ ಉಗಾಭೋಗವು ತೀರ ಸಣ್ಣ ಪ್ರಮಾಣದ ರಚನೆಯೆಂಬ ಕಾರಣ ವಿದ್ದೀತು ; ಉಗಾಭೋಗವು ಸುಳಾದಿಯಷ್ಟು ಪ್ರಮುಖವಾದ ಪ್ರಕಾರವಲ್ಲವೆಂಬುದೂ ಕಾರಣವಿದ್ದೀತು. ಉಗಾಭೋಗದ ಹೆಸರನ್ನು ವಿಜಯದಾಸರಿಗೆ ಹಿಂದೆ ನಾವು ಕಾಣಲಾರೆವು ದಿಟ, ಆದರೆ ಈ ಗೋತ್ರಕ್ಕೆ ಸೇರಿದ ರಚನೆಗಳು ತುಂಬ ಪ್ರಾಚೀನ ವಾದುವು. ದಾಸಕೂಟದಲ್ಲಿ ಶ್ರೀಪಾದರಾಜರೂ ವ್ಯಾಸರಾಯಸ್ವಾಮಿಗಳೂ ಉಗಾಭೋಗಗಳನ್ನು ರಚಿಸಿದ್ದರು ; ಆದರೆ ಅವರ ಉಗಾಭೋಗಗಳೂ ಪುರಂದರ ದಾಸರ ಉಗಾಭೋಗಗಳಷ್ಟು ಪ್ರಸಿದ್ಧವಾಗಲಿಲ್ಲ. 'ಸಂಗೀತಸಾರಾಮೃತ'ವನ್ನು ಬರೆದ ತುಳಜಾಜಿಯು ಸುಳಾದಿಗಳನ್ನು ಉಲ್ಲೇಖಿಸಿದ್ದರೂ ಉಗಾಭೋಗಗಳನ್ನು ಪ್ರಸ್ತಾಪಿಸಿಲ್ಲ. ಎಟ್ಟಿಯಾಪುರದ ಸುಬ್ಬರಾಮದೀಕ್ಷಿತರೂ ತಮ್ಮ 'ಸಂಗೀತಸಂಪ್ರದಾಯ ಪ್ರದರ್ಶಿನಿ'ಯಲ್ಲಿ ಉಗಾಭೋಗಗಳನ್ನು ಉದಹರಿಸಿಲ್ಲ ; ಸುಳಾದಿಗಳನ್ನು ಕೊಟ್ಟಿದ್ದಾರೆ.

ಉಗಾಭೋಗವೆಂಬ ಮಾತಿಗೆ ಅರ್ಥವೂ ಸ್ಪಷ್ಟವಾಗಿಲ್ಲ. ಉದ್ಗ್ರಾಹ, ಮೇಳಾಪಕ, ಧ್ರುವ, ಆಭೋಗ ಎಂಬ ನಾಲ್ಕು ಅಂಗಗಳಿರುವ ರಚನೆಯೆಂದೂ ಮೊದಲ ಉದ್ಗ್ರಾಹ,ಕಡೆಯ ಆಭೋಗ ಎರಡೂ ಕೂಡಿ ಉದ್ಗ್ರಾಹಾಭೋಗವೆಂಬ ನಿರ್ದೇಶನ ಬಂದಿತೆಂದೂ, ಅದೇ ಉಗಾಭೋಗವಾಯಿತೆಂದೂ ಒಂದು ವಿವರಣೆಯಿದೆ. ಉದ್ಗ್ರಾಹವೆಂದರೆ ರಾಗವನ್ನು ಎತ್ತಿಕೊಳ್ಳುವುದು, ಮೇಳಾಪಕವೆಂದರೆ ಮೇಳದಲ್ಲಿ ಅದರ ನಿಲುಗಡೆ, ಧ್ರುವವೆಂದರೆ ರಾಗವನ್ನು ಹಮ್ಮೈಸುವುದು, ಆಭೋಗವೆಂದರೆ ರಾಗ ಶುದ್ಧವಾದ ಮತ್ತು ಸುಖವಾದ ಸಂಚಾರ; ಇವು ಕೂಡಿರುವ ರಚನೆಯೆಂದು ತಾತ್ಪರ್ಯ. ಈ ವಿವರಣೆಯನ್ನು ಮೊದಲು ನಾನು ಸ್ವೀಕರಿಸಿದ್ದುಂಟು. ಆದರೆ ಈಚೆಗೆ ವಿಚಾರಮಾಡಲಾಗಿ ಇದರಲ್ಲಿ ಹುರುಳಿಲ್ಲವೆಂದು ಸ್ಪಷ್ಟವಾಯಿತು. ಉಗಾಭೋಗದ ರಚನೆಯಲ್ಲಾಗಲಿ, ಅದನ್ನು ಹಾಡುವ ಬಗೆಯಲ್ಲಾಗಲೀ ಈ ಅಂಗಗಳನ್ನು ನಿಖರವಾಗಿ ಕಾಣುವುದಾಗದು ; ಮತ್ತೆ ಈ ಅಂಗಗಳಿರುವ ಎಷ್ಟೋ ಪ್ರಬಂಧಗಳಿದ್ದು ಅವಕ್ಕೆ ಉದ್ಗ್ರಾಹಾಭೋಗವೆಂಬ ಹೆಸರಿಲ್ಲ. ಶಾರ್ಙ್ಗದೇವನೇ ಉಗಾಭೋಗ ರಚನೆಗಳನ್ನು ಹೇಳಿದ್ದಾನೆಂಬುದೂ ನನಗೆ ಸ್ಪಷ್ಟವಾಗಿಲ್ಲ. ಶಾಸ್ತ್ರವಿಧಿಗಳನ್ನು ಅನುಸರಿಸದೆ ಅದು ಸುಳಾದಿಯಂತೆ ಹರಿದಾಸರ ಹೊಸ ಪ್ರಯೋಗವೇ ಎಂದು ಕಾಣುತ್ತದೆ. ಆದರೆ ಇದಕ್ಕೆ ಸ್ಫೂರ್ತಿಯಾಗಿ ಮಾರ್ಗದರ್ಶಕವಾಗಿ ಮರಾಠೀ ಅಭಂಗಗಳೂ ಓವಿಗಳೂ, ಸಂಸ್ಕೃತದ ಆರ್ಯೆಗಳೂ ದಂಡಿಗಳೂ ಇದ್ದುವು. ಶಿವಶರಣರ ವಚನಗಳಿಂದಲೂ ಕೊಂಚಮಟ್ಟಿಗೆ ಪ್ರಭಾವಿತವಾಗಿದ್ದಿರಬಹುದು.

ಆಭೋಗವೆಂಬ ಪ್ರಕಾರ ಸಂಗೀತಕ್ಷೇತ್ರದಲ್ಲಿದೆ. 'ಸಂಗೀತದಾಮೋದರ'ವು ಕವಿಯ ಹೆಸರು ಬಂದಿರುವ ಸಂಗೀತಭಾಗಕ್ಕೆ ಆಭೋಗವೆಂದು ಹೆಸರು ಎನ್ನುತ್ತದೆ ('ಯತ್ರೈವ ಕವಿನಾಮ ಸ್ಯಾತ್ ಸ ಆಭೋಗ ಇತೀರಿತಃ'). ಆಭೋಗವೆಂಬ ಮಾತಿಗೆ ಹಾವಿನ ಹೆಡೆಯು ಹರಡಿಕೊಳ್ಳುವುದು ಎಂದು ಮೂಲಾರ್ಥ ; ಅದನ್ನು ಕವಿತೆ, ಭಣಿತ ಎಂಬರ್ಥದಲ್ಲಿ ಬಳಸುತ್ತಾರೆ. 'ಪೂರೈಸುವುದು' (ಪರಿಪೂರ್ಣತೆ) ಎಂಬರ್ಥವನ್ನು ಅಮರಕೋಶಕಾರನು ಕೊಟ್ಟಿದ್ದಾನೆ. ಕವಿಯ ಆಶಯವು ಪ್ರಕಟವಾಗುವ ರೀತಿಯೆಂದು ತಾತ್ಪರ್ಯ. ಇನ್ನು 'ಉಗು' ಎಂಬ ಕನ್ನಡ ಮಾತಿಗೆ ಸಮಯಸ್ಫೂರ್ತಿಯಿಂದ ಹೇಳಿದ್ದು ಎಂಬರ್ಥವಿದೆ (ಒಗು, ಉಕ್ಕು, ಉದಿತ). ಸಮಯಸ್ಫೂರ್ತಿಯಿಂದ ಹೊರಬಂದ ಕವಿತೆ 'ಉಗು ಆಭೋಗ' ವೆಂದಾಗಿದ್ದೀತೆ ? ಅಥವಾ, ಉಕ್ಥ ಎಂಬ ವೈದಿಕ ಮಾತಿಗೆ ಶಾಶ್ವತ ಮೌಲ್ಯವಿರುವ ಮಾತುಗಳನ್ನೊಳಗೊಂಡ ಏಕಾಕ್ಷರ ಛಂದವೆಂಬ ಅರ್ಥವಿದೆ ; ಛಂದಸ್ಸಲ್ಲದ ಛಂದಸ್ಸು. ('ಅತಿಸಂಕ್ಷಿಪ್ತ ಚಿರಂತನೋಕ್ತಿಭಿಃ'). ವೈದಿಕ ಉಕ್ಥವು ಉಕ್ತಿಯೂ ಹೌದು, ಗೇಯಪ್ರಕಾರವೂ ಹೌದು ; ಅದರಿಂದಲೇ 'ವಚನ' ವೆಂಬ ಮಾತೂ ಸಿದ್ಧವಾಯಿತು. ಶಿವಶರಣರ ವಚನಗಳು ಉಕ್ತಿಗಳು ; ಗೇಯಪ್ರಕಾರಗಳಲ್ಲ. ಉಗಾಭೋಗಗಳು ಸ್ವರೂಪದಲ್ಲಿ ವಚನಗಳಂತೆ ತೋರಿದರೂ ಅವು ಮುಖ್ಯವಾಗಿ ಗೇಯಪ್ರಕಾರಗಳು. ಉಕ್ತಿಯನ್ನು

ಪೂರೈಸಲು, ಛಂದಸ್ಸಿನ ಕಟ್ಟುಪಾಡಿಲ್ಲದೆ ರಾಗವಿನ್ನಿರಿಸಿ ಮಾಡಿದ ಸಣ್ಣ ಕವಿತೆ ಉಗಾಭೋಗದ ಲಕ್ಷಣ. ಇಷ್ಟೆಲ್ಲ ಹೇಳಿದರೂ, ಉಗಾಭೋಗವೆಂಬ ಮಾತು ಹೇಗೆ ಮೈದಳೆಯಿತೋ ನಿರ್ಣಯಿಸುವುದು ಸಾಧ್ಯವಾಗಿಲ್ಲ ; ಬರಿಯ ಊಹೆಗಳಷ್ಟೆ.

ಈಗ ಉಳಿದುಬಂದಿರುವ ಉಗಾಭೋಗಗಳ ಕಾಲ ಶ್ರೀಪಾದರಾಜರಿಗಿಂತ ಹಿಂದೆ ಹೋಗುವುದಿಲ್ಲ. ಶ್ರೀಪಾದರಾಜರು ಸುಳಾದಿಗಳಂತೆ ಕೆಲವೇ ಉಗಾಭೋಗಗಳನ್ನು ರಚಿಸಿದ್ದಾರೆ ; ವ್ಯಾಸರಾಯಸ್ವಾಮಿಗಳ ಉಗಾಭೋಗಗಳೂ ಬಹುಸಂಖ್ಯೆಯಲ್ಲಿಲ್ಲ. ಪುರಂದರದಾಸರದ್ದೇ ವಿಶೇಷವಾಗಿ ದೊರೆಯುವುವು. ಉಗಾಭೋಗಗಳು ಸಾಹಿತ್ಯ ದೃಷ್ಟಿಯಿಂದ ಸಣ್ಣ ರಚನೆಗಳು, ಎರಡೇ ಸಾಲುಗಳಿರುವುವೂ ಇವೆ, ಇಪ್ಪತ್ತುಸಾಲುಗಳಿರುವುವೂ ಇವೆ ; ಬಹುಮಟ್ಟಿಗೆ ಐದಾರು ಸಾಲುಗಳಷ್ಟೆ. ಇದರಲ್ಲಿ ರಾಗವಿರುತ್ತದೆ, ತಾಳನಿರ್ಬಂಧವಿರುವುದಿಲ್ಲ. ಪ್ರಾಸವೂ ಇರಲೇಬೇಕೆಂದಿಲ್ಲ ; ಯತಿಯು ಸಹಜವಾಗಿ ಸ್ವಾಭಾವಿಕವಾಗಿರುವುದನ್ನು ಗಮನಿಸಬಹುದು. ಇನ್ನು ಪ್ರಸ್ತಾಪಕ್ಕೆ ಬರುವ ವಿಚಾರ ಸರಳವಾಗಿರುವುದು ; ಅಧ್ಯಾತ್ಮವಾಗಬಹುದು, ಅನುಭವವಾಗಬಹುದು, ತತ್ತ್ವವಾಗಬಹುದು, ಲೋಕನೀತಿಯಾಗಬಹುದು, ಬರಿಯ ಸ್ತೋತ್ರವಾಗಬಹುದು. ಆದರೆ ವಿಚಾರದಲ್ಲಿ ಏಕತಾನತೆ ಇರಬೇಕು. ಇವೆಲ್ಲ ಏಕಾಂಡವಾದ ರಚನೆಗಳು ; ಪದಗಳಲ್ಲಿರುವಂತೆ ಪಲ್ಲವಿ, ಅನುಪಲ್ಲವಿಗಳಾಗಲಿ ನುಡಿಗಳಾಗಲಿ ಇರುವುದಿಲ್ಲ ; ಸುಳಾದಿಗಳಲ್ಲಿರುವಂತೆ ಖಂಡಗಳಾಗಲಿ ಜೊತೆಯಾಗಲಿ ಇರುವುದಿಲ್ಲ. ಇದಕ್ಕೆ ಬಳಸುವ ರಾಗವೂ ಸರಳವಾಗಿ ಜನಪ್ರಿಯವಾಗಿರುತ್ತದೆ.

ಉಗಾಭೋಗದ ರಚನೆ ಶಿವಶರಣರ ವಚನಗಳ ರಚನೆಯನ್ನು ಬಹುಮಟ್ಟಿಗೆ ಹೋಲುತ್ತದೆ. ನೇರವಾದ ಮಾತು, ಸರಳವಾದ ನಿರೂಪಣೆ, ಪದಜೋಡಣೆಗಳ ಸೊಗಸು, ವಸ್ತುವಿನ ಔನ್ನತ್ಯ, ಗದ್ಯಶೈಲಿ, ಅನಿಬದ್ಧ ಪ್ರಬಂಧ ಇವುಗಳಲ್ಲಿ ಎರಡೂ ಪ್ರಕಾರಗಳು ಸಮವೇ. ಆದರೆ ಉಗಾಭೋಗ ಪ್ರಮುಖವಾಗಿ ಗೇಯಪ್ರಕಾರ ; ಅದು ದಿಟವಾಗಿ ಕವಿತೆಯೇ. ಕೆಲವೊಮ್ಮೆ ಸ್ಪಷ್ಟವಾದ ಛಂದಸ್ಸಿರುವುದೂ ಉಂಟು. ದಾಸಕೂಟದಲ್ಲಿ ಯಾವುದಾದರೂ ಪದವನ್ನು ಏನಿಕೆಗೆ ಎತ್ತಿಕೊಳ್ಳುವ ಮೊದಲು ಒಂದು ಉಗಾಭೋಗವನ್ನು ಹಾಡುವ ವಾಡಿಕೆಯಿದೆ. ಉಗಾಭೋಗವನ್ನು 'ಅನಿಬದ್ಧ ಸಾಕ್ಷರ ರಾಗಾಲಪ್ತಿ' ಯೆಂದು ಕೆಲವರು ನಿರ್ದೇಶಿಸಿರುವುದರಲ್ಲಿ ಔಚಿತ್ಯವಿದೆ. ರಾಗಭಾವವು ತಾಳದ ಗೊಂದಲವಿಲ್ಲದೆ ಪ್ರಕಟವಾಗಲು ಉಗಾಭೋಗದ ಸಾಹಿತ್ಯ ನೆರವಾಗುತ್ತದೆ. ಸುಳಾದಿಯು ಲಯತಾಳಪ್ರಧಾನವಾದರೆ, ಉಗಾಭೋಗ ಸ್ವರಪ್ರಧಾನ. ಇದನ್ನು ವಿಲಂಬಕಾಲದಲ್ಲೇ ಹಾಡುವುದು ಹೆಚ್ಚು. ತಾಳದ ನಿರ್ದೇಶನವಿರದಿದ್ದರೂ, ಹಾಡುವವರು ತಮಗೆ ತೋರಿದಂತೆ ಮಾರ್ಗೀ ಅಥವಾ ದೇಶೀತಾಳಗಳನ್ನು ಬಳಸಿಕೊಳ್ಳಲು ಅಡ್ಡಿಯೇನಿಲ್ಲ. ಕೇವಲ ಸರ್ವಲಘು ಹಿತವಾಗಿರುತ್ತದೆ.

6

ಪುರಂದರದಾಸರನ್ನು 'ಕರ್ನಾಟಕ ಸಂಗೀತದ ಪಿತಾಮಹ' ಎಂದು ಕರೆಯುವುದು ವಾಡಿಕೆ. ಇದನ್ನು ಸಮರ್ಥಿಸುವ ವಿವರಗಳು ಯಾವುವೆಂದು ಇಲ್ಲಿ ಪರಿಶೀಲಿಸಬೇಕಾದ ಅಗತ್ಯವಿದೆ. ಈಗಿನ ಕರ್ನಾಟಕ ಸಂಗೀತ ಸಂಪ್ರದಾಯದಲ್ಲಿ ಪ್ರಸಿದ್ಧರಾದ ತ್ರಿಮೂರ್ತಿಗಳ (ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು, ಶ್ಯಾಮಶಾಸ್ತ್ರಿಗಳು) ಜೊತೆಗೆ ಅವರೂ ಒಬ್ಬರು, ಅವರಿಗಿಂತ ಪ್ರಾಚೀನರು ಎಂಬುದಷ್ಟೇ ಕಾರಣವಲ್ಲ. ತ್ಯಾಗರಾಜರೇನೋ ಪುರಂದರದಾಸರನ್ನು ಗೌರವದಿಂದ ಉಲ್ಲೇಖಿಸಿದ್ದಾರೆ ; ಆದರೆ ಉಳಿದ ಇಬ್ಬರು ಅವರನ್ನು ಎಲ್ಲಿಯೂ ಉಲ್ಲೇಖಿಸುವುದಿಲ್ಲ. ತ್ಯಾಗರಾಜರೂ ಪುರಂದರದಾಸರನ್ನು ಉಲ್ಲೇಖಿಸಿರುವುದು ಸಂತರೆಂದು ಅಷ್ಟೆ ; ಸಂಗೀತಶಾಸ್ತ್ರಕ್ಕೆ ಅವರ ಕೊಡುಗೆಯನ್ನು ಎಲ್ಲಿಯೂ ಪ್ರಸ್ತಾಪಿಸಿಲ್ಲ. ಈ ವಿಚಾರದ ಮೇಲೆ ಬೆಳಕು ಕಾಣಲು ನಾವು ಬೇರೆಡೆ ಕಣ್ಣಾಡಿಸಬೇಕು.

ಶಾಸ್ತ್ರೀಯ ಸಂಗೀತದಲ್ಲಿ ಶಾಸ್ತ್ರಭಾಗ (ಲಕ್ಷಣ ಸಂಗೀತ) ಮತ್ತು ಪ್ರಯೋಗ ಭಾಗ (ಲಕ್ಷ್ಯ ಸಂಗೀತ) ಎಂಬೆರಡು ವಿಭಾಗಳಿರುವುದು ದಿಟ ; ಪ್ರಾಚೀನ ಕಾಲದಿಂದಲೂ ಇದು ಇರುವುದೇ. ಆದರೆ ಶಾಸ್ತ್ರಭಾಗ ಪಂಡಿತಪ್ರಿಯವಾದುದು, ಆಲೋಚನಾಮೃತವಾದುದು, ಪ್ರಯೋಗಭಾಗ ಪಾಮರರಂಜಕವಾದುದು, ಆಪಾತ ಮಧುರ ಎಂದು ಬೇರ್ಪಡಿಸುವುದು ಸಲ್ಲದು. ಶಾಸ್ತ್ರೀಯ ಸಂಗೀತದಿಂದ ಪಂಡಿತ ರಂಜನೆಯೂ ಆಗಬೇಕು, ಪಾಮರ ಪ್ರೀತಿಯೂ ಆಗಬೇಕು. ಸಂಗೀತ ಪ್ರಮುಖ ಕಲೆಯಾದುದರಿಂದ ಸುಖಾನುಭವವೇ ಒರೆಗಲ್ಲು, ಆದರೆ ಶಾಸ್ತ್ರೀಯವೆಂಬ ವಿಶೇಷಣವಿರುವಾಗ ಹೃದಯ ಸಂಸ್ಕಾರವೂ ಅಗತ್ಯವಾಗಿ ಆಗಬೇಕು ; ಸುಖದೊಂದಿಗೆ ಹಿತವೂ ಉದ್ದೇಶವಾಗುತ್ತದೆ. ಆಗ ಸುಖದ ಭಾಗ ಸಂಗೀತ, ಹಿತದ ಭಾಗ ಸಾಹಿತ್ಯ ಎಂದು ಬೇರೆಬೇರೆಯಾಗಿ ಕಾಣಿಸಲಾರೆವು. ಸುಖ–ಹಿತಗಳೆರಡೂ ಒಟ್ಟಿಗೆ ಆಗಬೇಕಾಗಿರುವುದು ಶಾಸ್ತ್ರೀಯ ಸಂಗೀತದ ಚೌಕಟ್ಟು. ನಾನ್ನೂರು–ಐನೂರು ವರ್ಷಗಳ ಹಿಂದೆ ನಮ್ಮ ದೇಶದ ಸಂಗೀತದಲ್ಲಿ ಯಾವ ಶಾಸ್ತ್ರಪರಂಪರೆಗಳಿದ್ದವೋ, ಪ್ರಯೋಗದಲ್ಲಿ ಅವುಗಳ ಅನ್ವಯ ಎಷ್ಟರಮಟ್ಟಿಗೆ ಆಗಿದ್ದಿತೋ ಹೇಳುವುದು ಕಷ್ಟ. ಆದರೆ ಆ ಕಾಲದ ಗ್ರಂಥಗಳನ್ನು ನೋಡಿದರೆ ಶಾಸ್ತ್ರದ ಕಟ್ಟುಪಾಡು ತೀರ ಬಿಗಿಯಾಗಿದ್ದಂತೆ ತೋರುತ್ತದೆ. ಅಲ್ಲಿ ಕಾಣುವ ಪ್ರಬಂಧಗಳು, ರಾಗಗಳು, ತಾಳಗಳು ಸಂಖ್ಯೆಯಲ್ಲೂ ಬಹುಳವಾದವು, ಸ್ವರೂಪದಲ್ಲೂ ಜಟಿಲವಾದುವು. ಪ್ರಯೋಗಕ್ಕೆ ಅಷ್ಟಾಗಿ ಅನುಕೂಲವಾಗಿದ್ದಂತೆ ತೋರುವುದಿಲ್ಲ.

ವಿಜಯನಗರದಲ್ಲಿ ದಕ್ಷಿಣದೇಶದ ಸಂಸ್ಕೃತಿ ಪ್ರೌಢವಾಗಿ, ವ್ಯಾಪಕವಾದ ಒಂದು ನೆಲೆಯಲ್ಲಿ ಮೂಡಿಕೊಂಡಿತೆಂದು ಮೊದಲೇ ಹೇಳಿದೆನಷ್ಟೆ. ಆಗಲೇ ಶಾಸ್ತ್ರಕ್ಕೂ ಅದರ ಅನ್ವಯಕ್ಕೂ ಅಂತರ ಕಡಮೆಯಾದುದು. ಈ ಮಾತು ಸಂಗೀತಕ್ಕೂ ಅನ್ವಯಿ

ಸುತ್ತದೆ. ಸಾಮ್ರಾಜ್ಯ ಮೈದಳೆಯುವಾಗಲೇ ವಿದ್ಯಾರಣ್ಯರು (1320–1380) 'ಸಂಗೀತಸಾರ'ವೆಂಬ ಶಾಸ್ತ್ರಗ್ರಂಥವನ್ನು ಬರೆದು "ಪ್ರಚುರ ಪ್ರಯೋಗ"ವಿರುವ ರಾಗಗಳನ್ನು ನಿರ್ದೇಶಿಸಿದರೆಂದು ಗೋವಿಂದ ದೀಕ್ಷಿತರ 'ಸಂಗೀತಸುಧೆ'ಯಿಂದ ತಿಳಿದುಬರುತ್ತದೆ. ಗೋವಿಂದ ದೀಕ್ಷಿತರು ವೇಂಕಟಮಖಿಯ ತಂದೆ. ವೇಂಕಟಮಖಿಯ ಕಾಲ 1660ರ ಸುಮಾರು. ಆ ವೇಳೆಗಾಗಲೆ ದಕ್ಷಿಣಾದಿ ಸಂಗೀತದ ದಾರಿ ಸ್ಪಷ್ಟವಾಗಿದ್ದಿತು.

ವಿದ್ಯಾರಣ್ಯರನ್ನು ಗೋವಿಂದದೀಕ್ಷಿತರು ಉಲ್ಲೇಖಿಸುವಾಗ 'ಕರ್ನಾಟಕ ಸಿಂಹಾಸನ ಭಾಗ್ಯ'ವೆಂದು ಬಣ್ಣಿಸಿದ್ದಾರೆ. ವಿದ್ಯಾರಣ್ಯರು ಶಾಸ್ತ್ರಜ್ಞರಾದರೂ ಪ್ರಯೋಗವನ್ನು ಕೈಬಿಡಲಿಲ್ಲ ; ಪ್ರಯೋಗಕ್ಕೆ ಅನುಕೂಲವಾಗುವಂತೆ ಶಾಸ್ತ್ರವಿರಬೇಕೆಂದು ಬಗೆದವರು ಅವರು. ಲಕ್ಷ್ಯ–ಲಕ್ಷಣ ಸಂಗೀತಗಳ ಸಮನ್ವಯವನ್ನು ಸಾಧಿಸಲು ಯತ್ನಿಸಿದರು. ಅವರಿಂದ ಮೊದಲಾದ ಈ ಸಂಗೀತ ಸಂಪ್ರದಾಯವು ವಿಜಯನಗರದಲ್ಲೇ ಬೆಳೆದು, ಬಲಿತು, 'ಕನ್ನಡ ರಾಜ್ಯ ರಮಾರಮಣ'ನಾದ ಕೃಷ್ಣದೇವರಾಯ ಮಹಾರಾಯನ ಕಾಲದಲ್ಲಿ ಮೈದುಂಬಿ ನಿಂತಿತು. ಈ ಸಂಪ್ರದಾಯ ಆಗ ಪ್ರೌಢವಾಗಲು ನೆರವಾದವರು ಅವನ ಗುರುಗಳಾದ ವ್ಯಾಸರಾಯ ಸ್ವಾಮಿಗಳು, ಅವರ ಶಿಷ್ಯರಾದ ಪುರಂದರದಾಸರು. ವಿಜಯನಗರ ಸಾಮ್ರಾಜ್ಯ ಕರ್ನಾಟಕ ರಾಜ್ಯವಾದುದರಿಂದ ಇದು ಕರ್ನಾಟಕ ಸಂಗೀತ ಸಂಪ್ರದಾಯವೆನಿಸಿಕೊಂಡಿತು.

ಕರ್ನಾಟಕವೆನ್ನುವ ಮಾತು ಪ್ರದೇಶವನ್ನೂ ಸೂಚಿಸುತ್ತದೆ, ಅದಕ್ಕಿಂತ ಹೆಚ್ಚಾಗಿ ಪ್ರಾದೇಶಿಕ ಸಂಸ್ಕೃತಿಯನ್ನೂ ಸೂಚಿಸುತ್ತದೆ. ವಿಜಯನಗರ ಸಾಮ್ರಾಜ್ಯ ಮರೆಯಾದಾಗ ತಂಜಾವೂರು ಈ ಸಂಗೀತದ ತೌರೂರೆಂದು ಮೆರೆಯಿತಷ್ಟೆ. ಅಲ್ಲಿ ಲಕ್ಷಣಗ್ರಂಥಗಳಿಗೆ ಸಂಸ್ಕೃತವನ್ನು ಬಳಸಿದರೂ, ಲಕ್ಷ್ಯ ಸಾಮಗ್ರಿಯೆಲ್ಲ ತೆಲುಗು, ತಮಿಳು, ಮರಾಠಿ ಭಾಷೆಗಳಲ್ಲಿ ; ಕನ್ನಡದಲ್ಲಲ್ಲ. ಕರ್ನಾಟಕ ಸಂಗೀತದಲ್ಲಿ ಕನ್ನಡದ ಪಾತ್ರವೇ ಹೀಗೆ ಇರಲಿಲ್ಲವೆಂದರೆ ಯಾರಿಗಾದರೂ ಸೋಜಿಗವಾದೀತು. ಆದರೆ ಈ ಸಂಗೀತ ಸಂಪ್ರದಾಯ ಬಲಿಯುವಾಗ, ಬೆಳೆಯುವಾಗ ಅದಕ್ಕೆ ಊರುಗೋಲಾಗಿದ್ದುದು ಕನ್ನಡವೇ, ವ್ಯಾಸರಾಯಸ್ವಾಮಿಗಳ ಮತ್ತು ಪುರಂದರದಾಸರ ಕನ್ನಡ ರಚನೆಗಳೇ. ದೇಶಭಾಷೆಯಲ್ಲಿ ಲಕ್ಷ್ಯಸಂಗೀತವನ್ನು ಸಿದ್ಧಪಡಿಸುವ ಕಲ್ಪನೆ ಅವರದ್ದೇ.

ತಂಜಾವೂರಿನ ದೊರೆ ತುಳಜಾಜಿ (1728–1736) ಪುರಂದರದಾಸರನ್ನು ಕುರಿತು ಮಾಡಿರುವ ಪ್ರಸ್ತಾಪ ಆಗಲೇ ಪರಿಶೀಲನೆಗೆ ಬಂದಿತು. ತನ್ನ 'ಸಂಗೀತ ಸಾರಾಮೃತ'ದಲ್ಲಿ ಅವನು ವ್ಯಾಸರಾಯಸ್ವಾಮಿಗಳನ್ನು ತನ್ನ ಪೂರ್ವಾಚಾರ್ಯರೆಂದು ಸ್ಮರಿಸಿ "ಪ್ರಸಿದ್ಧ ಸಂಗೀತವಿದ್ಯಾ ಸಂಪ್ರದಾಯ ಪ್ರವರ್ತಕ"ರೆಂದು ಹೇಳಿದ್ದಾನೆ—

'ಪ್ರಸಿದ್ಧ ಸಂಗೀತ ವಿದ್ಯಾಸಂಪ್ರದಾಯ ಪ್ರವರ್ತಕಃ ।
ವ್ಯಾಸಪ್ಪಾಚಾರ್ಯ ಏವಾಸ್ಮತ್ ಪೂರ್ವಾಚಾರ್ಯೇತಿ ವಿಶ್ರುತಾಃ ॥'

ಇಲ್ಲಿ 'ಸಂಗೀತ ವಿದ್ಯಾ ಸಂಪ್ರದಾಯ'ವೇದರೇನು ? ವಿದ್ಯೆಯೆನ್ನುವ ಮಾತಿನಲ್ಲಿ ಶಾಸ್ತ್ರ, ಪ್ರಯೋಗಗಳೆರಡೂ ಸೇರುತ್ತವೆ ; ಲಕ್ಷ್ಯ ಲಕ್ಷಣಗಳೆರಡೂ ಕೂಡಿಕೊಳ್ಳುತ್ತವೆ. ಇದೊಂದು ಸಂಪ್ರದಾಯವನ್ನು ವ್ಯಾಸರಾಯಸ್ವಾಮಿಗಳು (ಸ್ವಾಮಿಗಳೇ, 'ಏವ') ಆರಂಭಿಸಿದರೆಂದು ಅರಸನ ಒಕ್ಕಣೆ. ವ್ಯಾಸರಾಯಸ್ವಾಮಿಗಳ ಕಾಲವಾಗಿ ಸುಮಾರು ಒಂದು ನೂರು ಎಪ್ಪತ್ತು ವರ್ಷಗಳನಂತರ ತೋರಿಕೊಂಡವನು ಈ ಅರಸ. ಈ ಅವಧಿಯಲ್ಲಿ ಸಂಗೀತ ವಿದ್ಯಾ ಸಂಪ್ರದಾಯ ಬೆಳೆದಿದ್ದಿತು, ಹರಡಿಕೊಂಡಿದ್ದಿತು, ಜನಪ್ರಿಯವಾಗಿದ್ದಿತು.

ವ್ಯಾಸರಾಯಸ್ವಾಮಿಗಳು ಸಂಗೀತಶಾಸ್ತ್ರವನ್ನು ಕುರಿತಂತೆ ಗ್ರಂಥವನ್ನೇನು ಬರೆದಂತೆ ಉಲ್ಲೇಖವಿಲ್ಲ. ಆದರೆ ಶಾಸ್ತ್ರವನ್ನವಲಂಬಿಸಿ ಜನಪ್ರಿಯವಾಗುವಂಥ ಪದಗಳನ್ನೂ, ಸುಳಾದಿಗಳನ್ನೂ, ಉಗಾಭೋಗಗಳನ್ನೂ ಕನ್ನಡದಲ್ಲಿ ರಚಿಸಿದರು. ಅವರ 'ಪದ'ಗಳೇ ಮುಂದೆ 'ಕೃತಿ'ಗಳಿಗೆ ದಾರಿ ಮಾಡಿಕೊಟ್ಟುವು. 'ಕೃತಿ' ಎಂಬ ಮಾತನ್ನು ಅವರ ರಚನೆಗಳಲ್ಲಿ ಕಾಣದಿದ್ದರೂ, ಅವರ ಶಿಷ್ಯರಾದ ಪುರಂದರದಾಸರ ಎರಡು ಪದಗಳಲ್ಲಿ ಕಾಣುತ್ತೇವೆ ('ಸತತ ಗಣನಾಥ' ಎನ್ನುವ ಪದದಲ್ಲಿ "ಇವರಲಿ ನಿಂತು ಕೃತಿಯ ನಡೆಸುವನು" ಮತ್ತು 'ವಾಸುದೇವನ ನಾಮಾವಳಿಯ ಕ್ಲುಪ್ತಿಯಲಿ' ಎನ್ನುವ ಪದದಲ್ಲಿ "ಇಂತು ನಾಲ್ಕುಲಕ್ಷ ಎಪ್ಪತ್ತೈದುಸಾವಿರ ಕೃತಿಯು"). ಹಿಂದೆ ಶಾಸ್ತ್ರ ಗ್ರಂಥಗಳಲ್ಲಿ ಉದ್ಗ್ರಾಹ, ಮೇಳಾಪಕ, ಧ್ರುವ, ಆಭೋಗ ಎಂಬ ನಾಲ್ಕು ಧಾತುಗಳಿದ್ದುದನ್ನು ಈಗ ಪದ ಅಥವಾ 'ಕೃತಿ'ಯಲ್ಲಿ ಕ್ರಮವಾಗಿ ಪಲ್ಲವಿ, ಅನು ಪಲ್ಲವಿ, ಚರಣ ಮತ್ತು ಮುದ್ರಾಚರಣ ಎಂದು ಕಾಣಿಸತೊಡಗಿದವರು ವ್ಯಾಸರಾಯ ಸ್ವಾಮಿಗಳೇ. ಮತ್ತು ಸ್ವಾಮಿಗಳ ರಚನೆಗಳನ್ನು ನೋಡಿದರೆ ಬಹುಮಟ್ಟಿಗೆ ಅವರು ದೇಶ್ಯರಾಗಗಳನ್ನು ಬಳಸಿದ್ದಾರೆ, ರಾಗದ ನಿರ್ವಹಣೆಯಲ್ಲಿ ಸರಳವಾದ ದಾರಿಯನ್ನು ಹಿಡಿದಿದ್ದಾರೆ, ಯತಿ-ಪ್ರಾಸ ಮತ್ತು ಧಾತು-ಮಾತುಗಳ ಮೇಳನದ ಕಡೆ ಗಮನ ಕೊಟ್ಟಿದ್ದಾರೆ ಎನ್ನುವುದು ತಿಳಿಯುತ್ತದೆ. ಸಾಹಿತ್ಯ ಸಂಗೀತಗಳಿಗೆ ಸಮ ಪ್ರಾಧಾನ್ಯ ವನ್ನು ಕೊಟ್ಟವರಲ್ಲಿ ಅವರೇ ಮೊದಲಿಗರು. ಶೃಂಗಾರ-ಅಧ್ಯಾತ್ಮ, ರಂಜನೆ-ಹಿತ, ಗೀತ-ನರ್ತನ ಈ ಜೋಡಿಗಳನ್ನು ಕೂಡಿಸಿದ್ದು ಅವರ ವೈಶಿಷ್ಟ್ಯ.

ಹೀಗೆ 'ಕರ್ನಾಟಕ ಸಂಗೀತ ಪಿತಾಮಹ' ಎನ್ನುವ ಬಿರುದು ದಿಟವಾಗಿ ವ್ಯಾಸ ರಾಯಸ್ವಾಮಿಗಳಿಗೇ ಸಲ್ಲಬೇಕು. ಇವರನ್ನು "ಸಂಗೀತ ವಿದ್ಯಾ ಸಂಪ್ರದಾಯ ಪ್ರವರ್ತಕ"ರೆಂದು ಕರೆದ ತುಳಜಾಜಿ ಪುರಂದರದಾಸರನ್ನು "ಅಭಿಯುಕ್ತ"ರೆಂದೂ "ಪುರಾತನ"ರೆಂದೂ ಕರೆದು, "ಸಾಲಗಸೂಡಸ್ಥಗೀತಾನಾಂ ಲಕ್ಷ್ಯ ಕೀರ್ತನಂ" ಎಂದು ಅವರ ಕೊಡುಗೆಯನ್ನು ನಿರ್ದೇಶಿಸಿದ್ದಾನೆ. ಪುರಂದರದಾಸರು ಈ ಸಂಗೀತ ಸಂಪ್ರ ದಾಯದ ಪ್ರವರ್ತಕರಲ್ಲದಿದ್ದರೂ, ಪ್ರವರ್ತಕರ ಪ್ರಿಯಶಿಷ್ಯರಾಗಿದ್ದವರು, ಪ್ರವರ್ತನೆ ಯಲ್ಲಿ ಪಾಲ್ಗೊಂಡವರು. ತುಳಜಾಜಿಯೇ ಮಾಡಿರುವ ಪ್ರಸ್ತಾಪ, ಪುರಂದರದಾಸರ ಕೃತಿಗಳಲ್ಲಿ 'ಲಕ್ಷ್ಯಲಕ್ಷಣಸಂಗತಿ' ಇಲ್ಲದಿರುವುದು, ಪುರಂದರದಾಸರ ಕೊಡುಗೆಯನ್ನು

ಸ್ಪಷ್ಟಪಡಿಸುತ್ತದೆ. ಈ ಮೊದಲೇ ಹೇಳಿದಂತೆ, ಶಾಸ್ತ್ರದ ಚೌಕಟ್ಟನ್ನು ಮೀರಿ ಪ್ರಯೋಗವನ್ನು ಎತ್ತಿ ಹಿಡಿದರೆಂಬುದು. ಆದರೆ ಪುರಂದರದಾಸರ ರಚನೆಗಳ ಜನಪ್ರೀತಿ ತುಳಜಾಜಿಯ ಕಾಲದಲ್ಲೂ ಪ್ರಸಿದ್ಧವಾಗಿದ್ದಿತು; ಎಂದ ಮೇಲೆ ಶಾಸ್ತ್ರ ನಿಷ್ಠರು ಅವನ್ನು ಗರ್ವದಿಂದ, ಅಸಡ್ಡೆಯಿಂದ ಕಾಣುವುದು ಹೇಗೆ ? ತಮ್ಮ ಶಾಸ್ತ್ರದ ಚೌಕಟ್ಟನ್ನೇ ಅವರು ಮಾರ್ಪಡಿಸಿಕೊಳ್ಳಬೇಕಾಯಿತು.

ಪುರಂದರದಾಸರ ಸಾಹಿತ್ಯವನ್ನು ನೋಡಿದರೆ ಅವರಿಗೆ ಜಾನಪದ ಪ್ರಕಾರಗಳ ಮೇಲಿದ್ದ ಒಲವು ಎದ್ದುಕಾಣುತ್ತದೆ. ಸಂಗೀತಕ್ಕೆ ಇಂಥ ಸಾಮಗ್ರಿಗಳೇ ಹೆಚ್ಚು ಸಮರ್ಪಕವೆಂದು ಬಗೆದು ಗೀತ, ಠಾಯಿ, ಸುಳಾದಿ, ಉಗಾಭೋಗ ಮೊದಲಾದ ರಚನೆಗಳನ್ನು ಮಾಡಿದರು. 'ಸಂಗೀತ ರತ್ನಾಕರ'ವೇ ಮೊದಲಾದ ಶಾಸ್ತ್ರಗ್ರಂಥಗಳಲ್ಲಿ ಪಟ್ಟಿ ಮಾಡಿರುವ ಏಳೆಯೇ ಮೊದಲಾದ ಎಪ್ಪತ್ತೈದು ಬಗೆಯ ಪ್ರಬಂಧಗಳು ಹೇಳ ಹೆಸರಿಲ್ಲದೆ ಮರೆಯಾದುವು. ಪ್ರಯೋಗಕ್ಕೆ ಬರಲಾರದ, ರಂಜಕವಾಗದ ಪ್ರಬಂಧ ಗಳನ್ನು ಶಾಸ್ತ್ರನಿಷ್ಠರು ಬಣ್ಣಿಸಿದರೆ ಪ್ರಯೋಜನವೇನು ? "ಹೋಗದೂರಿನ ದಾರಿ ಕೇಳಿ ಮಾಡುವುದೇನು ?", "ತನಗಿಲ್ಲದಾ ವಸ್ತು ಎಲ್ಲಿದ್ದರೇನು ?" ಎಂದು ಪುರಂದರ ದಾಸರ ಆಗ್ರಹ. - ಸಂಸ್ಕೃತ ಛಂದೋಬಂಧಗಳಿಂದ ತುಂಬಿ ತುಳುಕುವ, ಬಿಗಿಯಾದ ಪ್ರಬಂಧಗಳು ದೇಶಭಾಷೆಯ ಜಾಯಮಾನಕ್ಕೆ ಒಗ್ಗಲಾರವು ಎಂಬುದನ್ನು ಮೊಟ್ಟ ಮೊದಲು ಕಂಡುಕೊಂಡವರು ವ್ಯಾಸರಾಯಸ್ವಾಮಿಗಳು; ಅಥವಾ ಅವರ ಗುರು ಗಳಾದ ಶ್ರೀಪಾದರಾಜರು. ಇಂಥ ಪ್ರಬಂಧಗಳ ಅಗತ್ಯ ಗಾಯಕರಿಗೆ ಒದಗದಂತೆ, ದೇಶ ಭಾಷೆಯಲ್ಲೇ ಸರಳವಾದ ಗೀತಗಳನ್ನೂ ಪದಗಳನ್ನೂ ಬಹು ಸಂಖ್ಯೆಯಲ್ಲಿ, ವಿಷಯ ವೈವಿಧ್ಯದಿಂದ, ಭಾವದ ಬಂಧುರತೆಯಿಂದ ರಚಿಸಿದವರು ಪುರಂದರದಾಸರು.

ಕೃತಿ ರಚನೆಯಲ್ಲಿ ಪುರಂದರದಾಸರು ಮುಂದಿನವರಿಗೆ ಮಾರ್ಗದರ್ಶಿಯಾದರು. ತಾಳ್ಲಪಾಕ ಕವಿಗಳ ಶೃಂಗಾರ ಮತ್ತು ಅಧ್ಯಾತ್ಮ ಸಂಕೀರ್ತನೆಗಳು, ಕ್ಷೇತ್ರಯ್ಯನ ಭಾವಾಭಿನಯ ಪದಗಳು, ಸಭಾಪತಯ್ಯನ ಪದಗಳು, ಗಿರಿರಾಜ ಕವಿಯ ಯಕ್ಷಗಾನ ಪ್ರಬಂಧಗಳು, ಪೆದ್ದದಾಸರಿಯ ವರಾಹನರಸಿಂಹ ಪದಗಳು, ಸೋಮಕವಿಯ ಪದ ಗಳು, ವಾಸುದೇವ ಕವಿಯ ತಮಿಳು ಭಾವಪದಗಳು, ಪಂಚನದ ರಾಮಭಾರತಿಯ ಆಶಿರಿಯ ವಿರುತ್ತಗಳು, ಪಟ್ಟಾಭಿರಾಮಯ್ಯನ ಶೃಂಗಾರಪದಗಳು, ಚೌಕಂ ವೀರ ಭದ್ರಯ್ಯನ ರಾಗಮಾಲಿಕೆ ತಿಲ್ಲಾನ ಕೀರ್ತನೆಗಳು ಇವೆಲ್ಲ ಸಂಗೀತ ತ್ರಿಮೂರ್ತಿಗಳ ಕಾಲಕ್ಕೆ ಮುಂಚಿನ ಲಕ್ಷ್ಯಸಂಗೀತ ಪ್ರಕಾರಗಳು. ಇವುಗಳಲ್ಲಿ ವ್ಯಾಸರಾಯಸ್ವಾಮಿಗಳ ಮತ್ತು ಪುರಂದರದಾಸರ ರಚನೆಗಳ ಪ್ರಭಾವವನ್ನು ಗುರುತಿಸಬಹುದು.

ಪುರಂದರದಾಸರು ಕರ್ನಾಟಕ ಸಂಗೀತವು ಜನಪ್ರಿಯವಾಗಲು ಕಾರಣರಾದ ರೆಂದರೆ ತಪ್ಪಲ್ಲ. ಸಂಗೀತವಿನಿಕೆಗೆ, ಸಂಕೀರ್ತನಕ್ಕೆ, ಭಜನೆಗೆ ತಕ್ಕ ಸಾಹಿತ್ಯವನ್ನು ಸಿದ್ಧಪಡಿಸಿದುದಷ್ಟೇ ಅಲ್ಲದೆ, ಶಾಸ್ತ್ರೀಯ ಸಂಗೀತಕ್ಕೆ ಹೊಸದೊಂದು ದಾರಿಯನ್ನು

ತೋರಿಕೊಟ್ಟರು. ಈ ದಾರಿಯಲ್ಲಿ ಶಾಸ್ತ್ರದ ಕಟ್ಟುಪಾಡು ಅಷ್ಟಿಷ್ಟು ಸಡಿಲವಾಗಿ ರಂಜಕ, ಹಿತಗಳೆಂಬ ಗುಣಗಳು ಎದ್ದುನಿಂತವು.

ಹರಿದಾಸರ ರಚನೆಗಳಲ್ಲಿ ಸಾಹಿತ್ಯವು ಮುಖ್ಯವಾದ ಭಾಗವೆಂಬುದನ್ನು ಮರೆಯು ಬಾರದು. ಪುರಂದರದಾಸರ ರಚನೆಗಳಲ್ಲೇನೋ ಸಂಗೀತವೂ ತಕ್ಕಮಟ್ಟಿಗೆ ಪ್ರಧಾನವೇ ಆಗುತ್ತದೆ. ಅವರ ಸಂಗೀತಪ್ರಧಾನವಾದ ಪದಗಳೆಲ್ಲವೂ ದೊರೆತಿಲ್ಲದಿರುವುದು ನಮ್ಮ ದುರ್ದೈವ. ದಾಸಕೂಟದವರಿಗೆ ಶಾಸ್ತ್ರೀಯ ಸಂಗೀತದ ಪರಿಶ್ರಮ ಅಷ್ಟಾಗಿ ಇರದಾಗಿ, ಇವನ್ನು ಅವರು ಉಳಿಸಿಕೊಳ್ಳಲಿಲ್ಲ. ಅವರ ಸುಳಾದಿಗಳೇನೋ ಗೀತ ಪ್ರಧಾನವಾದ ರಚನೆಗಳೇ. ಅದನ್ನು ಮೊದಲೇ ವಿಸ್ತಾರವಾಗಿ ಚರ್ಚಿಸಿದ್ದೇನೆ. ಸುಳಾದಿಯೆಂಬ ಪ್ರಕಾರವು ವ್ಯಾಸರಾಯಸ್ವಾಮಿಗಳ ಕಲ್ಪನೆಯೇ ಇದ್ದಿರಬೇಕೆಂದೂ, ಪುರಂದರದಾಸರು ಅದಕ್ಕೆ ಮೂರ್ತರೂಪವನ್ನು ದೊರಕಿಸಿದರೆಂದೂ ಸೂಚಿಸಿದ್ದೇನೆ. ಸುಳಾದಿಗಳಿಂದ ಖಂಡಗಳನ್ನು ಎತ್ತಿಕೊಂಡು, ತಾಳದ ಬಿಗಿಯನ್ನು ಸಡಿಲಿಸಿ ಉಗಾ ಭೋಗಗಳೆಂದು ಮುಂದಿನವರು ಬಳಸಿರುವುದು ಸಾಧ್ಯ. ವೇಂಕಟಮಖಿಯ ಕಾಲಕ್ಕೆ ರೂಢಿಯಲ್ಲಿ ಸುಳಾದಿಗಳೇ ಗೀತೆಗಳೆಂಬ ಕಲ್ಪನೆಯೂ ಇದ್ದಿತು ('ರೂಢ್ಯಾ ಸಾಲಗ ಸೂಡಾಖ್ಯಗೀತಭೇದೈಕವಾಚಕಃ'). ಪುರಂದರದಾಸರು ಅಭ್ಯಾಸಗಾನಕ್ಕೆಂದು ರಚಿಸಿದ ನಾಲ್ಕು ಗೀತಗಳು (ಲಂಬೋದರ', 'ಕುಂದಗೌರ', 'ಕೆರೆಯ ನೀರನು' ಮತ್ತು 'ಪದುಮನಾಭ') ಒಂದೇ ರಾಗದಲ್ಲಿದ್ದು (ಮಲಹರಿ) ಬೇರೆ ಬೇರೆ ತಾಳಗಳಲ್ಲಿ (ಮೊದಲೆರಡು ರೂಪಕ, ಇನ್ನೆರಡು ತ್ರಿವಿಡೆ) ಇರುವುದನ್ನು ಗಮನಿಸಬೇಕು. ಮೊದ ಲಿಗೆ ಒಂದೇ ಸುಳಾದಿಯ ಬೇರೆ ಬೇರೆ ನುಡಿಗಳಾಗಿದ್ದುವೋ ಎಂಬ ಸಂಶಯ ಬರುತ್ತದೆ.

ಸುಳಾದಿಯು ಬರುಬರುತ್ತ ಬಳಕೆಯಿಂದ ಜಾರಿದಾಗ, ಸ್ವಾರಸ್ಯವಾದ ನುಡಿ ಗಳು ಮಟ್ಟಿಗೆ ಸ್ವತಂತ್ರವಾಗಿ ಬಳಕೆಯಲ್ಲೂ ಉಳಿದುಕೊಂಡುವು. ರಾಗಾಲಪ್ತಿಯ ಗುಣವನ್ನು ಮಾತ್ರ ಇರಿಸಿಕೊಂಡು, ತಾಳದ ಕಟ್ಟುಪಾಡು ಕಳಚಿಹೋಗಿ ಉಗಾ ಭೋಗಗಳೆನಿಸಿದಾಗ ದಾಸಕೂಟದಲ್ಲಿ ಜನಪ್ರಿಯವಾದುವು. ಸುಳಾದಿಗಳನ್ನು ಪ್ರೌಢ ಗಾಯಕರೇ ನಿರ್ವಹಿಸಬಲ್ಲರು ; ಆದರೆ ಉಗಾಭೋಗಗಳನ್ನು ಯಾವ ಹರಿದಾಸ ರಾದರೂ ಸ್ವಲ್ಪ ಸಂಗೀತಜ್ಞಾನವಿದ್ದರೆ ಹಾಡಬಹುದು. ಶ್ರೀವೈಷ್ಣವ ಸಂಪ್ರದಾಯದ ತಮಿಳು ಪ್ರಬಂಧಗಳನ್ನು ಹಾಡುವ ಮೊದಲು ತನಿಯನ್‌ಗಳನ್ನು ಹಾಡುವ ಪದ್ಧತಿ ಯಿರುವಂತೆ ಹರಿದಾಸರಲ್ಲೂ ಪದವನ್ನು ಹಾಡುವ ಮೊದಲು ಒಂದು ಉಗಾಭೋಗ ವನ್ನು ಹಾಡುವ ವಾಡಿಕೆಯಿದ್ದಿತು. ದಾಸರ ಪದಗಳಲ್ಲಿ ರಾಗ, ತಾಳಗಳ ನಿರ್ದೇಶನ ವಿದ್ದರೂ, ಅವನ್ನು ವಿಸ್ತಾರವಾಗಿ ಕಲಾಪ್ರಕಾರವಾಗಿ ಸಭೆಯಲ್ಲಿ ಹಾಡಬೇಕೆಂಬ ಹಟ ಸಲ್ಲದು. ಸಂಕೀರ್ತನ ಪದ್ಧತಿಯಲ್ಲಿ ಹರಿದಾಸರು ಹಾಡಲೆಂದೇ ಅವು ಸಿದ್ಧವಾದುವು.

ಆದರೆ ಈ ಹಾಡುಗಳಲ್ಲಿ ಅವರಿಗೆ ಸಂಗೀತ ಕಲೆಯಲ್ಲಿದ್ದ ಪ್ರೇಮ, ಪೌಢಿಮೆ, ಪರಿಶ್ರಮ, ಪ್ರಯೋಗಶೀಲತೆಗಳು ಕಾಣುತ್ತವೆ. ಅವರ ದೃಷ್ಟಿಯಲ್ಲಿ ಭಗವಂತ

ಗಾನಲೋಲ ; ತುಂಬುರು ನಾರದರ ಗಾನವನ್ನು ಕೇಳುವ ಹರಿ ಮೆಚ್ಚಬೇಕಾದರೆ ನಮ್ಮ ಭಕ್ತಿಯೂ ರಾಗಬದ್ಧವಾಗಬೇಕಾದುದು ಸಹಜವೇ. ಸಾಹಿತ್ಯಭಾಗದ ರಸ ಪೋಷಣೆಗಾಗಿ ಆಯ್ದುಕೊಂಡಿರುವ ರಾಗ, ರಾಗಪೋಷಣೆಗಾಗಿ ಬಳಸಿರುವ ಪದ ಪುಂಜ, ಇವನ್ನು ಒಪ್ಪವಾಡಲು ಇರಿಸಿರುವ ತಾಳಬಂಧ ಇವು ಸ್ವಾರಸ್ಯವಾಗಿವೆ. ಹಲವೆಡೆ ಸಂಗೀತವಾದ್ಯಗಳನ್ನು ಹೆಸರಿಸಿದ್ದಾರೆ; ಹಲವಾರು ರಾಗಗಳನ್ನು ಹೇಳಿ ದ್ದಾರೆ ; ನಾಟ್ಯಕ್ರಿಯೆ, ತಾಳಾಂಗಗಳನ್ನು ತಿಳಿಸಿದ್ದಾರೆ. ಆದರೆ ಭಗವದ್ಭಕ್ತಿಯ ಚೌಕಟ್ಟಿನಲ್ಲಿ ಸಂಗೀತ ಮೂಡಿಬಂದರೇ ಅದರ ಸಾರ್ಥಕ್ಯ. ಸಂಗೀತದ ಪರಿಕರ ಗಳನ್ನು ತಿಳಿಸುವ ಒಂದು ಕೃತಿಯಲ್ಲಿ (ಮುಖಾರಿ ರಾಗ) ಅವರು ಕಾಣಿಸಿರುವ ಅಗತ್ಯ ಗಳ ಪಟ್ಟಿಯನ್ನು ನೋಡಿ

> 'ತಾಳಬೇಕು ; ತಕ್ಕ ಮೇಳಬೇಕು ; ಗಾನವನ್ನು ಕೇಳಬೇಕೆಂಬುವರಿಗೆ
> ಶಾಂತವೇಳೆ ಬೇಕು ; ಯತಿಪ್ರಾಸವಿರಬೇಕು ; ಗತಿಗೆ ನಿಲ್ಲಿಸಬೇಕು ;
> ಗಳಶುದ್ಧಿ–
> ಯಿರಬೇಕು ; ತಿಳಿದು ಪೇಳಲಿಬೇಕು ; ಕಳವಳ ಬಿಡಬೇಕು ; ಕಳೆಮುಖ–
> ವಿರಬೇಕು ; ಅರಿತವರಿರಬೇಕು ; ಹರುಷ ಹೆಚ್ಚಲಿಬೇಕು'

ಈ ಅಗತ್ಯಗಳಿಗೆ ಕಿರೀಟ ತೊಡಿಸಿದಂತೆ ಭಕ್ತಿಯಿರಬೇಕು. ಇಲ್ಲವಾದರೆ ಅದು ಬರಿಯ ಡಂಭಕದ ಕೂಗಾಟ. 'ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ' ವನ್ನು ಹರಿ ಮೆಚ್ಚನು. ಅವರ ಪಾಲಿಗೆ ಸಂಗೀತ ಒಂದು ಸಾಧನೆ; ಅದರ ಗುರಿ ಭಗವತ್ಪ್ರೀತಿ. ಅದಕ್ಕಾಗಿಯೇ ಅವರ ರಚನೆಗಳೆಲ್ಲ 'ಸಂಕೀರ್ತನ' ರೂಪವನ್ನು ತಳೆದುವು. ಸಂಗೀತದ ಪ್ರಯೋಜನ ಸತ್ತ್ವಶುದ್ಧಿ. ಗಾಯನದಿಂದ ಮನೋಧರ್ಮ ಮಧುರವಾಗಿ ಬಾಳಿನ ಹೊಳೆ ಭಗವಂತನೆಡೆಗೆ ಹರಿದರೆ ಆಗ ಸಂಗೀತ ಕೃತಕೃತ್ಯವಾಗುತ್ತದೆ. ಭಕ್ತಿಗೆ ಸಂಗೀತ ನೆರವಾಗಬೇಕು. ಭಗವದಾರಾಧನೆಗೆ ನಾದೋಪಾಸನೆ ಅನುವಾಗಿರ ಬೇಕೆಂಬುದು ನಮ್ಮಲ್ಲಿ ಹಿಂದಿನಿಂದ ಬಂದ ಕಲ್ಪನೆ. ಹಾಗೆಂದೇ ಭಕ್ತಿಯ ಪ್ರತೀಕ ವಾದ ನಾರದರನ್ನು ನಾವು ಗಾಯಕರೆಂದು ಗ್ರಹಿಸಿದ್ದೇವೆ. ಭಾವುಕಜನ ಪುರಂದರ ದಾಸರನ್ನು ನಾರದರ ಅವತಾರವೆಂದು ಬಗೆದದ್ದೂ ಇದೇ ಹಿನ್ನೆಲೆಯಲ್ಲಿ.

ಪುರಂದರದಾಸರ ಕಾಲದಲ್ಲೂ ಗ್ರಂಥಸ್ಥವಾಗಿ ನೂರಾರು ರಾಗಗಳಿದ್ದುವು. ಪ್ರಾಚೀನರು ಪಟ್ಟಿಮಾಡಿರುವ ಈ ರಾಗಗಳಲ್ಲಿ 'ಪ್ರಚುರ ಪ್ರಯೋಗ'ದ ಒರೆಗಲ್ಲಿಗೆ ತಿಕ್ಕಿ ವಿದ್ಯಾರಣ್ಯರು ಐವತ್ತು ರಾಗಗಳನ್ನು ನಿರ್ದೇಶಿಸಿದರೆಂದು ಗೋವಿಂದ ದೀಕ್ಷಿತರು ತಮ್ಮ 'ಸಂಗೀತಸುಧೆ'ಯಲ್ಲಿ ಕಾಣಿಸಿದ್ದಾರೆ. ಪುರಂದರದಾಸರು ಇನ್ನೂ ಮುಂದ ರಿದು ಅವುಗಳಲ್ಲಿ ಮೂವತ್ತೆರಡು ರಾಗಗಳನ್ನು ಮಾತ್ರ ಅವರು ಭಕ್ತಿಯ ಭಾವವನ್ನು ಹೊರಸೂಸಲು ನೆರವಾಗುವುವೆಂದು ಗ್ರಹಿಸಿದರು. 'ಬತ್ತೀಸ' (ದ್ವಾತ್ರಿಂಶತ್, ಮೂವತ್ತೆರಡು) ರಾಗಗಳೆಂದು ಅವರು ಕೆಲವು ಪದಗಳಲ್ಲಿ ಉಲ್ಲೇಖಿಸಿದ್ದಾರೆ.

ಮೂವತ್ತೆರಡು ಎಂಬ ಸಂಖ್ಯೆಗೆ ನಮ್ಮ ಸಂಸ್ಕೃತಿಯಲ್ಲಿ ವಿಶೇಷವಾದ ಬೆಲೆಯಿದೆ. ಮೂವತ್ತೆರಡು ಅಕ್ಷರಗಳ ಸಮೂಹವೇ ಗ್ರಂಥವೆನಿಸಿಕೊಂಡಿತು. ಮಹಾಪುರುಷ ಲಕ್ಷಣಗಳನ್ನೂ ಮೂವತ್ತೆರಡೆಂದು ಎಣಿಸುತ್ತಾರೆ. ಭಾಗವತ ಪಂಥದ ಪ್ರಕ್ರಿಯೆ ಯಲ್ಲಿ ಕೃಷ್ಣನಿಗೆ ಈ ಮೂವತ್ತೆರಡು ಮಹಾಪುರುಷ ಲಕ್ಷಣಗಳಿದ್ದುದರಿಂದಲೇ ಗೋಪಜನರೂ ಗೋಪಿಯರೂ ಅವನು ಅವತಾರವಿಶೇಷವೆಂಬುದನ್ನು ಅರಿತು ಕೊಂಡರು. ಅವರ ಪ್ರೀತಿಯು (ರಾಗವು) ಅವನ ಮೂವತ್ತೆರಡು ಶಾರೀರ ಲಕ್ಷಣ ಗಳಲ್ಲಿ ಹರಡಿಕೊಂಡಿತೆಂದು ಭಾಗವತದಲ್ಲಿ ಒಕ್ಕಣೆಯಿದೆ ('ರಾಗಃ ಸಪ್ತಸು ಹಂತ ಷಟ್ಸ್ವಪಿ...ದ್ವಾತ್ರಿಂಶದ್ವರಲಕ್ಷಣಃ ಕಥಮಸೌ ಗೋಪೇಷು ಸಂಭಾವ್ಯತೇ', ಶ್ರೀ ಹರಿಭಕ್ತಿ ರಸಾಮೃತಸಿಂಧು). ಮೂವತ್ತೆರಡು ರಾಗಗಳ ಎಣಿಕೆಗೆ ಇದು ಹಿನ್ನೆಲೆ.

ಸೀಖ ಜನಾಂಗದ ಪವಿತ್ರ ಗ್ರಂಥವಾದ 'ಗ್ರಂಥ ಸಾಹೇಬ' ಎನ್ನುವುದು ಹಲ ವಾರು ಸಂತರ ಕವಿತೆಗಳ ಸಂಕಲನ. ಈ ಸಂಕಲನವನ್ನು ಸಿದ್ಧಪಡಿಸಿದ ಸಂತರು ಗುರು ಅರ್ಜುನದೇವರೆಂಬುವರು (1581–1606); ಪುರಂದರದಾಸರ ಸಮ ಕಾಲಿಕರೇ ಎನ್ನಬಹುದು. ಅವರು ಸಂಪಾದಿಸಿರುವ ಈ ಸಂಕಲನದಲ್ಲಿ ಕವಿತೆಗಳನ್ನು ವರ್ಗೀಕರಣ ಮಾಡುವಾಗ ಆಯಾ ಸಂತರ ಹೆಸರುಗಳನ್ನು ಹಿಡಿಯದೆ ಕವಿತೆಗಳ ರಾಗ ಗಳನ್ನು ಹಿಡಿದಿರುವುದನ್ನು ಗಮನಿಸಬೇಕು. ಅವರು ಈ ಕೆಲಸಕ್ಕೆ ಆಯ್ದುಕೊಂಡಿ ರುವ ರಾಗಗಳ ಸಂಖ್ಯೆ ಮೂವತ್ತೊಂದು ಎನ್ನುವುದು ಸ್ವಾರಸ್ಯವಾದ ವಿವರ. ಆ ಕಾಲದಲ್ಲಿ ದೇಶದಲ್ಲೆಲ್ಲ ಮೂವತ್ತೊಂದು ಅಥವಾ ಮೂವತ್ತೆರಡು ರಾಗಗಳು ಪವಿತ್ರ ವಾದುವೆಂಬ ಕಲ್ಪನೆಯಿದ್ದಿತೆಂದು ತೋರುತ್ತದೆ. 'ಗ್ರಂಥ ಸಾಹೇಬ'ದಲ್ಲಿ ಹರಿದಾಸ ಪಂಥದ ಭಕ್ತಿಯನ್ನೇ ಗ್ರಹಿಸಲಾಗಿದೆ ಎನ್ನುವುದನ್ನೂ ಗಮನಿಸಬೇಕು.

'ತುತ್ತೂರು ತೂರೆಂದು' ಎಂದು ಮೊದಲಾಗುವ ಪದ, 'ನಳಿನಜಾಂಡ ತಲೆಯ ತೂಗಿ' ಎಂದು ಆರಂಭವಾಗುವ ಇನ್ನೊಂದು ಪದ, 'ಅಂಗನೆಯರೆಲ್ಲ ನೆರೆದು'ಎಂದು ಆರಂಭವಾಗುವ ಮತ್ತೊಂದು ಪದ ಈ ಮೂರರಲ್ಲಿ ತಮಗೆ ಪ್ರಿಯವಾದ ರಾಗ ಗಳನ್ನು ಹೆಸರಿಸಿದ್ದಾರೆ. ಮೊದಲನೆಯದರಲ್ಲಿ ಗೌಳ, ನಟ್ಟ, ಆಹಿರಿ, ಗೂರ್ಜರಿ, ಮಾಳವ, ಸಾರಂಗ, ಫಲಮಂಜರಿ, ಗೌಳಿ, ದೇಶಾಕ್ಷಿಗಳನ್ನೂ, ಎರಡನೆಯದರಲ್ಲಿ ಮಾರವಿ, ದೇಶಿ, ಗುರ್ಜರಿ, ಭೈರವಿ, ಗೌಳಿ, ನಟ್ಟ, ಸಾವೇರಿ, ಆಹಿರಿ, ಪೂರ್ವಿ, ಕಾಂಬೋದಿ, ಪಾಡಿ, ದೇಶಾಕ್ಷಿ, ಶಂಕರಾಭರಣ, ಮಾಳವ, ವರಾಳಿ, ಕಲ್ಯಾಣಿ, ತೋಡಿ, ಮುಖಾರಿ, ಯರಳಿ (?), ವಸಂತ, ಬೌಳಿ, ಧನ್ಯಾಸಿ, ಸೌರಾಷ್ಟ್ರ, ಗುಂಡಕ್ರಿಯ, ರಾಮಕ್ರಿಯೆ, ಮೇಘ, ಕುರಂಜಿ ರಾಗಗಳನ್ನೂ, ಮೂರನೆಯದ ರಲ್ಲಿ ಪಾಳಿ, ಮಲಹರಿ, ಭೈರವಿ, ಸಾರಂಗ, ದೇಶಿ, ಗುಂಡಕ್ರಿಯ, ಗುರ್ಜರಿ, ಕಲ್ಯಾಣಿ ರಾಗಗಳನ್ನೂ ಹೇಳಿದ್ದಾರೆ. ಸಾಂಪ್ರದಾಯಿಕವಾದ ಮೂವತ್ತೆರಡು ರಾಗಗಳಲ್ಲಿ ಇಲ್ಲಿ ಸೇರದೆ ಬಿಟ್ಟಿರುವುವು ಶ್ರೀರಾಗ ಮತ್ತು ಆರಭಿ ಎರಡು. ಇವುಗಳೆಲ್ಲ ಬಹುಮಟ್ಟಿಗೆ ದೇಶ್ಯರಾಗಗಳೆಂಬುದನ್ನು ಗಮನಿಸಬೇಕು. ಜನರ ನಡುವೆ ಬಳಕೆಯಲ್ಲಿದ್ದ ರಾಗಗಳನ್ನೇ

ಅವರು ಎತ್ತಿಹಿಡಿದರು. ಈ ರಾಗಗಳಿಗೆ ಅನಿಬದ್ಧವಾದ ರೂಪವನ್ನು ಲಕ್ಷ್ಯಪ್ರಕಾರ ದಲ್ಲಿ ಕಾಣಿಸಲು ದಾಸರು ಉಗಾಭೋಗಗಳನ್ನು ರಚಿಸಿದರೆಂದೂ, ಈ ರಾಗಗಳ ನಿಬದ್ಧ ರೂಪವನ್ನು ಪದಗಳಲ್ಲಿ ಕಾಣಿಸಿದರೆಂದೂ ಹೇಳಬಹುದು.

ಹಾಗೆಯೇ, ಸಾಧ್ಯವಿದ್ದ ಹಲವಾರು ತಾಳಗಳಲ್ಲಿ ರಂಜಕವಾದ, ರಾಗಭಾವದ ಪ್ರದರ್ಶನಕ್ಕೆ ಉಪಯುಕ್ತವಾದ ಏಳು ತಾಳಗಳನ್ನು ಮಾತ್ರ ಅವರು ಬಳಕೆಗೆ ತಂದು, ಸುಳಾದಿಗಳಲ್ಲಿ ಅವುಗಳ ಸ್ವಾರಸ್ಯವನ್ನು ಮನಗಾಣಿಸಿದರು. ಅವರಿಗೆ ಪ್ರಿಯವಾದುದು ಝಂಪೆ ತಾಳವೆಂದು ತೋರುತ್ತದೆ. ಆರಭಿ ರಾಗದ 'ಆಡಿದನೋ ರಂಗ' ಎಂಬ ಪದ ದಲ್ಲಿ ಇದರ ಸ್ಪಷ್ಟ ಉಲ್ಲೇಖವಿದೆ. ರಾಗ–ತಾಳಗಳು ಪುರಂದರದಾಸರ ಪದಗಳಲ್ಲಿ ಒದಗಿಬಂದಿದ್ದರೂ, ಸಾಹಿತ್ಯವೇ ಪ್ರಧಾನವಾದುದರಿಂದ ಇವುಗಳ ಮೇಲಾಟ ಅಷ್ಟಾಗಿ ಇಲ್ಲ. ಮೇಲಾಗಿ, ಹರಿದಾಸರ ವ್ಯವಹಾರಕ್ಕೆ ಅಗತ್ಯವೆನಿಸಿದ ಪದಗಳೇ ಬಹುಮಟ್ಟಿಗೆ ಇರುವುದರಿಂದ ಅವರಿಗೆ ಅನುಕೂಲವಾಗುವಷ್ಟು ಮಾತ್ರ ರಾಗ–ತಾಳ ಗಳ ಪ್ರಸಕ್ತಿ. ಹಲವು ಪದಗಳು ಸಂಗೀತವನ್ನೇ ಗಮನದಲ್ಲಿರಿಸಿಕೊಂಡು ರಚಿಸಿದುವು ; ಇವುಗಳಲ್ಲಿ ರಾಗ–ತಾಳಗಳ ಪ್ರೌಢಿಮೆಯನ್ನು ಗುರುತಿಸಬಹುದು. ಮತ್ತೆ ಕೆಲವು ಪದಗಳು ಸಾಂಪ್ರದಾಯಿಕ ನೃತ್ಯಪದ್ಧತಿಯನ್ನು ಅನುಸರಿಸಿ, ನೃತ್ಯಕ್ಕೆ ಒದಗುವಂತೆ ಇವೆ. 'ಆಡಿದನೋ ರಂಗ', 'ಕುಣಿದಾಡೋ ಕೃಷ್ಣ', 'ಹರಿ ಕುಣಿದ', 'ಕೃಷ್ಣ ಮೂರ್ತಿ ಕಣ್ಣಮುಂದೆ ನಿಂತಿದ್ದಂತಿದೆ', 'ಬಣ್ಣಿಸಿ ಗೋಪಿ ಹರಸಿದಳು', 'ಎಲ್ಲ್ಯಾಡಿ ಓಡಿ ಬಂದೆ ರಂಗಯ್ಯ', 'ಕೃಷ್ಣ ನೀ ಬೇಗನೆ ಬಾರೋ', 'ಕರುಣಾಕರ ನೀನೆಂಬುವು ದೇಕೋ', 'ಬಣ್ಣಿಸಿ ಗೋಪಿ ಹರಸಿದಳು', 'ಎಂದಪ್ಪಿಕೊಂಬೆ ರಂಗಯ್ಯನ', 'ಪೋಗದಿರೆಲೋ ರಂಗ ಬಾಗಿಲಿನಿಂದಾಚೆ', 'ಕರುಣಾಕರ ನೀನೆಂಬುವುದ್ಯಾಕೋ' ಇವೆಲ್ಲ ನಿದರ್ಶನಗಳು.

ಹೀಗೆ ಪುರಂದರದಾಸರ ಪದಗಳಲ್ಲಿ ಸಂಗೀತ, ನೃತ್ಯಗಳಿಗೆ ಸಂಬಂಧಪಟ್ಟಷ್ಟು ಮಾತ್ರ ಭಾಗವನ್ನು ಲಕ್ಷ್ಯಗಾನವೆಂದು ನಾವು ಎಣಿಸಬೇಕು. ಉಳಿದ ಪದಗಳಿಗೆ ಸಾಹಿತ್ಯದ ಮೌಲ್ಯವೇ ಹೆಚ್ಚಾದದ್ದು. ಪುರಂದರದಾಸರು ಲಕ್ಷಣ ಭಾಗದಲ್ಲಿ ಕರ್ನಾಟಕ ಸಂಗೀತಕ್ಕೆ ಸಲ್ಲಿಸಿದ ಸೇವೆಯನ್ನು ಕುರಿತು ಇಲ್ಲಿ ಪ್ರಸ್ತಾಪಮಾಡುವ ಅವಕಾಶವಿಲ್ಲ ; ಅದನ್ನು ಬೇರೆಡೆ ಮಾಡಿದ್ದೇನೆ. ಆದರೆ ಪುರಂದರದಾಸರ ಕಾಲದಲ್ಲಿ ಲಕ್ಷ್ಯ–ಲಕ್ಷಣ ಭಾಗಗಳಲ್ಲಿ ಹೊಂದಾಣಿಕೆ ಅಗತ್ಯವಾಗಿದ್ದಿತು ; ಇದನ್ನು ಅವರು ಪೂರಯಿಸಿದರು ಎಂದಷ್ಟು ಹೇಳಬೇಕು. ಹೀಗೆ ಪುರಂದರದಾಸರು ಲಕ್ಷ್ಯಲಕ್ಷಣ ಸಂಗತಿಯ ಕಡೆ ಗಮನ ಹರಿಸಿದುದು ವ್ಯಾಸರಾಯಸ್ವಾಮಿಗಳ ಸ್ಫೂರ್ತಿಯಿಂದಲೇ ಎಂಬುದನ್ನೂ ಕಾಣಿಸ ಬೇಕು. ಸ್ಫೂರ್ತಿಯೇನು, ಅವರ ಮಾರ್ಗದರ್ಶನದಲ್ಲೇ ಇದ್ದರೂ ಇದ್ದೀತು ಎಂಬು ದನ್ನು ಮೊದಲೇ ಹೇಳಿದ್ದೇನೆ.

ವ್ಯಾಸರಾಯಸ್ವಾಮಿಗಳಾಗಲಿ, ಪುರಂದರದಾಸರಾಗಲಿ ಶಾಸ್ತ್ರೀಯ ಸಂಗೀತ, ನೃತ್ಯ ಪ್ರಕಾರಗಳಲ್ಲಿ ವೈದುಷ್ಯವನ್ನು ಪಡೆದುಕೊಂಡಿದ್ದರಾದರೂ ಸ್ವಭಾವದಿಂದ

ಕವಿಗಳು, ತಾವು ಕೈಗೊಂಡ ಉದ್ಯಮದಿಂದ ಹರಿಭಕ್ತಿ ಪ್ರಚಾರಕರು. ಇದೇ ಅವರ ಬಾಳುವೆಯ ಮುಖ್ಯರಸ ; ಅವರ ಸಾರಸ್ವತ ವ್ಯವಸಾಯದ ಮುಖ್ಯ ಉದ್ದೇಶ. ಮಧ್ವಾಚಾರ್ಯರು ಯತಿಗಳಿಗೆ 'ಹರಿಸರ್ವೋತ್ತಮತ್ವವನ್ನು ಎಡೆ ಬಿಡದೆ ಜನರಲ್ಲಿ ಹರಡಿರಿ' ('ವಿಷ್ಣೋಃ ಸರ್ವೋತ್ತಮತ್ವಂ ಸರ್ವದಾ ಪ್ರತಿಪಾದಯ') ಎಂಬ ಆದೇಶವನ್ನು ನೀಡಿದ್ದರು. ಭಗವತ್ಪ್ರಸಾದದ ಪ್ರಾಪ್ತಿಗೆ ಭಕ್ತಿಯೇ ಮುಖ್ಯ ಸಾಧನೆ, ಅದಕ್ಕೆ ವಿರಕ್ತಿ ನೆರವಾಗುತ್ತದೆ ಎಂದೂ ಅವರ ನಿಲುವಿದ್ದಿತು. ವ್ಯಾಸ ರಾಯಸ್ವಾಮಿಗಳು ಯತಿಗಳಾಗಿ ತಮ್ಮ ಪರಂಪರೆಯ ಪೂರ್ವಾಚಾರ್ಯರ ಆದೇಶವನ್ನು, ತಮ್ಮ ಸ್ವಭಾವಕ್ಕೆ ಅನುಗುಣವಾಗಿ, ಪಾಲಿಸಿದರು. ಇದೇ ಕೆಲಸವನ್ನು ಆಶ್ರಮಸಂನ್ಯಾಸಿಗಳಿಗಿಂತ ಹೆಚ್ಚು ಪ್ರಭಾವಶಾಲಿಯಾಗಿ ಗೃಹಸ್ಥ ಸಂನ್ಯಾಸಿಗಳು ನಡೆಸಿಯಾರೆಂದು ಭಾವಿಸಿ ಹರಿದಾಸಪಂಥವನ್ನು ಪ್ರೋತ್ಸಾಹಿಸಿದರು. ಹರಿದಾಸರು ದಿಟವಾಗಿ ವಿರಕ್ತ ಸಂಸಾರಿಗಳು, ಗೃಹಸ್ಥ ಸಂನ್ಯಾಸಿಗಳು ; ಲೋಕವ್ಯವ ಹಾರದಲ್ಲಿ ಇದ್ದೂ ಇರದವರು. ಈ ಪಂಥಕ್ಕೆ ಎಲ್ಲ ಕಾಲಕ್ಕೂ ಪ್ರತಿನಿಧಿಯಾಗಿ ಇರು ವವರು ಪುರಂದರದಾಸರು. ಅವರ ನಂತರ ಯಾವ ಹರಿದಾಸರೂ ಆ ಮಟ್ಟವನ್ನು ಮುಟ್ಟಲಿಲ್ಲ. ಹಾಗೆಂದೇ ಅವರು ಭೂಮಿಯ ಮೇಲೆ ಕಾಣಿಸಿಕೊಂಡು ಐನೂರು ವರ್ಷಗಳು ಕಳೆದರೂ ಇಂದಿಗೂ ಅವರನ್ನು ಕುರಿತು ಹೀಗೆ ಹೇಳುವುದು ಉಳಿದಿದೆ—

'ಪುರಂದರಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಂ'

ಭಾಗ ೧

ಕೃಷ್ಣಲೀಲೆ

ಗೋಪಿಯರ ಕಾಮನೆ
ಯಶೋದೆಯ ಭಾಗ್ಯ
ತುಂಟಾಟಕ್ಕೆ ದೂರು
ಕೃಷ್ಣನಿಗಾಗಿ ಹುಡುಕಾಟ
ಯಶೋದೆಯ ಮುದ್ದಾಟ
ಕೃಷ್ಣನ ಅಳಲು
ಗೀತನರ್ತನಲೀಲೆ
ಜೋಗುಳ-ಶೋಭನ

ಕೃಷ್ಣಲೀಲೆ

ದಾಸಸಾಹಿತ್ಯದಲ್ಲಿ ಕೃಷ್ಣನ ಬಾಲಲೀಲೆಗಳ ಪ್ರಸಕ್ತಿ ಹೆಚ್ಚು. ಬಹುಮಟ್ಟಿಗೆ ಭಾಗವತ ದಶಮಸ್ಕಂಧದಿಂದ ಆಯ್ದುಕೊಂಡ ವಿವರಗಳೇ. ಈ ಪ್ರಸಕ್ತಿಯು ಶ್ರೀಪಾದರಾಜರಿಂದ ತೊಡಗಿದಂತೆ ತೋರುತ್ತದೆ. ಅವರ ಶಿಷ್ಯರಾದ ವ್ಯಾಸರಾಯಸ್ವಾಮಿಗಳೂ ಕೃಷ್ಣಲೀಲೆಯನ್ನು ಕುರಿತಂತೆ ಹಲವಾರು ರಚನೆಗಳನ್ನು ಮಾಡಿದರು. ಅವರ ಇಷ್ಟ ದೈವವೇ ಕೃಷ್ಣನೆಂದ ಮೇಲೆ ಹೇಳುವುದೇನು ? ಪುರಂದರದಾಸರು ಅವರಿಂದಲೇ ಪ್ರೇರಣೆಯನ್ನು ಪಡೆದುಕೊಂಡದ್ದು ಸ್ಪಷ್ಟವಾಗಿದೆ. ಆದರೆ ಪುರಂದರದಾಸರು ಕೃಷ್ಣಲೀಲೆಯನ್ನು ಕುರಿತಂತೆ ರಚಿಸಿದ ಪದಗಳ ಹರವು ಹೆಚ್ಚು ; ವಸ್ತುವೈವಿಧ್ಯವೂ ಹೆಚ್ಚು. ಕೆಲವು ತುಂಬ ಸುಂದರವಾದ ಕವಿತೆಗಳು. ಕೆಲವು ಗೀತಿಕೆಗಳಲ್ಲಿ ಸಂಗೀತ, ನೃತ್ಯಗಳ ಪ್ರಕ್ರಿಯೆಗಳನ್ನು ಸ್ವಾರಸ್ಯವಾಗಿ ಅಳವಡಿಸಿಕೊಂಡಿದ್ದಾರೆ. ಸಂಗೀತಕ್ಕೆ ಸಂಬಂಧಿಸಿದ ಕೆಲವು ಇತರ ಕೃತಿಗಳನ್ನೂ ಈ ವಿಭಾಗದಲ್ಲೇ ಸೇರಿಸಲಾಗಿದೆ.

ಮುಂದಿನ ಸಂಗ್ರಹದಲ್ಲಿ ಪದಗಳ ಕ್ರಮ ಈ ರೀತಿಯಿದೆ—

೧. ಗೋಪಿಯರು ಕೃಷ್ಣನನ್ನು ಬಯಸುವುದು (೧–೩೨);
೨. ಗೋಪಿಯರು ಯಶೋದೆಯ ಭಾಗ್ಯವನ್ನು ಹಾಡಿ ಹೊಗಳುವುದು (೩೩–೩೯);
೩. ಕೃಷ್ಣನ ತುಂಟಾಟವನ್ನು ಕಂಡು ಗೋಪಿಯರ ದೂರು (೪೦–೫೪);
೪. ಯಶೋದೆ ಅವರನ್ನು ಸಮಾಧಾನಗೊಳಿಸುವುದು (೫೫);
೫. ಯಶೋದೆ ಕೃಷ್ಣನನ್ನು ಹುಡುಕಾಡುವುದು (೫೬–೬೦);
೬. ಯಶೋದೆ ಕೃಷ್ಣನನ್ನು ಮುದ್ದಾಡುವುದು (೬೧–೭೮);
೭. ಯಶೋದೆಯ ಮುಂದೆ ಕೃಷ್ಣನು ತನ್ನ ಅಳಲನ್ನು ತೋಡಿಕೊಳ್ಳುವುದು (೭೯–೮೭);
೮. ಗೀತನರ್ತನ ಲೀಲೆ (೮೮–೯೫);
೯. ಜೋಗುಳ ಪದಗಳು (೯೬–೧೦೧);
೧೦. ಶೋಭನ ಪದ (೧೦೨).

೧. ಗೋಪಿಯರು ಕೃಷ್ಣನನ್ನು ಬಯಸುವುದು

೧

ಕಾಂಬೋದಿ — ಆದಿ

ಅಂಗನೆಯರೆಲ್ಲ ನೆರೆದು ಚಪ್ಪಾಳಿಕ್ಕುತ, ದಿವ್ಯ ಪ

ಮಂಗಳ ನಾಮವ ಪಾಡಿ ರಂಗನ ಕುಣಿಸುವರು ಅ

ಪಾಡಿ ಮಲ್ಹಾರಿ ಭೈರವಿ ಸಾರಂಗಿ ದೇಶಿ
ಗುಂಡಕ್ರಿಯೆ ಗುರ್ಜರಿ ಕಲ್ಯಾಣಿ ರಾಗದಿ
ತಂಡ ತಂಡದಲಿ ನೆರೆದು ರಂಗನ ಉಡಿಯ ಘಂಟೆ
ಘಣ್ಘಣ್ಘಣ್ಘಣಿರೆಂದು ಹಿಡಿದು ಕುಣಿಸುವರು ೧

ತಿತ್ತಿರಿ ಮೌಳಿ ತಾಳದಂಡಿಗೆ ಮದ್ದಲೆ
ಉತ್ತಮದ ಶಂಖ ಶಬ್ದ ನಾದಗಳಿಂದ
ಸುತ್ತ ಮುತ್ತಿ ನಾರಿಯರು ತಥೈ ತಥೈ ಥಾಯೆಂದು
ಅರ್ಥಿಯಿಂದ ಕುಣಿಸುವರು ಪರವಸ್ತುವ ಹಿಡಿದು ೨

ಕಾಮಿನಿಯರೆಲ್ಲ ನೆರೆದು ಕಂದನಾಟಗಳನಾಡಿ
ಪ್ರೇಮದಿಂದ ಬಿಗಿ ಬಿಗಿದಪ್ಪಿ ಮುದ್ದಾಡಿ
ಕಾಮಿತ ಫಲವೀವ ಭಕುತಜನರೊಡೆಯ
ಸ್ವಾಮಿ ಶ್ರೀ ಪುರಂದರವಿಠಲರಾಯನ್ನ ೩

ಅರ್ಥಿಯಿಂದ—ಪ್ರೀತಿಯಿಂದ.
ಪರವಸ್ತುವ—ಪರಮಾತ್ಮನನ್ನು.

ಕಲ್ಯಾಣಿ ತ್ರಿವಿಡೆ

ಪಿಳ್ಳಂಗೋವಿಯ ಚೆಲ್ವ ಕೃಷ್ಣನ
ಎಲ್ಲಿ ನೋಡಿದಿರಿ, ರಂಗನ ಎಲ್ಲಿ ನೋಡಿದಿರಿ ಪ

ಎಲ್ಲಿ ನೋಡಿದರಲ್ಲಿ ತಾನಿಲ್ಲದಿಲ್ಲವೆಂದು ಬಲ್ಲ ಜಾಣರು ಅ

ನಂದಗೋಪನ ಮಂದಿರಂಗಳ ಸಂದುಗೊಂದಿನಲಿ
ಚೆಂದ ಚೆಂದದ ಗೋಪಬಾಲರ ವೃಂದವೃಂದದಲಿ
ಸುಂದರಾಂಗದ ಸುಂದರಿಯರ ಹಿಂದುಮುಂದಿನಲಿ
ಅಂದದಾಕಳ ಕಂದಕರುಗಳ ಮಂದೆ ಮಂದೆಯಲಿ ೧

ಶ್ರೀ ಗುರೂಕ್ತ ಸದಾ ಸುಮಂಗಳ ಯೋಗ ಯೋಗದಲಿ
ಆಗಮಾರ್ಥದೊಳಗೆ ಮಾಡುವ ಯಾಗ ಯಾಗದಲಿ
ಶ್ರೀಗೆ ಭಾಗ್ಯನಾಗಿ ವರ್ತಿಪ ಭೋಗ ಭೋಗದಲಿ
ಭಾಗವತರು ಸದಾ ಬಾಗಿ ಪಾಡುವ ರಾಗ ರಾಗದಲಿ ೨

ಈ ಚರಾಚರದೊಳಗೆ ಜನಂಗಳಾಚೆ ಈಚೆಯಲಿ
ಖೇಚರೇಂದ್ರನ ಸುತನ ರಥದ ಚೌಕ ಪೀಠದಲಿ
ನಾಚದೆ ಮಾಧವ ಎಂಬ ಭಕ್ತರ ವಾಚಕಂಗಳಲಿ
ವೀಚುಕೊಂಡದ ಪುರಂದರವಿಠಲನಲೋಚನಾಗ್ರದಲಿ ೩

ಪಿಳ್ಳಂಗೋವಿ—ಕೊಳಲು.
ಆಗಮಾರ್ಥದೊಳಗೆ—ಆಗಮಗಳಲ್ಲಿ ಹೇಳಿರುವ ವಿಧಿಯಲ್ಲಿ.
ಶ್ರೀಗೆ—ಲಕ್ಷ್ಮಿಗೆ.
ಖೇಚರೇಂದ್ರನ ಸುತ—ಇಂದ್ರನ ಮಗನಾದ ಅರ್ಜುನ.
ಭಕ್ತರ ವಾಚಕಂಗಳಲಿ—ಭಕ್ತರು ಸಲ್ಲಿಸುವ ಪ್ರಾರ್ಥನೆಗಳಲ್ಲಿ.
ವೀಚುಕೊಂಡದ—ಮರೆಯಾಗದೆ ಇರುವ.
ಲೋಚನಾಗ್ರ—ಕಣ್ಣಿನ ಕೊನೆ ; ಕಡೆಗಣ್ಣಿನ ನೋಟ.

ಭೈರವಿ ಆದಿ

ಓಡಿ ಬಾರೊ ಶ್ರೀ ವೈಕುಂಠಪತಿ
ನಿನ್ನ ನೋಡುವೆ ಮನದಣಿಯೆ ಪ

ನೋಡಿ ಮುದ್ದಾಡಿ ಮಾತಾಡಿ ಸಂತೋಷಗೂಡಿ
ಪಾಡಿ ಪೊಗಳುವೆನು ಪರಮಪುರುಷ ಹರಿ ಅ

ಕೆಂದಾವರೆ ಪೋಲ್ವ ಪಾದಗಳಿಂದ ರಂಗ
ಧಿಂಧಿಮಿಧಿಮಿಕೆಂದು ಕುಣಿಯುತಲಿ
ಅಂದಿಗೆ ಕಿರುಗೆಜ್ಜೆ ಘಲುಘಲುರೆನ್ನುತ
ಚಂದದಿ ಪೀತಾಂಬರ ನಲಿದಾಡುತ ೧

ಕೋಟಿ ಸೂರ್ಯ ಪ್ರಕಾಶದಂತೆ, ಕಿ
ರೀಟ ಕುಂಡಲ ಬಾವುಲಿ ಪೊಳೆಯೆ, ಲ
ಲಾಟದಿ ಕಸ್ತೂರಿ ತಿಲಕವಿಡುವೆ ರಂಗ
ಕೂಟ ಗೋಪಾಲರ ಆಟ ಸಾಕೊ ಈಗ ೨

ಎಣ್ಣೂರಿಗತಿರಸ ದಧಿ ಘೃತವೊ ರಂಗ
ಎನ್ನಯ್ಯ ನಿನಗೆ ಕೊಡುವೆ ಬಾರೊ
ಚಿಣ್ಣರ ಒಡನಾಟ ಸಾಕು ಬಿಡೋ ರಂಗ
ಬೆಣ್ಣೆಯ ಮೆಲುವುದು ಬೇಡ ಎನ್ನ ಕಂದ ೩

ತುರುಬಿನ ಮೇಲೆ ನಲಿಯುತಲಿರುತಿಹ
ಮರುಗ ಮಲ್ಲಿಗೆ ಜಾಜಿ ತುಲಸಿಯ ದಂಡೆ
ಕರದಲಿ ಪಿಡಿದು ಪೊಂಗೊಳಲನೆ ಊದುತ
ಸರಸದಿಂದಲಿ ನೀ ನಲಿನಲಿದಾಡುತ ೪

ಮಂಗಳಾತ್ಮಕ ಮೋಹನಕಾಯ ರಂಗ
ಸಂಗೀತಲೋಲ ಸದ್ಗುಣ ಶೀಲ
ಅಂಗನೆಯರಿಗೆಲ್ಲ ಅತಿ ಪ್ರಿಯನಾದ, ಶು
ಭಾಂಗ ಪುರಂದರವಿಠಲರಾಯ ೫

೪

ಜುಲಾಪ್ ಅಟ್ಟ

ಯಾದವ ನೀ ಬಾ ಯದುಕುಲ ನಂದನ
ಮಾಧವ ಮಧುಸೂದನ ಬಾರೊ ಪ

ಸೋದರಮಾವನ ಮಧುರೆಲಿ ಮಡುಹಿದ ಯ
ಶೋದೆ ನಂದನ ನೀ ಬಾರೊ ಅ

ಕಣಕಾಲಂದಿಗೆ ಘಲುಘಲುರೆನುತಲಿ
ಝುಣಝುಣ ವೇಣುನಾದದಲಿ
ಚಿಣಿಕೋಲ್ ಚೆಂಡು ಬುಗುರಿಯನಾಡುತ
ಸಣ್ಣ ಸಣ್ಣ ಗೋವಳರೊಡಗೂಡಿ ೧

ಶಂಖ ಚಕ್ರವು ಕೈಯಲಿ ಹೊಳೆಯುತ
ಬಿಂಕದ ಗೋವಳ ನೀ ಬಾರೊ.
ಅಕಳಂಕ ಚರಿತನೆ ಆದಿನಾರಾಯಣ
ಬೇಕೆಂಬ ಭಕ್ತರಿಗೊಲಿ ಬಾರೊ ೨

ಖಗವಾಹನನೆ ಬಗೆಬಗೆಯಿಂದಲಿ
ನಗೆಮೊಗದರಸನೆ ನೀ ಬಾರೊ
ಜಗದೊಳು ನಿನ್ನಯ ಮಹಿಮೆಯ ಪೊಗಳುವೆ
ಪುರಂದರವಿಠ್ಠಲ ನೀ ಬಾರೊ ೩

ಸೋದರಮಾವನ—ಕಂಸನನ್ನು.

ಖಗವಾಹನ—ಗರುಡ ವಾಹನ.

೫

ಮೋಹನ ಆದಿ

ನಂದನಂದನ ಬಾರೊ ಎನಗೆ ನಿನ್ನ ಪ
ಸೌಂದರ್ಯ ಲೀಲೆಯು ತೋರೊ ಅ

ಕೊಳಲನೂದುವ ಚಂದದಿ
ಹಣೆಯಲ್ಲಿ
ಸುಳಿಗೂದಲಾಡುವಂದದಿ
ತುಳಸೀ ಪುಷ್ಪದ ಬೃಂದದಿ
ಪುರದಾಚೆಯಲಿ
ನಲಿದಾಡುವಂದದಿ
ಘಲ ಘಲ ಘಲ ಘಲ ನಲಿವ ಕುಂಡಲ ನಿಜ
ತೋಳುಗಳೊಪ್ಪುವ ಬಾಪುರಿಗಳಿಂದ
ಥಳ ಥಳ ಥಳ ಥಳ ಕಾಂತಿಗಳಿಂದ ೧

ಮಣಿಯಿಲ್ಲದ ಕೌಸ್ತುಭದಿ
ಎಸೆವ ಮುಕುಟ
ಮಣಿಹಾರ ಶ್ರೀವತ್ಸಾದಿ
ಮಣಿಮಯ ಕಿರೀಟದಿ
ಅಂದದೊಪ್ಪುವ ಅ
ಗಣಿತ ಮಹತೇಜದಿ
ಝಣ ಝಣ ಝಣ ಝಣ ಝಂ ಪರಿಮಳದಿ
ಕಿಣಿ ಕಿಣಿ ಕಿಣಿ ಕಿಣಿ ಕಿಂಕಿಣಿ ರವದಿಂದ
ಠಣ ಠಣ ಠಣ ಠಣ ಉಡುರ್ಝುಂಗೆಗಳಿಂದ ೨

ಅಮಿತ ಜಯ ಪಾಂಡುರಂಗ
ವಿಜಯಭಾವ
ಅಮರೇಶ ನಿಕರತುಂಗ
ವಿಮಲ ಪುರಿ ಅಂತರಂಗ
ಪುರಂದರವಿಠಲೇಶ ನಿಕರತುಂಗ
ಘಮ ಘಮ ಘಮ ಘಮ
ಘಮ ಪರಿಮಳದಿ
ಅಮರರು ಮೃದಂಗ ತಾಳಗಳಿಂದ
ಧಿಮಿ ಧಿಮಿ ಧಿಮಿ ಧಿಮಿ
ಧಿಂ ಧಿಂ ಎನ್ನುತ ೩

೬

ಕಾಂಬೋದಿ ಆದಿ

ಕೊಳಲನೂದುತ ಬಂದ
ನಮ್ಮ ಗೋಪಿಯ ಕಂದ
ಕೊಳಲನೂದುವದು ಬಲು ಚಂದ ಪ

ಆ ವಸುದೇವನ ಕಂದ ಇವ ನೋಡೆ
ದೇವಕಿ ಬಸಿರೊಳು ಬಂದ
ಮಾವ ಕಂಸನ ಕೊಂದ
ಭಾವಜನಯ್ಯ ಮುಕುಂದ ೧

ಮುತ್ತಿನಾಭರಣ ತೊಟ್ಟು
ಹಸ್ತದಿ ಕೊಳಲ ಕೊಟ್ಟು
ಕಸ್ತೂರಿ ತಿಲಕವನಿಟ್ಟು
ತುತ್ತುರ ತುರರೆಂಬ ನಾದವ ಪಿಡಿಯೆ ೨

ಹಿಂದೆ ಗೋವುಗಳ ಹಿಂಡು
ಮುಂದೆ ಗೋಪಾಲರ ದಂಡು
ಹಿಂದಕ್ಕೆ ದೈತ್ಯರ ಕೊಂದ ಪು
ರಂದರವಿಠಲನ ಚಂದ ೩

ಭಾವಜನಯ್ಯ—ಮನ್ಮಥನ ತಂದೆ.
ಹಿಂದಕ್ಕೆ—ಪ್ರಾಚೀನಕಾಲದಲ್ಲಿ.

ನವರೋಜು ಏಕ

ಇಕೋ ನವನೀತಚೋರ ಸಿಕ್ಕಿದನಮ್ಮ
ಮಕ್ಕಳೆಲ್ಲರು ಕೂಡಿ ನಮ್ಮಕ್ಕರೆ ತೀರಿಸಿಕೊಂಬ ಪ

ಅಂದು ಮೊದಲಾದ ನಮ್ಮ ಮಂದಿರಗಳಲ್ಲಿ ಪೊಕ್ಕು
ತಿಂದ ಮೀಸಲು ಬೆಣ್ಣೆ
ದಂಗೆ ಮಾಡಿ ಪೋದನಕ್ಕ ಬಹು
ದಂಗೆ ಮಾಡಿ ಪೋದನಕ್ಕ ೧

ಗಾಢದಿಂದಲಿವನ ಹೆಡೆಮುಡಿಯ ಬಿಗಿದು ಕಟ್ಟಿ
ಓಡಿಹೋದರೆ ಸಿಕ್ಕ ಕಿಡಿ–
ಗೇಡಿ ರಂಗನ ಬಿಡಬೇಡಿ ಕಿಡಿ–
ಗೇಡಿ ಕೃಷ್ಣನ ಬಿಡಬೇಡಿ ೨

ಯಾರು ಇಲ್ಲದ ವೇಳೆಯಲಿ ದಾರಿಯ ನೋಡುತ್ತಲಿವ
ಸೂರೆಮಾಡುವ ಹಾಲುಂಮೊಸರು
ಚೋರ ರಂಗನ ಬಿಡಬೇಡಿರೆ
ಧೀರ ಕೃಷ್ಣನ ಬಿಡಬೇಡಿರಿ ೩

ಗಂಡನಿಲ್ಲದ ವೇಳೆ ನೋಡಿ
ಭಂಡುಮಾಡಿ ಸೀರೆ ಕದ್ದು
ಕೊಂಡು ಹಾಲು ಕೆನೆಯ ಕದ್ದ
ಲಂಡ ರಂಗನ ಬಿಡಬೇಡಿರೆ
ಪುಂಡ ಕೃಷ್ಣನ ಬಿಡಬೇಡಿರಿ ೪

ಕಾದು ಕೊಂಡಿವ ಬಾಹೊ
ಹಾದಿಯ ನೋಡಿ ನಾ ದಣಿದೆ
ಆದುದಮ್ಮಯ್ಯ ಕಾಮ ಸಾಧಿಸಿಕೊಂಬ
ಕ್ರೋಧ ಸಾಧಿಸಿಕೊಂಬ ೫

ಒರಳೆಲಿ ಕಟ್ಟಿಸಿಕೊಂಡು
ಒರಳ ಕೊಂಡಾಡುವನಿಂಥ
ದುರುಳ ಕೃಷ್ಣನ ಬಿಡಬೇಡಿ
ಮರುಳು ಮಾಡಿ ಹೋದನಮ್ಮ
ಬಹು ಮೋಸಮಾಡಿ ಹೋದನಮ್ಮ ೬

ಇಂದಿನ ದಿನ ಸುದಿನ
ಮಂದರಧರ ದೊರೆತ ಕಾರಣ
ತಂದೆ ಪುರಂದರವಿಠಲನ್ನ ಅಪ್ಪಿಕೊಂಬ
ಸಂತೋಷದಿಂದ ಅಪ್ಪಿಕೊಂಬ ೭

ಮುಖಾರಿ ಅಟ್ಟ

ಮಕ್ಕಳ ಮಾಣಿಕವೆ ಮನೋಹರ ನಿಧಿಯೆ ವೈರಿ
ರಕ್ಕಸ ಶಕಟನ ತುಳಿದುದೀ ಪಾದವೆ ಪ

ಬಲಿಯು ದಾನವ ಬೇಡಿ ನೆಲನ ಈರಡಿ ಮಾಡಿ
ಜಲಧಿಯ ಪಡೆದದ್ದೀ ಪಾದವೆ ಕೃಷ್ಣ
ಹಲವು ಕಾಲಗಳಿಂದ ಶಿಲೆ ಶಾಪ ಪಡೆದಿರಲು
ಫಲಕಾಲಕ್ಕೊದಗಿದ್ದುದೀ ಪಾದವೆ ಕೃಷ್ಣ ೧

ಕಡು ಕೋಪದಿಂದ ಕಾಳಿಂಗನ ಮಡುವ ಕಲಕಿ
ಹೆಡೆಯನ್ನು ತುಳಿದದ್ದೀ ಪಾದವೆ ಕೃಷ್ಣ
ಸಡಗರದಿ ಕೌರವನ ಸಿಂಹಾಸನವನು
ಹೊಡೆ ಮಗುಚಿ ಕೆಡಹಿದ್ದೀ ಪಾದವೆ ಕೃಷ್ಣ ೨

ಶೃಂಗಾರದಿಂದಾರು ಹೆಂಗಳ ಸಹಿತ ಶ್ರೀ
ಅಂಗನೆಯೊತ್ತುವುದೀ ಪಾದವೇ ಕೃಷ್ಣ
ಸಂಗ ಸುಖದಿ ಶ್ರೀ ಪುರಂದರವಿಠಲನ
ಅಂಗದೊಳಡಗಿದ್ದುದೀ ಪಾದವೆ ಕೃಷ್ಣ ೩

ಶಕಟನ—ಶಕಟಾಸುರನನ್ನು ; ಕಂಸನ ಬಂಟನಾಗಿದ್ದ ಈ ರಾಕ್ಷಸನು ಬಂಡಿಯ ರೂಪದಿಂದ ಕೃಷ್ಣನನ್ನು ಕೊಲ್ಲಲು ಹೋದಾಗ ಮಗುವಾಗಿದ್ದ ಕೃಷ್ಣನು ತನ್ನ ಅಂಗಾಲಿಂದಲೇ ಒದ್ದು ಇವನನ್ನು ಕೊಂದನು.

ಜಲಧಿಯ—ಗಂಗೆಯನ್ನು (ತ್ರಿವಿಕ್ರಮಾವತಾರದಲ್ಲಿ).

ಶಿಲೆ—ಅಹಲ್ಯೆ (ರಾಮಾವತಾರದಲ್ಲಿ).

ಫಲಕಾಲಕ್ಕೆ—ಶಾಪವಿಮೋಚನೆಯ ಕಾಲಕ್ಕೆ.

ಸಡಗರದಿ...—ಪಾಂಡವರ ದೂತನಾಗಿ ಕೃಷ್ಣನು ದುರ್ಯೋಧನನ ಆಸ್ಥಾನಕ್ಕೆ ಹೋಗಿದ್ದಾಗ, ಸಿಂಹಾಸನದ ಮೇಲೆ ಸೊಕ್ಕಿನಿಂದ ಕೂತಿದ್ದ ದುರ್ಯೋಧನನು ಕೃಷ್ಣನನ್ನು ಮೂದಲಿಸಲು, ಕೃಷ್ಣನು ತನ್ನ ಬಲಗಾಲನ್ನು ಭೂಮಿಗೆ ಒತ್ತಿದೊಡನೆ, ಭೂಮಿ ನಡುಗಿ ದುರ್ಯೋಧನನು ಕೂತಿದ್ದ ಸಿಂಹಾಸನವು ಅಲುಗಾಡಿ ದುರ್ಯೋಧನನು ಕೆಳಗೆ ಬಿದ್ದ ಸಂದರ್ಭ.

ಆರು ಹೆಂಗಳ—ಕೃಷ್ಣನ ಷಣ್ಮಹಿಷಿಯರು (ಜಾಂಬವತಿ, ಭದ್ರಾ, ನೀಲಾ, ಕಾಳಿಂದಿ, ಮಿತ್ರವಿಂದಾ, ಲಕ್ಷಣಾ).

ಅಂಗದೊಳಗೆ—ಲಿಂಗದೇಹದಲ್ಲಿ.

ಪೂರ್ವಕಲ್ಯಾಣಿ ಆದಿ

ಹಿಡಕೋ ಬಿಡಬ್ಯಾಡ, ರಂಗಯ್ಯನ ಪಾದ ಪ

ಹಿಡಕೋ ಬಿಡಬ್ಯಾಡ, ಕೆಡುಕ ಕಾಳಿಂಗನ
ಮಡುವಿನೊಳು ಧುಮುಕಿ ಕುಣಿದಾಡೋ
ಕೃಷ್ಣನ ಪಾದ ಪ

ಪುಟ್ಟಿದಾಗಲೆ ಇವ ದುರ್ಜನನೆನುತಲಿ
ಅಟ್ಟಿದರಾಗಲೆ ತಾಯ್ತಂದೆಯರು
ಮುಟ್ಟಿ ತನಗೆ ಮೊಲೆಗೊಟ್ಟವಳ ಮಡುಹಿದ
ದುಷ್ಟ ಕೃಷ್ಣನ ಹೋಗಬಿಟ್ಟರೆ ಸಿಕ್ಕನು ೧

ಒಪ್ಪೊತ್ತನ್ನಕೆ ನಡೆದರೆ ಬಂಡಿಯು
ನುಚ್ಚುನೂರು ಮಾಡಿ ಕಾಲಲಿ ಒದ್ದನ
ಶಿಕ್ಷಿಸಲು ಜೋಡು ವೃಕ್ಷವ ತರಿದಿಟ್ಟ
ರಚ್ಚೆಗಾರನೆಂದು ಬೆಚ್ಚದೆ ಜಗದೊಳು ೨

ಇದ್ದಲ್ಲಿ ಇರನಿವ ಬುದ್ಧಿ ಎಳ್ಳಷ್ಟಿಲ್ಲ
ಹದ್ದನೇರಿ ತಿರುಗಾಡುವನು
ಮೆದ್ದೆಯಾತಕೆ ಮಣ್ಣ ತೆಗೆ ಬಾಯೆಂದರೆ
ಆದ್ಯಂತ ಜಗವನು ತೋರಿ ಅಂಜಿಸಿದನ ೩

ಮಕ್ಕಳೊಳಗೆ ಪುಂಡ ಮನೆಮನೆಗಳ ಪೊಕ್ಕು
ಸಕ್ಕರೆ ನೊರೆಹಾಲು ಸವಿಸವಿದು
ಬೆಕ್ಕಿನ ಮೇಲಿಟ್ಟು ಬೆಣ್ಣೆಯ ತಾ ಮೆದ್ದು
ಸಿಕ್ಕದೆ ಜಿಗಿದೋಡಿ ಪೋಗುವ ಕಳ್ಳನ ೪

ಸಾರಹೃದಯನಲ್ಲ ಭಾರಿಯ ಗುಣವಿಲ್ಲ
ಆರ ಮಾತನು ಇವ ಲೆಕ್ಕಿಸನು
ನೀರೊಳಗಿಳಿದು ನಾರೇರ ಸೀರೆಯ ಕದ್ದು
ಹಾರಿ ಹೊನ್ನೆಯ ಮರವೇರಿದ ಕೃಷ್ಣನ ೫

ಕಾಳೆರಕ್ಕಸರೊಳು ಕದನ ಬೇಡೆಂದರೆ
ಹೇಳಿದ ಹಾಗೆ ಕೇಳುವನಲ್ಲ
ಕೂಡೆ ಆಡುವ ಮಕ್ಕಳೆಂಜಿಕೊಂಡರಾಗ
ಗಾಡಿಯು ಮುರಿದಿಟ್ಟ ಗೈಯ್ಯಾಳಿ ರಂಗನ ೬

ಜೀರಿಗೆ ಬೆಲ್ಲವ ಪಿಡಿದಂಬಿಕೆಯನು
ಸಾರಿಬಂದ ರುಗ್ಮಿಯನು ಕೊಂದು
ಹೋರಬೇಡೆಂದರೆ ರುಕ್ಮನ ಹೆಡಗೆಯ್ಯ
ತೇರಿಗೆ ಬಿಗಿದಂಥ ಚೋರ ಕೃಷ್ಣನ ಪಾದ ೭

ಅಟ್ಟಿಹಾಯುವ ಏಳು ಗೂಳಿಗಳನ್ನು
ಕಟ್ಟಿ ಸತ್ರಾಜಿತಗೆ ರತ್ನವನಿತ್ತು
ಅಷ್ಟಮಹಿಷಿಯರ ಅರ್ಥಿಯ ಸಲಿಸಿದ
ಸೃಷ್ಟಿಗೊಡೆಯ ಶ್ರೀಕೃಷ್ಣನ ಪಾದವ ೮

ಇರುಳೊಳು ಹೆಂಗಳ ಕೂಡಿ ಆಡುತಲಿ
ವರ ಯಮುನೆಯ ತೀರದಿ ನಿಂತ
ಬರಿಮಾತಿಲ್ಲದೆ ಹದಿನಾರು ಸಾವಿರ ತರಳೇರ
ಮರುಳುಮಾಡಿದ ಈ ಮದನ ಗೋಪಾಲನ ೯

ಫಕ್ಕನೆ ಮಧುರೆಗೆ ಪೋಗಿ ಬರುವೆನೆಂದು
ಅಕ್ಕಯ್ಯ ಗೋಪಿಗೆ ಪೇಳುತಲಿದ್ದ
ಫಕ್ಕನೆ ಬಲರಾಮನೊಡಗೂಡಿ ರಥವೇರಿ
ಸಿಕ್ಕದೆ ಹೋಗುವ ಅಕ್ರೂರ ವರದನ ೧೦

ಆನೆಯ ಮಡುಹಿದ ಅಗಸನ ಕೆಡಹಿದ
ತಾನರಸಗೆ ತಂದ ಹೂವನೆ ಮುಡಿದ
ಮಾನಿನಿ ಕುಬುಜೆಗೊಲಿದು ಗಂಧ ಧರಿಸಿದ
ಗಾನವಿನೋದಿ ಶ್ರೀ ಲಕುಮಿಯ ಅರಸನ ೧೧

ಮಲ್ಲರನೆಲ್ಲರ ಚೆಲ್ಲಾಡಿ ಕೆಡಹಿದ
ಬಿಲ್ಲುಮುರಿದು ಮಾವನ ಮಡುಹಿ
ನಿಲ್ಲದೆ ದೇವಕಿ ಸೆರೆಯನು ಬಿಡಿಸಿದ
ಫುಲ್ಲಲೋಚನ ಶ್ರೀಕೃಷ್ಣನ ಪಾದವ ೧೨

ನರಕುರಿಗಳನೆಲ್ಲ ಭರದಿ ರಕ್ಷಿಪುದಕೆ
ಪರಮಪಾವನನಾಮ ಇದು ಸಾಲದೆ
ಕರಿ ಧ್ರುವ ಬಲಿ ಪಾಂಚಾಲಿಗೆ ವರವಿತ್ತ
ಪುರಂದರವಿಠಲನ ಚರಣ ಕಮಲವನು ೧೩

ಮೊಲೆಗೊಟ್ಟವಳ—ಪೂತನಿಯನ್ನು.
ಬಂಡಿಯ—ಶಕಟಾಸುರನನ್ನು.
ಜೋಡುವೃಕ್ಷ—ಯಮಳಾರ್ಜುನರು.
ರಚ್ಚೆಗಾರ—ಹಟಮಾರಿ.
ಹದ್ದನೇರಿ—ಗರುಡವಾಹನನಾಗಿ.
ಮೆದ್ದೆಯಾತಕೆ ಮಣ್ಣ... —ಮಗುವಾಗಿ ಆಟವಾಡುತ್ತಿದ್ದ ಬಲರಾಮನು ತಾಯಿಯ ಬಳಿಗೆ ಹೋಗಿ "ಕೃಷ್ಣನು ಮಣ್ಣು ತಿನ್ನುತ್ತಿದ್ದಾನೆ" ಎಂದು ದೂರಿದ, ತಾಯಿ ಕೃಷ್ಣನ ಬಳಿ ಬಂದು ಗದರಿಸಿ "ಹೌದೇನೋ, ಮಣ್ಣು ತಿಂದೆಯ ?" ಎಂದು ಕೇಳಿದಳು. ಕೃಷ್ಣನು "ಇಲ್ಲಮ್ಮ, ಅಣ್ಣ ಸುಳ್ಳು ಹೇಳುತ್ತಿದ್ದಾನೆ. ಬೇಕಿದ್ದರೆ ನನ್ನ ಬಾಯನ್ನು ನೋಡು" ಎಂದು ಬಾಯಿ ತೆರೆಯಲು, ತಾಯಿ ಇಡೀ ಬ್ರಹ್ಮಾಂಡವನ್ನೇ ಬಾಯೊಳಗೆ ಕಂಡಳು.
ಸಾರಹೃದಯ—ಸರಸಿ.
ಗಾಡಿಯ ಮುರಿದಿಟ್ಟ—ಶಕಟಾಸುರ ಸಂಹಾರದ ಪ್ರಸಂಗ.
ಜೀರಿಗೆ ಬೆಲ್ಲವ... —ವಿದರ್ಭದ ಅರಸ ಭೀಷ್ಮಕನ ಮಗನಾದ ರುಕ್ಮಿಯು ತನ್ನ ತಂಗಿಯಾದ ರುಕ್ಮಿಣಿಯನ್ನು ಚೇದಿರಾಜನಾದ ಶಿಶುಪಾಲನಿಗೇ ಕೊಡುವುದೆಂದು ಹಟಹಿಡಿಯಲು, ರುಕ್ಮಿಣಿಯ ಅಪೇಕ್ಷೆಯಂತೆ ಕೃಷ್ಣನು ಬಂದು ರುಕ್ಮಿಯನ್ನು ಹಗರಣದಲ್ಲಿ ಸೋಲಿಸಿ ರುಕ್ಮಿಣಿಯನ್ನು ಕೊಂಡೊಯ್ದನು.
ಏಳುಗೂಳಿಗಳು—ನೀಲಾ ಸ್ವಯಂವರ ಸಂದರ್ಭದಲ್ಲಿ.
ಸತ್ರಾಜಿತಗೆ—ಸ್ಯಮಂತಕೋಪಾಖ್ಯಾನ.
ಅಷ್ಟಮಹಿಷಿಯರು—ರುಕ್ಮಿಣಿ, ಜಾಂಬವತಿ, ಸತ್ಯಭಾಮಾ, ಭದ್ರಾ, ಮಿತ್ರವಿಂದಾ, ಸತ್ಯಾ, ಕಾಳಿಂದಿ, ಲಕ್ಷಣಾ.
ಅಕ್ರೂರ—ಯಾದವ ಶ್ವಫಲ್ಕನ ಮಗ, ಕಂಸನ ಮಂತ್ರಿ. ವಿವರಣೆ ಆಗಲೆ ಬಂದಿದೆ.
ಆನೆಯ—ಕುವಲಯಾವರ್ತವೆಂಬ ಆನೆಯನ್ನು ಮಥುರೆಯಲ್ಲಿ ಕೃಷ್ಣನು ಕೊಂದನು.
ಅಗಸನ—ಮಥುರೆಯಲ್ಲಿ ಕಂಸನ ಬಟ್ಟೆಗಳನ್ನು ಮಡಿಮಾಡಿ ಒಯ್ಯುತ್ತಿದ್ದ ಅಗಸನನ್ನು ಕೊಂದು ಅರಸನ ಬಟ್ಟೆಗಳನ್ನೆಲ್ಲ ತಾನೆ ಉಟ್ಟುಕೊಂಡದ್ದು.
ಕುಬುಜೆ—ಕಂಸನ ಗಂಧದಾಸಿಯಾದ ಕುಬ್ಜೆ.
ಮಲ್ಲರನೆಲ್ಲ—ಚಾಣೂರ ಮುಷ್ಟಿಕರನ್ನು.

ಹಿಂದುಸ್ಥಾನಿ ಕಾಪಿ ಆದಿ

ಊರಿಗೆ ಬಂದರೆ ದಾಸಯ್ಯ, ನಮ್ಮ
ಕೇರಿಗೆ ಬಾ ಕಂಡ್ಯ ದಾಸಯ್ಯ ಪ

ಕೇರಿಗೆ ಬಂದರೆ ದಾಸಯ್ಯ, ಗೊಲ್ಲ
ಕೇರಿಗೆ ಬಾ ಕಂಡ್ಯ ದಾಸಯ್ಯ ಅ

ಕೊರಳೊಳು ವನಮಾಲೆ ಧರಿಸಿದವನೆ, ಕಿರು
ಬೆರಳಲಿ ಬೆಟ್ಟವನೆತ್ತಿದನೆ
ಇರುಳು ಹಗಲು ನಿನ್ನ ಕಾಣದೆ ಇರಲಾರೆ
ಮರುಳು ಮಾಡಿದಂಥ ದಾಸಯ್ಯ ೧

ಕಪ್ಪು ವರ್ಣದ ದಾಸಯ್ಯ, ಕಂ
ದರ್ಪನ ಪಿತನೆಂಬೊ ದಾಸಯ್ಯ
ಅಪ್ಪಿಕೊಂಡು ನಮ್ಮ ಮನಸಿಗೆ ಬಂದರೆ
ಅಪ್ಪವ ಕೊಡವೆನು ದಾಸಯ್ಯ ೨

ಮುಂದೇನು ದಾರಿ ದಾಸಯ್ಯ, ಚೆಲ್ವ
ಪೊಂಗೊಳಲೂದುವ ದಾಸಯ್ಯ
ಹಾಂಗೇ ಪೋಗದಿರು ದಾಸಯ್ಯ ಹೊ
ನ್ನುಂಗುರ ಕೊಡುವೆನು ದಾಸಯ್ಯ ೩

ಸಣ್ಣ ನಾಮದ ದಾಸಯ್ಯ, ನಮ್ಮ
ಸದನಕೆ ಬಾ ಕಂಡ್ಯ ದಾಸಯ್ಯ
ಸದನಕೆ ಬಂದರೆ ದಾಸಯ್ಯ, ಮಣಿ
ಸರವನು ಕೊಡುವೆನು ದಾಸಯ್ಯ ೪

ಸಿಟ್ಟು ಮಾಡದಿರು ದಾಸಯ್ಯ, ಸಿರಿ
ಪುರಂದರವಿಠ್ಠಲ ದಾಸಯ್ಯ
ರಟ್ಟು ಮಾಡದಿರು ದಾಸಯ್ಯ ತಂ
ಬಿಟ್ಟು ಕೊಡುವೆನು ದಾಸಯ್ಯ ೫

ಬೆರಳಲಿ ಬೆಟ್ಟವನೆತ್ತಿದ—ಗೋವರ್ಧನೋದ್ಧರಣ ಪ್ರಸಂಗ.
ಅಪ್ಪವ—ಒಂದು ಭಕ್ಷ್ಯ, ಎರೆಯಪ್ಪ.
ರಟ್ಟು ಮಾಡದಿರು—ನನ್ನನ್ನು ಹೊರಗೆ ಹಾಕದಿರು.

ಬೇಹಾಗು ಆದಿ

ಜಗನ್ಮೋಹನನೆ ಕೃಷ್ಣ, ಜಗವ ಪಾಲಿಪನೆ ಪ

ಒಬ್ಬಳ ಬಸುರಿಂದಲಿ ಬಂದೆ, ಮ
ತ್ತೊಬ್ಬಳ ಕೈಯಲಿ ನೀ ಬೆಳೆದೆ
ಕೊಬ್ಬಿದ ದೈತ್ಯರ ಒಡಲ ಸೀಳಿದೆ, ಇಂಥ
ತಬ್ಬಿಬ್ಬಾಟವನೆಲ್ಲಿ ಕಲಿತೆಯೊ ರಂಗ ೧

ಲೋಕದೊಳಗೆ ನೀ ಶಿಶುವಾಗಿ, ಮೂ
ಲೋಕವನ್ನೆಲ್ಲ ಬಾಯಲಿ ತೋರಿದೆ
ಆಕಳ ಕಾಯುವ ಚಿಣ್ಣನೆಂದೆನಿಸಿದೆ
ಈ ಕುಟಿಲವನೆಲ್ಲ ಎಲ್ಲಿ ಕಲಿತೆಯೊ ರಂಗ ೨

ಮಗುವಾಗಿ ಪೂತನಿಯ ಮೊಲೆಯನುಂಡೆ, ಅವಳ
ಜಗದಗಲಕೆ ಬೀಳಲು ಕೆಡಹಿ
ನಗುತ ನಗುತ ಗೋಪಿ ಮೊಲೆಯುಂಡೆ, ಇಂಥ
ತಗಿಬಿಗಿಯಾಟಗಳೆಲ್ಲಿ ಕಲಿತೆಯೊ ರಂಗ ೩

ಮಡುವ ಧುಮುಕಿ ಕಾಳಿಂಗನ ಶಿರದಲ್ಲಿ
ಮೃಡಸುರಪಾದ್ಯರು ಪೊಗಳುತಿರೆ
ಹೆಡೆಯಮೇಲೆ ಕುಣಿದಾಡುತ ಆಡುತ
ಕಡೆ ಸಾರೆಂಬುದನೆಲ್ಲಿ ಕಲಿತೆಯೊ ರಂಗ ೪

ಒಂದು ಪಾದವ ಭೂಮಿಯಲೂರಿ, ಮ
ತ್ತೊಂದು ಪಾದದಿ ಗಗನವನಳೆದು
ಒಂದು ಪಾದ ಬಲಿ ಶಿರದಲಿಟ್ಟೆ, ಇಂಥ
ಚೆಂದದ ವಿದ್ಯೆಯನೆಲ್ಲಿ ಕಲಿತೆಯೊ ರಂಗ ೫

ನಂಬಿದ ಪ್ರಹ್ಲಾದನು ಸ್ತುತಿಸೆ ನೀ
ಕಂಭವನೊಡೆದು ಬಂದಾಕ್ಷಣದಿ
ದೊಂಬಿಲಿ ದೈತ್ಯನ ಒಡಲ ಸೀಳಿದೆ, ಇಂಥ
ಡಂಬರದಾಟವನೆಲ್ಲಿ ಕಲಿತೆಯೊ ರಂಗ ೬

ಅಂಬರೀಷ ದ್ವಾದಶಿ ಸಾಧಿಸುತಿರೆ, ಆಗ
ಬಂದು ದೂರ್ವಾಸರು ಶಾಪ ಕೊಡಲು
ಮುಂದಕೆ ಸಾಧನವಹುದೆಂದು ಚಕ್ರವ
ಹಿಂದಟ್ಟಿಸುವುದನೆಲ್ಲಿ ಕಲಿತೆಯೊ ರಂಗ ೭

ವರಬಲದಿಂದಲಿ ಭಸ್ಮಾಸುರನು
ಹರನ ಶಿರದಿ ಕರವಿಡೆ ಬರಲು
ತರುಣಿಯ ರೂಪವ ತಾಳಿ ಆ ದೈತ್ಯನ
ಹರಣವನಳಿದುದನೆಲ್ಲಿ ಕಲಿತೆಯೊ ರಂಗ ೮

ವೇದಗಳರಸಿ ಕಾಣದ ಪರಬ್ರಹ್ಮ ನೀ
ಮೋದದಿಂದ ವಿದುರನ ಮನೆಯೈದಿ
ಆದರದಿ ಪಾಲ ಕುಡಿದುಳಿದುದ ನೀ
ಮೇದಿನಿಗಿಳಿಸುವುದೆಲ್ಲಿ ಕಲಿತೆಯೊ ರಂಗ ೯

ದುರ್ಯೋಧನ ತನ್ನೊಡ್ಡೋಲಗದೊಳು
ಹರಿಯನು ಕರೆಸೆಂದರುಹಲು ಬಂದು
ಧರಣಿಯುಂಗುಷ್ಟದಲೊತ್ತುತ ಅವನನು
ಉರುಳಿಸಿದಾಟವನೆಲ್ಲಿ ಕಲಿತೆಯೊ ರಂಗ ೧೦

ಆ ಸಭೆಯಲಿ ಖಳ ದುರ್ಯೋಧನನಾಗ
ಮೋಸದಿ ಕೃಷ್ಣನ ಕಟ್ಟೆನಲು
ಸಾಸಿರರೂಪಿನ ಕೃಷ್ಣನೆಂದೆನಿಸಿದ
ವೇಷವನೆಲ್ಲ ಎಲ್ಲಿ ಕಲಿತೆಯೊ ರಂಗ ೧೧

ಸರ್ಪಬಾಣ ಮೊರೆಯುತ ಬರಲು ಕಂ
ದರ್ಪ ಪಿತನೆ ಕರುಣದಿ ನೀನು
ಒಪ್ಪುವ ಪಾರ್ಥನ ರಥವ ನೆಲಕೆ ಒತ್ತಿ
ತಪ್ಪಿಸಿದಾಟವನೆಲ್ಲಿ ಕಲಿತೆಯೊ ರಂಗ ೧೨

ದ್ರೋಣನ ಸಂಗ್ರಾಮದಿ ಹರಿಚಕ್ರವ
ಮಾಣದೆ ಸೂರ್ಯಗೆ ಮರೆಮಾಡಿ
ಕಾಣಿಸಿ ಸೈಂಧವನನು ಕೊಲಿಸಲಾದೆ ಇಂಥ
ಜಾಣತನವ ನೀನೆಲ್ಲಿ ಕಲಿತೆಯೊ ರಂಗ ೧೩

ಆ ಶಿರವಾತನ ತಂದೆಯು ಕರದಲಿ
ಸೂಸುತ ರಕುತವು ಬೀಳಲು ಅದನು
ಬೀಸಿ ಬಿಸಾಡಲು ಅವನ ಶಿರವನಾಗ
ಸಾಸಿರ ಮಾಡಿದುದೆಲ್ಲಿ ಕಲಿತೆಯೊ ರಂಗ ೧೪

ಆದಿಮೂಲನೆ ಎಂದು ಕರಿರಾಜ ಕರೆಯಲು
ಯಾದವರಾಯ ನೀ ನಗುತಲಿ ಬಂದು
ಆದರದಿಂದ ಗಜೇಂದ್ರನ ಸಲಹಿದೆ
ಆ ದಿವ್ಯಾಟಗಳೆಲ್ಲಿ ಕಲಿತೆಯೊ ರಂಗ ೧೫

ಎಂದೆಂದಿಗೂ ಗುಣಗಳ ಪೊಗಳಲು
ಇಂದ್ರಾದಿಗಳಿಗೆ ಅಳವಲ್ಲ
ಮಂದರಧರ ಶ್ರೀ ಪುರಂದರವಿಠಲನೆ
ಒಂದೊಂದಾಟವನೆಲ್ಲಿ ಕಲಿತೆಯೊ ರಂಗ ೧೬

ಒಬ್ಬಳ ಬಸುರಿಂದಲಿ ಬಂದೆ...—ದೇವಕಿಯ ಮಗ, ಯಶೋದೆಯು ಸಾಕುಮಗ.
ತಗಿಬಿಗಿಯಾಟ—ದಿಗ್ಭ್ರಮೆಗೊಳಿಸುವ ಆಟ.
ಮೃಡಸುರಪಾದ್ಯರು—ಶಿವ, ಇಂದ್ರ ಮೊದಲಾದವರು.
ಹೆಡೆಯ ಮೇಲೆ—ಕಾಳಿಂದಿ ಮಡುವಿನಲ್ಲಿ ಕಾಳಿಂಗನ ಹೆಡೆಯ ಮೇಲೆ.
ಒಂದು ಪಾದವ...—ವಾಮನಾವತಾರದಲ್ಲಿ ತ್ರಿವಿಕ್ರಮ ರೂಪ.
ಸರ್ಪಬಾಣ...—ಮಹಾಭಾರತ ಯುದ್ಧದಲ್ಲಿ ಕರ್ಣನು ಪ್ರಯೋಗಿಸಿದ ಅಮೋಘವಾದ ಸರ್ಪಾಸ್ತ್ರದಿಂದ ಅರ್ಜುನನನ್ನು ಕಾಪಾಡಿದ ಪ್ರಸಂಗ.
ದ್ರೋಣನ ಸಂಗ್ರಾಮದಿ—ಮಹಾಭಾರತದ ದ್ರೋಣ ಪರ್ವದಲ್ಲಿ ಬರುವ ಪ್ರಸಂಗ. ಅಭಿಮನ್ಯುವನ್ನು ಕೊಂದ ಸೈಂಧವ ಜಯದ್ರಥನನ್ನು ಸಂಜೆಯೊಳಗೆ ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದ ಅರ್ಜುನನಿಂದ ಕೊಲ್ಲಿಸಲು ತನ್ನ ಚಕ್ರದಿಂದ ಸೂರ್ಯನನ್ನು ಮರೆಮಾಡಿ ಸಂಜೆಯಂತೆ ಕಾಣಿಸಿದ ; ಹೆದರಿ ಅಡಗಿದ್ದ ಜಯದ್ರಥನು ಸಂಜೆಯಾಯಿತೆಂದು ಹೊರಗೆ ಬರಲು ಅರ್ಜುನನು ಅವನನ್ನು ಕೊಂದನು. ಜಯದ್ರಥನ ತಂದೆ ವೃದ್ಧಕ್ಷತ್ರನು ಸಾಯಂಸಂಧ್ಯೆಯಲ್ಲಿ ತೊಡಗಿದ್ದಾಗ, ಅರ್ಜುನನ ಬಾಣದಿಂದ ಕತ್ತರಿಸಲ್ಪಟ್ಟ ಜಯದ್ರಥನ ತಲೆಯು ವೃದ್ಧಕ್ಷತ್ರನ ಬೊಗಸೆಯಲ್ಲಿ ಬಿದ್ದಿತು. ಕಾತರನಾಗಿ ಅವನು ತಲೆಯನ್ನು ಭೂಮಿಯ ಮೇಲೆ ಬಿಸಾಡಲು ತಲೆಯೊಡೆದು ಸತ್ತನು.
(ಉಳಿದ ಪ್ರಸಂಗಗಳ ವಿವರಣೆ ಆಗಲೆ ಬಂದಿದೆ).

೧೨

ಧನಾಸರಿ — ಆದಿ

ಗೋಪ ಗೋಪನೆಂಬೊ ಕೋಕಿಲ ನಮ್ಮ
ಶ್ರೀಪತಿಯು ಕಂಡರೆ ಬರಹೇಳು ಕೋಕಿಲ
ಗೋಪ ಗೋಪನೆಂಬೊ ಕೋಕಿಲ ಪ

ಮಧು ಮಾಸದ ಮಾಧವ ಬರಲು
ಸುದತಿಯರು ಸಮ್ಮೇಳದಿಂದಲಿ
ಒದಗಿ ವಸಂತನಲ್ಲಾಡುವ ಸಮಯಕೆ
ಪದುಮನಾಭನ ಕಂಡರೆ ಬರಹೇಳು ಕೋಕಿಲ ೧

ಅಂಗಜನಯ್ಯನ ಅಗಣಿತನ
ಮಂಗಳ ಮಹಿಮನ ಮೂರುತಿಯ
ಸಂಗೀತ ಸೊಬಗಿನ ಸೊಲ್ನುಡಿಯಳೆ ನಮ್ಮ
ರಂಗನ ಬರಹೇಳು ಕೋಕಿಲ ೨

ಇಟ್ಟಾಡುವ ಶ್ರುತಿಸ್ಮೃತಿಗಳಲಿ
ಬಟ್ಟೆಯ ಕಾಣೆವೊ ಪರಬೊಮ್ಮನ
ಸೃಷ್ಟಿಯೊಳಗೆ ನಮ್ಮ ಪುರಂದರವಿಠಲನ
ಥಟ್ಟನೆ ಕಂಡರೆ ಬರಹೇಳು ಕೋಕಿಲ ೩

ಸೊಲ್ನುಡಿ—ಸರಳವಾದ ಮಾತು.
ಇಟ್ಟಾಡುವ—ಇಟ್ಟಡುವ, ಜಟಿಲವಾದ.
ಬಟ್ಟೆಯ—ದಾರಿಯನ್ನು.

ಮಧ್ಯಮಾವತಿ ಆದಿ

ದಯಮಾಡೊ ರಂಗ ದಯಮಾಡೊ ಪ

ದಯಮಾಡೊ ನಿನ್ನ ದಾಸನು ನಾನೆಂದು ಅ

ಹಲವು ಕಾಲದಿ ನಿನ್ನ ಹಂಬಲು ಎನಗೆ
ಒಲಿದು ಪಾಲಿಸಬೇಕು ವಾರಿಜನಾಭ ೧

ಇಹಪರದಲಿ ನೀನೆ ಇಂದಿರಾರಮಣ
ಭಯವೇಕೊ ನೀನಿರಲು ಭಕ್ತರಭಿಮಾನಿ ೨

ಕರಿರಾಜವರದನೆ ಕಂದರ್ಪ ಪಿತನೆ
ಪುರಂದರವಿಠಲ ಹರಿಸಾರ್ವಭೌಮ ೩

ಕೇದಾರಗೌಳ ಚಾಪು

ಏತರ ಚೆಲುವ ರಂಗಯ್ಯ ಪ

ಹರಿಯೆಂಬ ಮಾತಿಗೆ ಮರುಳಾದೆನಲ್ಲದೆ ಅ

ದೇಶಕೋಶಗಳುಳ್ಳೊಡೆ ತಾ ಕ್ಷೀರವಾ
ರಾಶಿಯೊಳಗೆ ಮನೆ ಕಟ್ಟುವನೆ
ಹಾಸುವುದಕೆ ಹಾಸಿಗೆಯುಳ್ಳೊಡೆ ತಾ
ಶೇಷನ ಬೆನ್ನಲಿ ಮಲಗುವನೆ ರಂಗ ೧

ಬುದ್ಧಿಯ ಪೇಳುವ ಪಿತನುಳ್ಳೊಡೆ ಬೆಣ್ಣೆ
ಕದ್ದು ಚೋರನೆಂದೆನಿಸುವನೆ
ಬದ್ಧವಾಹನ ತನಗಿದ್ದರೆ ಹಾರುವ
ಹದ್ದಿನ ಮೇಲೇರಿ ತಿರುಗುವನೆ ರಂಗ ೨

ಹಡೆದ ತಾಯಿ ತನಗುಳ್ಳೊಡೆ ಗೋಪರ
ಒಡಗೂಡಿ ತುರು ಹಿಂಡು ಕಾಯುವನೆ
ಮಡದಿಯು ಉಳ್ಳೊಡೆ ಅಡವಿಯೊಳಾಡುವ
ಹುಡುಗಿಯರ ಸಂಗ ಮಾಡುವನೇ ರಂಗ ೩

ಸಂಗಡ ಉದಿಸಿದ ಅಣ್ಣನಿದ್ದರೆ ನರ
ಸಿಂಗನ ರೂಪವಧರಿಸುವನೆ
ಅಂಗದ ಮೇಲಿನ ಆಸೆಯಿದ್ದೊಡೆ ಕಾ
ಳಿಂಗನ ಮಡುವಿಲಿ ಧುಮುಕುವನೆ ರಂಗ ೪

ಸಿರಿಯುಳ್ಳೊಡೆ ಪೋಗಿ ಬಲಿಯ ಬಾಗಿಲ ಕಾಯ್ದು
ಧರೆಯ ದಾನಕೆ ಕೈ ಒಡ್ಡುವನೆ
ದೊರೆಯು ತಾನಾದರೆ ಪಾಂಡುಕುಮಾರನ
ತುರಗ ಬಂಡಿಯ ಬೋವನಾಗುವನೆ ರಂಗ ೫

ಮದನಜನಕ ತಾನು ಸೊಬಗುಳ್ಳನಾದರೆ
ಮುದುಕಿ ಕುಬುಜೆಯನು ಕೂಡುವನೆ
ಮುದದಿ ತಾ ಪರದೈವವೆನಿಸಿಕೊಂಡ
ಚದುರ ಶ್ರೀ ಪುರಂದರವಿಠಲ ಅಮ್ಮಮ್ಮ ೬

ಕ್ಷೀರವಾರಾಶಿ—ಪಾಲಗಡಲು.

ಬದ್ಧವಾಹನ—ನೆಲದ ಮೇಲೆ ಓರಣವಾಗಿ ಹೋಗುವ ವಾಹನ.

ಹಾರುವ ಹದ್ದು—ಗರುಡ.

ಅಂಗ—ದೇಹ.

೧೫

ಮಧ್ಯಮಾವತಿ ಆದಿ

ವೃಂದಾವನದೊಳಗಾಡುವನ್ಯಾರೆ
ಗೋಪಿ
ಚಂದಿರವದನೆ ನೋಡುವ ಬಾರೆ ಪ

ಅರುಣಪಲ್ಲವ ಪಾದಯುಗಳನೆ
ದಿವ್ಯ
ಮರಕತ ಮಂಜುಳಾಭರಣನೆ
ಸಿರಿವರ ಯದುಕುಲ ಸೋಮನೆ
ಇಂಥ
ಪರಿಪೂರ್ಣ ಕಾಮ ನಿಸ್ಸೀಮನೆ ೧

ಹಾರಹೀರ ಗುಣಧಾರನೆ
ದಿವ್ಯ
ಸಾರ ಶರೀರ ಶೃಂಗಾರನೆ
ಆರಿಗಾದರು ಮನದೂರನೆ
ತನ್ನ
ಸೇರಿದವರ ಮಾತ ಮೀರನೆ ೨

ಮಕರಕುಂಡಲ ಕಾಂತಿಭರಿತನೆ
ದಿವ್ಯ
ಆಕಳಂಕ ರೂಪ ಲಾವಣ್ಯನೆ
ಸಕಲರೊಳಗೆ ದೇವನೀತನೆ
ನಮ್ಮ
ಮುಕುತೀಶ ಪುರಂದರವಿಠಲನೆ ೩

೧೬

ಆಹಿರಿ ಏಕ

ಶ್ರೀಕೃಷ್ಣರಾಯನ ತೋರಿಸೆ ಮಾತನಾಡಿಸೆ ಅ

ಶ್ಲೋಕ

ಧೀರ ರಂಗನು ಬಾರದೆ ಇಹನೇನೆ
ಮಾರನಯ್ಯಗೆ ಮಾಡಿದ ತಪ್ಪು ಏನೆ
ವಾರಿಜಾಕ್ಷಿ ನೀವೊಂದು ಮಾತಾಡಿ ಬಾರೆ
ನೀರಜಾಕ್ಷನ ನಿಮಿಷದಿ ಕರೆದು ತಾರೆ

ಪದ

ಗಂಧ ಕಸ್ತೂರಿ ತಾರೆಂದನೆ
ಪೂಸೆಂದನೆ ಘಳಿಗೆ ತಾಳೆಂದೆನೆ
ಅಂದ ಮಾತಿಗೆ ತಾ ಮುನಿದನೆ
ಅರವಿಂದನೆ ಪೂರ್ಣೇಂದುವದನೆ ೧

ಶ್ಲೋಕ

ವೇಣುನಾದದಿ ಮರುಳುಮಾಡಿದನಮ್ಮ
ಕಾಣದೆಂತಿಹೆ ಕಸ್ತೂರಿ ವೆಂಕಟನ್ನ
ಪ್ರಾಣನಾಥನು ಮುನಿದು ಮತ್ಯಾಕೆ ಬಾರ
ಜಾಣೆ ಹೋಗಿ ನೀ ವೇಣುನಾದನ್ನ ತಾರೆ

ಪದ

ವಾಸುದೇವನ ಕರೆದು ತಾರೆ
ಇಲ್ಲಿಗೆ ನೀರೆ ಬೇಸರದಿ ನೀಸಾರೆ
ಭಾಷೆ ಕೊಟ್ಟಿದ್ದಾನೆ ರಂಗನು
ದಯಾಪಾಂಗನು ಕರುಣಾಂತರಂಗನು ೨

ಶ್ಲೋಕ

ಬಿಟ್ಟ ಕಂಗಳ ಭಾಮೆ ನೀ ಕೇಳಿದೇನೆ
ಸಿಟ್ಟು ಮಾಡಿದ ಶ್ರೀಹರಿ ನಮ್ಮ ಮೇಲೆ
ಇಷ್ಟು ದಿವಸವೂ ಹ್ಯಾಂಗೆ ಬಿಟ್ಟಿಹೆವಮ್ಮ
ಕಷ್ಟ ಹೆಂಗಸು ಕೃಷ್ಣನ ಕರೆದು ತಾರೆ

ಪದ

ಬಿನ್ನಾಣ ಮಾತಲ್ಲ ಜಾಣೆ ಕೇಳೆ
ನಿನ್ನಾಣೆ ತನ್ನವಳಲ್ಲವೇನೆ
ಮುನ್ನಿನ ಹಂಬಲು ಮರೆತೇನೆ
ಜಗತ್ಕರ್ತನೆ ಎನ್ನನಗಲುವನೇನೆ ೩

ಶ್ಲೋಕ

ಮಂಗಳಾಂಗನು ಹೀಗೆ ಮಾಡುವನೇನೆ
ಭಂಗಪಡುತಿಹೆ ಅಂಗಜನಯ್ಯಗಾಗಿ
ರಂಗು ಮಾಣಿಕದುಂಗುರ ಕೊಡುವೆ ನಿನಗೆ
ತಂಗಿ ಹೋಗಿ ನೀ ರಂಗನ ಕರೆದು ತಾರೆ

ಪದ

ಮಲ್ಲಿಗೆ ಮಂಟಪದೊಳಗೆಲ್ಲ ಇದ್ದೆವು
ಎಲ್ಲಿ ನಲ್ಲನು ಬರಲಿಲ್ಲ
ಕಲ್ಲುಮನಸು ಮಾಡಿದನಲ್ಲ
ನೋಡಿದನಲ್ಲ ಹೀಗೆ ಮಾಡೋರೆ ಸಲ್ಲ ೪

ಶ್ಲೋಕ

ಮಂದಯಾನೆ ಮುಕುಂದನಾ ಮಂದಿರಕೆ
ಇಂದು ಹೋಗಿ ನೀ ವಿನಯದಿಂದಲಿ ಸಾರೆ
ಒಂದೇ ಮಾತಿಲಿ ಒಳವು ತಿಳಿದು ಬಾರೆ
ವೃಂದಾವನದಿ ಗೋವಿಂದನ ಕರೆದು ತಾರೆ

ಪದ

ಧರೆಯೊಳು ಪುರಂದರವಿಠಲನೆ
ಸರ್ವೇಶ್ವರನೆ, ದೊರೆ ಮುದ್ದು ವೆಂಕಟನೆ
ಹರುಷದಿಂದಲಿ ಬಂದು ನೆರೆವಂತೆ
ಮಾಡೆಲೆ ಕಾಂತೆ ಕೇಳೆ ಸದ್ಗುಣವಂತೆ ೫

೧೭

ನಾದನಾಮಕ್ರಿಯೆ ಏಕ

ನಾ ಡೊಂಕಾದರೇನೋ
ನಿನ್ನ ನಾಮ ಡೊಂಕೆ ವಿಠಲ ಪ

ನದಿಯು ಡೊಂಕಾದರೇನು
ಉದಕ ಡೊಂಕೆ ವಿಠಲ ೧

ಕಬ್ಬು ಡೊಂಕಾದರೇನು
ಸಿಹಿ ಡೊಂಕೆ ವಿಠಲ ೨

ಪುಷ್ಪ ಡೊಂಕಾದರೇನು
ಪರಿಮಳ ಡೊಂಕೆ ವಿಠಲ ೩

ಆಕಳು ಡೊಂಕಾದರೇನು
ಹಾಲು ಡೊಂಕೆ ವಿಠಲ ೪

ಬಿಲ್ಲು ಡೊಂಕಾದರೇನು
ಬಾಣ ಡೊಂಕೆ ವಿಠಲ ೫

ನಾನು ಹೊಲೆಯನಾದರೆ ನಿನ್ನ
ನಾಮ ಹೊಲೆಯೆ ವಿಠಲ ೬

ಅಜ್ಞನಾದರೇನು ಕಾಯೊ
ಸುಜ್ಞ ಪುರಂದರವಿಠಲ ೭

[ಜೀವ ಅಲ್ಪಾಂಶವೆ. ಆದರೆ ಜೀವರ ಸ್ವರೂಪಭೂತಗುಣವಾದ ಭಕ್ತಿ ಪರಮಾತ್ಮನನ್ನೂ ಒಳಗೊಳ್ಳುವುದರಿಂದ ಅದರ ಬಲ ಹೆಚ್ಚಿನದು. ಜೀವರಿಗೆ ಸ್ಥೂಲಾದಿ ದೇಹ ಸಂಸರ್ಗವಿರುವುದರಿಂದ ಪ್ರಾಕೃತಬಂಧವುಂಟು, ಕರ್ಮಲೇಪವುಂಟು, ಸುಖದುಃಖಾದ್ಯನುಭವವುಂಟು. ಮುಕ್ತಿಯೋಗ್ಯರಾದ ಜೀವರಿಗೆ ಲಿಂಗದೇಹಭಂಗವಾದ ಮೇಲೆ ಸ್ವರೂಪಗುಣಗಳ ಆವಿರ್ಭಾವವಾಗುತ್ತದೆ. ನದಿಯಲ್ಲಿರುವ ನೀರಿನಂತೆ, ಕಬ್ಬಿನಲ್ಲಿರುವ ಸಿಹಿಯಂತೆ, ಹೂವಲ್ಲಿರುವ ಪರಿಮಳದಂತೆ ಜೀವರಿಗೆ ಜ್ಞಾನ, ಭಕ್ತಿ, ವಿರಕ್ತಿಗಳು. ಇಲ್ಲಿ 'ನಿನ್ನ ನಾಮ' ವೆಂದರೆ 'ನಿನ್ನ ನಾಮಸ್ಮರಣೆ'. ಜ್ಞಾನ, ಭಕ್ತಿ, ವಿರಕ್ತಿಗಳು ನಾಮಸ್ಮರಣೆಯ ಭೂಮಿಕೆಯಲ್ಲಿರುವುದರಿಂದ ಅದೂ ಜೀವರ ಸ್ವರೂಪವೆಂದೇ ಗ್ರಹಿಸಬಹುದು.]

೧೮

ಶಂಕರಾಭರಣ (ಪೂರ್ವಿ) ಅಟ್ಟ

ಕೊಡಬಹುದೇ ಮಗಳ ಪ

ಹಿಡಿಬಿಟ್ಟಿಯನೆ ಮಾಡಿ ಹೀಗೆ ಸಮುದ್ರರಾಯ ಅ

ಕುರುಹು ಖೂನಗಳಿಲ್ಲ ಕೂಟಮಠಗಳಿಲ್ಲ
ಅರಿಯರು ಆರಾರು ಆರ ಮಗನೆಂದು
ಅರಸರ ಹೆಸರಿಗೆ ಸರಿಯಾದ ಅಳಿಯನಲ್ಲ
ವರ ಸುಖಾಂಗಿಗೆ ತಕ್ಕ ವರನಹುದೆ ಇವ
ಹಿರಿಯರೆಂಬುವರಾ ನೆರೆಹೊರೆಯ ಕಾಣದವ
ಪರಪುಟ್ಟತನದಲ್ಲಿ ಬಂಟರಿಗೆ ಖಳನಿವ
ಹಿರಿದು ಬಲ್ಲಿದ ನಾಲ್ಕು ಹಸ್ತವುಳ್ಳವನಿವ
ನಿರತ ಮೇಘವ ಪೋಲ್ವ ಕರಿಯ ಮೈಯುವನಿವ
ಅರುಣಛಾಯದ ರೇಖೆಗಳುಳ್ಳ
ನರಸಿಂಹ ಹಾರುವ ಹದ್ದಿನ ಮೆಚ್ಚಿದ
ಉರದ ಮೇಲೆ ಭರದಿ ಒದೆಯ ಮೆಚ್ಚಿದ
ಕರೆದ ಹಾಲು ದೊರೆಯೆ ಕುಡಿದು ಹೆಚ್ಚಿದ
ಬ್ರಹ್ಮಾಂಡವ ತೋರಿಸಿ ವದನವ ಮುಚ್ಚಿದ
ಅನೇಕಾದಿ ನಾರಿಯರ ಶಾಲೆಗಳನು ಬಿಚ್ಚಿದವಗೆ ೧

ಆಡಿಸಿ ಆಡಿಸಿ ಹತ್ತು ಅವತಾರದಿ ಪುಟ್ಟಿ
ಕಡು ಕಪಟಿಯಲ್ಲದೆ ಭೂರಿ ಗುಣವಿವಗಿಲ್ಲ
ನಡತೇಲಿ ಸಲೆ ಲಜ್ಜೆ ನಾಚಿಕೆಯಿವಗಿಲ್ಲ
ಹಿಡಿದು ಪೂತನಿ ಮೊಲೆಯುಂಡ ಚೌಪಟ ಮಲ್ಲ
ಮಡುಹಿದ ಮಾವನ ಮಧುರೆಯೊಳಗೆ ಖುಲ್ಲ
ಹುಡುಕ ಬಂದರೆ ತಾನಡಗಬಲ್ಲ
ಹಿಡಿಬಿಟ್ಟಿಯನೆ ಮಾಡಿ ಭೂತಳದೊಳಗೆಲ್ಲ
ಮಡದಿಯರ ಸೀರೆಯ ಕದ್ದದ್ದು ಪುಸಿಯಲ್ಲ
ಕಡಹದ ಮರನೇರಿದ ಹೆಂಗಳ ಶಿರ
ದಡಿಯೊಳು ಭಂಗವ ಮಾಡಿದ ಕಿರಾತನ್ನ
ಕೊಡೆಯ ಬೆಟ್ಟಗಳಾಡಿದ ಕಾಳಿಂಗನ

ಮಡುವ ಧುಮುಕಿ ನೋಡಿದ ವ್ಯಾಳನ ಏಳು
ಹೆಡೆಗಳ ಮೇಲೆ ತುಳಿದ ಫಣಿಪನ
ಪೊಡವಿ ಈರಡಿ ಮಾಡಿದ ರಥಂಗಳ
ನಡೆಸಿ ನರಗೆ ಕರುಣದಿ ಸಾರಥಿಯಾದ ೨

ಆದರದಿಂದಲಿ ಕೊಳಲನೂದುತ ಗೋವುಗಳ
ಕಾದಾಗ ಅಡವಿಯೊಳು ಸಾಧುಗೆ ಮಿಡಿ ಯಾರೊ
ಈ ಧರೆಯೊಳಗಿವ ಪಿಡಿದನು ಕಾಳಿಯ
ಯಾದವರಾಯ ಎಡೆಯೆಂಜಲುಂಬುವನಿವ
ಆದಿ ಅನಾದಿ ಅಂತ್ಯವಿಲ್ಲದೆ ಒಲಿವ ನಾಮ
ಕ್ರೋಧದಿಂದಲಿ ಭಟರನ ಕೊಂದು ಕೂಗುತಲಿಹ
ಮೋದದಿ ವೀರರೊಳು ಮೆರೆವ ಎಣಿಸಿದರಿನ್ನು
ಆದಿ ನಿರ್ಜರರಾಗುವ ಪಾಲಿಪನು ಸನಕಾದಿಗಳ
ಪೊರೆವ ಹೃದಯ ಮೊದಲಿದ್ದು ಶ್ರೀದೇವಿಯಿಂದಲಿ
ಮೆರೆವ ಶೇಷಾಚಲನಾದ ವಿನೋದಿಯಾ
ಪುರಂದರವಿಠಲಗೆ ೩

[ಇದು ನಿಂದಾಸ್ತುತಿಯ ಪ್ರಕಾರಕ್ಕೆ ಸೇರಿದ್ದು, ಮುಖ್ಯವಾಗಿ ಕೃಷ್ಣನ ಬಾಲ ಲೀಲೆಗಳನ್ನು ಬಣ್ಣಿಸುತ್ತದೆ.]

ಹಿಡಿಬಿಟ್ಟಿಮಾಡು—ದುರ್ಲಕ್ಷಿಸು.

ಖೂನ—ಚಿಹ್ನೆ, ಸೂಚನೆ, ಪರಿಚಯ, ಪಾಳಿ (ಮರಾಠೀ ಖೂಣ).

ಆರಾರು—ಯಾರೂ.

ಪರಪುಟ್ಟತನದಲ್ಲಿ—(ಕೋಗಿಲೆಯಂತೆ) ಎಲ್ಲೋ ಹುಟ್ಟಿ (ಗೋಕುಲದಲ್ಲಿ) ಬೆಳೆಯುತ್ತಿದ್ದಾಗ.

ಉರದ ಮೇಲೆ...—ಭೃಗುಮುನಿಯ ಪರೀಕ್ಷೆಯ ಸಂದರ್ಭ.

ಬ್ರಹ್ಮಾಂಡವ ತೋರಿಸಿ...—ಮಣ್ಣುತಿಂದನೆಂಬ ದೂರನ್ನು ಪರಿಹರಿಸಿಕೊಳ್ಳಲು ತಾಯಿಗೆ ತನ್ನ ಬಾಯನ್ನು ತೆರೆದು ತೋರಿಸಿದ ಸಂದರ್ಭ.

ಶಾಲೆಗಳನು—ಸೀರೆಗಳನ್ನು (ಗೋಪೀವಸ್ತ್ರಾಪಹರಣ ಸಂದರ್ಭ).

ಚೌಪಟಮಲ್ಲ—ವೀರ.

ಕಡಹದ ಮರ—ಕದಂಬ ವೃಕ್ಷ.

ನರಗೆ—ಅರ್ಜುನನಿಗೆ.

ಶಂಕರಾಭರಣ   ಅಟ್ಟ

ತಂಗಾಳಿ ವಶವಲ್ಲವೆ ಪ

ಅಂಗಳದೊಳಗೆ ಬೆಳ
ದಿಂಗಳು ತುಂಬಿತು ಅ

ಚಂದನದಿಂದ ಕುಚಂಗಳ ತವಿಸಲು
ಇಂದುಕಿರಣ ಬಂದು ಕಂದಿಸಲು
ಮಂದಮಾರುತದಲಿ ನಿಂದಿರಲಾರೆನೆ
ಹೊಂದಿದ ತಾಪವು ಹೋಹುದೇನೆ ಹೆಣ್ಣೆ ೧

ಭಂಗಾರ ವೊಡಲಿಗೆ ಭಾರವಾಗಿದೆಯೆ
ಶೃಂಗರಿಸಿ ಕೊಳ ಸೇರಲಿಲ್ಲ
ಅಂಗಜಶರತಾಪ ತಾಳಲಾರೆ ನಾನು
ಉಂಗುರವು ನಿನಗೆ ಉಚಿತವೇನೆ ಹೆಣ್ಣೆ ೨

ಮುನ್ನ ಪುರಂದರವಿಠಲರಾಯ ಕೂಡಿ
ಇನ್ನು ಬಾರೆಂದರೆ ಬಾರನೇಕೆ
ಅನ್ನಪಾನ ರುಚಿಯಾಗಿ ತೋರಲಿಲ್ಲ
ನಿನ್ನಾಣೆ ಕಣ್ಣಿಗೆ ನಿದ್ರೆ ಬಾರದು ಹೆಣ್ಣೆ ೩

ತವಿಸಲು—ತಂಪುಗೊಳಿಸಲು, ಶೆಖೆಗುಂದಿಸಲು.

ಇಂದುಕಿರಣ—ಚಂದ್ರನ ಬೆಳಕು.

ವೊಡಲಿಗೆ—ಮೈಗೆ.

ಅಂಗಜಶರತಾಪ—ಮನ್ಮಥನ ಬಾಧೆ.

ಬ್ಯಾಗಡೆ ಆದಿ

ಹಣ್ಣು ಕೊಂಡವನು ಬಾಲಕೃಷ್ಣನು ಪ

ಹಣ್ಣು ಬೇಕು ಎಂದು
ಸಣ್ಣ ಕೃಷ್ಣನು ಬಂದು
ಕಣ್ಣೀರ ತಂದು ಬೆಣ್ಣೆ ಕಳ್ಳ ನಿಂತ ಅ

ದುಡುಕು ಮಾಡಿದ ಪಿಡಿ ನೆಲ್ಲನೆ ಕೊಂಡ
ಕಡುವೇಗದಿಂದ
ಮಡದಿ ಬಳಿಗೆ ಬಂದ
ಸಡಗರದಿಂದ ಪಿಡಿ ನೆಲ್ಲನೆ ಕೊಟ್ಟ ೧

ಇಟ್ಟಳೆ ಹಣ್ಣ ಕೃಷ್ಣನ ಕೈಯಲಿ
ಇಟ್ಟಳೆ ಮತ್ತೊಂದು
ಕೊಟ್ಟಳೆ ಮುದ್ದೊಂದು
ಪಟ್ಟಳೆ ಭಯ ಬಂದು ಕಂ
ಗೆಟ್ಟಳೆ ಮನನೊಂದು ೨

ದಾತ ನೋಡಿದ
ನಾರಿಮಣಿಯ ಮನವ
ಆತ ತೋರಿದ
ಎಂಥಾ ಮಾಯ ಮಾಡಿದ
ನಾಥ ಕೊಟ್ಟ ನೆಲ್ಲು
ಮಣಿಗಳಾಯಿತಲ್ಲೊ ೩

ತಿರುಗಿ ಪೋದನು ಮುದ್ದು ಕೃಷ್ಣನು
ತಿರುಗಿ ತಿರುಗಿ ನೋಡಿ ಮರುಳಿಗೆ ಆಳಾಗಿ
ತಿರುಗಿ ಬಂದವಳು ಹಣ್ಣು ಕೂಗಿದಳು ೪

ನಿನ್ನ ಹೊರತು ಅನ್ಯರನ್ನ ಕಾಣೆ
ಸಣ್ಣ ಕೃಷ್ಣ ಬಂದು
ಎನ್ನ ಸಲಹೊ ಇಂದೆ
ಘನ್ನ ಮಹಿಮ ತಂದೆ ಪುರಂದರವಿಠಲ ೫

ಮೋಹನ　　　　　　　　　　　　　　　　　　　　　　　　　　ಅಟ್ಟ

ಮಂದಗಮನೆ ಇವನಾರೆ ಪೇಳಮ್ಮ
ಮಂದರಧರ ಗೋವಿಂದ ಕಾಣಮ್ಮ　　　　　　　　ಪ

ಕೆಂದಳಿರು ನಖ ಶಶಿಬಿಂಬ ಪದಪದ್ಮ
ಅಂದುಗೆ ಇಟ್ಟವನಾರೆ ಪೇಳಮ್ಮ
ಅಂದು ಕಾಳಿಂಗನ ಹೆಡೆಯ ತುಳಿದ ದಿಟ್ಟ
ನಂದನ ಕಂದ ಮುಕುಂದ ಕಾಣಮ್ಮ　　　　　　　೧

ಉಡುಗೆ ಪೀತಾಂಬರ ನಡುಗೆ ಹೊನ್ನುಡುದಾರ
ಕಡಗ ಕಂಕಣವಿಟ್ಟವನಾರಮ್ಮ
ಮಡದಿ ಕೇಳ್ ಸಕಲ ಲೋಕಂಗಳ ಕುಕ್ಷಿಯೊ
ಳೊಡನೆ ತೋರಿದ ಜಗದೊಡೆಯ ಕಾಣಮ್ಮ　　　　೨

ನೀರದ ನೀಲದಂತೆಸೆವ ವಕ್ಷದಿ ಕೇ
ಯೂರ ಹಾರನಿಟ್ಟವನಾರಮ್ಮ
ನೀರೆ ಕೇಳು ನಿರ್ಜರರಾದವರಿಗೆ ಪ್ರೇರಿಸಿ
ಫಲವಿತ್ತುದಾರಿ ಕಾಣಮ್ಮ　　　　　　　　　೩

ಶಂಕ ಚಕ್ರವು ಗದೆ ಪದ್ಮ ಕೈಯೊಳಗಿಟ್ಟ
ಲಂಕರಿಸುವನೀತನಾರಮ್ಮ
ಪಂಕಜಮುಖಿ ಶ್ರೀ ಭೂದೇವಿಯರಸನು
ಶಂಕೆಯಿಲ್ಲದೆ ಗೋಪಿತನಯ ಕಾಣಮ್ಮ　　　　　೪

ಕಂಬುಕಂಧರ ಕರ್ಣಾಲಂಬಿತಕುಂಡಲ
ಅಂಬುಜ ಮುಖದವನಾರೆ ಹೇಳಮ್ಮ
ರಂಭೆ ಕೇಳೀತ ಪುರಂದರವಿಠ್ಠಲ
ನಂಬಿದ ಭಕ್ತಕುಟುಂಬಿ ಕಾಣಮ್ಮ　　　　　　೫

೨೨

ಜಂಜೂಟಿ ಆದಿ

ರಾಮಕೃಷ್ಣರು ಮನೆಗೆ ಬಂದರು, ಬಾಗಿಲು ತೆರೆಯಿರೆ ಪ

ಕಾಮಧೇನು ಬಂದಂತಾಯಿತು ವರವ ಬೇಡಿರೆ ಅ

ಚೆಂಡು ಬುಗುರಿ ಚಿಣ್ಣೀ ಕೋಲು ಗಜ್ಜುಗವಾಡುತ
ದುಂಡು ಮಲ್ಲಿಗೆ ಮುಡಿದು ಕೊಳಲನೂದಿ ಪಾಡುತ
ಹಿಂಡುವೆಣ್ಗಳ ಮುದ್ದು ಮುಖದ ಸೊಬಗ ನೋಡುತ
ಭಂಡು ಮಾಡಿ ಬಾಲೆಯರೊಡನೆ ಸರಸವಾಡುತ ೧

ಮಕರ ಕುಂಡಲ ನೀಲಮುತ್ತಿನ ಬಾವುಲಿಡುತಲಿ
ಕಂಕಣ ಹಾರ ತೋಳಬಂದಿ ತೊಡಿಗೆ ತೊಡುತಲಿ
ಸುಕುಮಾರ ಸುಂದರವಾದ ಉಡಿಗೆ ಉಡುತಲಿ
ಮುಖದ ಕಮಲ ಮುಗುಳುನಗೆಯು ಸುಖವ ಕೊಡುತಲಿ ೨

ಪೊಕ್ಕುಳಲಿ ಅಜನ ಪಡೆದ ದೇವದೇವನು
ಚಿಕ್ಕ ಅಂಗುಷ್ಟದಲ್ಲಿ ಗಂಗೆಯ ಪಡೆದನು
ಮಕ್ಕಳ ಮಾಣಿಕ್ಯನವ ಪುರಂದರವಿಠಲನು
ಅಕ್ಕರೆಯಿಂದಲಿ ಮುಕುತಿ ಕೊಡುವ ರಂಗನಾಥನು ೩

['ಬಾಲಕೃಷ್ಣನು ಮನೆಗೆ ಬಂದನು' ಎಂದು ಪಾಠಾಂತರವಿದೆ. ಇದೇ ಸರಿಯಾದುದೆಂದು ತೋರುತ್ತದೆ. ಆದರೆ ಬಹುಮಟ್ಟಿಗೆ ಮುದ್ರಿತ ಸಂಕಲನಗಳಲ್ಲಿ 'ರಾಮಕೃಷ್ಣರು ಮನೆಗೆ ಬಂದರು' ಎಂದೇ ಇದೆ. ಪದದಲ್ಲಿರುವ ಒಕ್ಕಣೆಯೆಲ್ಲ ಕೃಷ್ಣನೊಬ್ಬನನ್ನು ಕುರಿತದ್ದೇ.]

೨೩

ಪೂರ್ವಿ ಅಟ್ಟ

ಆವ ಕುಲವು ತಿಳಿಯಲಾಗದು ಪ

ಕಡಲ ಮಗಳ ಗಂಡನಂತೆ
ಅಡವಿಯೊಳಗೆ ಮಡದಿಯಂತೆ
ಪೊಡವಿಗೆ ತಾನೊಡೆಯನಂತೆ
ಕೊಡೆಯ ಪಿಡಿದು ಬೇಡಿದನಂತೆ ೧

ರಕ್ಕಸರಲ್ಲಿ ಕಾಳಗವಂತೆ
ಮರ್ಕಟರೆಲ್ಲ ಬಂಟರಂತೆ
ಪಕ್ಷಿಯನೇರಿ ಮೆರೆದನಂತೆ
ಮುಕ್ಕಣ್ಣೇಶ್ವರ ಮೊಮ್ಮಗನಂತೆ ೨

ವಿದ್ಯೆಯಲ್ಲಿ ಪ್ರೌಢನಂತೆ
ಯುದ್ಧದಲ್ಲಿ ಶೂರನಂತೆ
ಮುದ್ದು ಪುರಂದರವಿಠಲನಂತೆ
ಬೇಲೂರು ಚೆನ್ನಿಗನಂತೆ ೩

ಕಡಲ ಮಗಳು—ಲಕ್ಷ್ಮಿ.
ಅಡವಿಯೊಳಗೆ ಮಡದಿ—ಸೀತೆ.
ಕೊಡೆಯ ಪಿಡಿದು...—ವಾಮನಾವತಾರ.
ರಕ್ಕಸರಲ್ಲಿ ಕಾಳಗ...—ಕೃಷ್ಣಾವತಾರ.
ಮರ್ಕಟರೆಲ್ಲ ಬಂಟರಂತೆ—ರಾಮಾವತಾರ.
ಪಕ್ಷಿಯನೇರಿ...—ಗರುಡವಾಹನ.
ಮುಕ್ಕಣ್ಣೇಶ್ವರ—ಶಿವ ; ಬ್ರಹ್ಮನ ಮಗ, ಹಾಗಾಗಿ ವಿಷ್ಣುವಿಗೆ ಮೊಮ್ಮಗ.
ವಿದ್ಯೆಯಲ್ಲಿ ಪ್ರೌಢ—ಬೌದ್ಧಾವತಾರ.
ಯುದ್ಧದಲ್ಲಿ ಶೂರ—ಕಲ್ಕಿಯ ಅವತಾರ.

ಶಂಕರಾಭರಣ ಅಟ್ಟ

ಏನು ಬೇಡಲಿ ಹರಿಯು ಪ

ಜಾಹ್ನವೀಜನಕನ
ಕಂದರ್ಪನಯ್ಯನ ಅ

ಏನು ಬೇಡಲಿ ಚಿತ್ತ ಚಂಚಲಕರಿನನ
ಮೌನದಿಂದಲಿ ಧರೆಕೋರೆಲೆತ್ತಿದನ
ಇಂಥವನ ೧

ಕರುಳಹಾರದವನ ಧರಣಿಯನು ಮೆಟ್ಟಿ
ಈರಡಿ ಮಾಡಿ ಕೊಲೆಗಡುಕನು
ಇಂಥವನ ೨

ಅರಣ್ಯದಿ ಚರಿಸಿ ಸತಿಯ ಕಳೆದವನ
ತಿರುಗಿ ಮನೆಮನೆಯ ಬೆಣ್ಣೆ ಮೆಲ್ಲುವನ
ಇಂಥವನ ೩

ವಸನಶೂನ್ಯನಾಗಿ ಕಲ್ಕಿ ಏರಿದನ
ಕಾಸು ಕಟ್ಟಿಟ್ಟು ಕೇಸಕ್ಕಿ ಉಂಬುವನ
ಇಂಥವನ ೪

ಹಯವ ಪಿಡಿದು ಗಾಡಿಗಾರನಾಗಿಪ್ಪವನ
ಭಯದಿಂದ ಬಲಿಯ ಬಾಗಿಲ ಕಾಯಿದವನ
ಇಂಥವನ ೫

ಪುರವ ಜರಾಸಂಧನಿಗಂಜಿ ಬಿಟ್ಟವನ
ನೆರೆ ಸಾಧಿಸಿ ಮಾವನ ಶಿರವ ತರಿದವನ
ಇಂಥವನ ೬

ಜಗನ್ನಾಥ ಪುರಂದರವಿಠ್ಠಲರಾಯನ
ಭಕುತರಿಗೆ ಚತುರ್ಮುಕ್ತಿ ಕೊಡುವವನ
ಇಂಥವನ ೭

[ಮೊದಲ ನಾಲ್ಕು ನುಡಿಗಳಲ್ಲಿ ದಶಾವತಾರದ ಉಲ್ಲೇಖವಿದೆ. ಮುಂದೆ ಕೃಷ್ಣನ ಲೀಲೆಗಳ ಚಿತ್ರಣವಿದೆ.]

ಗಾಡಿಗಾರ—ಸಾರಥಿ (ಅರ್ಜುನನಿಗೆ).

ಪುರವ...—ಮಧುರೆಯನ್ನು, ಮಗಧದ ರಾಜ ಜರಾಸಂಧನು ಕಂಸನ ಮಾವ; ಕೃಷ್ಣನು ತನ್ನ ಸೋದರಮಾವ ಕಂಸನನ್ನು ಕೊಂದಮೇಲೆ, ಜರಾಸಂಧನು ಸೇಡನ್ನು ತೀರಿಸಿಕೊಳ್ಳಲು ಮಧುರೆಯ ಮೇಲೆ ದಾಳಿ ಮಾಡಿದ. ಯಾದವರು ಸೋತರು. ಜರಾಸಂಧನು ಮತ್ತೆ ಮತ್ತೆ ಮಧುರೆಯನ್ನು ಮುತ್ತಿ ಹಾಳು ಮಾಡಿದನಾಗಿ, ಕೃಷ್ಣನು ಆನರ್ತ ದೇಶದಲ್ಲಿ ದ್ವಾರಕೆಯನ್ನು ನಿರ್ಮಿಸಿ ಯಾದವರ ರಾಜಧಾನಿಯನ್ನಾಗಿ ಮಾಡಿದನು.

ಮಾವನ...—ಕಂಸನನ್ನು.

ಚತುರ್ಮುಕ್ತಿ—ಸಾಯುಜ್ಯ, ಸಾಮೀಪ್ಯ, ಸಾಲೋಕ್ಯ, ಸಾರೂಪ್ಯ.

ಪಂತುವರಾಳಿ ಅಟ್ಟ

ಹಣ್ಣು ತಾ ಬೆಣ್ಣೆ ತಾ ಗೋಪ್ಯಮ್ಮ
ಹಣ್ಣು ತಾ ಬೆಣ್ಣೆ ತಾ ಪ

ಅಡವಿಯೊಳಗೆ ಅಸುರನ ಕೊಂದ ಕೈಗೆ
ಮಡುವಿನೊಳಗೆ ಮಕರನ ಸೀಳ್ದ ಕೈಗೆ
ಪೊಡವಿಯೊಳಗೆ ಚೆಂಡನಾಡಿದ ಕೈಗೆ
ಕಡು ಬೇಗದಿಂದಲಿ ಬೇಡಿದ ಕೈಗೆ ೧

ಶಂಖಚಕ್ರಗಳನು ಪಿಡಿದಂಥ ಕೈಗೆ
ಶಂಕೆಯಿಲ್ಲದೆ ಪೂತನಿ ಕೊಂದ ಕೈಗೆ
ಬಿಂಕದಿಂದಲಿ ಕೊಳಲೂದುವ ಕೈಗೆ
ಪಂಕಜಮುಖಿಯರ ಕುಣಿಸುವ ಕೈಗೆ ೨

ದಿಟ್ಟತನದಿ ಬೆಟ್ಟವೆತ್ತಿದ ಕೈಗೆ
ಸೃಷ್ಟಿಯ ದಾನವ ಬೇಡಿದ ಕೈಗೆ
ದುಷ್ಟ ಭೂಪರನೆಲ್ಲ ಮಡುಹಿದ ಕೈಗೆ
ಕೆಟ್ಟ ದಾನವರನ್ನು ಬಡಿದಂಥ ಕೈಗೆ ೩

ಕಾಳಿಯ ಮಡುವನು ಕಲಕಿದ ಕೈಗೆ
ಸೋಳಸಾಸಿರ ಗೋಪಿಯರಾಳಿದ ಕೈಗೆ
ಮೇಳದ ಭಕ್ತರುದ್ಧರಿಸುವ ಕೈಗೆ
ಏಳು ಗೂಳಿಯ ಗೆದ್ದ ಯದುಪತಿ ಕೈಗೆ ೪

ಬಿಲ್ಲುಬಾಣಗಳನ್ನು ಪಿಡಿದಂಥ ಕೈಗೆ
ಮಲ್ಲರ ಸಾಧನ ಮಾಡಿದ ಕೈಗೆ
ಎಲ್ಲ ದೇವರ ದೇವ ರಂಗನ ಕೈಗೆ
ಬಲ್ಲಿದ ಪುರಂದರವಿಠಲನ ಕೈಗೆ ೫

[ದಶಾವತಾರದ ಪ್ರಸಂಗಗಳೊಂದಿಗೆ ಕೃಷ್ಣಲೀಲೆಗಳೆಲ್ಲವೂ ಸಂಗ್ರಹವಾಗಿ ಈ ಪದದಲ್ಲಿ ಬಂದಿವೆ.]

ಅಡವಿಯೊಳಗೆ... —ಕಂಸನ ನಂಟನಾದ ತೃಣಾವರ್ತನು ಬಿರುಗಾಳಿಯಾಗಿ ಬಂದು ಬಾಲಕೃಷ್ಣನನ್ನು ಎತ್ತಿಕೊಂಡು ಹೋದಾಗ ಕೃಷ್ಣನು ಅವನನ್ನು ಕೊಂದ ಪ್ರಸಂಗ.

ಮಡುವಿನೊಳು... —ಗಜೇಂದ್ರ ಮೋಕ್ಷ.

ಪೊಡವಿಯೊಳಗೆ... —ಭೂಮಿಯನ್ನು ಚೆಂಡಿನಂತೆ ಎತ್ತಿದ (ವರಾಹಾವತಾರದಲ್ಲಿ).

ಮಾವನ—ಕಂಸನನ್ನು.

ಪಂಕಜಮುಖಿಯರ ಕುಣಿಸುವ—ಬೌದ್ಧಾವತಾರದಲ್ಲಿ ತ್ರಿಪುರರ ಹೆಂಗಳೆಯರನ್ನು ವಶಮಾಡಿಕೊಂಡ ಸಂದರ್ಭ.

ಬೆಟ್ಟವೆತ್ತಿದ—ಗೋವರ್ಧನೋದ್ಧರಣ.

ಸೃಷ್ಟಿಯ ದಾನವ ಬೇಡಿದ—ವಾಮನಾವತಾರದಲ್ಲಿ.

ಸೋಳಸಾಸಿರ—ಹದಿನಾರು ಸಾವಿರ (ಷೋಡಶ ಎನ್ನುವುದರ ಮರಾಠೀರೂಪ ಸೋಳ).

ಮೇಳದ ಭಕ್ತರ—ಸಂಕೀರ್ತನ ಗೋಷ್ಠಿಯಲ್ಲಿ ನೆರೆದ ಭಕ್ತರ ; ಭಾಗವತರ.

ಬಿಲ್ಲುಬಾಣಗಳನ್ನು ಪಿಡಿದಂಥ—ರಾಮಾವತಾರದಲ್ಲಿ.

ಮಲ್ಲರ ಸಾಧನ ಮಾಡಿದ—ಚಾಣೂರ ಮುಷ್ಟಿಕರನ್ನು ಕೊಂದದ್ದು.

[ದಶಾವತಾರದ ಪ್ರಸಂಗಗಳೊಂದಿಗೆ ಕೃಷ್ಣಲೀಲೆಗಳೆಲ್ಲವೂ ಸಂಗ್ರಹವಾಗಿ ಈ ಪದದಲ್ಲಿ ಬಂದಿವೆ.]

ಅಡವಿಯೊಳಗೆ... —ಕಂಸನ ನಂಟನಾದ ತೃಣಾವರ್ತನು ಬಿರುಗಾಳಿಯಾಗಿ ಬಂದು ಬಾಲಕೃಷ್ಣನನ್ನು ಎತ್ತಿಕೊಂಡು ಹೋದಾಗ ಕೃಷ್ಣನು ಅವನನ್ನು ಕೊಂದ ಪ್ರಸಂಗ.

ಮಡುವಿನೊಳು... —ಗಜೇಂದ್ರ ಮೋಕ್ಷ.

ಪೊಡವಿಯೊಳಗೆ... —ಭೂಮಿಯನ್ನು ಚೆಂಡಿನಂತೆ ಎತ್ತಿದ (ವರಾಹಾವತಾರದಲ್ಲಿ).

ಮಾವನ—ಕಂಸನನ್ನು.

ಪಂಕಜಮುಖಿಯರ ಕುಣಿಸುವ—ಬೌದ್ಧಾವತಾರದಲ್ಲಿ ತ್ರಿಪುರರ ಹೆಂಗಳೆಯರನ್ನು ವಶಮಾಡಿಕೊಂಡ ಸಂದರ್ಭ.

ಬೆಟ್ಟವೆತ್ತಿದ—ಗೋವರ್ಧನೋದ್ಧರಣ.

ಸೃಷ್ಟಿಯ ದಾನವ ಬೇಡಿದ—ವಾಮನಾವತಾರದಲ್ಲಿ.

ಸೋಳಸಾಸಿರ—ಹದಿನಾರು ಸಾವಿರ (ಷೋಡಶ ಎನ್ನುವುದರ ಮರಾಠೀರೂಪ ಸೋಳ).

ಮೇಳದ ಭಕ್ತರ—ಸಂಕೀರ್ತನ ಗೋಷ್ಠಿಯಲ್ಲಿ ನೆರೆದ ಭಕ್ತರ ; ಭಾಗವತರ.

ಬಿಲ್ಲುಬಾಣಗಳನ್ನು ಪಿಡಿದಂಥ—ರಾಮಾವತಾರದಲ್ಲಿ.

ಮಲ್ಲರ ಸಾಧನ ಮಾಡಿದ—ಚಾಣೂರ ಮುಷ್ಟಿಕರನ್ನು ಕೊಂದದ್ದು.

೨೬

ದರ್ಬಾರು | ಚಾಪು

ಇದು ಏನು ನೋಡೆ
ಇದು ರಂಗನ ಮುಖ
ಚಂದದಿ ಬಾರೆ ಸಖಿ ಪ

ನೀರೊಳಾಡಿದನೆ ಬೆನ್ನಲಿ ದೊಡ್ಡ
ಭಾರ ಪೊತ್ತನೆ ಕೋರೆ ದಾಡೆಯಿಂದ
ಸೀಳಿ ಕಶಿಪಿನ ಕರುಳವಮಾಲೆಯು
ಧರಿಸಿದ ನರಸಿಂಹರೂಪನೆ ೧

ಧರೆಯನಳೆದ ಪಾದದಲೊಂದು
ಪರೇಚ್ಛೆಯ ತರಿದ ನಾರುವಸ್ತ್ರವನು
ಉಟ್ಟು ನಂದಗೋಕುಲದಲ್ಲಿ ಮಂ
ದರಗಿರಿ ಎತ್ತಿ ತಂದು ಬೆಳೆದನಮ್ಮ ೨

ಬತ್ತಲೆ ಇರುವ ಉತ್ತಮ ತೇಜಿ
ಹತ್ತಿ ತಾನೆ ಮೆರೆವ ಭಕ್ತವತ್ಸಲ
ನಮ್ಮ ಪುರಂದರವಿಠಲನ್ನ
ಚಿತ್ತಕ್ಕೆ ಮೆರೆದಂತೆ ಅತ್ತಾತ ಬಿಡನಮ್ಮ ೩

[ಇದೂ ದಶಾವತಾರಗಳ ಚಿತ್ರಣದ ಪದ. ಇದನ್ನು ಬಾಲಕೃಷ್ಣನಿಗೆ ಹೊಂದಿಸಿದ್ದಾರೆ. ಗೋಪಿಯರು ಮಗುವನ್ನು ಎತ್ತಿ ಮುದ್ದಾಡುತ್ತ ಅದರ ಹಿರಿಮೆಯನ್ನೂ ಅರಿತುಕೊಂಡು ಹಾಡುತ್ತಿರುವಂತೆ ಕವಿಸಮಯ. ಮೊದಲ ನುಡಿಯಲ್ಲಿ ಮತ್ಸ್ಯ, ಕೂರ್ಮ, ವರಾಹ, ನರಸಿಂಹ; ಎರಡನೆಯದರಲ್ಲಿ ವಾಮನ, ಪರಶುರಾಮ (ಪರೇಚ್ಛೆಯ, ಎಂದರೆ ಬೇರೆಯವನು ಬಯಸಿದ ತನ್ನ ತಾಯಿಯನ್ನು, ರೇಣುಕೆಯನ್ನು), ರಾಮ (ನಾರುವಸ್ತ್ರವನು ಉಟ್ಟು), ಕೃಷ್ಣ ; ಮೂರನೆಯದರಲ್ಲಿ ಬುದ್ಧ (ಬತ್ತಲೆ ಇರುವ), ಕಲ್ಕಿ (ಉತ್ತಮ ತೇಜಿ ಹತ್ತಿ) ಹೀಗೆ ಅವತಾರಗಳ ವರ್ಣನೆಯಿದೆ.]

ನಾದನಾಮಕ್ರಿಯೆ ಆದಿ

ವಿದುರನ ಭಾಗ್ಯವಿದು ಪ

ಪದುಮಜಾಂಡ ತಲೆದೂಗುತಲಿದೆಕೋ ಅ

ಕುರುರಾಯನು ಖಳನನುಜನು ರವಿಜನು
ಗುರು ಗಾಂಗೇಯರು ಬೆರಗಾಗೆ
ಹರಿಸಿ ರಥವನು ಬೀದಿಯಲಿ ಬಹ
ಹರಿಯನು ಕಂಡನು ಹರುಷದಲಿ ೧

ದಾರಿಲಿ ಬಹ ಮುರವೈರಿಯ ಕಂಡು
ಹಾರುತ ಚೀರುತ ಕುಣಿಯುತಲಿ
ವಾರಿಧಾರೆಗಳ ನೇತ್ರದಿ ಸುರಿಸುತ
ಬಾರಿ ಬಾರಿಗೆ ಹಿಗ್ಗುವ ಸುಖದಿ ೨

ಆಟಕೆ ಲೋಕಗಳೆಲ್ಲ ಸೃಜಿಸುವ
ನಾಟಕಧರ ತನ್ನ ಲೀಲೆಯಲಿ
ನೀಟಾದವರ ಮನೆಗಳ ಜರಿದು
ಕುಟೀರದಲಿ ಬಂದು ಕುಳಿತ ಹರಿ ೩

ಅಡಿಗಡಿಗೆ ತನ್ನ ತನು ಮನ ಹರಹಿ
ಅಡಿಗೆರಗುತ ಗದ್ಗದ ಸ್ವರದಿ
ನುಡಿಗಳು ತೊದಲಲು ರೋಮವು ಪುಳಕಲು
ದುಡುದುಡು ಓಡುತ ದಶದಿಶೆಗೆ ೪

ಕಂಗಳುದಕದಿ ಪದಂಗಳ ತೊಳೆದು
ಗಂಧವ ಪೂಸಿ ತನು ಮರೆದು
ಮಂಗಳ ಮಹಿಮನ ಚರಣಕ್ಕೆರಗಿ ಪು
ಷ್ಪಂಗಳ ಪೂಜೆಯ ಮಾಡಿದನು ೫

ಕ್ಷೀರವಾರಿಧಿಶಯನಗೆ ವಿದುರನು
ಕ್ಷೀರವನುಣಬಡಿಸಿದ ಅದನು
ವಾರಿಜನಾಭನು ಕರ ಸಂಪುಟದಿ
ಆರೋಗಣೆಸಿದ ಘನತೆಯಲಿ ೬

ಒಂದು ಕುಡುತೆ ಪಾಲು ಹರಿ ತಾ ಸವಿದು
ಮುಂದಕೆ ಹರಿಸಿದ ಧರೆಮೇಲೆ
ಇಂದಿರೆ ಅರಸನ ಚರಿತೆ ವಿಚಿತ್ರವು
ಚಂದದಿ ಹರಿಯಿತು ಬೀದಿಯಲಿ ೭

ಧೊರೆ ಕರೆಸಿದ ನಿಮ್ಮ ಬರಬೇಕೆನ್ನಲು
ಹರಿ ನಸುನಗುತಲಿ ಹೊರಗ್ಹೊರಟ
ಧರೆಗುಂಗುಷ್ಟವನೂರಲು ರಾಯರು
ಉರುಳಿಬಿದ್ದರು ಪಾದದ ಮೇಲೆ ೮

ಕರುಣಾಕರ ಶ್ರೀಹರಿ ತನ್ನ ಭಕ್ತರ
ನಿರುತದಿ ಪೊರೆವನು ಆಯತದಿ
ಸಿರಿಯರಸ ನಮ್ಮ ಪುರಂದರವಿಠಲನ
ಶರಣರೆ ಧನ್ಯರು ಧರೆಯೊಳಗೆ ೯

[ಪಾಂಡವರ ರಾಯಭಾರಿಯಾಗಿ ಕೃಷ್ಣನು ಹಸ್ತಿನಾವತಿಗೆ ಬಂದಾಗ ರಾಜಾತಿಥ್ಯ ವನ್ನು ತಿರಸ್ಕರಿಸಿ ದಾಸೀಪುತ್ರನಾದ ವಿದುರನ ಮನೆಯಲ್ಲೇ ತಂಗಿದ್ದ ಸಂದರ್ಭ (ಮಹಾಭಾರತ, ಉದ್ಯೋಗಪರ್ವ, ೯೧). ವಿದುರನು ಪಾಂಡವ ಪಕ್ಷಪಾತಿ ಯಾಗಿದ್ದವನು, ಧರ್ಮಪರ. ಅವನಿಗೆ ಪಾಂಡವ ಕೌರವರ ನಡುವೆ ಯುದ್ಧ ನಡೆಯುವುದು ಬೇಸರವನ್ನು ತಂದಿದ್ದಿತು.]

ಕುರುರಾಯ—ದುರ್ಯೋಧನ.
ಖಳನನುಜ—ದುಃಶಾಸನ.
ರವಿಜ—ಕರ್ಣ.
ಗಾಂಗೇಯ—ಭೀಷ್ಮ.
ನೀಟಾದವರ—ಸತ್ಕುಲಪ್ರಸೂತರೆಂದು ಹೆಸರಾದವರ.
ತನು ಮರೆದು—ಮೈಮರೆತು.
ಧೊರೆ...—ಕೃಷ್ಣನು ವಿದುರನ ಮನೆಯಲ್ಲಿ ಉಂಡನೆಂಬುದನ್ನು ಕೇಳಿ ಸಿಟ್ಟಿಗೆದ್ದ ಅರಸನಾದ ದುರ್ಯೋಧನನು ಅವನನ್ನು ಕರೆಕಳುಹಿಸಿ, ಕೃಷ್ಣನು ಸಭಾಭವನಕ್ಕೆ ಬಂದಾಗ ತಾನು ಸಿಂಹಾಸನದಿಂದ ಏಳದೆ ಅವನನ್ನು ಅಸಡ್ಡೆಯಿಂದ ಕಂಡು ಅವಮಾನಪಡಿಸಲೆತ್ನಿಸಿದನು. ಕೃಷ್ಣನು ನಸುನಗುತ್ತ ತನ್ನ ಕಾಲ ಹೆಬ್ಬೆರಳನ್ನು ಭೂಮಿಯ ಮೇಲೆ ಒತ್ತಲು, ಸಿಂಹಾಸನವು ಅಲುಗಾಡಿ ದುರ್ಯೋಧನನು ಕೆಳಗೆ ಬಿದ್ದು ಭಂಗಪಟ್ಟನು.
ಆಯತದಿ—ಸರಿಯಾಗಿ, ಕ್ರಮವರಿತು.

ಆರಭಿ　　　　　　　　　　　　　　　　　　　　　　ಝಂಪೆ

ಅಕ್ಕ ನಂದಗೋಪನ ಅರಮನೆಯೊಳಗೊಬ್ಬ
ಆಕ್ರೂರ ಬಂದನಂತೆ　ಪ

ಹೊಕ್ಕು ಬಳಸುವಳಲ್ಲ ಹುಸಿಯನಾಡುವಳಲ್ಲ
ಇಕ್ಕೊ ಬಾಗಿಲ ಮುಂದೆ ಈಗ ರಥವ ಕಂಡೆ　ಅ

ಮಥುರಾ ಪಟ್ಟಣವಂತೆ, ಮಾವ ಕರೆಸಿದನಂತೆ
ನದಿಯ ದಾಟಲಿ ಬೇಕಂತೆ
ಬದಲು ಮಾತಿಲ್ಲವಂತೆ ಏನೆಂಬೆ ಏಣಾಕ್ಷಿ
ಉದಯದಿ ಪಯಣವಂತೆ ಹೇ ಕಾಂತೆ　೧

ಮಲ್ಲರ ಕೂಟವಂತೆ, ಮತ್ತೆ ಕಾಳಗವಂತೆ
ಬಲ್ಲಿದ ಗಜಗಳಂತೆ
ಬಿಲ್ಲು ಹಬ್ಬಗಳಂತೆ, ಬೀದಿ ಸಿಂಗಾರವಂತೆ
ಅಲ್ಲಿ ತಾಯ್ತಂದೆಯರ ಕಾಲ್ಗೆ ನಿಗಡವಂತೆ　೨

ಅಲ್ಲಿ ಪುಟ್ಟಿದನಂತೆ, ಅರಸನಳಿಯನಂತೆ
ಇಲ್ಲಿಗೆ ಬಂದನಂತೆ
ಎಲ್ಲ ಕಪಟವಂತೆ ಎಂದೂ ಹೀಗಿಲ್ಲವಂತೆ
ನಿಲ್ಲದೆ ಯಶೋದೆಯ ಕಾಲ್ಗೆ ಬಿದ್ದನಂತೆ　೩

ಮತ್ತೆ ಪಾಂಡವರಂತೆ, ಮೋಹದ ಸೋದರ
ಅತ್ತೆಯ ಮಕ್ಕಳಂತೆ
ಸುತ್ತ ಶತ್ರುಗಳಂತೆ, ಸಕಲ ಕಾರ್ಯಗಳಂತೆ
ಚಿತ್ತಜನಯ್ಯನ ಚಿತ್ತವೆರಡಾಯ್ತಂತೆ　೪

ತಾಳಲಾರೆವೆ ನಾವು ಪುರಂದರವಿಠ್ಠಲ
ಬಾಲತ್ವದಲಿ ಪೋದರೆ
ಕಾಲವೊದಗಿತಮ್ಮ ಕಾಮಿನಿ ಜನರೆಲ್ಲ
ಆಲೋಚನೆ ಮಾಡಿ ಆಣೆಯಿಡುವ ಬನ್ನಿ　೫

[ನಂದಗೋಕುಲದಲ್ಲಿ ಬೆಳೆಯುತ್ತಿದ್ದ ಕೃಷ್ಣನನ್ನು ಕೊಲ್ಲಿಸಬೇಕೆಂದು ಅವನ ಸೋದರಮಾವನೂ ಮಧುರೆಯ ಅರಸನೂ ಆಗಿದ್ದ ಕಂಸನು ಮಧುರೆಯಲ್ಲಿ ನಡೆಯುವ ಬಿಲ್ಲುಹಬ್ಬವನ್ನು ನೆಪಮಾಡಿಕೊಂಡು ಉಪಾಯದಿಂದ ಕರೆತರಲು ತನ್ನ ಮಂತ್ರಿ ಅಕ್ರೂರನನ್ನು ಕಳುಹಿಸಿದನು. ಕೃಷ್ಣನ ವಿರಹವನ್ನು ತಾಳಲಾರದೆ ಗೋಕುಲದ ಗೋಪಿಯರ ಅಳಲು ಮುಂದಿನ ನಾಲ್ಕು ಪದಗಳ ವಸ್ತು.]

ನದಿ—ಯಮುನಾನದಿ.

ಏಣಾಕ್ಷಿ—ಜಿಂಕೆಯ ಕಣ್ಣಂತೆ ಕಣ್ಣುಳ್ಳವಳು.

ನಿಗಡ—ಕಾಲಿಗೆ ಕಟ್ಟುವ ಸರಪಳಿ, ಬಂಧನ.

ಅಲ್ಲಿ—ಮಧುರೆಯಲ್ಲಿ.

ಅರಸನಳಿಯ—ಕಂಸನ ಸೋದರಳಿಯ.

ಇಲ್ಲಿಗೆ—ನಂದಗೋಕುಲಕ್ಕೆ.

೨೯

ಸಹಾನ ಚಾಪು

ಪೋಗಬೇಡವೊ ನಿಗಮನುತ ಮಧುರೆಗೆ
ಪೋಗಬೇಡವೊ ಹರಿಯೆ ಪ

ಪೋಗಲು ನೀ ಪುನರಾಗಮವೆಂದಿಗೊ
ಹೇಗೆ ತಾಳುವೆವೊ ನಾಗಮರ್ದನ ಕೃಷ್ಣ ಅ

ಪುಟ್ಟಿದ್ದು ಮಥುರೆ ತಂದಿಟ್ಟಿದ್ದು ಗೋಕುಲ ಪಟ್ಟದರಸನೆನಿಸಿ
ಬೆಟ್ಟಿಲಿ ಬೆಟ್ಟವನೆತ್ತಿ ಪೊರೆದೆ ಸರ್ವಕಷ್ಟವ ಪರಿಹರಿಸಿ
ಕೃಷ್ಣಮೂರುತಿ ಪರಮೇಷ್ಟಿಯರಸ ನ
ಮ್ಮಿಷ್ಟ ದೈವವೆ ಎಮ್ಮ ಬಿಟ್ಟು ಪೋಗುವರೇನೊ ೧

ಬಾಲತನದಿ ಬಹು ಲೀಲೆಗಳಿಂದ ಗೋಪಾಲಕರೊಡಗೂಡಿ
ಓಲ್ಯಾಡುತ ನಮ್ಮಾಲಯವನೆ ಪೊಕ್ಕು ಪಾಲು ಬೆಣ್ಣೆಯ ಮೆದ್ದು
ನಳಿನನಾಭನೆ ನಿನ್ನೊಲುಮೆಗೆ ಸಿಲುಕಿದ
ನಳಿನ ನೇತ್ರೆಯರ ನಿಂದೆಗೆ ಗುರಿಮಾಡಿ ೨

ಮಾರಮಣನೆ ಕರುಣಾಕರನೆಂಬುದು ತೋರಲಿಲ್ಲವೊ ಹರಿಯೆ
ಸೇರಿದವರ ಪೊರೆ ಲಾಲಿಸದಿದ್ದರೆ ಯಾರೆಲೊ ಗತಿ ನಮಗೆ
ಮಾರಜನಕ ಪುರಂದರವಿಠ್ಠಲ
ಗಾರು ಮಾಡದೆ ನಮ್ಮ ಸೇರಿ ಸುಖಿಸುತಿರು ೩

ಆನಂದಭೈರವಿ ಅಟ್ಟ

ಅಕ್ಕ ಎತ್ತಣ ಬಿಲ್ಲಹಬ್ಬ ಬಂತೆಮಗೆ
ಪ್ರಾಣಕಾಂತನ ಕರೆದೊಯ್ವರು ಮಧುರೆಗೆ ಪ

ಅಕ್ಕ ಮಧುರಾಪಟ್ಟಣದ ನಾರಿಯರು
ಅಕ್ಕ ಚದುರೆ ಚೆಲುವೆ ಚಪಲೆಯರು
ಅಕ್ಕ ಮದನಶಾಸ್ತ್ರದಿ ನಿಪುಣೆಯರು
ಸಿಕ್ಕ ಮಾಧವನ ಕಂಡರೆ ಅವರ್ ಬಿಡರು ೧

ಅಕ್ಕ ಮೋಹನ ಕಾಣೆ ಮಧುರಾಪುರ
ಅಕ್ಕ ಮೋಹನ ನಾರಿಯರು ಉದಾರ
ಅಕ್ಕ ಮೋಹನ ಕಾಣೆ ಯಮುನಾತೀರ
ಅಕ್ಕ ಮೋಹನರಂಗ ಮನೆಗೆ ಬಾರ ೨

ಅಕ್ಕ ಕರೆದು ಒಯ್ವರು ನಂದಕ್ರೂರ
ಅಕ್ಕ ಅಕ್ಕ ಬಂದೆ ಹೇಳುವೆ ನಂದಕ್ರೂರ
ಅಕ್ಕ ಧರೆಯೊಳಗೆಲ್ಲ ಅತಿಕ್ರೂರ
ಅಕ್ಕ ನಮಗಿರುವದೇ ಬಿಡ ಸ್ಮರಚೋರ ೩

ಅಕ್ಕ ಹೇಗೆ ಸೈರಿಸುವೆನರೆಗಳಿಗೆ
ಅಕ್ಕ ನಗಧರ ಬಾರನಲ್ಲೆ ಮನೆಗೆ
ಅಕ್ಕ ಹಗಲಿರುಳೆಂಬುದೊಂದು ಗಳಿಗೆಯಾಗೆ
ಅಕ್ಕ ಸಾಗಿಸಿ ಕಳುಹೆ ನನ್ನ ಬಳಿಗೆ ೪

ಅಕ್ಕ ಮೋಹನ ಕಾಣೆ ಶ್ರೀರಂಗನು
ಅಕ್ಕ ಕರೆದರೆ ಓಡಿ ಬಾಹ ತಾನು
ಅಕ್ಕ ಬಾರ ಪುರಂದರವಿಠಲನು
ಅಕ್ಕ ಭಕುತರಿಗೆ ಸಿಕ್ಕಿ ಬಾಹನು ೫

ಸಂರಟಿ ಆದಿ

ವಾಸಕೆ ಯೋಗ್ಯವಲ್ಲ ಗೋಕುಲವಿನ್ನು
ಬೇಸರವಾಯಿತಲ್ಲ ಪ

ದೋಷರಹಿತ ಸೋಳಸಾಸಿರ ಹೆಂಗಳ
ಶೇಷಶಯನ ಕೃಷ್ಣ ಮೋಸ ಮಾಡಿದಮೇಲೆ ಅ

ರಂಗ ಮಧುರೆಗೆಂದು ಅಕ್ರೂರನ
ಸಂಗಡ ಪೋದನಂತೆ
ಅಂಗಜನಯ್ಯನ ಸಂಗವಿಲ್ಲದಮೇಲೆ
ಹೆಂಗಳ ಜನ್ಮವಿನ್ನೇತಕೆ ಸುಡಲಿ ೧

ನಳಿನಾಕ್ಷ ಮಧುರೆಗೆಂದು ಪೋಗುವಂಥ
ಸುಳಿವು ತಿಳಿಯಲಿಲ್ಲವು
ಅಳಿಗಿಳಿ ಕೋಗಿಲೆಗಳ ರವವನು ಕೇಳಿ
ಘಳಿಗೆ ಕಳೆವುದೊಂದು ಯುಗವಾದ ಬಳಿಕಿನ್ನು ೨

ಪತಿ ಸುತರನು ಬಿಟ್ಟು ಶ್ರೀಪತಿ ನೀನೆ
ಗತಿಯೆಂದು ನಂಬಿರಲು
ಮತಿವಂತ ಅಕ್ರೂರನ ಜೊತೆಯೊಳು ಶ್ರೀಹರಿ
ರಥವೇರಿ ತಾನು ಮಧುರೆಗೆ ಪೋದಮೇಲೆ ೩

ಮಡದಿಯರಂತೆ ನಾವು ಒಡೆಯನೆಂದು
ದೃಢದಿ ನಂಬಿದ್ದೆವಮ್ಮ
ಕಡುಚೆಲ್ವ ಕೃಷ್ಣನು ನಡುನೀರಿನಲಿ ಕೈಯ
ಪಿಡಿಯದೆ ಬಿಟ್ಟು ತಾ ಕಡೆಗೆ ಸಾರಿದಮೇಲೆ ೪

ಅಚ್ಯುತಾನಂತನನು ನಮ್ಮವನೆಂದು
ನೆಚ್ಚಿಕೊಂಡಿದ್ದೆವಮ್ಮ
ಮೆಚ್ಚಿದ ಬಾಲೆಯರಿಗ್ಹುಚ್ಚು ಹಿಡಿಸಿ ಅಕ್ರೂರ
ಹಚ್ಚಿದ ಮಾತನು ಕೊಚ್ಚಿಪೋದಮೇಲೆ ೫

ಮುರಳಿ ನಾದವ ಕೇಳಿ ತರಳಾಕ್ಷಿಯರು
ಮರುಳಾಗಿ ಬರುತಿದ್ದೆವು
ದುರುಳ ಮನ್ಮಥನ ಪೂಸರಳಿಗೆ ಒಪ್ಪಿಸಿ
ಇರುಳೇ ಮಧುರೆಗೆ ತೆರಳಿ ಪೋದಮೇಲೆ ೬

ಸುರತ ಸುಖಗಳೆಂಬ ಶರಧಿಯೊಳು
ಹರುಷಪಡುತಲಿದ್ದೆವು
ನಿರುತ ಅವನ ಗುಣಚರಿತೆಯು ತೋರದೆ
ತ್ವರಿತದಿ ನಮ್ಮನು ತೊರೆದು ಪೋದಮೇಲೆ ೭

ಕಂತುಪಿತನ ಕಾಣದೆ ಈ ಪ್ರಾಣವು
ಎಂತು ನಿಲ್ಲುವುದಮ್ಮ
ಅಂತರಂಗದ ಕಾಮ ಶಾಂತಮಾಡದೆ ಪೋದ
ಕಾಂತನ ಕಾಣದೆ ಭ್ರಾಂತರಾದಮೇಲೆ ೮

ಇಂದಿರಾಪತಿ ನಮ್ಮ ಮಂದಿರದೊಳು
ಬಂದು ಪೋಗುತಲಿರಲು
ಸಂದೇಹದಿ ಇವನ ಹೊಂದಿದವರೆಂದು
ಮಂದಿಯೊಳಗೆ ಅಪನಿಂದೆ ಪೊತ್ತೆವಮ್ಮ ೯

ಜಾರೆಯರಾದಿರೆಂದು ನಮ್ಮವರೆಲ್ಲ
ಸಾರಿ ಕೈಬಿಟ್ಟರಮ್ಮ
ವಾರಿಜಾಕ್ಷನು ಬರಿ ದೂರಿಗೆ ಗುರಿಮಾಡಿ
ದಾರಿ ತೋರದೆ ಪೋದನಾರ ಸೇರುವೆವಮ್ಮ ೧೦

ಬೆರೆವುದಿನ್ನೆಂದು ನಾವು ಶ್ರೀಹರಿ ಸಂಗ
ದೊರೆವುದಿನ್ನೆಂದಿಗಮ್ಮ
ಕರುಣಾಕರ ನಮ್ಮ ಪುರಂದರವಿಠಲನು
ಕರೆದುಕೊಳ್ಳದೆ ನಮ್ಮ ತೊರೆದುಹೋದಮೇಲೆ ೧೧

ಅಳಿ—ದುಂಬಿ
ಪೂಸರಳಿಗೆ—ಹೂವಿನ ಬಾಣಕ್ಕೆ

೩೨

ಕೇದಾರಗೌಳ ಚಾಪು

ಗಜುಗವನಾಡುತಲಿರ್ದನು ನಮ್ಮ ರಂಗ ಪ

ವ್ರಜದ ಮಕ್ಕಳ ಕೂಡ ಹರುಷದಿಂದಲಿ ಬಲು ಅ

ಒಂದನ್ನೆ ಹಾಸಿದ ವೇಗದಿ ಮ
ತ್ತೊಂದರಿಂದಲಿ ತಾ ಬಡೆದ
ಒಂದೆ ಬಾರಿಗೆ ಎಲ್ಲ ಗಜುಗವ ಗೆದ್ದನು ೧

ಬಚ್ಚಿಟ್ಟ ಗಜುಗವ ಹುಡುಕೆಂದು
ಅಚ್ಯುತ ನಗುತ ನಿಂತ
ಮುಚ್ಚಿಟ್ಟ ಗಜುಗವು ದೊರಕಲಿಲ್ಲವೊ ಒಂದು ೨

ಕಾಕಾಚಿ ಕೊಂಡ್ಹೋಯಿತು ಎನುತಲಿ ರಂಗ
ಆಕಾಶ ತೋರಿದ
ಬೇಕಾದ ಗಜುಗವ ನಿಮಗೆ ತರುವೆ ಎಂದ ೩

ಗಜುಗದ ಗಿಡಗಳನೇಕ ತೋರಿದನಯ್ಯ
ಗಜುಗ ಗೊಂಚಲುಗಳನೇಕ
ಗಜುಗದ ಗಂಟುಗಳ್ ಕಟ್ಟಿದರು ಮಕ್ಕಳು ೪

ಪರಿ ಪರಿ ಗಜುಗದಾಟ ಮಕ್ಕಳ ಸಂಗಡ
ಗೆರೆಯ ದಾಟುವ ಆಟವು
ನೆರೆಹೊರೆ ಮಕ್ಕಳ ಕೂಡ ಸಂಭ್ರಮ ಮಾತು ೫

ಬೊಮ್ಮನ ಪಡೆದಂಥ ಚಿಕ್ಕ ಕೂಸು
ಅಮ್ಮನ ತೊಡೆಯ ಮೇಲೆ
ಗಮ್ಮನೆ ಮಲಗಿದ ಆಟಂಗಳನೆ ಬಿಟ್ಟು ೬

ಸುರರು ವಂದಿಸಿ ನಿಲ್ಲಲು ಕಿನ್ನರರು
ಸ್ವರವೆತ್ತಿ ಸ್ತುತಿಗೈಯಲು
ಧೊರೆ ತಂದೆ ಪುರಂದರವಿಠಲನು ಒಪ್ಪಿದ ೭

೨. ಗೋಪಿಯರು ಯಶೋದೆಯ ಭಾಗ್ಯವನ್ನು ಹಾಡಿ ಹೊಗಳುವುದು

೩೩

ಶಂಕರಾಭರಣ ಅಟ್ಟ

ಮಗನೆಂದಾಡಿಸುವಳು ಜಗದುದರನ್ನ, ಆನಂದದಿ ಗೋಪಿ ಪ

ಕುಕ್ಷಿಯೊಳೀರೇಳು ಜಗವನೆಲ್ಲವ ತಾಳಿ
ರಕ್ಷಿಸಿಕೊಂಡಿಹ ಬಲವಂತನ
ಪಕ್ಷಿವಾಹನ ದೇವ ಅಂಜಿದಂಜಿದೆಯೆಂದು
ರಕ್ಷೆಯಿಡುವ ಪುಣ್ಯವೆಲ್ಲಿ ಪಡೆದಳೊ ೧

ಸಾಗರಪತಿಯಾಗಿ ಭೋಗಿಶಯನದಲಿ
ಯೋಗನಿದ್ರೆಯೊಳಿಪ್ಪ ಆ ಕಂದನ
ಆಗಮ ಶ್ರುತಿಗಳು ಅರಸಿ ಕಾಣದ ವಸ್ತು
ತೂಗಿ ನೋಡುವ ಪುಣ್ಯವೆಲ್ಲಿ ಪಡೆದಳೊ ೨

ವೇದ ತತಿಗಳಿಂದ ಬೋಧ ತಪಗಳಿಂದ
ಹೋದ ಹೊಲಬನರಿಯದಾತನ
ಬೀದಿಯಲಾಡುವ ಮಗನನರಸಿ ವಿ
ನೋದವಾಡುವ ಪುಣ್ಯವೆಲ್ಲಿ ಪಡೆದಳೊ ೩

ಹೊನ್ನ ಮಣೆಯ ಮೇಲೆ ಚಿಣ್ಣನ ಕುಳ್ಳಿರಿಸಿ
ಎನ್ನ ಮೋಹದ ಮುದ್ದು ಮಗನೆನುತ
ಹೊನ್ನ ತಾ ಗುಬ್ಬಿ ತಾ ತಾ ಹೊನ್ನ ಗುಬ್ಬಿಯೆಂದು
ಚಿಣ್ಣನಾಡಿಪ ಪುಣ್ಯವೆಲ್ಲಿ ಪಡೆದಳೊ ೪

ಬಲಿಯಿತ್ತ ಧಾರೆಯ ಜಲವ ಕರದೊಳಿಟ್ಟು
ನೆಲನ ಈರಡಿ ಮಾಡಿದ ದೇವನ
ಲಲನೆ ತೊಡೆಯೊಳಿಟ್ಟು ತಲೆಯ ನೇವರಿಸುತ್ತ
ಮೊಲೆಯ ಕೊಡುವ ಪುಣ್ಯವೆಲ್ಲಿ ಪಡೆದಳೊ ೫

ಮಡದಿ ಬಾಲಕನ ನಿಲ್ಲೋ ನಿಲ್ಲೋ ಎಂದು
ಬಿಡದೆ ಕೊನೆ ಬೆರಳಲ್ಲಿ ಕರ ಪಿಡಿದು
ಅಡಿಯಿಡು ಮಗನೆ ದಟ್ಟಡಿಯಿಡು ಇಡು ಎಂದು
ನಡೆಯ ಕಲಿಸುವ ಪುಣ್ಯವೆಲ್ಲಿ ಪಡೆದಳೊ ೬

ಒಣಗಿದ ತನು ತಲೆ ಜಡೆ ಹಣೆಯಲಿ ನಾಮ
ಪ್ರಣವ ಜಪದಿ ಮಣಿ ಮಾಲೆಯನೆಣಿಸಿ
ಮುನಿ ಜನಗಳೆಂದು ಅರಸಿ ಕಾಣದವನೊಳ್
ಅಣಕವಾಡುವ ಪುಣ್ಯವೆಲ್ಲಿ ಪಡೆದಳೊ ೭

ಪಶುಪತಿ ಬ್ರಹ್ಮರು ಸುರ ಸಿದ್ಧ ಸಾಧ್ಯರು
ವಸುಧೆಯೊಳಗೆ ಬಂದು ಕಾದಿರಲು
ಶಶಿಮುಖಿ ಸಾಸಿರ ಪೆಸರುಳ್ಳ ದೇವಗೆ
ಹೆಸರಿಡುವ ಪುಣ್ಯವೆಲ್ಲಿ ಪಡೆದಳೊ ೮

ಮಂದಗಮನೆ ಆನಂದದಿ ನಿಟ್ಟಿಸಿ
ಕುಂದದೆ ಜಯ ಜಯವೆನುತಿರಲು
ಮಂದರಧರ ವರ ಪುರಂದರವಿಠಲನ
ಬಂದಪ್ಪುವ ಪುಣ್ಯವೆಲ್ಲಿ ಪಡೆದಳೊ ೯

ಈರೇಳು ಜಗವನೆಲ್ಲ—(ಎರಡು ಏಳು) ಹದಿನಾಲ್ಕು ಲೋಕಗಳನ್ನು.

ವೇದ ತತಿಗಳಿಂದ—ವೇದಗಳ ಸಮೂಹದಿಂದ (ನಾಲ್ಕು ವೇದಗಳು, ಆರು ವೇದಾಂಗಗಳು).

ಹೊಲಬು—ರೀತಿ, ಬಗೆ.

ಒಣಗಿದ ತನು—ತಪಸ್ಸಿನಿಂದ ಕೃಶವಾದ ದೇಹ.

ಎಂದು—ಎಂದಿಗೂ.

೩೪

ಬೇಹಾಗು ಆದಿ

ಗೋಪಿಯು ಭಾಗ್ಯವಿದು ಶ್ರೀಪತಿ
ತಾ ಶಿಶುರೂಪಿನಲಿರುವುದು ಪ

ಕಡು ಮುದ್ದು ರಂಗನ ತೊಡೆಯಮೇಲಿತ್ತುತ
ಜಡೆಯ ಹೆಣೆದು ಹೂ ಮುಡಿಸಿ ಬೇಗ
ಬಿಡದೆ ಮುತ್ತಿನ ಚೆಂದರಳೆಲೆಯನು
ಸಡಗರದಿಂದ ಅಲಂಕರಿಸಿದಳು ೧

ನಿತ್ಯನಿರ್ಮಲನಿಗೆ ನೀರನೆರೆದು ತಂ
ದೆತ್ತಿ ತೊಡೆಯೊಳಿಟ್ಟು ಮೊಲೆಯೂಡಿ
ಮುತ್ತುಕೊಟ್ಟು ಬಲು ವಿಧದಿಂದಾಡಿಸಿ
ಅರ್ಥಿಯಿಂದಲಿ ತಾ ತೂಗಿದಳು ೨

ದೃಷ್ಟಿ ತಾಕೀತೆಂದಿಟ್ಟು ವಿಭೂತಿಯ
ತಟ್ಟೆಯೊಳಾರತಿಗಳ ಬೆಳಗಿ
ಥಟ್ಟನೆ ಉಪ್ಪು ಬೇವು ನಿವಾಳಿಸಿ
ತೊಟ್ಟಿಲೊಳಿಟ್ಟು ತಾ ತೂಗಿದಳು ೩

ಎನ್ನಯ ರನ್ನನೆ ಸುಮ್ಮನಿರೋ ದೊಡ್ಡ
ಗುಮ್ಮನು ಬರುವನು ಅಳಬೇಡ
ಸುಮ್ಮನೆ ಇರು ನಿನಗಮ್ಮಿ ಕೊಡುವೆನೆಂದು
ಬೊಮ್ಮನ ಪಿತನ ತಾ ತೂಗಿದಳು ೪

ಮಾಧವ ಜೋ ಮಧುಸೂದನ ಜೋ ಜೋ
ಯಾದವ ರಾಯ ಶ್ರೀರಂಗನೆ ಜೋ
ಆದಿಮೂರುತಿ ನಮ್ಮ ಪುರಂದರವಿಠಲನ
ಆದರದಿಂದ ತಾ ತೂಗಿದಳು ೫

ಅರಳೆಲೆ—ಜಡೆಬಿಲ್ಲೆ.
ಗುಮ್ಮ—ಬೆದರಿಸುವ ದೆವ್ವ (ಗುರ್ವು).
ಅಮ್ಮಿ—ಮೊಲೆ.

ಸಾವೇರಿ ಚಾಪು

ಎಂಥಾ ಪುಣ್ಯವೆ ಗೋಪಿ
ಎಂಥಾ ಭಾಗ್ಯವೆ ನಿನ್ನ
ಇಂಥಾ ಮಗನ ಕಾಣೆವೆ ಪ

ಚಿಂತಿಸಿದರು ದೊರಕ ಚೆಲುವ ರಾಜಗೋಪಾಲ
ಚಿಂತೆಯೆಲ್ಲವು ಪೋಪುದೇ ಕೇಳೆ ಯಶೋದೆ ಅ

ಸರಸಿಜನಾಭನ ಸುಮ್ಮನೆ ಕಂಡರೆ
ದುರಿತವೆಲ್ಲವು ಪೋಪುದೆ
ಸರಸವಾಡುತ ಬಂದು ಸವಿ ಮಾತನಾಡಿದರೆ
ಹರುಷ ಕೈಗೂಡುವುದೇ ಕೇಳೆ ಯಶೋದೆ ೧

ಊರೊಳಗೆ ಇವ ನೆರೆಹೊರೆಯರಂಜಿಕೆ
ದೂರಿಕೊಂಬುವರಲ್ಲವೆ
ಅರಣ್ಯದಲಿ ನಾವು ಆಡುವ ಆಟಗಳು
ಆರಿಗಾದರು ಉಂಟೇನೆ ಕೇಳೆ ಯಶೋದೆ ೨

ನಿನ್ನ ಮಗನ ಕರೆಯೆ ಎಮ್ಮ ಪ್ರಾಣದ ಧೊರೆಯೆ
ಘನ್ನನು ಪರಬ್ರಹ್ಮನೆ
ಚನ್ನ ಶ್ರೀ ಪುರಂದರವಿಠ್ಠಲರಾಯನ
ನಿನ್ನಾಣೆ ಬಿಡಲಾರೆವೇ ಕೇಳೆ ಯಶೋದೆ ೩

ಧನ್ಯಾಸಿ ಆದಿ

ಯಶೋದೆ ನಿನ್ನ ಕಂದಗೆ ಏಸು ರೂಪವೆ ಪ

ಶಿಶುವಲ್ಲ ನಿನ್ನ ಮಗ ಕೃಷ್ಣ ಜಗತ್ಪತಿಯೆ ಅ

ಹಸುಗಳ ಕರೆವಲ್ಲಿ ಹಲವು ರೂಪ ತೋರುವ
ಬಿಸಿಯ ಹಾಲಿಡುವಲ್ಲಿ ಬೆನ್ನ ಹಿಂದೆ ಇರುವ
ಮೊಸರ ಕಡೆಯುವಲ್ಲಿ ಮುಂದೆ ತಾ ನಿಂದಿರುವ
ಹಸನಾಗಿ ಮೋಸಮಾಡಿ ಬೆಣ್ಣೆಯ ಮೆಲುವ ೧

ಒಬ್ಬರ ಮನೆಯಲ್ಲಿ ಮಲಗಿ ತಾನಿರುವ
ಒಬ್ಬರ ಮನೆಯಲ್ಲಿ ಬೆಣ್ಣೆ ಕದ್ದು ಮೆಲ್ಲುವ
ಒಬ್ಬರ ಮನೆಯಲ್ಲಿ ರತಿಕ್ರೀಡೆಯಾಡುತಿರುವ
ಒಬ್ಬರ ಮನೆಯಲ್ಲಿ ಪುಟಚೆಂಡನಾಡುತಿರುವ ೨

ಹಿಂದೆ ತಾ ನಿಂದಿರುವ ಮುಂದೆ ಹೋಗುತಿರುವ
ಇಂದುಮುಖಿಯರ ಕೂಡೆ ಸರಸವಾಡುವ
ಬಂದು ನೋಡೆ ಯಶೋದೆ ಬಣ್ಣದ ಮಾತಲ್ಲ
ನಂದಗೋಪನ ಕಂದ ಪುರಂದರವಿಠಲ ೩

ಏಸು—ಎಷ್ಟು.

ಸೌರಾಷ್ಟ್ರ ಚಾಪು

ಬಾರೆ ಗೋಪೆಮ್ಮ ನಿಮ್ಮ ಬಾಲಯ್ಯನಳುತಾನೆ
ಬಾರೆ ಗೋಪೆಮ್ಮ ಪ

ಆರು ತೂಗಿದರು ಮಲಗನು ಮುರವೈರಿ ಬಾರೆ ಗೋಪೆಮ್ಮ ಅ

ನೀರೊಳು ಮುಳುಗಿ ಮೈ ಒರೆಸೆಂದಳುತಾನೆ ಬಾರೆ ಗೋಪೆಮ್ಮ
ಮೇರುವ ಹೊತ್ತು ಮೈಭಾರವೆಂದಳುತಾನೆ ಬಾರೆ ಗೋಪೆಮ್ಮ ೧

ಧರಣಿ ಕೋರೆಯಲಿಟ್ಟು ದವಡೆ ನೊಂದಳುತಾನೆ ಬಾರೆ ಗೋಪೆಮ್ಮ
ದುರುಳ ರಕ್ಕಸನ ಕರುಳ ಕಂಡಳುತಾನೆ ಬಾರೆ ಗೋಪೆಮ್ಮ ೨

ನೆಲವನಳೆದು ಪುಟ್ಟ ಬೆರಳು ನೊಂದಳುತಾನೆ ಬಾರೆ ಗೋಪೆಮ್ಮ
ಛಲದಿಂದ ಕೊಡಲಿಯ ಪಿಡಿದೇನೆಂದಳುತಾನೆ ಬಾರೆ ಗೋಪೆಮ್ಮ ೩

ಬಲು ಸೈನ್ಯ ಕಪಿಗಳ ನೋಡೆನೆಂದಳುತಾನೆ ಬಾರೆ ಗೋಪೆಮ್ಮ
ನೆಲುವಿನ ಬೆಣ್ಣೆಯು ನಿಲುಕದೆಂದಳುತಾನೆ ಬಾರೆ ಗೋಪೆಮ್ಮ ೪

ಬತ್ತಲೆ ನಿಂತವನ ಎತ್ತಿಕೊ ಎಂದಳುತಾನೆ ಬಾರೆ ಗೋಪೆಮ್ಮ
ಉತ್ತಮ ತೇಜಿಯ ಹತ್ತೇನೆಂದಳುತಾನೆ ಬಾರೆ ಗೋಪೆಮ್ಮ ೫

ತೊಟ್ಟಿಲೊಳಗೆ ಮಲಗಲೊಲ್ಲನು ಮುರವೈರಿ ಬಾರೆ ಗೋಪೆಮ್ಮ
ಧಿಟ್ಟ ಶ್ರೀ ಪುರಂದರವಿಠಲಗೆ ಮೊಲೆಕೊಡು ಬಾರೆ ಗೋಪೆಮ್ಮ ೬

[ದಶಾವತಾರ ವರ್ಣನೆಯನ್ನು ಕೃಷ್ಣಬಾಲಲೀಲೆಯಲ್ಲಿ ಹೆಣೆದಿರುವ ಪದ.]

ಕೇದಾರಗೌಳ ಚಾಪು

ಕರೆದು ಮುದ್ದಿಸುವ ಗೋಪಿಯ ಭಾಗ್ಯಕೆಣೆಯುಂಟೆ ಪ

ಗುರುಕುಲಾಂಬುಧಿಚಂದ್ರ ಕೃಷ್ಣ ಬಾರೆಂದು ಅ

ಸವ್ಯಹಸ್ತದಿ ಅಪಸವ್ಯಕರವ ಪಿಡಿದು
ನವ್ಯಸುಧಾಂಗುಲಿ ಸವಿಯುತಲಿ
ಅವ್ಯಕ್ತಮಧುರೋಕ್ತಿಗಳಿಂದಲಾಡುವ
ಭವ್ಯಮೂರುತಿ ಕೃಷ್ಣ ಪರಮಪುರುಷನೆಂದು ೧

ಒಂದು ಕುಚವನುಣುತ ಮತ್ತೊಂದು ಕುಚವ ಪಿಡಿದು
ಸಂದಿಲಿ ಮೊಗವನಾಲೋಕಿಸುತ
ಚಂದದಿ ಕಿರುನಗೆಯಿಂದ ಬೊಮ್ಮಾಂಡವ
ಅಂದು ಬಾಯೊಳು ತೋರ್ದ ಕೃಷ್ಣ ಬಾರೆಂದು ೨

ಆನೆ ಬಂತೊಂದಾನೆಯೆನಲು ತೊಡೆಯಲ್ಲಿ
ನಿನೀಟಿಸೆ ಲೋಕಂಗಳು ಬೆರಗಾಗುತ
ಜ್ಞಾನ ನಿಧಿ ನೀನೆ ಪುರಂದರವಿಠಲ ಇ
ದೇನೊ ನಿನ್ನ ಮಹಿಮೆ ನಾನೇನರಿಯೆನೆಂದು ೩

ಸವ್ಯಹಸ್ತ—ಬಲಗೈ.

ಅಪಸವ್ಯಕರ—ಎಡಗೈ.

ನವ್ಯಸುಧಾಂಗುಲಿ ಸವಿಯುತಲಿ—ಹೆಬ್ಬೆರಳನ್ನು ಚೀಪುತ್ತ.

ಅವ್ಯಕ್ತಮಧುರೋಕ್ತಿ—ಎಳೆಯ ಮಕ್ಕಳ ತೊದಲು ನುಡಿ.

ಬೊಮ್ಮಾಂಡವ ಬಾಯೊಳು—ಆಟವಾಡುತ್ತ ಮಣ್ಣು ತಿಂದನೆಂದು ದೂರು ಕೇಳಿ ಯಶೋದೆ ಗದರಿಸಲು, ತನ್ನ ಬಾಯನ್ನು ತೆರೆದು ಬ್ರಹ್ಮಾಂಡವನ್ನೆಲ್ಲ ತೋರಿಸಿದ ಸಂದರ್ಭ.

ಕಲ್ಯಾಣಿ ಅಟ್ಟ

ಏನು ಹೇಳಲೆ ನಾನು ಕೃಷ್ಣನ ಮಹಿಮೆ
ಯಾರಿಗೂ ತಿಳಿಯದಮ್ಮ ಪ

ಹೊತ್ತಾರೆದ್ದು ಯಶೋದೆ
ಮುತ್ತು ಪೋಣಿಸುತಿದ್ದಳು
ಹತ್ತಿರಿದ್ದ ಕೃಷ್ಣ ಬಂದು
ಒಂದು ಮುತ್ತು ತೆಗೆದುಕೊಂಡು
ಸುತ್ತಲಿದ್ದ ಹುಡುಗರ ಸಹಿತ
ಹಿತ್ತಲೊಳಗೆ ಬಿತ್ತಿ ಪೋದ ಅ

ಪರಿ ಪರಿ ಚಿಂತೆಯಿಂದ ಯಶೋದೆ
ನಾರಿಯರ ತ್ವರೆಯಿಂದ ಕಳುಹಿದಳು
ಸಂದು ಸಂದಿಲಿ ಹುಡುಕಿ ಹುಡುಕಿ
ಕಂದ ಕಾಣನೆಂದು ಬರಲು
ಒಂದು ಕ್ಷಣದಲಿ ಕೃಷ್ಣ ಬಂದು
ಎದುರಾಗಿ ನಿಂತ ೧

ಕಂದಯ್ಯನ ಕರಪಿಡಿದು ಯಶೋದೆ ಕರೆ
ತಂದಳರಮನೆಗೆ
ಕಂದ ಬಹಳ ಹಸಿದನೆಂದು
ತುತ್ತು ಮಾಡಿ ಉಣಿಸಿದಳು
ಮುತ್ತು ಏನು ಮಾಡಿದೆಯೆಂದು
ಸಿಟ್ಟಿನಿಂದ ಕೇಳಿದಳು ೨

ಹೆತ್ತ ತಾಯ ಕರೆದುಕೊಂಡು
ಹಿತ್ತಲೊಳಗೆ ಮುತ್ತಿನ ಗಿಡ ತೋರಿಸಿದ
ಪಂಟೆಪಂಟೆಗೆ ಎಂಟು ಎಂಟು
ಗೊಂಚು ಗೊಂಚಲು ಜೋಲುತಿರಲು
ಕಡಿದು ಕಡಿದು ರಾಶಿಹಾಕಿದ
ಪರಮ ಪುರಂದರವಿಠಲರಾಯ ೩

೨. ಕೃಷ್ಣನ ತುಂಟಾಟ, ಗೋಪಿಯರ ದೂರು

೪೦

ಜಂಜೂಟಿ ಚಾಪು

ಯಾರ ಮಗನಮ್ಮ ರಂಗಯ್ಯ ಪ

ಯಾರ ಮಗನಮ್ಮ ದಾರಿಯು ಕಟ್ಟುವ
ಯಾರಿಗೂ ಇವನ ದಾರಿಯು ತಿಳಿಯದೆ ೧

ಕಾಂತೆ ಕೇಳು ಏಕಾಂತದಿ ಮಲಗಿದ್ದೆ
ಕಾಂತನಂತೆ ಏಕಾಂತಕೆ ಕರೆದನೆ ೨

ಅರವಿಂದಾನನೆ ಕೇಳು ಅರೆಮೊರೆಯಿಲ್ಲದೆ
ಅರೆಕಟ್ಟಿ ಎನ್ನ ಅಧರ ಮುದ್ದಿಕ್ಕಿದ ೩

ಸರಸಿಜಾನನೆ ಕೇಳೆ ಸರಿರಾತ್ರಿವೇಳೆಯಲಿ
ಹರುಷದಿಂದಲಿ ಎನ್ನ ಸರಸಕ್ಕೆ ಎಳೆದನೆ ೪

ಗಾಡಿಗಾರ ಶ್ರೀಪುರಂದರವಿಠಲ
ಗಾಢಾಲಿಂಗನ ಮಾಡಿ ಓಡಿಪೋದನಮ್ಮ ೫

ಅರೆಮೊರೆ—ಅರೆಮರೆ ; ಸಂಶಯ, ದಿಗಿಲು.

ಅರೆಕಟ್ಟಿ—ಹಿಂದಿನಿಂದ ಬಂದು ಬಿಗಿದಪ್ಪಿ ; ಅಡ್ಡಗಟ್ಟಿ.

ಗಾಡಿಗಾರ—ಚೆಲುವ.

ಬೇಗಡೆ ಚಾಪು

ಸೈಸಲಾರೆನೆ ಗೋಪಿ ನಿನ್ನ
ಮಗನ ಲೂಟಿ
ಏಸೆಂದು ಪೇಳಲಮ್ಮ ಪ

ವಾಸುದೇವನು ಬಂದು
ಮೋಸದಿಂದಲಿ ಎನ್ನ
ವಾಸವ ಸೆಳಕೊಂಡು
ಓಡಿಪೋದನಮ್ಮ ಅ

ದೇವರ ಪೆಟ್ಟಿಗೆ ತೆಗೆದು ಸಾಲಿಗ್ರಾಮ
ಸಾವಿರ ನುಂಗುವನೆ
ಭಾವಜನ್ಯೆಯು ಇದೇನೆಂದರೆ ನಿಮ್ಮ
ಕಾವ ದೇವರು ನಾ ಕೇಳಿಕೊ ಎಂಬನೆ ೧

ಅಗ್ರೋದಕ ತಂದು ಜಗಲಿಮೇಲಿಟ್ಟರೆ
ವೆಗ್ಗಳದಲಿ ಕುಡಿವ
ಮುಂಗಳ ಮಹಿಮನ ಮಿಾಸಲೆಂದರೆ ನಿಮ್ಮ
ಮಂಗಳ ಮಹಿಮನ ಅಪ್ಪ ನಾನೆಂಬನೆ ೨

ಅಟ್ಟಡಿಗೆಯನ್ನೆಲ್ಲ ಉಚ್ಛಿಷ್ಟಮಾಡಿ
ಅಷ್ಟು ತಾ ಬಳಿದುಂಬನೆ
ಕೃಷ್ಣದೇವರ ನೈವೇದ್ಯವೆಂದರೆ ನಿಮ್ಮ
ಇಷ್ಟದೇವರು ತೃಪ್ತನಾದನೆಂತೆಂಬನೆ ೩

ಅಚ್ಚ ಪಾಲ್ಮೊಸರು ನವನೀತವು ಮಜ್ಜಿಗೆ
ರಚ್ಚೆಮಾಡಿ ಕುಡಿವ
ಸ್ವಚ್ಛ ಶ್ರೀ ಪುರಂದರವಿಠ್ಠಲರಾಯನ
ಇಚ್ಛೆಯಿಂದಲಿ ನಿನ್ನ ಮನೆಗೆ ಕರೆದುಕೊಳ್ಳೆ ೪

ಏಸು—ಎಷ್ಟು.

ವಾಸ—ವಸ್ತ್ರ, ಬಟ್ಟೆ.

ಅಗ್ರೋದಕ—ದೇವರ ಪೂಜೆಗೆ ಮಡಿಯಿಂದ ತಂದ ನೀರು.

ವೆಗ್ಗಳ—ಹೆಚ್ಚಾಗಿ.

ವಿಶಾಸಲು—ನೈವೇದ್ಯಕ್ಕೆಂದು ಇರಿಸಿರುವ ಎಡೆ

ಉಚ್ಚಿಷ್ಟ—ಎಂಜಲು.

ನವನೀತವು—ಬೆಣ್ಣೆ.

ಬಿಲಹರಿ ಚಾಪು

ನಿನ್ನ ಮಗನ ಲೂಟಿ ಘನವಮ್ಮ
ಕರೆದು ರಂಗಗೆ ಬುದ್ಧಿ ಪೇಳಿ ಗೋಪೆಮ್ಮ ಪ

ಹಾಲು ಕಾಯುವಲ್ಲಿ ಇವನ ಗಾಳಿ ಘನವಮ್ಮ
ಕಾಲು ತಂದು ಕೇಲಿನೊಳಗೆ ಅದ್ದಿ
ಪೋದನಮ್ಮ ಕೋಲ ತಂದು
ಕೊಲ್ಲಪೋದರೆ ಓಡಿಪೋದನಮ್ಮ ೧

ಮೊಸರು ಕಡೆವಲ್ಲಿ ಇವನ ಗಾಳಿ ಘನವಮ್ಮ
ಶಿಶುವಿನ ಕೈಯಲಿ ಬೆಣ್ಣೆ ಉಳಿಗೊಡನಮ್ಮ
ಮೊಸರು ಮಾರುವರು ಮೊರೆಯಿಡುವರಮ್ಮ
ಶಶಿಮುಖಿಯರು ಹೀಗೆ ದೂರುವರಮ್ಮ ೨

ಊರೊಳು ಬರಲೀಸ ಕೇರಿಯೊಳು ಸುಳಿಯಲೀಸ
ಈರೇಳು ಲೋಕಕ್ಕೆ ಒಡೆಯು ತಾನಂತೆ
ಧೀರ ಶ್ರೀ ಪುರಂದರವಿಠ್ಠಲರಾಯನ
ಕೇರಿಬಸವನ ಮಾಡಿಬಿಟ್ಟೆ ಗೋಪೆಮ್ಮ ೩

ಘನ—ದೊಡ್ಡದು.
ಗಾಳಿ—ಉದ್ದೇಶವಿಲ್ಲದ ಆಟ ; ಚೆಲ್ಲಾಟ.
ಕೇಲಿನೊಳಗೆ—ಕೇಲು, ಮಣ್ಣಿನ ಗಡಿಗೆ.
ಬರಲೀಸ—ಬರಗೊಡುವುದಿಲ್ಲ.
ಕೇರಿಬಸವ—ಊರಲ್ಲಿ ಅಡೆತಡೆಯಿಲ್ಲದೆ ತಿರುಗಾಡುವ ಗಂಡುಗೂಳಿ.

ಶಂಕರಾಭರಣ ಏಕ

ಹೇಳಿದರೆ ನಮ್ಮ ಮೇಲೆ ಯಾಕಮ್ಮ ಸಿಟ್ಟು ಇಂಥ
ಗಾಡಿಗಾರ ಮಗನ ಪಡೆದ ಮೇಲೆ ನೀವಿಷ್ಟು ಪ

ಸಣ್ಣ ರುಮಾಲು ಕಟ್ಟಿ ಚುಂಗ ಬಿಟ್ಟು ಫಣೆಗೆ
ಬಣ್ಣಿಸಿ ಕಸ್ತೂರಿ ತಿಲಕವನ್ನಿಟ್ಟು
ಚಿಣ್ಣಿಕೋಲು ಚೆಂಡು ಬುಗರಿ ಕೈಯಲಿಟ್ಟು ಪೊಸ
ಬೆಣ್ಣೆಯು ಮೆಲ್ಲು ಹೋಗೆಂದು ಕಳುಹಿಬಿಟ್ಟು ೧

ಕರೆದು ಕೈಯಲ್ಲಿ ಚಿಟ್ಟೆ ಬೆಲ್ಲ ಕೊಟ್ಟು ಚಿಕ್ಕ
ಹರಳು ಕಲ್ಲುಗಳನ್ನೇ ಆರಿಸಿಕೊಟ್ಟು
ವಾರಿಗೆಯ ಪುಂಡರನ್ನು ಮಾಡಿಕೊಟ್ಟು ಗೋಪಿ
ಊರನೆಲ್ಲ ಸುಳಿಯೆಂದು ಕಳುಹಿಸಿಕೊಟ್ಟು ೨

ಹೋಗೆಂದು ರಂಗನ ಕಳುಹಿಕೊಟ್ಟು ಗೋಪಿ
ಆಗಭೋಗಂಗಳೆಲ್ಲ ತುಂಬಿಕೊಟ್ಟು
ನಿಗಮಗೋಚರನೆಂಬ ಪೆಸರನಿಟ್ಟು ಗೋಪಿ
ಪುರಂದರವಿಠಲನ್ನ ಬೆಳೆಸಿಬಿಟ್ಟು ೩

ಚಿಟ್ಟೆಬೆಲ್ಲ—ಸಣ್ಣತುಂಡು ; ಒಂದು ಅಳತೆ.

ವಾರಿಗೆಯ—ಓರಗೆಯ, ಒಂದೇ ವಯಸ್ಸಿನ.

ಆಗಭೋಗಂಗಳ—ಪಾಪದ ಸುಖಗಳನ್ನು.

ಸಾವೇರಿ ಚಾಪು

ನಿನ್ನ ಮಗನ ಬಾಧೆ ಬಹಳವಾಗಿದೆ ನಾವು
ಇನ್ನೆಷ್ಟು ತಾಳುವೆವೆ ಗೋಪಮ್ಮ ಪ

ಬಿನ್ನಾಣವನು ಬಿಡೆ ಬಹು ದುಷ್ಟನು ಕೇಳೆ
ಇನ್ನೆಷ್ಟು ಸೈರಿಪೆವೆ ಗೋಪಮ್ಮ ಅ

ಹಾಲು ಮೊಸರು ಮಜ್ಜಿಗೆ ಭಾಂಡವನೆಲ್ಲ
ಕೋಲಲಿ ಬಡಿದಿಟ್ಟನೇ ಗೋಪಮ್ಮ
ಪೇಳುವುದಿನ್ನೇನು ನಮ್ಮಂಥ ಬಡವರ
ಗೋಳಿನ್ನು ತಟ್ಟದೇನೆ ಗೋಪಮ್ಮ ೧

ನೆಲುವಿಗೆ ಹಾಲು ಮಡಕೆ ಸೇರಿಸುವಾಗ
ಮೊಲೆಗೆ ಕೈ ಚಾಚಿದನೇ ಗೋಪಮ್ಮ
ಲಲನೆ ಬಾಲಕನಲ್ಲ ನಿನ್ನ ಮಗನು ನೋಡೆ
ಕಲಿಕಿಯೆ ಈ ಕೃಷ್ಣನು ಗೋಪಮ್ಮ ೨

ಹೊದ್ದಿ ಮೆಲ್ಲನೆ ಸನ್ನೆಯ ಮಾಡಿ ಕರೆವ ಈ
ಬುದ್ಧಿಯು ಒಳ್ಳೇದೇನೆ ಗೋಪಮ್ಮ
ಮುದ್ದುಮಾಡಿ ಸಾಕಿ ಮಗನಿಗೆ ಬಸವನ
ಮುದ್ರೆಯು ಒತ್ತಿದೇನೆ ಗೋಪಮ್ಮ ೩

ಸರಿ ಗೋಪಿಯರ ಮುಂದೆ ಶಿರವನು ಬಾಗುವ
ತೆರವ ಮಾಡಿದನು ಕಾಣೆ ಗೋಪಮ್ಮ
ಧರೆಯೊಳಗಿರುವಂಥ ಜಾರ ಚೋರರಿಗೆಲ್ಲ
ಗುರುವು ತಾನೆನಿಸಿದನೆ ಗೋಪಮ್ಮ ೪

ಎಷ್ಟು ಹೇಳುವುದಿನ್ನು ಈ ತೆರನಾದರೆ
ನಿಷ್ಠೂರ ಬಹುದು ಕಾಣೆ ಗೋಪಮ್ಮ
ಸೃಷ್ಟೀಶ ಶ್ರೀರಂಗಧಾಮ ಪುರಂದರ
ವಿಠ್ಠಲರಾಯ ಕಾಣೇ ಗೋಪಮ್ಮ ೫

ಕಲಿಕಿ—ಕಲ್ಕಿ, ಕೆಟ್ಟ ಮನುಷ್ಯ.
ಹೊದ್ದಿ—ಹೊಂದಿ ; ಹತ್ತಿರ ಬಂದು.

ಶಂಕರಾಭರಣ ಅಟ್ಟ

ಎಷ್ಟು ದುಷ್ಟನೆ ಯಶೋದೆ ನಿನ್ನ ಮಗ
ಅಷ್ಟು ಹೇಳುವೆನು ಕೇಳೆ ಪ

ಸೃಷ್ಟಿಯೊಳಗೆ ಇಂಥ
ಚೇಷ್ಟೆಕೋರನ ಕಾಣೆ
ಹುಟ್ಟಿಸಿದಾ ಬ್ರಹ್ಮ ಗಟ್ಟಿ ಕಾಣಮ್ಮ ಅ

ತೊಟ್ಟು ಹಿಡಿದು ಎನ್ನ ತೊಟ್ಟ ಕುಪ್ಪಸ ಗಂಟು
ಬಿಚ್ಚಿ ಬೇಗ ಮುದ್ದಿಟ್ಟು ಕಠಿನಕುಚ
ಗಟ್ಟ್ಯಾಗಿ ಹಿಂಡಿ ತಾನಷ್ಟು ಕುಡಿದು ಬಿಟ್ಟು
ನೆಟ್ಟನೆ ನಡೆದ ಶ್ರೀಕೃಷ್ಣನೆಂಬುವನು ೧

ಅಂಗಳದೊಳಗೆ ರಂಗೋಲಿ ಹಾಕುವಾಗ
ಶೃಂಗಾರದಂಗದ ಸೊಗಸ ನೋಡಿ
ಕಂಗಳನು ಮುಚ್ಚಿ ತಾ ಹೆಂಗಳ ವ್ರತವನು
ಭಂಗಮಾಡಿದ ಶ್ರೀರಂಗನೆಂಬುವನು ೨

ನಿತ್ಯವಾಗಿ ಎನ್ನ ಅತ್ತೆಯೆಂದು ಕರೆವ
ಎತ್ತ ಹೋಗಲು ಎನ್ನ ಹತ್ತಿರ ಕೂಡುವ
ಕತ್ತರಿಸೆನ್ನ ಸೀರೆ ಬತ್ತಲೆ ಮಾಡಿದ
ಜಿತ್ತ ಜಗಪ್ರಿಯ ಪಿತನೆನಿಸಿಹನು ೩

ಚಂದವಾಗಿದೆಯಿದು ಮಂತಿರವೆಂದು ಆ
ನಂದದಲಿ ಬಂದು ಮಲಗಿ ನಿನ್ನ ಕಂದನಲ್ಲವೆಂದು
ಚೆಂದುಟಿ ಸವಿಯುತ ಮುಂದಿನ
ಕಾರ್ಯ ಮುಕುಂದ ಮಾಡಿದನು ೪

ಕೆಂಡದಂಥವ ಯೆನ್ನ ಗಂಡ ಕಂಡರೆ ಹಿಡಿದು
ಕೊಂಡು ಚಂಡಿಕೆಯ ದಂಡಿಸದೆ ಬಿಡ ಉ
ದ್ದಂಡ ಪುರಂದರವಿಠಲರಾಯನು
ಭಂಡನೆ ಪುಂಡರೀಕಾಕ್ಷ ಶ್ರೀಕೃಷ್ಣ ೫

ಜಿತ್ತ—ಜಿತ ; ಸ್ಥಿರ.

ಪೂರ್ವಿ ಅಟ್ಟ

ಎಂಥವನೇ ಗೋಪಿ
ನಿನ್ನ ಕಂದ
ಎಂಥವನೇ ಗೋಪಿ ಪ

ಮದಗಜ ಗಮನೆಯು ಇದಿರಿಗೆ ಬಂದರೆ
ಎದೆಬದಿ ಮುಟ್ಟುವುದಿದೇನು ಚೆಂದ ೧

ಸೊಕ್ಕಿನಿಂದಲಿ ಬಂದು ತೆಕ್ಕೆಯೊಳ್ ಪಿಡಿವನು
ಚಿಕ್ಕವನೇನಿವ ಠಕ್ಕ ಗೋವಿಂದ ೨

ಚೆಲುವ ಪುರಂದರವಿಟ್ಠಲರಾಯನು
ಒಲಿಸಿ ರಮಿಸಿದನು ಲಲನೆಯರೆಲ್ಲರ ೩

ಇದಿರಿಗೆ—ಎದುರಾಗಿ.

ತೆಕ್ಕೆಯೊಳ್—ಅಪ್ಪಿಕೊಂಡು.

ಠಕ್ಕ—ಮೋಸಗಾರ.

೪೭

ಪಂತುವರಾಳಿ ಅಟ್ಟ

ಬುದ್ಧಿವಂತನಲ್ಲ ರಂಗನು ಪ

ಮುದ್ದು ಮಾಡಿ ಮಗನ ಸಲಹಿದೆ ಗೋಪಿ ಅ

ಆವು ಕಾಯ ಪೋಗಿ ಯಮುನಾತೀರದಲಿ ಮ
ಡುವ ಧುಮುಕಿ ಕಾಳಿಂಗನ ಪೆಡೆ ತುಳಿದನೆ ೧

ಹೆಡೆಯು ತುಳಿದು ಹಾವಿನ ಮೇಲೆ ಮಲಗಿ
ಕಡು ನಿದ್ರೆ ಗೈವನು ಸಾಧು ಬಾಲಕನೆ ೨

ಹದ್ದನೇರಿಕೊಂಡು ಜಗವೆಲ್ಲ ತಿರುಗಿ
ಗೆದ್ದು ಬಾಹೋ ಬುದ್ಧಿ ಇವಗೇಕೆ ೩

ಮಾರಬಂದ ಹಣ್ಣು ಹೆಡಿಗೆ ಸೂರೆಗೊಂಬ
ವಾರಣದಿಂದಲಿ ಬಯಸಿಕೊಂಬನೆ ೪

ಗಂಡನುಳ್ಳ ಹೆಂಡಿರ ಕೊಂಡು ಒಯ್ದು ಅವರ
ಭಂಡು ಮಾಡುವನೀ ಪುರಂದರವಿಠಲ ೫

ಆವು—ಹಸುಗಳನ್ನು.
ಮಡುವು—ಕಾಳಿಂದಿಮಡುವು.
ಹದ್ದನು—ಗರುಡನನ್ನು.
ಬಾಹೋ—ಬರುವ.
ಮಾರಬಂದ—ಮಾರಲಿಕ್ಕೆ ಬಂದ
ವಾರಣದಿಂದಲಿ—ತಡೆದು.

೪೮

ಕಲ್ಯಾಣಿ — ಅಟ್ಟ

ಹೇಳಬಾರದೆ ಬುದ್ಧಿಯ
ನಿನ್ನ ಮಗನ
ಊರಗೂಳಿಯು ಮಾಡಿದೇನೆ ಪ

ಓಣೋಣಿಗುಂಟೆ ವಾರಿಗೆಯರ ಕೂಡಿ
ಗೋವಳೇರ ಕೇರಿ ಹಾಳುಮಾಡುತ್ತಿದ್ದಾನೆ ಅ

ಅಟ್ಟದ ಮೇಲಿಟ್ಟ
ಚೆಟ್ಟಿಗೆ ಹಾಲಲಿ ಬೊಟ್ಟನಿಕ್ಕಿ ಚೀಪುವ
ದುಷ್ಟತನ ಮಾಡಬೇಡವಯ್ಯಾ ಎನ್ನೆ
ಕಷ್ಟವೇನೆನುತಲಿ ಮುದ್ದಿಟ್ಟು ಓಡಿದ ೧

ಮೊಸರ ಶೋಧಿಸುತಿರಲು ಬಂದು ಕುಳಿತ
ಹಸುಗೂಸು ಎನುತಿದ್ದೇನೆ
ಕುಸುಮನಾಭ ತನ್ನ ವಶವಾಗು ಎನುತಲಿ
ಮುಸುಕು ತೆಗೆದು ಕುಚಹಿಚುಕಿ ಪೋದನಲ್ಲೆ ೨

ಬೆಣ್ಣೆಯು ಕಂಡರಂತು
ಅದರ ರೂಪ ಕಣ್ಣಿಗೆ ತೋರನಲ್ಲ
ಸಣ್ಣವನೆಂದು ನಾ ಬಾರೆಂದು ಕರೆದರೆ
ಬಣ್ಣಿಸಿ ಮಾತಾಡಿ ಬಾರೆಂದು ಕರೆದನೆ ೩

ಉಡುವ ಸೀರೆಯ ಕಳೆದು ತಡಿಯಲ್ಲಿಟ್ಟು
ಮಡುವಿನೊಳು ಮೈ ತೊಳೆಯೆ
ಧಡಧಡ ಬಂದೊಯ್ದು ಕಡಹದ ಮರನೇರಿ
ಕೊಡು ಕೃಷ್ಣ ಎನುತಿರೆ ಪಿಡಿ ಜೋಡು ಕೈಯೆಂಬ ೪

ಎಷ್ಟು ಹೇಳಲಿ ಯಶೋದೆ
ನಿನಗೆ ಒಂದಿಷ್ಟು ಕರುಣವಿಲ್ಲವೇನೆ
ಸೃಷ್ಟಿಗೊಡೆಯ ನಮ್ಮ ಪುರಂದರವಿಠಲನ್ನ
ಎಷ್ಟು ಹೇಳಲಿ ಆದ್ದಷ್ಟು ನಿನ ಮುಂದೆ ೫

ಕಡಹದ ಮರ—ಕಡಂಬ ; ಕದಂಬ ಮರ ; ಯಮುನಾತೀರದಲ್ಲಿ ಬೆಳೆಯುವ ನೀಪವೃಕ್ಷ.

ಶಂಕರಾಭರಣ ಆದಿ

ನೆಂಟನು ಸಣ್ಣವನೆಂದು ನಂಬಿದೆನಮ್ಮ
ಗಂಟುಗಳ್ಳನೆಂದರಿಯದೆ ಕಾಂತೆ ಕೇಳು
ಶ್ರೀ ಕೃಷ್ಣನ ಪ

ಗೊಂಬೆಯು ಮದುವೆಗೆ ಎಂದ
ಸಂಭ್ರಮದಲಿ ಬಾರೆಂದು
ಬೆಂಬಿಡದೆನ್ನನು ಬಂದು
ಚುಂಬಿಸಿದನಲ್ಲೆ ಇಂದು ೧

ಪುಟ್ಟ ಮಕ್ಕಳೊಳಗೆಲ್ಲ
ನೆಟ್ಟಗೆ ಯಜಮಾನನೆಂದು
ಇಟ್ಟಡಿಯೊಳಗೆ ಎನ್ನ
ಬಟ್ಟ ಕುಚವ ಪಿಡಿದನಮ್ಮ ೨

ಅಪ್ಪರೊಳಗೆನ್ನ ಬಾಲ
ಕೃಷ್ಣ ಕರದಿಂದಯ್ಯಯ್ಯೊ
ಮುಟ್ಟಬಾರದ ಬಳಿಯು
ಮುಟ್ಟಿ ನೋಡಿದ ಕೃಷ್ಣಯ್ಯ ೩

ಏನೆ ತಾನೆಂದು ಮಾತಾಡಿ
ವಿಜಯದಿಂದೆನ್ನ ನೋಡಿ
ಮಾನಿನಿಯೊಳಗೆ ಮಾಡಿ
ನಿನ್ನ ಮಗ ಎನ್ನನು ಕೂಡಿ ೪

ಅಂದವೇನೆ ಈ ಪರಿಯೊ
ಳಿಂದು ಎನ್ನ ಬಿಗಿದಪ್ಪಿ
ಚಂದದಿ ನೆರೆದ ಶ್ರೀಪು
ರಂದರ ವಿಠ್ಠಲನಮ್ಮ ೫

ಇಟ್ಟಡಿ—ಕಿರಿದಾದ ದಾರಿ.
ಬಟ್ಟ—ದುಂಡಾದ ('ವೃತ್ತ' ಎಂಬುದರ ತದ್ಭವ).

ಕೇದಾರಗೌಳ ಅಟ್ಟ

ಎಂಥ ಗಾಡಿಕಾರನೆ
ಕೃಷ್ಣಯ್ಯ ಇ
ನ್ನೆಂಥ ಗಾಡಿಗಾರನೆ
ಕಂತುಪಿತನು ವೇಲಾಪುರದ ಚೆನ್ನಿಗರಾಯ
ಎಂಥಾ ಗಾಡಿಕಾರನೆ ಪ

ಹಿಂಡು ಕೂಡಿರುವ ಮಕ್ಕಳನೆಲ್ಲ ಬಡಿವರೆ
ಲಂಡನೇನೆ ಅಮ್ಮ
ಉಂಡು ಹಾಲು ಬೆಣ್ಣೆ ಬೆಕ್ಕಿಗಿಕ್ಕುವರೆ ಪ್ರ
ಚಂಡನೇನೆ ೧
ಹೆಚ್ಚು ಹೇಳುವದೇನು ಬಿಚ್ಚಿ ಉರವನ್ನು
ತೋರುವಾನೆ ಅಮ್ಮ
ಮುಚ್ಚುಮರೆ ಏತಕೆ ಮನೆ ಮನೆಯಲಿ
ಪೋಗುವಾನೆ ೨

ವಸುಧೆಯೊಳಗೆ ನಂದಗೋಕುಲದೊಳಗೆ ತಾ
ಬಂದ ಕಾಣೆ
ಅಮ್ಮ ಹಸುಮಗನಾದ ಪುರಂದರವಿಠಲ
ರಾಯ ಕಾಣೆ ೩

ಗಾಡಿಕಾರ—ಚೆಲುವ, ಉಪಾಯಗಳನ್ನು ಬಲ್ಲವ.

ಬಡಿವರೆ—ಹೊಡೆಯುವುದಕ್ಕೆ.

ಲಂಡ—ದಾರಿತಪ್ಪಿದ ಕೆಟ್ಟಹುಡುಗ.

ಉರ—ಎದೆ.

ಹಸುಮಗ—ಎಳೆಯ ಮಗು.

ಶ್ರೀರಾಗ ಆದಿ

ಹಾಲು ಮಾರಲು ಬಂದೆವಮ್ಮ ಈ ಮಧುರಾಪುರಕ್ಕೆ ಪ

ಸೀರೆ ಶೃಂಗಾರದ ಕುಪ್ಪಸವ ತೊಟ್ಟು ಹರಿನಾಮಗಳಿಟ್ಟು
ದೋರೆ ಬಂಗಾರದ ಬಳೆ ಕೈಕಟ್ಟು ಕಳವಳಿಸುತಲಿಟ್ಟು
ಕ್ಷೀರದ ಬುಟ್ಟಿ ಶಿರದಲ್ಲಿಟ್ಟು
ಮಾರಬಂದೆವೆ ನಂದನ ಕಂಡು
ದಾರಿಯೊಳಗೆ ನಮ್ಮ ಗೊಲ್ಲನ ಕಂಡು
ತಾರೆಂದು ಸುಂಕವ ಕರ ಹಿಡಕೊಂಡು
ಘೋರಿಸುತ ನಾವುಟ್ಟ ಸೀರೆಯ ಸೆಳೆಕೊಂಡು ೧

ಎಷ್ಟು ಹಟದವನೆ ಕೃಷ್ಣ ಚೋರ ಮುತ್ತಿನ ಸರ
ಕಟ್ಟಾಣಿ ಗುಂಡಿನ ಜೋಮಾಲೆ ಹವಳದ ಸರ ನೀಲದುಂಗರ
ಕೊಟ್ಟೇನೆಂದರೆ ರೊಕ್ಕಗಳಿಲ್ಲ
ಕೃಷ್ಣ ಆವರ್ಮಾತ ಕೇಳುವನಲ್ಲ
ಇಷ್ಟು ಮಾತಿಗೆ ದಿಟ್ಟ ಮೋರೆ ಗೊಲ್ಲ ೨

ಬಾಲೆ ಬಾರೆಂದು ಬಣ್ಣಿಸಿ ಕರೆವ ಹಸ್ತಗಳನೆ ಮುಗಿವ
ತೋಳು ತೊಡೆ ಗಲ್ಲವ ಕುಚಗಳ ಪಿಡಿವ ಗಡಿಗೆಯ ಒಡೆವ
ಥಾಲಿ ಥಾಲಿ ಹಾಲ್ಮೊಸರನೆ ಸುರಿವ
ಕಾಲಿಗೆ ಬಿದ್ದೆವೆ ಕಾಡಬೇಡೆಂದು
ಭಾಳ ಹೊತ್ತಾಯಿತು ಹೋಗಬೇಕೆಂದು
ಶ್ರೀಹರಿ ಪುರಂದರವಿಠಲನ ದಯದಿಂದ ೩

ದೋರೆ ಬಂಗಾರದ ಬಳೆ—ದಪ್ಪ (ಥೋರ) ಬಂಗಾರದ ಬಳೆ.
ಕಟ್ಟಾಣಿ—ಮುತ್ತಿನ ಸರ.
ಜೋಮಾಲೆ—ಇಳಿಬಿದ್ದ ಸರ.
ಆವರ್ಮಾತ—ಯಾರ ಮಾತನ್ನೂ.

ಮೋಹನಕಲ್ಯಾಣಿ ಆದಿ

ಚಿಕ್ಕವನೇ ಇವನು
ನಮ್ಮ ಕೈಗೆ
ಸಿಕ್ಕದೆ ಓಡುವನು ಪ

ಅಕ್ಕಯ್ಯ ಮಕ್ಕಳು ಹುಟ್ಟುವ ಮರ್ಮವ
ಘಕ್ಕನೆ ಎನಕೂಡೆ ಹೇಳು ಹೇಳೆನುತಾನೆ ಅ

ನೀರಿಗೆ ಹೋಗುವಾಗ
ನಿಂತುಕೊಂಡು
ಯಾರೂ ಇಲ್ಲದೆ ಕರೆವ
ದಾರಿಯಡ್ಡವ ಕಟ್ಟಿ
ಕೂಡಿಕೊ ಎನುತಲೆ
ಹೋರಾಟವ ಮಾಡಿ
ಹೋಗಾಡಿಸಿದನಮ್ಮ ೧

ಮೊಸರನ್ನೆ ಕಡೆಯುವಾಗ
ಬೆನ್ನಲಿ ಬಂದು
ಕಣ್ಣುಮುಚ್ಚಿ ಕಾಡುವ
ಬೆಣ್ಣೆಯ ತಾರೆಂದು
ಕುಚಗಳ ಪಿಡಿಯುತ
ಬಣ್ಣಿಸಿ ಬಣ್ಣಿಸಿ ಪ್ರಣಯ
ಮಾಡಿದನಮ್ಮ ೨

ನಿದ್ದೆ ಕಣ್ಣಲಿ ನಾನಿದ್ದೆ
ಗಂಡನೆಂದು
ಬುದ್ಧಿಯಿಲ್ಲದೆ ಕೂಡಿದೆ
ಎದ್ದು ನೋಡಲು ಅವನ
ಎಡಗೈಯ ಪಿಡಿಯುತ್ತ
ಮುದ್ದು ಶ್ರೀ ಪುರಂದರ
ವಿಠಲ ಕಾಣಮ್ಮ ೩

ಶಂಕರಾಭರಣ ಆದಿ

ತಾಳು ತಾಳೆಲೊ ರಂಗಯ್ಯ, ನೀ
ತಾಳು ತಾಳೆಲೊ ಕೃಷ್ಣಯ್ಯ ಪ

ನಾಳೆ ನಮ್ಮನೆಗೆ ಬಂದರೆ ನಿನ್ನ
ಕಾಲ ಕಂಭಕೆ ಕಟ್ಟಿ ಪೇಳುವೆ ಗೋಪಿಗೆ ಅ

ದೊರೆಗಳ ಮಗನೆಂಬುದದೇನೊ ಆ
ತುರದಿ ಮನೆ ಪೊಕ್ಕ ಪರಿಯೇನೊ
ದುರುಳಬುದ್ಧಿ ನಿನಗೆ ತರವೇನೊ ಹಿಂದೆ
ತಿರುಗಿ ಬೇಡ್ಕೊಂಡದ್ದು ಮರೆತ್ಯೇನೊ ೧

ಚಿಕ್ಕ ಮಕ್ಕಳು ಹೋದರು ಎಂದು ನೀ ಬಂದು
ಕಕ್ಕುಲತೆಯ ಮಾಡುವರೇನೊ
ಸಿಕ್ಕಿದ ಗೋಪಾಲ ಹಿಡಿಯೆಂದರೆ ನೀ
ಬಿಕ್ಕಿ ಬಿಕ್ಕಿ ಅತ್ತರೆ ಬಿಡುವರೇನೊ ೨

ಕಟ್ಟಿದಾಕಳ ಮೊಲೆಗಳನುಂಡು ಕರು
ಬಿಟ್ಟು ಹೇಳುವುದೇನೆಲೊ ರಂಗ
ಸೃಷ್ಟಿಗೊಡೆಯ ಶ್ರೀ ಪುರಂದರವಿಠಲ ನೀ
ಕಟ್ಟಲ್ಲಿ ನಿಂತ ಕಾರಣವೇನೊ ರಂಗ ೩

ದೊರೆಗಳ—ಗೋಕುಲದ ಒಡೆಯನಾದ ನಂದಗೋಪನ.

ಕಟ್ಟಲ್ಲಿ—ಹಿಡಿತದಲ್ಲಿ, ಬಂಧನದಲ್ಲಿ.

ಆನಂದಭೈರವಿ — ಚಾಪು

ಏನ ಪೇಳಲಿ ಗೋಪಿ ನಿನ್ನ ಮಗನ ಜಾಲ
ಮಾನ ತಪ್ಪಿ ಬಂದ ಮನೆಯೊಳಗೆ ಪ

ಕೊಡ ಹಾಲುಂ ಕುಡಿದನೆ ಗಡಿಗೆಯ ಒಡೆದನೆ
ಅಡಗಿದ್ದನೆ ದೊಡ್ಡ ಕೊಡದೊಳಗೆ
ಹುಡುಗ ಸಿಕ್ಕಿದನೆಂದು ಹೊಡೆಯ ಹೋದರೆ
ಬಡವರ ಮಗನೇನೆ ಹೊಡೆಯಲಿಕ್ಕೆ ೧

ಅಳಿಯನ ವೇಷದಿ ಮಗಳ ಕರೆಯ ಬಂದ
ಕಲಹ ಮಾಡಿ ತಾ ಕಳಿಸೆಂದ
ಒಲುಮೆಯಿಂದಲಿ ತಿಂಗಳೆರಡಿಟ್ಟುಕೊಂಡರೆ
ಗಿಳಿಯಂಥ ಹೆಣ್ಣಿನ ಕೆಡಿಸಿದನೆ ಗೋಪಿ ೨

ಇಷ್ಟೊಂದು ಸಿಟ್ಟೇಕೆ ಚಿಣ್ಣಕೃಷ್ಣನ ಮೇಲೆ
ಪುಟ್ಟಿಸಬೇಡಿರೆ ಅನ್ಯಾಯವ
ಸೃಷ್ಟಿಗೊಡೆಯ ನಮ್ಮ ಪುರಂದರವಿಠಲನ್ನ
ದೃಷ್ಟಿಸಿ ನೋಡಿರೆ ತೊಟ್ಟಿಲಿನೊಳಗೆ ೩

ಜಾಲ—ಮೋಸ.

ಮಾನ ತಪ್ಪಿ—ಮರ್ಯಾದೆಯಿಲ್ಲದೆ.

ಇಷ್ಟೊಂದು ಸಿಟ್ಟೇಕೆ...—ಇದು ಯಶೋದೆಯ ಮಾತು. ಗೋಪಿಯರ ದೂರನ್ನು ಕೇಳಿ ಬೇಸತ್ತು, ಇವೆಲ್ಲ ಆಧಾರವಿಲ್ಲದ ದೂರೆಂದೂ, ತನ್ನ ಮಗು ತೊಟ್ಟಿಲಲ್ಲೇ ಮಲಗಿದೆಯೆಂದೂ ಉತ್ತರ ಹೇಳುತ್ತಾಳೆ.

೪. ಯಶೋದೆ ಅವರನ್ನು ಸಮಾಧಾನಗೊಳಿಸುವುದು

೫೫

ಕೇದಾರಗೌಳ ಚಾಪು

ದೂರು ಮಾಡುವರೇನೆ ರಂಗಯ್ಯನ
ದೂರು ಮಾಡುವರೇನೆ ಪ

ದೂರು ಮಾಡುವರೇನೆ
ಚೋರನೆಂದಿವನನು
ಮೂರು ಲೋಕಕೆ ಮುದ್ದು
ತೋರೋ ರಂಗಯ್ಯನ ಅ

ನಂದಗೋಕುಲದಲಿ ಮುಂದೆ ಗೋವುಗಳ
ಮುಂದೆ ಕೊಳಲನೂದಿ ಚಂದದಿ ಬರುವನ ೧

ಗೊಲ್ಲರ ಮನೆಗಳ ಕಳ್ಳತನದಿ ಪೊಕ್ಕು
ಗುಲ್ಲು ಮಾಡುತಲವರ ಗಲ್ಲ ಕಚ್ಚುವನೆಂದು ೨

ಕಾಮದಿಂದಲಿ ನಿನ್ನ ಕಳವಳತನಕಾಗಿ
ಶ್ಯಾಮಸುಂದರ ಶ್ರೀ ಪುರಂದರವಿಠಲನ ೩

ತೋರೋ—ತೋರುವ.

ನಂದದಿ—ಆನಂದದಿಂದ.

ಗುಲ್ಲು—ಗದ್ದಲ ; ದನಿಯೇರಿಸಿದ ಮಾತು.

ಕಾಮದಿಂದಲಿ—ಮನಸ್ಸಿಗೆ ಬಂದಂತೆ, ನಿನ್ನಲ್ಲೇ ಕಾಮವಿದ್ದು.

ಕಳವಳತನ—ಮನಸ್ಸಿನ ಉದ್ವೇಗ, ಬಯಕೆ.

೫. ಯಶೋದೆ ಕೃಷ್ಣನನ್ನು ಹುಡುಕಾಡುವುದು

೫೬

ಸೌರಾಷ್ಟ್ರ ಆದಿ

ಅಮ್ಮಾ ನಿಮ್ಮ ಮನೆಗಳಲ್ಲಿ
ನಮ್ಮ ರಂಗನ ಕಂಡಿರೇನೆ ಪ

ಕಾಶಿ ಪೀತಾಂಬರ ಕೈಯಲ್ಲಿ ಕೊಳಲು
ಪೂಸಿದ ಶ್ರೀಗಂಧ ಮೈಯೊಳಗಮ್ಮ
ಲೇಸಾಗಿ ತುಲಸಿಯ ಮಾಲೆಯ ಹಾಕಿದ
ವಾಸುದೇವನು ಬಂದ ಕಂಡಿರೇನೆ ೧

ಕರದಲ್ಲಿ ಕಂಕಣ ಬೆರಳಲ್ಲಿ ಉಂಗುರ
ಕೊರಳಲ್ಲಿ ಹಾಕಿದ ಹುಲಿಯುಗುರಮ್ಮ
ಅರಳೆಲೆ ಕನಕದ ಕುಂಡಲ ಕಾಲಂದಿಗೆ
ಉರಗಶಯನ ಬಂದ ಕಂಡಿರೇನೆ ೨

ಕಾಲಲಿ ಕಿರುಗೆಜ್ಜೆ ನೀಲದ ಬಾವುಲಿ
ನೀಲವರ್ಣನು ನಾಟ್ಯವಾಡುತಲಿ
ಮೇಲಾಗಿ ಬಾಯಲ್ಲಿ ಜಗವನು ತೋರಿದ
ಮೂಲೋಕದೊಡೆಯನ ಕಂಡಿರೇನೆ ೩

ಕುಂಕುಮ ಕಸ್ತೂರಿ ಕುಡಿಕುಡಿ ನಾಮವು
ಶಂಖಚಕ್ರಂಗಳ ಧರಿಸಿಹನಮ್ಮ
ಬಿಂಕದಿಂದಲಿ ಕೊಳಲೂದುತ ಪಾಡುತ
ಪಂಕಜಾಕ್ಷನು ಬಂದ ಕಂಡಿರೇನೆ ೪

ಹದಿನಾರುಸಾವಿರ ಗೋಪಿಯರೊಡಗೂಡಿ
ಚದುರಂಗ ಪಗಡೆಯನಾಡುವನಮ್ಮ
ಮದನ ಮೋಹನರೂಪ ಎದೆಯಲಿ ಕೌಸ್ತುಭ
ಪದುಮನಾಭನು ಬಂದ ಕಂಡಿರೇನೆ ೫

ನೊಸಲ ಸುತ್ತಿದ ಪಟ್ಟಿ ನಡುವಿನ ವಡ್ಯಾಣ
ಎಸೆವ ಕಸ್ತೂರಿ ಬಟ್ಟು ಮೈಯವನಮ್ಮ
ಪಸರಿಸಿ ಪಟ್ಟೆಯ ಹಾವಿಗೆ ಮೆಟ್ಟಿದ
ಅಸುರಾಂತಕ ಬಂದ ಕಂಡಿರೇನೆ ೬

ತೆತ್ತೀಸಕೋಟಿ ದೇವರ್ಕಳ ಒಡಗೂಡಿ
ಹತ್ತವತಾರವನೆತ್ತಿದನೆ
ಭಕ್ತವತ್ಸಲ ನಮ್ಮ ಪುರಂದರವಿಠಲ
ನಿತ್ಯೋತ್ಸವ ಬಂದ ಕಂಡಿರೇನೆ ೭

ಅರಳೆಲೆ—ಅರಳಿಯ ಎಲೆಯ ಆಕಾರದಲ್ಲಿರುವ ಪದಕ.

ಬಾವುಲಿ—ಕಿವಿಯ ಮೇಲ್ಭಾಗದಲ್ಲಿ ಧರಿಸುವ ಚಿನ್ನದ ಆಭರಣ.

ಕುಡಿಕುಡಿನಾಮ—ಚೂಪಾಗಿ ತಿದ್ದಿದ ತೆಳುನಾಮ.

ನೊಸಲ ಸುತ್ತಿದ ಪಟ್ಟಿ—ಹಣೆಯ ಮೇಲೆ ತೊಡುವ ಆಭರಣ.

ಪಟ್ಟೆಯ ಹಾವಿಗೆ—ಕಾಲಿಗೆ ರೇಷ್ಮೆಯ ಮೆಟ್ಟು.

ತೆತ್ತೀಸ—ಮೂವತ್ತುಮೂರು (ತ್ರಯಸ್ತ್ರಿಂಶತ್ ಎನ್ನುವುದರ ತದ್ಭವ).

ಬಿಲಹರಿ ಅಟ್ಟ

ಗರುಡಗಮನ ಬಂದನೊ
ನೋಡಿರೋ ಬೇಗ ಪ

ಗರುಡಗಮನ ಬಂದ ಧರಣಿಯಿಂದೊಪ್ಪುತ
ಕರೆದು ಬಾರೆನ್ನುತ ವರಗಳ ಬೀರುತ ಅ

ಎನ್ನ ರಕ್ಷಿಪ ದೊರೆ ಇಲ್ಲಿಗೆ ತಾ ಬಂದ
ಚಿನ್ನವ ಪೋಲುವ ವಿಹಂಗಜ ರಥದಲಿ
ಘನ್ನಮಹಿಮ ಬಂದ ಭಿನ್ನ ಮೂರುತಿ ಬಂದ
ಸಣ್ಣ ಕೃಷ್ಣ ಬಂದ ಬೆಣ್ಣೆ ಕಳ್ಳ ಬಂದ ೧

ಪಕ್ಷಿವಾಹನ ಬಂದ ಲಕ್ಷ್ಮೀಪತಿಯು ಬಂದ ಕುಕ್ಷಿ
ಯೊಳಗೆ ಜಗವನ್ನಿಟ್ಟವ ತಾ ಬಂದ
ಸೂಕ್ಷ್ಮಸ್ಥೂಲದೊಳು ಇಪ್ಪನು ತಾ ಬಂದ
ಸಾಕ್ಷಿಭೂತನು ಅವ ಸರ್ವೇಶ್ವರನು ಬಂದ ೨

ತಂದೆ ಪುರಂದರವಿಠಲರಾಯು ಬಂದ
ಬಂದು ನಿಂತು ನಲಿದಾಡಿದನು
ಸಿಂಧುಶಯನ ಬಂದ ಅಂದು ಸಾಂದೀಪನ
ನಂದನ ತಂದಿತ್ತಾನಂದಮೂರುತಿ ಬಂದ ೩

ವಿಹಂಗಜ—ಗರುಡನನ್ನು ರಥವಾಗಿ ಮಾಡಿಕೊಂಡು.
ಬಂದಭಿನ್ನ—ಬಂದ ಅಭಿನ್ನ ; ಏಕಮೇವಾದ್ವಿತೀಯ.
ಕುಕ್ಷಿ—ಹೊಟ್ಟೆ.
ಸಾಕ್ಷಿಭೂತನು—ಜಗತ್ತೆಲ್ಲವೂ ಅವನ ಲೀಲೆಯಾಗಿ, ಅದರ ವ್ಯಾಪಾರದಿಂದ ಲಿಪ್ತನಾಗದೆ ಇರುವ ಭಾವ.
ಸಾಂದೀಪನ—ಕೃಷ್ಣನ ಬಾಲ್ಯದಲ್ಲಿ ಗುರುವಾದ ಅವಂತಿಯ ಸಾಂದೀಪಿನಿ ಮುನಿಯ ಮಗನನ್ನು ಸಂಹ್ಲಾದ ದೈತ್ಯನು (ಪ್ರಹ್ಲಾದನ ತಮ್ಮ) ಕದ್ದೊಯ್ದು ಕೊಂದದ್ದೂ, ಗುರುದಕ್ಷಿಣೆಯೆಂದು ಕೃಷ್ಣನು ಅವನನ್ನು ಬದುಕಿಸಿದ್ದೂ ಭಾಗವತದಲ್ಲಿ ಬರುವ ಕಥೆ (೧೦, ೪೫).

ಸೌರಾಷ್ಟ್ರ ಅಟ್ಟ

ಬಾಲಕೃಷ್ಣನೆ ಬಾರೊ ಬೇಗ ಬಾರೊ ಪ

ಬಾಲಕೃಷ್ಣನೆ ಬಾರೊ ಕಾಲಗಡಗವನಿಡುವೆನು
ಕೋಲು ಬುಗರಿ ಚೆಂಡು ನಿನಗೆ ಇಟ್ಟಿರುವೆ ಅ

ಅಣ್ಣಯ್ಯ ಬಲರಾಮ ಬೇಡುವನಯ್ಯ
ಅಣ್ಣಯ್ಯ ನೀ ಬಾರೆಲೊ
ಎನ್ನ ಸಾಕುಮಾಡದೆ ಓಡಬೇಡವೋ ಈಗ
ಬಣ್ಣಿಸಿ ತೂಗುವೆ ಗಮ್ಮನೆ ಮಲಗೊ ೧

ಯೋಗಿಗಳರಸನೆ ನಿನಗೆ ನಾ
ಜೋಗುಳ ಪಾಡುವೆನೊ
ನಾಗಭೂಷಣ ಬಂದು ಅಂಜಿಸುವ ನಿನ್ನನ್ನು
ಹೋಗೆ ಹಣೆಕ್ಹಾಕುವ ಕಣ್ಣು ಮುಚ್ಚಿಕೊಳ್ಳೊ ೨

ಭಕ್ತವತ್ಸಲನೆನಲೇ ನಿನ್ನ ನಾ
ಮಗುವೆಂದು ಕರೆಯಲೋ
ಅಗಣಿತಮಹಿಮನೆ ಜಗವ ಮೋಹಿಪ ರಂಗ
ಮಗುವಲ್ಲವೋ ತಂದೆ ಪುರಂದರವಿಠಲಯ್ಯ ೩

ನಾಗಭೂಷಣ—ಶಿವ.

ಮೋಹನ ಚಾಪು

ಕೃಷ್ಣ ಬಾರೊ ಕೃಷ್ಣ ಬಾರೊ
ಕೃಷ್ಣಯ್ಯ ನೀ ಬಾರಯ್ಯ ಪ

ಸಣ್ಣ ಹೆಜ್ಜೆಯನಿಟ್ಟು ಗೆಜ್ಜೆನಾದಗಳಿಂದ ಅ

ಮನ್ಮಥಜನಕನೆ ಬೇಗನೆ ಬಾರೊ
ಕಮಲಾಪತಿ ನೀ ಬಾರೊ
ಅಮಿತಪರಾಕ್ರಮ ಶಂಕರ ಬಾರೊ
ಕಮನೀಯ ಗಾತ್ರನೆ ಬಾರಯ್ಯ ಧೊರೆಯೆ ೧

ಸುರುಳು ಕೇಶಗಳ ಒಲಿವ ಅಂದ
ಭರದ ಕಸ್ತೂರಿತಿಲಕದ ಚಂದ
ಶಿರದಿ ಒಪ್ಪುವ ನವಿಲು ಕಣ್ಗಳಿಂದ
ತರತರದಾಭರಣಗಳ ಧರಿಸಿ ನೀ ಬಾರೊ ೨

ಹಾಲು ಬೆಣ್ಣೆಗಳ ಕೈಯಲಿ ಕೊಡುವೆ
ಮೇಲಾಗಿ ಭಕ್ಷ್ಯಗಳ ಬಚ್ಚಿಟ್ಟು ತರುವೆ
ಜಾಲಮಾಡದೆ ನೀ ಬಾರಯ್ಯ ಮರಿಯೆ
ಬಾಲ ಎನ ತಂದೆ ಪುರಂದರವಿಠಲ ೩

ಅಮಿತಪರಾಕ್ರಮ—ಎಣೆಯಿಲ್ಲದ ಸಾಹಸಮಾಡುವವನು.
ಕಮನೀಯಗಾತ್ರ—ಚೆಲುವಾದ ಮೈಯುಳ್ಳವನು.
ಸುರುಳುಕೇಶಗಳ—ಗುಂಗುರು ಕೂದಲಿನ.
ನವಿಲು ಕಣ್ಗಳು—ನವಿಲಗರಿಗಳು.
ಜಾಲಮಾಡದೆ—ಮೋಸ ಮಾಡದೆ.

ಶ್ರೀರಾಗ ಆದಿ

ಬಂದನೇನೆ ರಂಗ ಬಂದನೇನೆ ಎನ್ನ ಪ

ತಂದೆ ಬಾಲಕೃಷ್ಣ ನವನೀತ ಚೋರ ಅ

ಘಲು ಘಲು ಘಲುರೆಂಬ ಪೊನ್ನಂದಿಗೆ ಗೆಜ್ಜೆ
ಹೊಳೆ ಹೊಳೆಯುವ ಪಾದವನೂರುತ
ನಲಿ ನಲಿದಾಡುವ ಉಂಗುರ ಅರಳೆಲೆ
ಥಳಥಳಥಳ ಹೊಳೆಯುತ ಶ್ರೀಕೃಷ್ಣ ೧

ಕಿಣಿ ಕಿಣಿ ಕಿಣಿರೆಂಬ ಕರದ ಕಂಕಣ
ಝಣ ಝಣ ಝಣರೆಂಬೊ ನಡುವಿನ ಗಂಟೆ
ಧಣ ಧಣ ಧಣರೆಂಬ ಪಾದದ ತೊಡವಿನ
ಮಿಣ ಮಿಣ ಕುಣಿದಾಡುತ ಶ್ರೀಕೃಷ್ಣ ೨

ಹಿಡಿ ಹಿಡಿ ಹಿಡಿಯೆಂದು ಪುರಂದರವಿಠಲನ
ದುಡುದುಡುದುಡದುಡನೆ ಓಡುತ
ನಡಿ ನಡಿ ನಡಿಯೆಂದು ಮೆಲ್ಲನೆ ಪಿಡಿಯಲು
ಬಿಡಿ ಬಿಡಿ ಬಿಡಿ ದಮ್ಮಯ್ಯ ಎನ್ನುತ ಕೃಷ್ಣ ೩

ಪೊನ್ನಂದಿಗೆ —ಬಂಗಾರದ ಕಾಲುಗಡಗ.
ಕಂಕಣ—ಕೈಬಳೆ.
ತೊಡವಿನ—ತೊಡವು ; ಒಡವೆ.

೬. ಯಶೋದೆ ಕೃಷ್ಣನನ್ನು ಮುದ್ದಾಡುವುದು

೬೧

ಆರಭಿ ಆದಿ

ಎಲ್ಲ್ಯಾಡಿ ಬಂದೆ ಗೋವಿಂದ
ಚೆಲ್ವ
ಫುಲ್ಲಲೋಚನ ಪೂರ್ಣ ಗೋಪಾಲ
ಕೃಷ್ಣ ಪ

ಇಳಿದು ಬಂದೆಯೊ ತಾಳ ಮರನ
ಒಂದಂಬಿನಲಿ
ತುಳಿದು ಬಂದೆಯೊ ಮದ ಕಾಳಿಂಗನ
ಮಸ್ತಕವ
ಕಳುಹಿ ಬಂದೆಯೊ ಗೊಲ್ಲತಿಯರ
ನಿನ್ನ
ಹೊಳೆವ ಮುಖಕಾಂತಿ ಕಳೆಗುಂದಿದವೊ
ಕಂದ ೧

ಆಡಿ ಬಂದೆಯೊ ಮಕ್ಕಳೊಡನೆ
ಚೆಂಡಾಟವನು
ನೋಡಿ ಬಂದೆಯೊ ಸುಕೃತ ದುಷ್ಕೃತದ
ತಲೆಗಳನು
ಕಾಡಿ ಬಂದೆಯೊ ಗೋಪಿಯರನು
ನಿನ್ನ
ಜೋಡು ದಿವ್ಯಾಭರಣ ಸಡಲಿದೆಯೊ
ಕಂದ ೨

ಉಂಡು ಬಂದೆಯೊ ಕಪಟ ಪೂತನಿಯ
ಕಾಯುವನು
ಕೊಂಡು ಬಂದೆಯೊ ಮಲ್ಲ ರಾಕ್ಷಸರ
ಶಿರಗಳನು
ಲಂಡತನವದು ಬೇಡವಯ್ಯ
ನಿನ್ನ
ಪುಂಡತನವದು ಸಾಕು ಪುರಂದರ
ವಿಠಲ ೩

ಪಂತುವರಾಳಿ ಆದಿ

ಆಡಹೋಗಲು ಬೇಡವೋ
ರಂಗಯ್ಯ
ಬೇಡಿಕೊಂಬೆನೊ ನಿನ್ನ ಪ

ಗಾಡಿಗಾತಿಯರ ಕೊಂಡಾಡಿ
ಕೆಡಲು ಬೇಡ
ಕಾಡುವರೊ ನಿನ್ನನು ಮುಕುಂದ ಅ

ನೀರೊಳು ಮುಳುಗೆಂಬರೋ
ಬೆನ್ನಿನ ಮೇಲೆ
ಭಾರವ ಹೊರಿಸುವರೋ
ಕೋರೆದಾಡೆಯ ಮುದ್ದಾಡಿ
ಸೋಲಿಸುವರೋ
ಕರುಳಹಾರ ಕೊರಳ
ನೆಂಬರೋ ೧

ಪುಟ್ಟರೂಪನೆಂಬರೋ
ಅಣ್ಣಯ್ಯ
ಕೊಡಲಿ ಪಿಡಿದನೆಂಬರೋ
ಹಣೆಗಣ್ಣ ರುದ್ರನ ವರವುಳ್ಳ
ದಶ
ಕಂಠನ ಕೊಂದವ
ನೆಂಬರೋ ೨

ಬೆಣ್ಣೆಕಳ್ಳನೆಂಬರೋ
ಹೆಂಗಳನೆಲ್ಲ
ಭಂಗ ಮಾಡಿದ
ನೆಂಬರೋ
ಪುಟ್ಟ ಕುದುರೆಯನೇರಿ ಕಲ್ಕಿ
ರೂಪನಾಗಿ
ಪುರಂದರವಿಠಲ ಬಾ
ಎಂಬರೋ ೩

[ದಶಾವತಾರಗಳ ಸಂದರ್ಭ ಈ ಪದದಲ್ಲಿ ಸಂಗ್ರಹವಾಗಿ ಸೇರಿಬಂದಿದೆ. ಮಗುವಾದ ಕೃಷ್ಣನು ಈ ಸಾಹಸಗಳಿಗೆ ತಕ್ಕವನಲ್ಲವೆಂದು ತಾಯ ಅಂಜಿಕೆ. ಇಲ್ಲಿ ಗಾಡಿಗಾತಿಯರೆಂದರೆ ಭಕ್ತರು. ಪರಮಾತ್ಮನು ಭಕ್ತರನ್ನು ಸಲಹಲೆಂದೇ ಅವತಾರಗಳನ್ನು ಎತ್ತಿದನೆಂದು ಭಾಗವತಪಂಥದ ನಂಬಿಕೆ. ಮೊದಲ ನುಡಿಯಲ್ಲಿ ಮತ್ಸ್ಯ, ಕೂರ್ಮ, ವರಾಹ, ನರಸಿಂಹ; ಎರಡನೆಯ ನುಡಿಯಲ್ಲಿ ವಾಮನ, ಪರಶುರಾಮ, ರಾಮ; ಮೂರನೆಯ ನುಡಿಯಲ್ಲಿ ಕೃಷ್ಣ, ಬುದ್ಧ ಕಲ್ಕಿ ಹೀಗೆ ಬಂದಿವೆ.]

೬೩

ಶಂಕರಾಭರಣ ಆದಿ

ಏನಾಯಿತೋ ನಿನಗೆ ಶ್ರೀಹರಿ ಹರಿ ಪ

ನಾನಿನ್ನೇನು ಮಾಡಲಿ ಕಂದ ಅ

ಅಂಗಳದೊಳಗಾಡೋ ಗೋಪೀಕಂದಗೆ
ಗ್ರಹ ಸೋಕಿ
ಅಂಗಾರನಿಟ್ಟಳು ಗೋಪಿ ತಾ
ರಕ್ಷೆಯು ಕಟ್ಟಿದಳು
ಅಂಗನೆ ಹರಿಯು ಕಂಡು ಗೋಪಿ ತಾ
ಕಂಗೆಟ್ಟಳು ಆಗ ೧

ಧೂಪ ಕಾಣಿಕೆಯನು ಕೊಂಡು
ನೆರೆಮನೆ ಜಾಣೇರ ಜಾಣೆ
ರಂಗಗೆ ಪೇಳೆ
ಆಕಾಶದ ಬೊಮ್ಮನೆ ಸೋಕಿಹುದು
ಬೊಮ್ಮಗೆ ಆಹುತಿಯು ಕೊಟ್ಟರೆ ಗುಣ
ವಾಗೋದು ನಿನ್ನ ಕಂದಗೆ ೨

ಪೂತನಿಯ ಮೊಲೆಯನುಂಡು ಕೃಷ್ಣಯ್ಯ ತಾ
ಭೀತಿಗೊಂಡನು ತಾಯೆ
ಐದು ಮೊಗೆಯು ತುಪ್ಪ ಬೇಗನೆ
ಆಹುತಿಯನು ಕೊಟ್ಟರೆ ಗುಣ
ವಾಗೋದು ನಿನ್ನ ಕಂದಗೆ ೩

ಐದು ಮಣ ಗೋಧಿಟ್ಟು ಐದು ಮೊಗೆಯು ತುಪ್ಪ
ಪಡಿವವಳೆ ಬಡಿಸುತಿರೆ
ಕೃಷ್ಣಯ್ಯ ತಾ ಕಡೆಗಣ್ಣಲಿ ನೋಡಿ
ಬಡಿವಾಣ ಬಳಿದುಂಡ ಬೊಮ್ಮ ಬಾಯಲಿ
ಮಣ್ಣೆಂದ ೪

ಸೃಷ್ಟಿಯೊಳಗಿಂಥಾ ಸ್ವಾಮಿ ಇಷ್ಟಮೂರುತಿ
ಕಾಣೆ
ತೊಟ್ಟಿಲೊಳಗೆ ಮಲಗಿದ್ದ ಪುರಂದರ
ವಿಠಲ ನಗುತಿದ್ದ ೫

ಶಂಕರಾಭರಣ ಆದಿ

ಕೈಯ ತೋರೋ ಕರುಣಿಗಳರಸನೆ
ಕೈಯ ತೋರೋ ಪ

ಕೈಯಲಿ ಬೆಣ್ಣೆ ಮುದ್ದೆಯನೀವೆನು
ಕೈಯ ತೋರೋ ಅ

ಅಂಗುಲಿಯಲಿ ಹರಳುಂಗುರವಿಟ್ಟ ಕೈಯ ತೋರೋ
ಅಂಗೈಯಲಿ ಧ್ವಜ ಪದ್ಮರೇಖೆಯ ಕೈಯ ತೋರೋ
ಶೃಂಗಾರ ಶಂಖ ಚಕ್ರವ ಧರಿಸಿದ ಕೈಯ ತೋರೋ
ಅಂಗನೆಯರ ಕುಚಕುಂಭದೊಳಿರಿಸಿದ ಕೈಯ ತೋರೋ ೧

ಬಲಿಯನು ವಂಚಿಸಿ ದಾನವ ಬೇಡಿದ ಕೈಯ ತೋರೋ
ಒಲಿದು ನರನಿಗೆ ಸಾರಥಿಯಾದ ಕೈಯ ತೋರೋ
ಹಲವು ಪುಷ್ಪವ ತುರುಬಿನೊಳಿಟ್ಟ ಕೈಯ ತೋರೋ
ಲಲನೆಗೊಲಿದು ಪಾರಿಜಾತವ ತಂದ ಕೈಯ ತೋರೊ ೨

ಬಡಬ್ರಾಹ್ಮಣನವಲಕ್ಕಿಯ ಬೇಡಿದ ಕೈಯ ತೋರೋ
ಕೊಡೆ ಮಾಡಿ ಗೋವರ್ಧನ ಗಿರಿಯೆತ್ತಿದ ಕೈಯ ತೋರೋ
ಕಡು ಹಿರಣ್ಯನ ಕರುಳನು ಬಗೆದ ಕೈಯ ತೋರೋ
ದೃಢ ಪ್ರಹ್ಲಾದನ ಬಿಡದೆ ಸಲಹಿದ ಕೈಯ ತೋರೋ ೩

ಬಲ್ಲಿದ ಮಲ್ಲರ ಮರ್ದಿಸಿ ಮೆರೆದ ಕೈಯ ತೋರೋ
ಬಿಲ್ಲನು ಎಡಗೈಯಿಂದಲಿ ಎತ್ತಿದ ಕೈಯ ತೋರೋ
ಖುಲ್ಲ ಪೂತಣಿಯ ಅಸುವನು ಹೀರಿದ ಕೈಯ ತೋರೋ
ಮೆಲ್ಲನೆ ಕುಬುಜೆಯ ಡೊಂಕು ತಿದ್ದಿದ ಕೈಯ ತೋರೋ ೪

ಆಕಾಶದೊಳಿಹ ಚಂದ್ರನ ಕರೆದ ಕೈಯ ತೋರೋ
ನಾಕಪತಿಗಳಿಗಭಯವನೀವ ಕೈಯ ತೋರೋ ಅ-
ನೇಕ ಸ್ವರಗಳಿಂದ ಕೊಳಲ ನುಡಿಸುತಿಹ ಕೈಯ ತೋರೋ
ಶ್ರೀಕಾಂತ ನಮ್ಮ ಪುರಂದರವಿಠಲ ಕೈಯ ತೋರೋ ೫

ನರನಿಗೆ—ಅರ್ಜುನನಿಗೆ.

ಲಲನೆಗೆ—ದೇವಲೋಕದಲ್ಲಿದ್ದ ಪಾರಿಜಾತವನ್ನು ಕಂಡು ಸತ್ಯಭಾಮೆಯು ಇದನ್ನು ದ್ವಾರಕೆಗೆ ತರಬೇಕೆಂದು ಕೃಷ್ಣನಿಗೆ ಸೂಚಿಸಲು, ಕೃಷ್ಣನು ಅದನ್ನು ಅಪಹರಿಸಿ ತಂದ ಕಥೆ ಭಾಗವತ, ಹರಿವಂಶ, ಭಾರತಗಳಲ್ಲಿದೆ.

ಬಡಬ್ರಾಹ್ಮಣನವಲಕ್ಕಿ—ಕೃಷ್ಣನ ಬಾಲ್ಯ ಸ್ನೇಹಿತನಾದ ಕುಚೇಲನು ತಂದುಕೊಟ್ಟ ಒಂದು ಹಿಡಿ ಅವಲಕ್ಕಿ.

ಬಲ್ಲಿದ ಮಲ್ಲರ— ಮಥುರೆಯಲ್ಲಿ ಕೃಷ್ಣನನ್ನು ಕೊಲ್ಲಲೆಂದು ಕಂಸನಿಂದ ಕಳುಹಿಸಲ್ಪಟ್ಟ ಚಾಣೂರ ಮುಷ್ಟಿಕರೆಂಬ ಮಲ್ಲರನ್ನು.

ಬಿಲ್ಲನು ಎಡಗೈಯಿಂದಲಿ—ಮಥುರೆಯಲ್ಲಿ ಕಂಸನು ನಡೆಯಿಸಿದ ಬಿಲ್ಲು ಹಬ್ಬದ ಸಂದರ್ಭದಲ್ಲಿ, ಪರಶುರಾಮನ ಬಿಲ್ಲನ್ನು ಕೃಷ್ಣನು ಎಡಗೈಯಿಂದಲೇ ಎತ್ತಿ ಮುರಿದದ್ದು ಹರಿವಂಶದಲ್ಲಿ ಬಂದಿದೆ (೨, ೨೭).

ನಾಕಪತಿಗಳಿಗೆ ಅಭಯವನೀವ—ಗೋವರ್ಧನೋದ್ಧರಣ ಸಂದರ್ಭದಲ್ಲಿ, ಇಂದ್ರನ ಆಟಾಟೋಪ ನಡೆಯದಿರಲು ಇಂದ್ರನು ತನ್ನ ಉದ್ದಂಡತನಕ್ಕಾಗಿ ಮರುಗಿ, ಕೃಷ್ಣನ ಬಳಿ ಬಂದು ಮನ್ನಿಸಬೇಕೆಂದು ಬೇಡಿಕೊಳ್ಳಲು ಕೃಷ್ಣನು ಅವನಿಗೆ ಅಭಯವನ್ನಿತ್ತು ಕಳುಹಿಸಿದ್ದು ಭಾಗವತದಲ್ಲಿದೆ (೧೦, ೨೭).



ಯದುಕುಲಕಾಂಬೋದಿ ಝಂಪೆ

ಉಣಲೊಲ್ಲೆ ಯಾಕೊ ಕಂದ
ಆವ ಗೋವಳತಿಯರ
ಕಣ್ಣು ದೃಷ್ಟಿ ತಾಗಿತಯ್ಯ ಪ

ಅನುದಿನ ನಮ್ಮೆಲ್ಲರ ಅಗಲಬಾರದೆಂದು
ಮನಸೋತು ಗೋಪಿಯರು ಮೆಚ್ಚಿ ಮದ್ದಿಕ್ಕಿದರೇ
ಅಸುರೆ ಪೂತನಿಯಿತ್ತ ವಿಷದ ಮೊಲೆಗಳನುಂಡು
ಬಸಿರೊಳಗೆ ಬಲಿತು ಕಲ್ಮಷ ನೆಲಸಿತೇ
ಪೊಸ ಜವ್ವನದ ನಾರಿಯರು ಮುದ್ದಿಸಲವರ ಅಧ
ರ ಸುಧೆ ನಿನಗೆ ಹಸಿವ ಮಾಣಿಸಿತೆ ಕಂದ ೧

ಹೊದ್ದಿ ಗೊಲ್ಲರ ಮನೆಯಲ್ಲಿದ್ದಷ್ಟು ಬೆಣ್ಣೆಯನು
ಕದ್ದು ಮೆದ್ದುದಕೆ ಹೊಟ್ಟೆ ತುಂಬಿತೆ
ಅಬ್ಧಿಯೊಳಗಿದ್ದಮೃತ ಅಸುರರಿಗೆ ವಂಚಿಸಿ
ಮೆದ್ದಿಸಲು ಸುರರಿಗೆ ಹಿತವಾಯಿತೇ ಕಂದ ೨

ತುರುಗಾಯ್ವ ಗೊಲ್ಲರು ಕಲಸಿ ಅನ್ನವ ಕೊಡಲು
ಹರುಷದಿಂದುಂಬುದತಿ ಪ್ರಿಯವಾಯಿತೆ
ಪರಮ ಭಕ್ತರು ನಿನ್ನ ಪೂಜಿಸುತ ಅರ್ಪಿಸಿದ
ಪರಿಪರಿಯ ನೈವೇದ್ಯ ಹಿತವಾಯಿತೇ ಕಂದ ೩

ಸಣ್ಣಕ್ಕಿಯೋಗರವು ಸೊಗಸಾದ ಕೆನೆ ಮೊಸರು
ಬಣ್ಣಿಸುತ ನಾನುಣಿಸೆ ಒಲ್ಲದಾಯ್ತೇ
ಚಿಣ್ಣ ನಿನ್ನನು ತಮ್ಮ ತೊಡೆಯ ಮೇಲೆತ್ತಿಕೊಂಡಾ
ಹೆಣ್ಣುಗಳು ಉಣಿಸಿದರೆ ಹೊಟ್ಟೆ ತುಂಬುವುದೆ ೪

ವರ ಮಹಾಋಷಿಗಳು ಯಾಚಿಸುತ ತಂದಿತ್ತ
ಪರಿಪರಿಯ ನೈವೇದ್ಯ ಪ್ರಿಯವಾಯಿತೇ
ವರ ಪುರಂದರವಿಠಲರಾಯನೇ ನೀ ಪೇಳೊ
ನಿರತ ಸಂತುಷ್ಟನೆಂಬುದು ನಿಜವಾಯಿತೇ ಕಂದ ೫

ಹೊದ್ದಿ—ಹೊಂದಿ, ಹತ್ತಿರ ಹೋಗಿ.

ಅಬ್ಧಿಯೊಳಗೆ—ಕ್ಷೀರಸಮುದ್ರದೊಳಗೆ.

ನಿರುತಸಂತುಷ್ಟ—ನಿತ್ಯತೃಪ್ತ, ಅಕಾಮ, ಆಪ್ತಕಾಮ ಎಂಬ ಪರಮಾತ್ಮನ ಗುಣ.



ಸಹಾನ ಅಟ್ಟ

ಏನು ಮಾಡಲೊ ಮಗನೆ ಯಾಕೆ ಬೆಳಗಾಯಿತೊ
ಏನು ಮಾಡಲೊ ಕೃಷ್ಣಯ್ಯ ಪ

ಏನು ಮಾಡಲಿ ಇನ್ನು ಮಾನಿನಿಯರು ಎನ್ನ
ಮಾನವ ಕಳೆಯುವರೊ ರಂಗಯ್ಯ ಅ

ಹಾಲು ಮೊಸರು ಬೆಣ್ಣೆ ಕದ್ದನೆಂಬುವರೊ
ಮೇಲಿನ ಕೆನೆಗಳ ಮೆದ್ದನೆಂಬುವರೊ
ಬಾಲಕರೆಲ್ಲರ ಬಡಿದನೆಂಬರೊ ಎಂಥ
ಕಾಳ ಹೆಂಗಸು ಇವನ ಹಡೆದಳೆಂಬುವರೊ ೧

ಕಟ್ಟಿದ್ದ ಕರುಗಳ ಬಿಟ್ಟನೆಂತೆಂಬರೊ
ಮೆಟ್ಟಿ ಸರ್ಪನ ಮೇಲೆ ಕುಣಿದನೆಂಬುವರೊ
ಪುಟ್ಟ ಬಾಲೆಯರ ಮೋಹಿಸಿದನೆಂಬರೊ ಎಂಥ
ದುಷ್ಟ ಹೆಂಗಸು ಇವನ ಹಡೆದಳೆಂಬುವರೊ ೨

ಗಂಗಾಜನಕ ನಿನ್ನ ಜಾರನೆಂತೆಂಬರೊ
ಶೃಂಗಾರಮುಖ ನಿನ್ನ ಬರಿದೆ ದೂರುವರೊ
ಮಂಗಳಮಹಿಮ ಶ್ರೀ ಪುರಂದರವಿಠ್ಠಲ
ಹಿಂಗದೆ ಎಮ್ಮನು ಸಲಹೆಂತೆಂಬರೊ ೩

ಕಾಳ ಹೆಂಗಸು—ಕೆಟ್ಟ ಹೆಂಗಸು.

ಮೆಟ್ಟಿ ಸರ್ಪನ ಮೇಲೆ—ಯಮುನಾನದಿಯ ಕಾಳಿಂದಿ ಮಡುವಿನಲ್ಲಿ ಕಾಳಿಯ ನಾಗನನ್ನು ದಮನಮಾಡಿದ ಸಂದರ್ಭ.

ಗಂಗಾಜನಕ—ತ್ರಿವಿಕ್ರಮಾವತಾರದಲ್ಲಿ ಬ್ರಹ್ಮಾಂಡ ಕಟಾಹಕ್ಕೆ ಪಾದ ಸೋಕಿ ಗಂಗೆ ಹೊರಬಂದ ಪ್ರಸಂಗ.

ಶೃಂಗಾರಮುಖ—ಚೆಲುವಾದ ಮುಖವುಳ್ಳ ನಿನ್ನನ್ನು.

ಬರಿದೆ—ಕಾರಣವಿಲ್ಲದೆ.

ಭೂರಿಕಲ್ಯಾಣಿ ಚಾಪು

ಆಡಿದ ರಂಗನಾಡಿದ
ರೂಢಿಯೊಳಗೆ ಮಕ್ಕಳಂತೆ ಪ

ಮಣ್ಣಾಟ ಬೇಡವೊ ಬುಕ್ಕಚ್ಚಿ ಮಾಡಬೇಕು
ಅಣ್ಣಯ್ಯ ಬಾರೆಂದು ಎತ್ತಿಕೊಂಡರೆ
ಎಣ್ಣೆ ಒತ್ತಿ ಬೇಗ ಎರೆದಳು ಗೋಪ್ಯಮ್ಮ
ಕಣ್ಣಿಗೆ ಕಾಡಿಗೆ ಇಟ್ಟಳು ಕೇಳಯ್ಯ ೧

ತಿಲಕವು ಫಣೆಯಲಿ ಸರಿಗೆ ಕೊರಳು
ಥಳಥಳಿಸುವ ಕರ್ಣಭೂಷಣ ಉಡಿದಾರ
ಪೊಳೆವ ಪೀತಾಂಬರ ಹೆಗಲಿಂದ ಉಲಿವುದು
ಜಲಜನಾಭನಿಗೆ ಕಡಗ ಕಾಲಸರಗಳು ೨

ಮೂರು ವರ್ಷಗಳ ಮುದ್ದು ರಂಗಯ್ಯನಿಗೆ
ವಿಹಾರಿದ ಕೆಂದುಟಿ ಜೊಲ್ಲು ಬಾಯ
ವಾರಿಗೆಯ ಮಕ್ಕಳ ಕೂಡ ಬೀದಿಯಲಿ
ವಾರಿಜನಾಭನು ನಲಿಯುತಲಿರುತಿರ್ದ ೩

ಚಂಡು ಬುಗುರಿ ಕಣ್ಣುಮುಚ್ಚಾಲಿ ಕೋಲು
ಗಂಡುಮಕ್ಕಳ ಸಹ ಗಜ್ಜುಗದಾಟ
ಕಂಡವರ ಮನವನು ಅಪಹರಿಸುತಲಿ
ದಂಡ ಪ್ರಣಾಮಗೊಂಬ ವಿರಿಂಚಾದಿಗಳಿಂದ ೪

ಮಣ್ಣನೆತ್ತಿ ತನ್ನ ತಲೆಗೆ ತಿಕ್ಕಿದನು
ಮಣ್ಣಾಯಿತು ಮೈಯು ಪೀತಾಂಬರವು
ಮಣ್ಣ ಗಂಟು ಕಟ್ಟಿ ಉಪ್ಪು ಕೂಗಿದನು
ಮಣ್ಣ ಪಡೆದ ತಂದೆ ಪುರಂದರವಿಠಲ ೫

ಬುಕ್ಕಚ್ಚಿ—ಸ್ನಾನ, ಮಕ್ಕಳಭಾಷೆ.
ವಿರಿಂಚಾದಿಗಳಿಂದ—ಬ್ರಹ್ಮನೇ ಮೊದಲಾದವರಿಂದ.
ಮಣ್ಣಪಡೆದ—ಭೂಮಿಯುನ್ನು ಬಲಿಯಿಂದ ದಾನವಾಗಿ ಪಡೆದುಕೊಂಡ.

ಧನ್ಯಾಸಿ ಆದಿ

ಬಣ್ಣಿಸಿ ಗೋಪಿ ಹರಸಿದಳು ಪ

ಎಣ್ಣೆಯನೊತ್ತುತ ಯದುಕುಲ ತಿಲಕಗೆ ಅ

ಆಯುಷ್ಯವಂತನಾಗು ಅತಿ ಬಲ್ಲಿದನಾಗು
ಮಾಯದ ಖಳರ ಮರ್ದನನಾಗು
ರಾಯರ ಪಾಲಿಸು ರಕ್ಕಸರ ಸೋಲಿಸು
ವಾಯುಸುತಗೆ ನೀನೊಡೆಯನಾಗೆನುತ ೧

ಧೀರನು ನೀನಾಗು ದಯಾಂಬುಧಿಯಾಗು
ಆ ರುಗ್ಮಿಣಿಗೆ ನೀನರಸನಾಗು
ಮಾರನ ಪಿತನಾಗು ಮಧುಸೂದನನಾಗು
ದ್ವಾರಾವತಿಗೆ ನೀ ಧೊರೆಯಾಗೆನುತ ೨

ಆನಂದ ನೀನಾಗು ಅಚ್ಯುತ ನೀನಾಗು
ದಾನವಾಂತಕನಾಗು ದಯವಾಗು
ಶ್ರೀನಿವಾಸನಾಗು ಶ್ರೀನಿಧಿ ನೀನಾಗು
ಜ್ಞಾನಿ ಪುರಂದರವಿಠಲನಾಗೆನುತ ೩

ಬಲ್ಲಿದ—ಬಲವಂತ (ಬಲವತ್), ವಿದ್ಯಾವಂತ (ಬಲ್ಲವ).

ರಾಯರ—ಪಾಂಡವರನ್ನು.

ವಾಯುಸುತನಿಗೆ—ಕೃಷ್ಣಾವತಾರದಲ್ಲಿ ಅರ್ಜುನನಿಗೆ, ರಾಮಾವತಾರದಲ್ಲಿ ಹನುಮಂತನಿಗೆ.

ರುಗ್ಮಿಣಿಗೆ—ರುಕ್ಮಿಣಿಗೆ ; ವಿದರ್ಭರಾಜನಾದ ಭೀಷ್ಮಕನ ಮಗಳು ; ಕೃಷ್ಣನ ಹಿರಿಯರಸಿ.

ಮಾರನ—ಮನ್ಮಥನ ; ರುಕ್ಮಿಣಿಯ ಮಗನಾದ ಪ್ರದ್ಯುಮ್ನನೇ ಮನ್ಮಥ.

ಮಧುಸೂದನ—ಮಧುವೆಂಬ ರಾಕ್ಷಸನನ್ನು ಕೊಂದವನು. ಕಲ್ಪಾದಿಯಲ್ಲಿ ವಿಷ್ಣುವಿನ ಕಿವಿಯ ಕೊಳೆಯಿಂದ ಹುಟ್ಟಿದ ಇಬ್ಬರು ಅಸುರರಲ್ಲಿ ಒಬ್ಬ ; ಇನ್ನೊಬ್ಬ ಕೈಟಭ.

ದ್ವಾರಾವತಿ—ದ್ವಾರಕೆ.

೬೯

ಕೇದಾರಗೌಳ ಅಟ್ಟ

ಎಲ್ಲಿ ಬೆಣ್ಣೆಯ ಬಚ್ಚಿಡಲಿ ನಾ
ಕಳ್ಳಕೃಷ್ಣನ ಹಾವಳಿ ಘನವಾಯಿತು ಪ

ನೆಲುವು ನಿಲುಕದೆಂದಿಡುವೆನೆ ನೋಡೆ
ಬೆಳೆಯಬಲ್ಲನಿವ ಬ್ರಹ್ಮಾಂಡಕೆ
ತಿಳಿಸದೆ ಕತ್ತಲೊಳಿಡುವೆನೆ ಅಕ್ಕ
ಬೆಳಕೆಲ್ಲವೀತನ ಕಂಗಳ ಥಾಳ ೧

ಎವೆ ಇಡದಲ್ಲಿ ಕಾದಿಡುವೆನೆ ನೋಡೆ
ದಿವಿಜರೆಲ್ಲ ಇವನ ಮಾಯಂ
ಅವನೀಶ್ವರಗೆ ಮೊರೆಯಿಡುವೆನೆ ಅಕ್ಕಾ
ಅವನಿಟ್ಟ ಬಂಟರಿಂದ್ರಾದಿಗಳೆಲ್ಲರು ೨

ಈಗಲೆ ಇನಿತು ಮಾಳ್ಪವನೆಂತೊ ಮುಂದೆ
ಆಗಲೀಸನು ನಮ್ಮ ಒಗೆತನವಮ್ಮ
ಕೂಗಿ ಹೇಳಲೂ ಮತ್ತೆ ಕೇಡಮ್ಮ ಮುಂದೆ
ಹೇಗೆ ಪುರಂದರವಿಠಲನಟ್ಟುಳಿಗೆ ೩

ಘನವಾಯಿತು—ದಟ್ಟವಾಯಿತು, ಹೆಚ್ಚಿತು.

ಥಾಳ—ಹೊಳಪು, ಪ್ರಕಾಶ ('ತಸ್ಯ ಭಾಸಾ ಸರ್ವಮಿದಂ ವಿಭಾತಿ').

ದಿವಿಜರೆಲ್ಲ—ದೇವತೆಗಳೆಲ್ಲ.

ಅವನೀಶ್ವರಗೆ—ದೊರೆಗೆ.

ಇನಿತು—ಇಂತು, ಇಷ್ಟು.

ಅಟ್ಟುಳಿ—ಒತ್ತಾಗಿ ಬರುವುದು, ತೊಂದರೆಪಡಿಸುವುದು.

ಪೀಲು ಆದಿ

ಬವ್ವ ಬಂದಿತಲ್ಲ ರಂಗಯ್ಯ, ಬವ್ವ ಬಂದಿತಲ್ಲ ಪ

ಬವ್ವ ನಿನ್ನ ಕಾಲು ಕಚ್ಚೀತೊ ಕೃಷ್ಣ ಅ

ಸೆರಗ ಪಿಡಿದು ನೀ ಹೇಳದೆ ಮಲಗೊ
ತಿರುಗಿದರೆ ನೋಡು ಮತ್ತಿಲ್ಲೆ
ಬೂದಿಯು ಹಚ್ಚಿದೆ ಕೂದಲು ಬಿಚ್ಚಿದೆ
ಸ್ವಾದವ ಕಂಡು ಬಂದಿತಿಲ್ಲಿ ೧

ಹಿಡಿದ ತ್ರಿಶೂಲ ಪಿಡಿದ ಕಪಾಲ
ಮುಕ್ಕಣ್ಣಿಲಿ ಕಿಡಿ ಉದುರಿಸುತ
ಹಾವು ಕೊರಳಲಿಟ್ಟು ಹುಲಿಯ ಚರ್ಮವ ಹೊದ್ದು
ಸುತ್ತಲಿ ಬರುತಿದೆ ಬವ್ವತನ ದಂಡು ೨

ಕಪ್ಪುಗೊರಳ ಬವ್ವ ಒಪ್ಪುವ ಎತ್ತನೇರಿ
ತಪ್ಪದೇ ಬಂದೀತು ಬಿಡು ಮುನ್ನೆ
ಅಪ್ಪ ಕೃಷ್ಣರಾಯ ಪುರಂದರವಿಠಲನೆ
ಒಪ್ಪಿಸಿ ಕೊಡುವೆನು ಈಗಲೆ ನಿನ್ನ ೩

ಬವ್ವ—ಪರ್ಬು, ಎಲ್ಲೆಡೆ ಹರಡಿಕೊಳ್ಳುವ ದೆವ್ವ ; ಇಲ್ಲಿ ರುದ್ರದೇವರಿಗೆ ಅನ್ವಯ.
ಸ್ವಾದ—ರುಚಿ, ಸಿಹಿ.
ಮುನ್ನೆ—ಮುಂದೆ.

ಪಂತುವರಾಳಿ ಏಕ

ಬೂಚಿ ಬಂದಿದೆ ರಂಗ ಬೂಚಿ ಬಂದಿದೆ ಪ

ಚಾಚಿ ಕುಡಿದು ಸುಮ್ಮನೆ ನೀ
ಪಾಚಿಕೊಳ್ಳೊ ಕೃಷ್ಣಯ್ಯ ಅ

ನಾಲ್ಕು ಮುಖದ ಬೂಚಿಯೊಂದು
ಗೋಕುಲಕ್ಕೆ ಓಡಿಬಂದು
ಲೋಕರನ್ನು ಎಳೆದುಕೊಂಡು
ಕಾಕುಮಾಡಿ ಒಯ್ಯುವುದಕ್ಕೆ ೧

ಮೂರು ಕಣ್ಣಿನ ಬೂಚಿಯೊಂದು
ಊರೂರ ಸುತ್ತಿ ಬಂದು
ದ್ವಾರದಲ್ಲಿ ನಿಂದಿದೆ ನೋಡೊ
ಪೋರರನ್ನು ಒಯ್ಯುವುದಕ್ಕೆ ೨

ಅಂಗವೆಲ್ಲ ಕಂಗಳುಳ್ಳ
ಶೃಂಗಾರ ಮುಖದ ಬೂಚಿ
ಬಂಗಾರದಂಥ ಮಕ್ಕಳನೆಲ್ಲ
ಕಂಗೆಡೆಸಿ ಒಯ್ಯುವುದಕ್ಕೆ ೩

ಆರುಮುಖದ ಬೂಚಿಯೊಂದು
ಈರಾರು ಕಂಗಳದಕೆ
ವಾರುವಾರು ಅಳುವ ಮಕ್ಕಳ
ದೂರ ಸೆಳೆದು ಒಯ್ಯುವುದಕ್ಕೆ ೪

ಮರದಮೇಲೆ ಇರುವುದೊಂದು
ಕರಾಳ ಮುಖದ ಬೂಚಿ
ತರಳರನ್ನು ಎಳೆದುಕೊಂಡು
ಪುರಂದರವಿಠಲಗೊಪ್ಪಿಸಲಿಕ್ಕೆ ೫

ಬೂಚಿ—ಪೂಚಿ, ಹುಳು (ಬಾಲಭಾಷೆ) ; ಇಲ್ಲಿ ಸಣ್ಣ ಮಕ್ಕಳನ್ನು ಹೆದರಿಸಲು ಮಾಡಿಕೊಂಡಿರುವ ಕಾಲ್ಪನಿಕ ಪ್ರಾಣಿ.

ಚಾಚಿ—ಮೊಲೆಹಾಲು (ಬಾಲಭಾಷೆ).

ಪಾಚಿಕೊಳ್ಳೊ—ನಿದ್ರೆಮಾಡು.

ನಾಲ್ಕುಮುಖದ ಬೂಚಿ—ಬ್ರಹ್ಮ (ಚತುರ್ಮುಖ).

ಮೂರು ಕಣ್ಣಿನ ಬೂಚಿ—ಶಿವ (ತ್ರಿಣೇತ್ರ).

ಅಂಗವೆಲ್ಲ ಕಂಗಳುಳ್ಳ—ಇಂದ್ರ (ಸಹಸ್ರಾಕ್ಷ).

ಆರುಮುಖದ...—ಸುಬ್ರಹ್ಮಣ್ಯ (ಷಣ್ಮುಖ).

ಈರಾರು—ಹನ್ನೆರಡು.

ಮರದ ಮೇಲೆ ಇರುವುದೊಂದು—ಹನುಮಂತ.

ಕಮಾಚು ಅಟ್ಟ

ಕಂದಾ ಬೇಡವೊ ಮಣ್ಣು ತಿನ್ನಬೇಡವೊ ಪ

ಕಂದ ಬೇಡವೊ ಮಣ್ಣು ತಿನ್ನಲಿ ಬೇಡವೊ
ಸುಂದರಾಂಗನೆ ನಿನಗೆ ಹೊಟ್ಟೆ ನೋಯುವುದಯ್ಯ ಅ

ಬೇಗನೆ ಏಳಯ್ಯ ಮಣ್ಣಾಟ ಬಿಡೊ ನೀನು
ಜೋಗಿ ಬರುತಾನಲ್ಲಿ ಅಂಜಿಸುವುದಕೀಗ ೧

ತಾಯಿ ಮಾತನು ಒತ್ತಿ ಕರದಲಿ ಮಣ್ಣೊತ್ತಿ
ಬಾಯಲಿ ಇಟ್ಟನು ಬಾಲಕೃಷ್ಣನಯ್ಯನು ೨

ಪೆಟ್ಟು ಕೊಡುವೆ ನಿನಗೆ ಸಿಟ್ಟು ಬಹಳ ಇದೆ
ಮುಟ್ಟಬೇಡೊ ಮಣ್ಣು ಬೆಣ್ಣೆ ತರುವೆನಯ್ಯ ೩

ಅಮ್ಮಯ್ಯ ಕೇಳಿಲೆ ಬಾಯಲಿ ಮಣ್ಣಿಲ್ಲ
ಗುಮ್ಮನು ಬರಬೇಡ ಸುಮ್ಮನೆ ಇರುತೇನೆ ೪

ಮಗುವೆ ಬಾ ಬಾ ಎಂದು ಬಣ್ಣಿಸಿ ಕರೆದಳು
ಮಗುವಿನ ಬಾಯ ಶೋಧಿಸಿದಳು ಬೇಗನೆ ೫

ಬಾಯಲಿ ಕಂಡಳು ಹದಿನಾಲ್ಕು ಲೋಕವ
ಕಾಯ ಮರೆತಳಯ್ಯ ಮರುಳಿಗೆ ವಶವಾಗಿ ೬

ಮತ್ತು ಕಂಡಳು ಅವಳು ಗೋಕುಲವೆಲ್ಲವ
ಅತ್ತ ಕಂಡಳು ತನ್ನ ಕೃಷ್ಣನ ಬಗಲಲಿ ೭

ಗೋಪ್ಯೆರ ಮನೆಯಲಿ ಗೋಪಾಲಕೃಷ್ಣನು
ಗೋಪ್ಯೆರ ಮನೆಯಂತೆ ದುಡುಕು ಮಾಡುತಲಿರ್ದ ೮

ಬಾಲನು ಬೀದಿಯ ಮಣ್ಣೆತ್ತಿ ಉಣುತಿರ್ದ
ಬಾಲೆ ಗೋಪ್ಯಮ್ಮನು ಮಣ್ಣ ತೆಗೆತಿರ್ದಳು ೯

ಕಂದನು ನೀನಲ್ಲ ಕಂದರ್ಪಜನಕನೆ
ಕಂದನೆ ನಿನ್ನ ಬಾಯ ಮುಚ್ಚಿಕೊಳ್ಳಯ್ಯ ಈಗ ೧೦

ದೇವಾಧಿದೇವನೆ ದೇವಕಿತನಯನೆ
ಭಾವಜನಯ್ಯನೆ ಬಾರಯ್ಯ ದೊರೆಯೆ ೧೧

ಜಯಗಳಾಗಲಿ ನಮ್ಮ ಕೃಷ್ಣರಾಯಗೆ ಬಹಳ
ಜಯಗಳಾಗಲಿ ಅವನ ಭಕ್ತರ ವೃಂದಕೆ ೧೨

ಲೀಲಾ ವಿನೋದನು ರುಗ್ಮಿಣೀಲೋಲನು
ಲೀಲೆ ತೋರಿದನಂದು ತಂದೆ ಪುರಂದರವಿಠ್ಠಲ ೧೩

[ಇದು ಪ್ರಸಿದ್ಧವಾದ ಬಾಲಲೀಲೆ. ಆದರೆ ಕೃಷ್ಣಕರ್ಣಾಮೃತದಲ್ಲಿ ಸಂದರ್ಭ ಬೇರೆಯಾಗಿ ಬಂದಿದೆ (ನೋಡಿ 'ಕೃಷ್ಣೇನಾಂಬ ಗತೇನ ರಂತುಮಧುನಾ' ಎಂಬ ಶ್ಲೋಕ). ಕೃಷ್ಣನು ಓರಗೆಯವರೊಂದಿಗೆ ಆಡುತ್ತಿರುವಾಗ ಮಣ್ಣು ತಿನ್ನಲು, ಅಣ್ಣ ಬಲರಾಮನು ತಾಯಿಯ ಬಳಿ ಓಡಿ ದೂರುತ್ತಾನೆ. ತಾಯಿಯು ಬಂದು 'ಎಲೋ, ಮಣ್ಣು ತಿನ್ನುವೆಯಾ?' ಎಂದು ಗದರಿಸಲು ಕೃಷ್ಣನು 'ಇಲ್ಲವಮ್ಮಾ, ಅಣ್ಣನು ಸುಳ್ಳು ಹೇಳುತ್ತಿದ್ದಾನೆ' ಎಂದುತ್ತರ ಕೊಡಲು, ತಾಯಿ ನಂಬದೆ, 'ಎಲ್ಲಿ ನಿನ್ನ ಬಾಯಿ ತೆರೆದು ತೋರಿಸು' ಎನ್ನುತ್ತಾಳೆ. ಆಗ ಕೃಷ್ಣನು ಆಯೆಂದು ಬಾಯಿ ತೆರೆಯಲು, ತಾಯಿ ಅದರಲ್ಲಿ ಹದಿನಾಲ್ಕು ಲೋಕಗಳನ್ನೂ, ತನ್ನನ್ನೂ, ಪ್ರಸ್ತುತ ಪ್ರಸಂಗವನ್ನೂ ಕಂಡು ಆಶ್ಚರ್ಯಪಡುತ್ತಾಳೆ.]

ಆನಂದಭೈರವಿ   ಚಾಪು

ಹೊರಗ್ಹೋಗಿ ಆಡದಿರ್ಧರಿಯೋ, ಎನ್ನ ಧೊರೆಯೋ
ನೆರೆ ಹೊರೆಯವರು ಕಂಡರೆ ದೂರುವುದರಿಯೆ ಪ

ಮನೆಯೊಳಗಾಡೋದೆ ಚೆಂದ, ನೆರೆ
ಮನೆಗಳಿಗೆಲ್ಲ ಪೋಗುವರೆ ಮುಕುಂದ
ಮಾನಿನಿಯರು ಮೋಹದಿಂದ, ನಿನ್ನ
ಮನ ಅಪಹರಿಸಿಕೊಂಬುವರೊ ಗೋವಿಂದ ೧

ಏನೇನು ಬೇಕಾದ್ದು ಕೊಡುವೆ, ಕೆನೆ
ಬೆಣ್ಣೆ ಸಕ್ಕರೆ ತಂದು ಕೈಯಲ್ಲಿ ಕೊಡುವೆ
ಅನುದಿನ ಗುಣಗಳ ಪಾಡುವೆ, ನಿನ
ಗನುವಾಗಿ ಅಲಂಕಾರ ಮಾಡಿ ನಾ ನೋಡುವೆ ೨

ಹೊಲಸು ಮೈಯವನೆಂಬುವರೊ, ದೊಡ್ಡ
ಕುಲಗಿರಿಯನ್ನು ಎತ್ತಿದವನೆಂಬುವರೊ
ಬಲು ಕೇಶದವನೆಂಬುವರೊ, ಕರುಳ
ಮಾಲೆಯ ಹಾಕಿದ ಘೋರನೆಂಬುವರೊ ೩

ಭಿಕ್ಷೆ ಬೇಡಿದನೆಂಬುವರೊ, ಭುವಿ
ರಕ್ಷಿಪ ರಾಯರ ಕಡಿದನೆಂಬುವರೊ
ಲಕ್ಷ್ಮಿಯ ಕಳೆದನೆಂಬುವರೊ, ವೈ
ಲಕ್ಷಣ್ಯದವ ಬೆಣ್ಣೆಗಳ್ಳನೆಂಬುವರೊ ೪

ಮಾನ ಬಿಟ್ಟವನೆಂಬುವರೊ, ಮಹಾ
ಹೀನರ ಹಿಂದಟ್ಟಿ ಹೋದನೆಂಬುವರೊ
ದಾನವ ವೈರಿಯೆಂಬುವರೊ, ಸಿರಿ
ವನಜಾಕ್ಷ ಪುರಂದರವಿಠಲನೆಂಬುವರೊ ೫

[ಇಲ್ಲಿ ಮೂರನೆಯ ನುಡಿಯಿಂದ ಕ್ರಮವಾಗಿ ದಶಾವತಾರಗಳನ್ನು ಹೇಳಿದೆ.]

ಆನಂದಭೈರವಿ ಆದಿ

ನೈವೇದ್ಯವ ಕೊಳ್ಳೊ ನಾರಾಯಣಸ್ವಾಮಿ
ದಿವ್ಯಷಡುರಸಾನ್ನವನಿಟ್ಟೆನೊ ಪ

ಘಮಘಮಿಸುವ ಶಾಲ್ಯಾನ್ನ ಪಂಚಭಕ್ಷ್ಯ
ಅಮೃತಕೂಡಿದ ದಿವ್ಯ ಪರಮಾನ್ನವು
ರಮಾದೇವಿಯರು ಸ್ವಹಸ್ತದಿ ಮಾಡಿದ ಪಾಕ
ಭೂ ಮೊದಲಾದ ದೇವೇರ ಸಹಿತೌತಣ ೧

ಅರವತ್ತು ಶಾಕ ಲವಣಶಾಕ ಮೊದಲಾದ
ಸರಸ ಮೊಸರು ಬುತ್ತಿ ಚಿತ್ರಾನ್ನವು
ಪರಮಮಂಗಳ ಅಪ್ಪಾವು ಅತಿರಸಗಳ
ಹರುಷದಿಂದಲಿ ಇಟ್ಟ ಹೊಸ ತುಪ್ಪವು ೨

ಒಡೆಯುಂಬೊಡೆ ದಧಿವಡೆಯು ತಿಂಥಿಣಿ
ಒಡೆಯ ಎಡೆಗೆ ಒಡನೆ ಬಡಿಸಿದೆ
ದೃಢವಾದ ಪದಾರ್ಥವನ್ನೆಲ್ಲ ಇಡಿಸಿದೆ
ಒಡೆಯ ಶ್ರೀ ಪುರಂದರವಿಠಲನೆ ಉಣ್ಣೊ ೩

ಷಡುರಸ—ಆರು ರಸಗಳು (ಷಡ್ರಸ): ಸಿಹಿ, ಉಪ್ಪು, ಖಾರ, ಕಹಿ, ಒಗರು, ಹುಳಿ.

ಶಾಲ್ಯಾನ್ನ—ಅಕ್ಕಿ ಅನ್ನ.

ಪಂಚಭಕ್ಷ್ಯ—ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯ, ಪಾನೀಯ ; ಅತಿರಸ, ಹೋಳಿಗೆ, ಲಡ್ಡು, ಜಿಲೇಬಿ, ಅಪೂಪ.

ಶಾಕ—ತರಕಾರಿ.

ಲವಣಶಾಕ—ಉಪ್ಪಿನಕಾಯಿ.
(ಮುಂದೆ ಬಗೆಬಗೆಯ ತಿನಿಸುಗಳ ಉಲ್ಲೇಖವಿದೆ).

ರೀತಿಗೌಳ ಆದಿ

ತಾಂಬೂಲವ ಕೊಳ್ಳೋ ತಮನ ಮರ್ದನನೇ
ಕಮಲವದನನೇ ಪ

ಅಂಬುಜಾಕ್ಷಿ ಮೋದದಿ ಮಡಚಿ ಕೊಡುತಾಳೆ ಅ

ಸಂಪಿಗೆಣ್ಣೆ ಅತ್ತರು ಚಂದನದೆಣ್ಣೆ
ಈ ಪರಿಪರಿ ವಿಧ ಪರಿಮಳದ ಎಣ್ಣೆ
ಕೆಂಪು ಕೇಸರಿ ಗಂಧ ಕಸ್ತೂರಿಯು
ಚಂಪಕ ಮೊದಲಾದ ಪುಷ್ಪವ ಮುಡಿಯೊ ೧

ಚಿಕ್ಕಣಿ ಅಡಿಕೆ ಕೇದಿಗೆ ಕಾಚು ಕೂಡಿದ ಏ
ಲಕ್ಕಿ ಜಾಯಿಕಾಯಿ ಲವಂಗ ಜಾಯಪತ್ರೆಯು
ಮೌಕ್ತಿಕದ ಸುಣ್ಣ ಕರ್ಪೂರ ಬೆರಸಿ ತಾ
ರುಗ್ಮಿಣಿದೇವಿಯು ಸಮರ್ಪಿಸುತಾಳೆ ೨

ಮಂಚವ ಹಾಕಿದೆ ಮಲ್ಲಿಗೆ ಹೂವ ತರಿಸಿದೆ
ಮುಂಚೆ ಬಂದು ಮಲಗಯ್ಯ ಮಿಂಚುತಲಿ
ಚಂಚಲಾಕ್ಷಿಯು ನಿನ್ನ ಇದಿರು ನೋಡುತಾಳೆ
ಪಂಚಬಾಣನಯ್ಯ ಶ್ರೀಪುರಂದರವಿಠಲ ೩

ತಮನ—ತಮವೆಂಬ ಅಸುರನನ್ನು (ಮತ್ಸ್ಯಾವತಾರದ ಸಂದರ್ಭ).
ಚಂಚಲಾಕ್ಷಿ—ಲಕ್ಷ್ಮಿ.

ಪಂತುವರಾಳಿ ಅಟ್ಟ

ಮನೆಯೊಳಗಾಡೊ ಗೋವಿಂದ, ನೆರೆ
ಮನೆಗಳಿಗೇಕೆ ಪೋಗುವೆಯೊ ಮುಕುಂದ ಪ

ನೊಸಲಿಗೆ ತಿಲಕವನಿಡುವೆ, ಅಚ್ಚ
ಹೊಸ ಬೆಣ್ಣೆಯನಿಟ್ಟು ಕಜ್ಜಾಯ ಕೊಡುವೆ
ಹೊಸ ಬೆಲ್ಲ ತಂದು ನಾ ಕೊಡುವೆ, ಹೊನ್ನ
ಮಿಸಣಿ ನಿನ್ನನು ನೋಡಿ ಸಂತೋಷಪಡುವೆ ೧

ಅಣ್ಣಯ್ಯ ಬಲರಾಮ ಸಹಿತ, ನೀ
ನಲ್ಲಲ್ಲಿ ತಿರುಗಾಡಿ ಬಾಹೋದೆ ವಿಹಿತ
ಹೆಣ್ಣುಗಳ್ಯಾಕೋ ಸಂಗಾತ, ಎನ್ನ
ಬಿನ್ನಪವನು ಪರಿಪಾಲಿಸೊ ದಾತ ೨

ಚೋರನೆನಿಸಿಕೊಳಲೇಕೆ, ಶ್ರೀಮ
ನ್ನಾರಾಯಣನಿಗೆ ದೂರುಗಳೇಕೆ
ವಾರಿಜಾಕ್ಷೇರ ಕೂಟವೇಕೆ, ಪುರಂ
ದರವಿಠಲ ರಾಯ ಕೇಳೆಚ್ಚರಿಕೆ ೩

ನೊಸಲಿಗೆ—ಹಣೆಗೆ.
ಹೊನ್ನಮಿಸುಣಿ—ಹೊಳೆಯುವ ಬಂಗಾರ.
ಬಾಹೋದೆ—ಬರುವುದೆ.
ವಿಹಿತ—ಸರಿಯಾದುದು.
ವಾರಿಜಾಕ್ಷೇರ—ಚೆಲುವ ಹೆಂಗಳೆಯರ.
ಕೂಟ—ಒಡನಾಟ.

ಶಂಕರಾಭರಣ ಆದಿ

ಪೋಗದಿರೆಲೊ ರಂಗ, ಬಾಗಿಲಿಂದಾಚೆಗೆ ಪ

ಭಾಗವತರು ಕಂಡರೆತ್ತಿಕೊಂಡೊಯ್ವರೊ ಅ

ಸುರಮುನಿಗಳು ತಮ್ಮ ಹೃದಯಗಹ್ವರದಲ್ಲಿ
ಪರಮಾತ್ಮನ ಕಾಣದರಸುವರೊ
ದೊರಕದ ವಸ್ತುವು ದೊರಕಿತು ತಮಗೆಂದು
ಹರುಷದಿಂದಲಿ ನಿನ್ನ ಕರೆದೆತ್ತಿಕೊಂಬರೊ ೧

ಅಗಣಿತಗುಣ ನಿನ್ನ ಜಗದ ನಾರಿಯರೆಲ್ಲ
ಹಗೆಯಾಗಿ ನುಡಿವರೊ ಗೋಪಾಲನೆ
ಮಗುಗಳ ಮಾಣಿಕ್ಯ ತಗುಲಿತು ಕರಕೆಂದು
ಬೇಗದಿಂದಲಿ ಬಂದು ಬಿಗಿದಪ್ಪಿಕೊಂಬರೊ ೨

ಧಿಟ್ಟನಾರಿಯರೆಲ್ಲ ಇಷ್ಟವ ಸಲಿಸೆಂದು
ಅಟ್ಟಟ್ಟಿ ಬೆನ್ಹಿಂದೆ ತಿರುಗುವರೊ
ಸೃಷ್ಟೀಶ ಪುರಂದರವಿಠಲರಾಯನೆ
ಇಷ್ಟಿಷ್ಟು ಬೆಣ್ಣೆಯು ಕೊಟ್ಟೇನೊ ರಂಗಯ್ಯ ೩

ಸುರಮುನಿಗಳು—ದೇವತೆಗಳೂ ಮುನಿಗಳೂ.
ಹೃದಯಗಹ್ವರದಲ್ಲಿ—ಹೃದಯದ ಗುಹೆಯಲ್ಲಿ (ದಹರಾಕಾಶದಲ್ಲಿ).
ಅಗಣಿತಗುಣ—ಲೆಕ್ಕಮಾಡಲಿಕ್ಕೆ ಬಾರದಷ್ಟು ಕಲ್ಯಾಣಗುಣಗಳುಳ್ಳ.
ತಗುಲಿತು ಕರಕೆಂದು—ಕೈಗೆ ಸಿಕ್ಕಿತೆಂದು.
ಧಿಟ್ಟ—ಧೃಷ್ಟ; ಗಟ್ಟಿಗರಾದ.

೭೮

ಶಂಕರಾಭರಣ ಆದಿ

ಯಾರೆ ರಂಗನ ಯಾರೆ ಕೃಷ್ಣನ
ಯಾರೆ ರಂಗನ ಕರೆಯ ಬಂದವರು ಪ

ಗೋಪಾಲಕೃಷ್ಣನ ಪಾಪವಿನಾಶನ
ಈ ಪರಿಯಿಂದಲಿ ಕರೆಯ ಬಂದವರು ೧

ವೇಣುವಿನೋದನ ಪ್ರಾಣಪ್ರಿಯನ
ಜಾಣೆಯರರಸನ ಕರೆಯ ಬಂದವರು ೨

ಕರಿರಾಜವರದನ ಪರಮಪುರುಷನ
ಪುರಂದರವಿಠಲನ ಕರೆಯ ಬಂದವರು ೩

೭. ಕೃಷ್ಣನ ಅಳಲು

೭೯

ವಸಂತಭೈರವಿ ಅದಿ

ಗೋಕುಲದಲಿ ನಾನಿರಲಾರೆ
ಗೋಪ್ಯಮ್ಮ ಕೇಳೆ ಪ

ಹಾಲು ಮೊಸರ ನಾನೊಲ್ಲೆಂಬೆ
ಭರದಿಂದಲಿ ಬಂದು ಕಾಲಲಿ ಬಿದ್ದು ಕುಡಿಸುವರು ಅ

ತನುವಿಗೆ ಬಲವೆಂದು ಬೆಳೆಯಬೇಕೆಂದು
ಒಳಕಳುಹುತ ಕಳವಿನಿಕ್ಕಲಿ ಮಗುವು ಒಳಗಿನ ಗುಟ್ಟು
ಬೈಲಮಾಡಿ ನಮ್ಮ ಕದವನಿತ್ತಿ ಎನ್ನ ಬೆದರಿಸುತ್ತಾರೆ ೧

ಮಂದಗಮನೇರು ತಾವು ಬಂದು ಕೈ ಹಿಡಿದುಕೊಂಡು
ಬಾ ಗೋವಿಂದನೆಂದು ಕರೆದು ಸದನದೊಳಗೆ
ಮಿಂದು ಹಾಸಿಗೆ ಹಾಸಿ ನಮ್ಮ ಅಧರವ ಸವಿದು
ಅವರ ಅಧರಧರಕ್ಕೆ ನಾ ಗಡಗಡ ನಡುಗಿದೆ ೨

ತಮ್ಮ ಪುರುಷರ ಪ್ರೀತಿ ಬಿಟ್ಟು ಚೆನ್ನಾಗಿ ಎನ್ನ
ಬೆನ್ನಗೊಂಡರು ಹಗಲು ಇರುಳು
ರತಿದೇವಿಕೃತಿ ಅತಿಶಯ ದುಃಖಕೆ
ರತಿಪತಿ ಶರದೆ ವ್ರತದೊಳಗೆ ಪುರಂದರವಿಠಲನಲ್ಲದೆ ೩

ತನುವಿಗೆ—ಮೈಗೆ.

ಒಳಕಳುಹತ... —ಪಾಠ ಅಶುದ್ಧವಾಗಿದೆ.

ರತಿದೇವಿಕೃತಿ—ವಿಷ್ಣುವಿನ ವ್ಯೂಹಾವತಾರವಾದ ಪ್ರದ್ಯುಮ್ನನ ಸ್ತ್ರೀ ಕೃತಿದೇವಿ; ಪ್ರದ್ಯುಮ್ನನೇ ಮನ್ಮಥನಾದುದರಿಂದ, ಮನ್ಮಥನ ಮಡದಿ ರತಿದೇವಿಯೇ ಕೃತಿದೇವಿ.

ರತಿಪತಿಶರದೆವ್ರತ—ಶರತ್ಕಾಲದಲ್ಲಿ ನಡೆಸುವ ಮದನೋತ್ಸವ; ಕೋಜಾಗರವ್ರತ.

೮೦

ಕಾಪಿ ಏಕ

ಹಸಿವೆಯಾಗುತಿದೆ ಅಮ್ಮ ಕೇಳೆ
ಹಸನಾದ ಅವಲಕ್ಕಿ ಬೆಲ್ಲ ಕಲಸಿ ಕೊಡೆ ಪ

ಬಿಸಿ ಬಿಸಿ ಅನ್ನ ಕೈ ಸುಡುತಿದೆ ಬದಿಯಲ್ಲಿ ಕೊಡೆ ಅ

ಖಾರ ಸಾರು ಮಾಡಬೇಡ ಉಣ್ಣಲಾರೆನೆ ಎನಗೆ
ಸೀಸಾರು ಮಾಡಿದರೆ ಬೇಗನುಂಬುವೆ ೧

ತೋಡ ತುಪ್ಪ ಹಾಕಿದರೆ ನೆಲಕೆ ಒತ್ತುವೆ ಎನಗೆ
ಗಟ್ಟಿ ತುಪ್ಪ ಹಾಕಿದರೆ ಬೇಗ ನುಂಗುವೆ ೨

ನೀರು ಮೊಸರು ಹಾಕಿದರೆ ನೆಲಕೆ ಎತ್ತುವೆ ಎನಗೆ
ಗಟ್ಟಿ ಮೊಸರು ಹಾಕಿದರೆ ತಟ್ಟನುಂಗುವೆ ೩

ತಟ್ಟನೇಳೊ ಕೃಷ್ಣರಾಯ ಬಟ್ಟಲು ತೊಳೆದೇನು ನಿನಗೆ
ಉಕ್ಕುವ ಹಾಲಿನ ಕೆನೆಯ ಕೈಯಲಿ ಕೊಟ್ಟು ಕಳುಹುವೆನು ೪

ಕಂದರೆಲ್ಲ ಕರೆಯಬಂದರಮ್ಮ ಕೇಳೆ ಬಾಳೆ
ಹಣ್ಣು ಬೆಲ್ಲ ಚೂರು ಕೈಯಲ್ಲಿ ಕೊಡೆ ೫

ಕಂದರೆಲ್ಲ ಕರೆಯಬಂದರು ತಾಯಿ ಕೇಳೆ ಸಕ್ಕರೆ
ಕೊಬ್ಬರಿಯ ಕುಟ್ಟಿ ಸೆರಗಿಲಿ ಹಾಕೆ ೬

ವೃಂದಾವನದೊಳಗೆ ಬಂದು ಅಮ್ಮ ಕೇಳೆ ಬಲು
ಚಂದದ ಗೊಂಬೆಯ ಹೂಡಿ ಕಟ್ಟಿ ಕೊಡೆ ೭

ಒಳಗೆ ಆಡು ಒಳಗೆ ಆಡು ಬಾರೊ ರಂಗ ಅಲ್ಲಿ
ಹೊರಗೆ ಬೂಚಿಮುಖದ ಹುಲಿ ತಿರುಗುತಿದೆ ೮

ಓಡಿ ಬಾರೊ ಓಡಿ ಬಾರೊ ಪುರಂದರವಿಠಲ ಅಲ್ಲಿ
ಆಡಿನ ಮುಖದ ಹುಲಿ ತಿರುಗುತಿದೆ ೯

ನಾದನಾಮಕ್ರಿಯೆ ಆದಿ

ತೆಗೆ ನಿನ್ನ ಮುಸುಕವನು ಪ

ತೆಗೆ ನಿನ್ನ ಮುಸುಕವ ನಗುತುಂಬೆ ಮೊಲೆಯುನು
ಜಗವನೆಲ್ಲವ ತಿರುಗಿ ಬಾಯಾರಿ ಬಂದೆನು ಅ

ಗೋವ ಕಾಯಲು ಪೋಗಿ
ಧಾವತಿ ಬಟ್ಟು ಬಹು
ದೇವಕಿದೇವಿಯೆ ಈವಾಗ ಬಂದೆನು ೧

ಕಾಳಿಯ ಮಡುವಿಲಿ
ಏಳು ಹೆಡೆಯ ಮೇಲೆ
ಕಾಳಿಂಗನ ತುಳಿದು ಭಾಳ ಶ್ರಮದಿ ಬಂದೆ ೨

ಉಟ್ಟ ಸೀರೆಯ ಬಿಟ್ಟು
ದಿಟ್ಟ ಬಾಲೆಯರಿರಲು ಥಟ್ಟನೆ ಸೆಳೆದೊಯ್ದು
ಕಷ್ಟಬಟ್ಟೆ ಮರವೇರಿ ೩

ವಿಷದ ಮೊಲೆಯುನ್ನುಂಡು
ಕಸಿವಿಸಿಬಡುತಿಹೆ
ನಸುನಗುತಲಿ ಉಂಬೆ ಹಸಿವು ಬಹಳಾಗಿದೆ ೪

ತ್ವರದಿ ತೊಡೆಯ ಮೇಲೆ
ಕರೆದು ಕೂಡಿಸು ತಾಯೆ
ಪುರಂದರವಿಠಲ ವರದ ಸರ್ವೋತ್ತಮನ ೫

ರೇಗುಪ್ತಿ ಝಂಪೆ

ಏನು ಮಾಡುವುದಿಲ್ಲವಮ್ಮ
ನಾನಂತು ನೋಡುವುದಿಲ್ಲವಮ್ಮ ಪ

ನಾನು ಗೋಪರಿಗಾಗಿ ಮನೆಮನೆ ಸುಳಿದರೆ
ಮಾನಿನೀರೆಲ್ಲರು ದೂರಮಾಡುತ್ತೈದಾರೆ ಅ

ಕಣ್ಣು ಮುಚ್ಚಾಟಕೆ ನಾನು ಅವರ
ಬಣ್ಣದ ಸೀರೆಯಲ್ಲಡಗಿದೆನು
ಸಣ್ಣವನಾಟಕ್ಕೆ ನವನೀತ ಮೆದ್ದರೆ
ಬೆಣ್ಣೆಕಳ್ಳನೆಂದು ಬಾಯಿ ಮಾಡುತ್ತೈದಾರೆ ೧

ವಿಷದ ಚಳಿಗಂಜಿ ಯಶೋದೆ
ನಾ ಬೆದರಿ ಸೆರಗನೆ ಪಿಡಿದೆ
ಕುಸುರದ ಚೆಂಡೆಂತ ಕುಚಗಳ ಪಿಡಿದರೆ
ಶಶಿಮುಖೀರೆಲ್ಲರು ಸಾರಿ ದೂರುತ್ತೈದಾರೆ ೨

ಗಿಳಿವಿಂಡು ಕಂಡು ಬೆದರಿ ಅವರ
ತೋಳುಗಳ ನಾ ಪಿಡಿದೆ
ಆಲದ ಹಣ್ಣೆಂದು ತುಟಿಗಳ ಸವಿದರೆ
ಬಾಲೆಯರೆಲ್ಲ ಬಾಯಿಮಾಡುತ್ತೈದಾರೆ ೩

ಹಾವಿನ ಹೆಡೆಗಂಜಿ ಬೆದರಿ
ಅವರ ನಿರಿಗಳ ನಾ ಪಿಡಿದೆ
ಮಾವಿನ ಹಣ್ಣೆಂದು ಗಲ್ಲವ ಕಡಿದರೆ
ಭಾಮೆಯರೆಲ್ಲ ಬಹಳ ದೂರುತ್ತೈದಾರೆ ೪

ಗೆಳೆಯರ ಕಂಡು ಬಂದೆ ನಾನು
ಸುಳಿದೆ ನಾ ಅವರ ಮನೆಯ ಮುಂದೆ
ಇಳೆಯೊಳು ಪುರಂದರವಿಟ್ಠಲರಾಯನ
ಒಳಗೆ ಬಾಯೆಂದು ವನಿತೆಯರು ಕಾಯುತಿದ್ದಾರೆ ೫

ನವನೀತ—ಬೆಣ್ಣೆ.
ಕುಸುರದ ಚೆಂಡು—ದೋರಗಾಯಿಗೆ ಬಟ್ಟೆ ಸುತ್ತಿ ಮಾಡಿದ ಚೆಂಡು.
ನಿರಿ—ಸೀರೆಯ ಮಡಿಕೆ, ನೆರಿಗೆ.

೮೩

ಧನಾಸರಿ ಆದಿ

ಅಮ್ಮಾ ಎನ್ನ ಕೂಡಾಡುವ ಮಕ್ಕಳಣಕಿಸುವರೆ ಪ

ಯಾರು ಪಡೆದರೆಂಬೋರೇ, ಯಶೋದೆ
ಯಾರು ಹಡೆದರೆಂಬೋರೇ
ಕೇರಿ ಬೆಣ್ಣೆಯನ್ನೆಲ್ಲ ಕದ್ದು ತಿಂದವನೆಂದು
ನಾರೇರು ದೂರುತಾರೆ ಅಮ್ಮಯ್ಯ ೧

ಮಾತೆ ನೀನಲ್ಲವಂತೆ, ಯಶೋದೆ
ತಾತನು ಇಲ್ಲಿಲ್ಲವಂತೆ
ಮಾತುಳನ ಬಾಧೆಗೆ ಮಧುರೆಯಿಂದಲಿ ತಂದು
ಖಾತಿಗೆ ಮಾರಿದರಂತೆ ಅಮ್ಮಯ್ಯ ೨

ದೇವಕಿ ತಾಯಿಯಂತೆ, ಅಮ್ಮಾ ವಸು
ದೇವನು ತಂದೆಯಂತೆ
ಕಾವನಯ್ಯ ನಮ್ಮ ಪುರಂದರವಿಠಲನ
ಆವ ಕಾವನೆಂಬೋರೇ ಯಶೋದೆ ೩

ನಾರೇರು—ನಾರಿಯರು.

ತಾತ—ತಂದೆ, ವಸುದೇವ.

ಮಾತುಳ—ಸೋದರಮಾವ, ಕಂಸ.

ಖಾತಿಗೆ—ಲೆಕ್ಕಕ್ಕೆ.

ಆವಕಾವನು—ದನ ಕಾಯುವವನು

ಕಲ್ಯಾಣಿ ಅಟ್ಟ

ಕೂಡಿ ಆಡಲೊಲ್ಲರೇ, ಅಮ್ಮಯ್ಯ ಎನ್ನ
ಕೇಡಿಗನಿವ ಕೊಲ್ಲುವನೆಂತೆಂದೆನ್ನ ಪ

ಹಸಿದಳುತಿರೆ ಮೊಲೆಯೂಡ ಬಂದಸುರೆಯ
ಅಸುವ ಹೀರಿದ ಪಾರಿ ಶಿಶುವೆಂತೆಂದೆನ್ನ ೧

ತನ್ನ ತಾಯಿಯು ಒಡಹುಟ್ಟಿದ ಅಣ್ಣನ
ಕೊಂದನಿವನನ್ಯರ ಬಿಡುವನೆ ಎಂದೆನ್ನ ೨

ಮಕ್ಕಳೊಳಗೆ ಬಲು ಹೆಚ್ಚಿನ ಬಲವಂತ
ಸಿಕ್ಕದ ಪುರಂದರವಿಠಲನೆಂತೆಂದೆನ್ನ ೩

ಹಸಿದಳುತಿರೆ...—ಪೂತನಿಯನ್ನು ಕೊಂದ ಸಂದರ್ಭ.
ತನ್ನ ತಾಯಿಯ...—ಕಂಸನನ್ನು ಕೊಂದ ಸಂದರ್ಭ.

ಸುರುಟಿ ಖಂಡಚಾಪು

ಆಡಹೋದಲ್ಲೆ ಮಕ್ಕಳು
ಆಡಿಕೊಂಬುವರು ನೋಡಮ್ಮ ಪ

ನೋಡಿ ನೋಡಿ ಎನ್ನ ಮುಖವ
ನೋಡಿ ಕಣ್ಣು ಮೀಟುವರಮ್ಮ ಅ

ದೇವಕಿ ಹೆತ್ತಳೆಂತೆ ವಸು
ದೇವನೆಂಬವ ಪಿತನಂತೆ
ಕಾವಲಲ್ಲಿ ಹುಟ್ಟಿದೆನಂತೆ
ಮಾವಗಂಜಿಲ್ಲಿ ತಂದರಂತೆ ೧

ವಿಷವು ತುಂಬಿದ ಮೊಲೆಯನುಂಡು
ಅಸುರೆಯು ನಾ ಕೊಂದೆನಂತೆ
ನಿಶಿಚರ ಶಕಟಾಸುರನ
ಶಿಶುಗಾಲಿಲೊರಸಿದೆನಂತೆ ೨

ನೀನೆನ್ನ ಹಡೆದಿಲ್ಲವಂತೆ
ನಾ ನಿನ್ನ ಮಗನಲ್ಲವಂತೆ
ಧೇನು ಕಾಯುವರಿಲ್ಲವೆಂದು
ಸಾನುರಾಗದಿ ಸಲಹಿದೆಯಂತೆ ೩

ಕಿಚ್ಚ ನಾ ಗಡ ನುಂಗಿದೆನಂತೆ
ವತ್ಸಾಸುರನ ಕೆಡಹಿದೆನಂತೆ
ಕಚ್ಚ ಬಂದ ಕಾಳಿಂಗನ
ಕೊಚ್ಚಲು ಮಡುವ ಧುಮುಕಿದೆನಂತೆ ೪

ಹದ್ದು ಎನ್ನ ವಾಹನವಂತೆ
ಹಾವು ಎನ್ನ ಹಾಸಿಗೆಯಂತೆ
ಕದ್ದು ಬೆಣ್ಣೆಯ ನಾ ತಿಂದೆನಂತೆ
ಮುದ್ದು ಪುರಂದರವಿಠಲನಂತೆ ೫

ಕಾವಲಲ್ಲಿ—ಸೆರೆಮನೆಯಲ್ಲಿ.

ವಿಷವು ತುಂಬಿದ...—ಪೂತನಿಯ ಸಂಹಾರ.

ಕಿಚ್ಚ ನುಂಗಿದೆನಂತೆ—ಗೋಕುಲದಲ್ಲಿ ಗೋವಳರು ದನಗಳನ್ನಟ್ಟಿಕೊಂಡು ಈಷಿಕೆ ಯೆಂಬ ಅಡವಿಗೆ ನುಗ್ಗಿದಾಗ, ಅಲ್ಲಿ ಕಾಡುಕಿಚ್ಚು ಅವರನ್ನು ತೊಂದರೆಗೀಡು ಮಾಡಲು ಕೃಷ್ಣನು ಆ ಕಿಚ್ಚನ್ನು ನುಂಗಿ ಗೋವಳರನ್ನು ಕಾಪಿಟ್ಟ ಕಥೆ ಭಾಗವತದಲ್ಲಿ ಬಂದಿದೆ.

ವತ್ಸಾಸುರ—ಯಮುನಾನದಿಯ ದಂಡೆಯ ಮೇಲೆ ಬಲರಾಮ ಮತ್ತು ಕೃಷ್ಣ ಆಡುತ್ತಿರುವಾಗ ಒಬ್ಬ ಅಸರನು ಬಂದು ಕರುವಿನ ರೂಪ ತಳೆದು ದನಗಳ ಮಂದೆಯೊಳಗೆ ಹೊಕ್ಕಾಗ ಇವನನ್ನು ಕೃಷ್ಣನು ಕೊಂದ ಕಥೆ ಭಾಗವತದ ದಶಮಸ್ಕಂಧದಲ್ಲಿದೆ.

ಹದ್ದು—ಗರುಡ.

ಹಾವು—ಶೇಷ.



ತೋಡಿ ಆದಿ

ಗುಮ್ಮನೆಲ್ಲಿಹ ತೋರಮ್ಮಾ
ಸುಮ್ಮನಂಜಿಸಬೇಡಮ್ಮಾ ಪ

ಪಂಚಾಶತ್ಕೋಟಿ ವಿಸ್ತೀರ್ಣದ ಭೂಮಿಯ
ವಂಚನೆಯಿಲ್ಲದೆ ತಿರುಗಿ ಬಂದೆನೆ ನಾನು
ಹಂಚಿಸಿ ಕೊಟ್ಟೆನೆ ಅವರವರಿಗೆ ನಾ
ಹಾಂಗು ನೋಡಿದರು ಕಾಣೆನೆ ಗುಮ್ಮನ ೧

ಈರೇಳು ಲೋಕವ ಉದರದೊಳಗೆ ಇಟ್ಟು
ತೋರಿದೆ ಬ್ರಹ್ಮಾಂಡವ ಬಾಯಲಿ ನಾನು
ಘೋರ ರೂಪದಿ ಬಂದ ಘಾಳಿ ಅಸುರನ ಕೊಂದೆ
ಹಾಂಗು ನೋಡಿದರು ಕಾಣೆನೆ ಗುಮ್ಮನ ೨

ಕಾಳಿಯ ಮಡು ಧುಮುಕಿ ಕಾಳಿಂಗನ್ಹೆಡೆ ತುಳಿದು
ಮೇಲೆ ನಾನಾವಿಧ ನಾಟ್ಯವಾಡುತಲಿದ್ದೆ
ಒಲಿದು ಭಾಗ್ಯವನಿತ್ತೆ ನಾಗಪತ್ನಿಯರಿಗೆ
ಹಾಂಗು ನೋಡಿದರು ಕಾಣೆನೆ ಗುಮ್ಮನ ೩

ಅಕ್ರೂರಗೆ ವಿಶ್ವರೂಪವ ತೋರಿದೆ
ಫಕ್ಕನೆ ರಥವೇರಿ ಮಧುರೆಗೆ ಪೋದೆ
ಸೊಕ್ಕಿದ ರಜಕನ ಕೊಂದು ಮಡಿಯನುಟ್ಟೆ
ಹಾಂಗು ನೋಡಿದರು ಕಾಣೆನೆ ಗುಮ್ಮನ ೪

ಬಿಲ್ಲುಹಬ್ಬಕೆ ಪೋಗಿ ಮಲ್ಲರ ಮಡುಹಿದೆ
ಅಲ್ಲಿ ಮಾವನ ಕೊಂದು ಮುತ್ಯಗೆ ಒಲಿದೆ
ಚೆಲ್ವ ಗೋಪಾಲ ಶ್ರೀ ಪುರಂದರವಿಠಲನ
ಬಾರಿ ಬಾರಿಗೆ ನೀ ಬೆದರಿಸಬೇಡಮ್ಮ ೫

ಗುಮ್ಮ—ಗುರ್ವು, ಬೆದರಿಸುವ ದೆವ್ವ.

ಪಂಚಾಶತ್‌ಕೋಟಿ ವಿಸ್ತೀರ್ಣದ ಭೂಮಿ—ಭೂಮಿಯ ಹರವು ಐವತ್ತು ಕೋಟಿ ಯೋಜನಗಳೆಂದು ಪುರಾಣದ ಒಕ್ಕಣೆ.

ಹಂಚಿಸಿ ಕೊಟ್ಟನೆ ಅವರವರಿಗೆ—ತತ್ತ್ವಾಭಿಮಾನಿ ದೇವತೆಗಳಿಗೆ.

ಈರೇಳು ಲೋಕವ—ಹದಿನಾಲ್ಕು ಲೋಕಗಳನ್ನು.

ಘಾಳಿ ಅಸುರನ—ತೃಣಾವರ್ತನೆಂಬ ಅಸುರನು ಕೃಷ್ಣನನ್ನು ಕೊಲ್ಲಲು ಬಿರುಗಾಳಿಯಂತೆ ಬಂದು ಎತ್ತಿಕೊಂಡು ಹೋಗಲು, ಕೃಷ್ಣನು ಅವನನ್ನು ಕೊಂದ ಸಂದರ್ಭ.

ಅಕ್ರೂರಗೆ...—ಕಂಸನ ಆಣತಿಯಂತೆ ಕೃಷ್ಣನನ್ನು ಗೋಕುಲದಿಂದ ಮಥುರೆಗೆ ಕೊಂಡೊಯ್ಯುತ್ತಿರುವಾಗ ಯಮುನಾನದಿಯಲ್ಲಿ ಅಕ್ರೂರನಿಗೆ ಕೃಷ್ಣನು ತನ್ನ ದಿವ್ಯರೂಪವನ್ನು ತೋರಿಸಿದ ಸಂದರ್ಭ.

ಸೊಕ್ಕಿದ ರಜಕ—ದಾರಿಯಲ್ಲಿ ಸಿಕ್ಕ ಕಂಸನ ಮಡಿವಾಳನನ್ನು.

ಬಿಲ್ಲುಹಬ್ಬಕೆ...—ಮಥುರೆಯಲ್ಲಿ ನಡೆಯುತ್ತಿದ್ದ ನಾಡಹಬ್ಬ ; ಇದನ್ನು ನೆವಮಾಡಿಕೊಂಡೇ ಕಂಸನು ಕೃಷ್ಣನನ್ನು ಮಥುರೆಗೆ ಕರೆಸಿಕೊಂಡದ್ದು.

ಮಾವನ—ಕಂಸನನ್ನು.

ಮುತ್ಯಗೆ—ತಾತನಿಗೆ, ದೇವಕಿಯ ತಂದೆಯಾದ ಉಗ್ರಸೇನನಿಗೆ.

ತೋಡಿ ಚಾಪು

ಗುಮ್ಮನ ಕರೆಯದಿರೆ ಅಮ್ಮ ನೀನು ಪ

ಸುಮ್ಮನೆ ಇದ್ದೇನು ಅಮ್ಮಿಯು ಬೇಡೆನು
ಮಮ್ಮು ಉಣ್ಣುತೇನೆ ಅಮ್ಮ ಅಳುವುದಿಲ್ಲ ಅ

ಹೆಣ್ಣುಗಳಿರುವಲ್ಲಿ ಪೋಗಿ ಅವರ
ಕಣ್ಣು ಮುಚ್ಚುವುದಿಲ್ಲವೆ
ಚಿಣ್ಣರ ಬಡಿಯೆನು, ಅಣ್ಣನ ಬೈಯೆನು
ಬೆಣ್ಣೆಯ ಬೇಡೆನು ಮಣ್ಣು ತಿನ್ನುವುದಿಲ್ಲ ೧

ಬಾವಿಗೆ ಪೋಗೆ ಕಾಣೆ ಅಮ್ಮ ನಾನು
ಹಾವಿನೊಳಾಡೆ ಕಾಣೆ
ಆವಿನ ಮೊಲೆಯೂಡೆ ಕರುಗಳ ಬಿಡೆ ನೋಡೆ
ದೇವರಂತೆ ಒಂದು ಠಾವಿಲಿ ಕೂಡುವೆ ೨

ಮಗನ ಮಾತ ಕೇಳಿ ಗೋಪಿದೇವಿ
ಮುಗುಳು ನಗೆ ನಗುತ
ಜಗದೊಡೆಯನ ಶ್ರೀ ಪುರಂದರವಿಠಲನ
ಬಿಗಿದಪ್ಪಿಕೊಂಡಳು ಮೋಹದಿಂದಲಾಗ

ಗುಮ್ಮ—ವಿವರಣೆ ಆಗಲೆ ಬಂದಿದೆ (ಬಾಲಭಾಷೆ).
ಅಮ್ಮಿ—ಮೊಲೆಹಾಲು (ಬಾಲಭಾಷೆ).
ಮಮ್ಮು—ಊಟ (ಬಾಲಭಾಷೆ).
ಚಿಣ್ಣರ—ಸಣ್ಣ ಹುಡುಗರನ್ನು.
ಆವಿನ—ಹಸುಗಳ.
ಠಾವಿಲಿ—ಸ್ಥಳದಲ್ಲಿ, ಜಾಗದಲ್ಲಿ.

೮. ಗೀತನರ್ತನ ಲೀಲೆ

೮೮

ಆರಭಿ — ಆದಿ

ಆಡಿದನೋ ರಂಗ ಅದ್ಭುತದಿಂದಲಿ
ಕಾಳಿಂಗನ ಫಣೆಯಲಿ ಪ

ಪಾಡಿದವರಿಗೆ ಬೇಡಿದ ವರಗಳ
ನೀಡುತಲಿ ದಯಮಾಡುತಲಿ ನಲಿ
ದಾಡುತಲಿ ಬೆಣ್ಣೆ ಬೇಡುತಲಿ ಕೃಷ್ಣ ಅ

ಅಂಬುರುಹೋದ್ಭವ ಅಖಿಳ ಸುರರು ಕೂಡಿ
ಅಂಬರದಲಿ ನಿಂತು ಅವರ ಸ್ತುತಿಸೆ
ರಂಭೆ ಊರ್ವಶಿ ರಮಣಿಯರೆಲ್ಲರು
ಚಂದದಿಂ ಭರತ ನಾಟ್ಯವ ನಟಿಸೆ
ಝಂ ತಟ ತಕ ಧಿಮಿ ತಧಿ ಗಿಣಿ ತೋಂ ಎಂದು
ಝಂಪೆ ತಾಳದಿ ತುಂಬುರನೊಪ್ಪಿಸೆ ೧

ಧಾಮಪಪಾಧಸರೀ ಎಂದು ಧ್ವನಿಯಿಂದ
ನಾರದ ತುಂಬುರರ್ಗಾನವ ಮಾಡಲು
ನಂದಿಯು ಮದ್ದಲೆ ಚಂದದಿ ಹಾಕಲು ೨

ಫಣವ ಮೆಟ್ಟಿ ಬಾಲವ ಕೈಯಲಿ ಪಿಡಿದು
ಫಳಫಳಿಸುತ್ತ ನಾಟ್ಯವನಾಡೆ
ಚಂದ್ರಮಂಡಲದಂತೆ ಪೊಳೆಯುವ ಮುಖದೊಳು
ಚಲಿಸುವ ನೀಲಕೇಶಗಳಾಡೆ
ಕಾಲಲಂದಿಗೆ ಗೆಜ್ಜೆ ಘಲು ಘಲು
ಘಲುರೆನುತ ಉಡು ಗೆಜ್ಜೆ ಘಂಟೆಗಳಾಡೆ ೩

ದುಷ್ಟ ಕಾಳಿಂಗನ ಮೆಟ್ಟಿ ಭರದಿಂದ
ಪುಟ್ಟ ಪಾದವ ಇಟ್ಟು ಶ್ರೀ ಕೃಷ್ಣನು
ಮೆಟ್ಟಿದನು ತಕಧಿಮಿತಧಿಕೆನುತ ೪

ಸುರರು ಪುಷ್ಪದ ವೃಷ್ಟಿಯು ಕರೆಯಲು
ಸುದತಿಯರೆಲ್ಲರು ಪಾಡಲು
ನಾಗಕನ್ನಿಕೆಯರು ನಾಥನ ಬೇಡಲು
ನಾನಾ ವಿಧದಿ ಸ್ತುತಿಮಾಡಲು
ರಕ್ಕಸರೆಲ್ಲರು ಕಕ್ಕಸವನೆ ಕಂಡು
ದಿಕ್ಕು ದಿಕ್ಕುಗಳಿಗೆ ಓಡಲು ೫

ಚಿಕ್ಕವನಿವನಲ್ಲ ಪುರಂದರವಿಠ್ಠಲ
ವೆಂಕಟರಮಣನ ಬೇಗ ಯಶೋದೆ
ಬಿಂಕದೊಳೆತ್ತಿ ಮುದ್ದಾಡೆ ಶ್ರೀಕೃಷ್ಣನ ೬

ಅಂಬುರುಹೋದ್ಭವ—ಬ್ರಹ್ಮ.
ಫಣವ—ಹೆಡೆಯನ್ನು.
ಕಕ್ಕಸ—ಆಶ್ಚರ್ಯ ; ಭಯಾಕನವಾದುದು.

ಶಂಕರಾಭರಣ ಅಟ್ಟ

ನಳಿನಜಾಂಡ ತಲೆಯ ದೂಗಿ ಮೋಹಿಸುತಿರಲು
ಕೊಳಲನೂದಿ ಬಾಜಿಸುವ
ಚೆಲುವ ಕೃಷ್ಣರಾಯನ ನೋಡಿ ಪ

ಹೊಳೆವ ಹೊಂಬಣ್ಣ ದಟ್ಟಿ ಚಲ್ಲಣ ಅಳವಡಿಸಿ ನೀಲಿಯ ಬಿಗಿದು
ಹಲವು ರನ್ನದ ಉಂಗುರನಿಟ್ಟ ಚೆಲುವ ಬೆರಳ ನಟಿಸುತ
ಲಲಿತ ವಾಮತೋಳಿನ ಮೇಲೆ ಹೊಳೆವ ವಾರೆದೃಷ್ಟಿಯೆಸೆಯೆ
ಬಲದ ಪಾದ ಎಡಕೆ ಚಾಚಿರೆ ಜಲಜದಂದದಿ ಹೊಳೆಯಲು ನೋಡಿ ೧

ಗುಲಗಂಜಿ ಸರ ಕಲ್ಲಿಯ ಚಿಕ್ಕ ಗಜಗಿನ ಚೀಲ ಶಳೆ ಗೋಲಾಮಚಿ
ಘಲುಕೆಂಬಾ ಪೆಂಡೆ ಘಮ್ಮ ಘಮ್ಮಿಸುವ ಮಲಯಜಾಮಿತ ಲೇಪಿತ
ಮಲ್ಲಿಗೆ ಮಾಲತಿ ಬಳ್ಳಿಯ ದಳಿಲು ಹಲವು ಸರಗಳೊಲಿವುತಿರಲು
ತಳಿತ ಕಲ್ಪವೃಕ್ಷದ ನೆಳಲೊಳು ಗೆಳೆಯ ಗೋವಳರಿಂದಾಡಲು ೨

ಮಾಳವಿ ದೇಶಿ ಗುರ್ಜರಿ ಭೈರವಿ ಗೌಳಿ ನಾಟಿ ಸಾವೇರಿ ಆಹೇರಿ
ಪೂರ್ವಿ ಕಾಂಬೋದಿ ಪಾಡಿ ದೇಶಾಕ್ಷಿ ಶಂಕರಾಭರಣ ಮಾಳವ
ವರಾಳಿ ಕಲ್ಯಾಣಿ ತೋಡಿ ಮುಖಾರಿ ಯರಳಿ ವಸಂತ ಬೌಳಿ ಧನ್ಯಾಸಿ
ಸೌರಾಷ್ಟ್ರ ಗುಂಡಕ್ರಿಯ ರಾಮಕ್ರಿಯ ಮೇಘಕುರಂಜಿಯ ಪಾಡಲು ನೋಡಿ ೩

ಹರುಷದಿಂದ ಮನದಿ ಸುಸ್ವರವ ಪುರದ ಸತಿಯರೆಲ್ಲರು ಕೇಳಿ
ಮರೆದು ಮನೆಯ ಮಕ್ಕಳ ಜರೆದು ನೆರೆದು ಹರಿಯ ಒಲಿಸುತ
ಹರಿಣ ಕರಿಯು ಕೇಸರಿವೃಂದ ತುರಗ ಮಹಿಷ ಉರಗ ಮೂಷಕ
ಹರಿಯ ಕೊಳಲ ರವಕೆ ಮೋಹಿಸಿ ಮರೆದರೆ ಜಾತಿವೈರವ ೪

ಕರಗಿ ಕಲ್ಲು ನೀರಾಗಿ ಹರಿಯೆ ತೆರೆಗಳಿಂದುಕ್ಕಿ ಹರಿಯೆ ಯಮುನೆ
ತುರು ಖಗ ಬರ್ಹಿ ಸ್ತ್ರೀಯರು ಚಿತ್ರದಿ ಬರೆದ ಪ್ರತಿಮೆಯಂತಿರೆ
ಸುರರು ನಭದಿ ನೋಡಿ ಕುಸುಮಗರೆಯೆ ಭೇರಿದುಂದುಭಿ ಮೊರೆಯೆ
ಪುರಂದರವಿಠಲ ಗೋಕುಲದಿ ವೇಣುನಾದ ಮಾಡಲು ನೋಡಿ ೫

ನಳಿನಜಾಂಡ—ಬ್ರಹ್ಮಾಂಡವು.

ದಟ್ಟಿ—ಸೊಂಟಕ್ಕೆ ಸುತ್ತುವ ಬಟ್ಟೆ.

ಚಲ್ಲಣ—ತೊಡೆ ಮುಚ್ಚುವ ಚಡ್ಡಿ ; ಅರ್ಧೋರುಕ.

ನೀಲಿ—ನೈದಿಲೆ, ಕುಮುದ, ನೀಲೋತ್ಪಲ ; ನವಿಲುಗರಿ ಸಿಕ್ಕಿಸಿ ಅಥವಾ ನೀಲವಸ್ತ್ರವನ್ನು ಅಡ್ಡಬಿಗಿದು.

ಕಲ್ಲಿ—ಹೆಣಿಗೆಯ ಚೀಲ, ಬಲೆಚೀಲ.

ಶಳೆ—ಸಣ್ಣ ಕೋಲು.

ಗೋಲಾಮುಚಿ—ಕೆಂಪು ಹರಳಿನ ಒಡವೆ.

ಜಲಜದಂದದಿ—ತಾವರೆ ಹೂವಿನಂತೆ.

ಪೆಂಡೆ—ಕಾಲುಬಳೆ (ಪಾಯವಟ್ಟ).

ಮಲಯಜಾಮಿತಲೇಪಿತ—ಮಲಯಮಾರುತದಿಂದ ಹೆಚ್ಚಾಗಿ ಸುವಾಸನೆಯನ್ನು ಬೀರುತ್ತ.

ಹರಿಣ ಕರಿ ಕೇಸರಿವೃಂದ ತುರಗ ಮಹಿಷ ಉರಗ ಮೂಷಕ—ಜಿಂಕೆ, ಆನೆ, ಸಿಂಹಗಳ ತಂಡ, ಕುದುರೆ, ಎಮ್ಮೆ, ಹಾವು, ಇಲಿ.

ತುರು ಖಗ ಬರ್ಹಿ—ಹಸುಗಳು, ಹಕ್ಕಿಗಳು, ನವಿಲು.

ಆರಭಿ — ಅಟ್ಟ

ರಂಗ ಕೊಳಲನೂದಲಾಗಿ
ಮಂಗಳಮಯವಾಯ್ತು ಧರೆ ಜ
ಗಂಗಳು ಚೈತನ್ಯ ಮರೆದು
ಅಂಗ ಪರವಶವಾದವು ಪ

ತೀಡಿದ ಮಾರುತ ಮಂದಗತಿಗೈಯೆ
ಬಾಡಿದ ಬರಲು ಫಲಗೊಂಚಲುಬಿಡೆ
ಪಾಡಲೊಲ್ಲವಳಿಕುಲಗಳು
ಬಾಡಿದ ಮಾಮರ ಚಿಗುರೊಡೆಯೆ

ಹೇಡಿಗೊಂಡವು ಜಾಣ್ವಕ್ಕಿ ಗಿಳಿ, ಮಾ
ತಾಡದೆ ಕಳೆಗುಂದಿದವು ಕೋಗಿಲೆ
ಓಡಾಟ ವೈರವ ಬಿಟ್ಟು ಖಗಮೃಗ
ಗಾಢ ನಿದ್ರಾವಶವಾದುವು ೧

ತಳದುದಕ ಉಕ್ಕೇರಿ ಬಂದುವು
ತುಳುಕಿ ಚೆಲ್ಲಾಡಿ ಬಂದಳು ಯಮುನೆ
ಮೇಲೆ ಮೇಲೋಡಿ ಮೇಘಾಳಿ ಧಾರಿಟ್ಟುವು
ಕಲ್ಲು ಕರಗಿ ಕರಗಿ ನೀರಾದುವು

ನಳಿನ ಚಂಪಕ ನಾಗ ಪುನ್ನಾಗ ಪಾ
ಟಲ ಶಾವಂತಿಗೆ ಕುಂದ ಬಕುಳವು
ಮಾಲತಿ ಜಾಜಿ ಪರಿಮಳಗೂಡಿತು
ನೀಲಾಂಗನಂಘ್ರಿಗೆರಗಿದವು ೨

ಮುದ್ದು ಮೋಹನನ ಮಂಜುಳ ಸಂಗೀತ
ಸದ್ದನಾಲೈಸಿ ಗೋಪಾಂಗನೆಯರೆಲ್ಲ
ಬುದ್ಧಿ ಸೂರ್‍ಯಾಡಿ ಆನಂದವಾರಿಧಿಯಲ್ಲಿ
ಬಿದ್ದು ಪರವಶರಾದರು

ಸಿದ್ಧ ಮುನಿಜನರಿದ್ದ ಸಮಾಧಿಯೊ
ಳಿದ್ದು ಕುಣಿದರು ಎದುರೆದುರಾಗಿ
ಗದ್ದುಗೆಯರಸನೋಲೈಸಿಕೊಂಡರು
ಗೆದ್ದರು ಭವಸಮುದ್ರವನು ೩

ಕೆಚ್ಚಲು ಬಿಗಿದು ತೊರೆಯಲು ಮೊಲೆಯು
ವತ್ಸಗಳೊಡಲಾಸೆಯು ತೊರೆದೆಳೆಹುಲ್ಲ
ಕಚ್ಚಿರಲಲ್ಲಿ ನಿಂದುವು ಗೋವ್ಗಳು
ಪುಚ್ಛವ ನೆಗಹಿ ನೀಂಟಿಸಿ

ಅಚ್ಯುತನಾಕೃತಿ ನೋಡಲು ಸುರರಿಗೆ
ಆಶ್ಚರ್ಯವಾಯಿತು ನಾವು ಕಂಡೆವೆಂದು
ಮೆಚ್ಚಿ ಮುಕುಂದನ ಲೀಲಾ ವಿನೋದಕೆ
ಹೆಚ್ಚಿನ ಕುಸುಮವ ಸುರಿದರು ೪

ಶ್ರೀ ಮನೋಹರ ಗೋಪಾಲ ಮೂರುತಿ
ಆ ಮಧುಕುಂಜವನದಿ ತ್ರಿಭಂಗಿಲಿ
ಹೇಮಾಂಬರವುಟ್ಟು ಗೀರ್ಗಂಧ ಕಸ್ತೂರಿ
ನಾಮ ಮಕುಟದ ಬೆಳಕಿನಲಿ

ದಾಮ ವನಮಾಲೆ ಶ್ರೀವತ್ಸ ಕೌಸ್ತುಭ
ಸ್ವಾಮಿ ಪುರಂದರವಿಠಲರಾಯನು
ನಾಮಕ್ರಿಯೆ ಮೇಘರಂಜಿನಿ ಪಾಡೆ
ಸಾಮವೇದ ನಮೋ ನಮೋ ಎನ್ನೆ ೫

ಚೈತನ್ಯ ಮರೆದು—ಮೈಮರೆತು.
ತೀಡಿದ ಮಾರುತ—ಬೀಸಿದ ಗಾಳಿ.
ಅಳಿಕುಲಗಳು—ದುಂಬಿಗಳು.
ಮಾಮರ—ಮಾವಿನಮರ.
ಜಾಣವಕ್ಕಿ—ಚಕ್ರವಾಕ.

ಖಗ ಮೃಗ—ಹಕ್ಕಿಗಳೂ ಪಶುಗಳೂ,

ಮೇಘಾಳಿ ಧಾರಿಟ್ಟುವು—ಮೋಡಗಳ ಗಡಣ ಧಾರೆಯಾಗಿ ಮಳೆಗರೆದವು.

ಬುದ್ಧಿ ಸೂರ್‍ಯಾಡಿ—ಬುದ್ಧಿಯನ್ನು ಚೆಲ್ಲಿಕೊಟ್ಟು ; ಆಲೋಚನೆ ಮಾಡದಂತೆ ; ಭ್ರಮೆಯಿಂದ.

ವತ್ಸಗಳು—ಕರುಗಳು.

ಪುಚ್ಛವ ನೆಗಹಿ ನೀಂಟಿಸಿ—ಬಾಲವನ್ನು ಹಾರಿಸಿ ನೆಟ್ಟಗೆ ಮಾಡಿ.

ತ್ರಿಭಂಗಿ—ನಾಟ್ಯದ ಒಂದು ಪ್ರಕಾರ; ದೇಹದ ಮೂರು ಎಡೆಗಳಲ್ಲಿ ಬಾಗಿ ನಿಲ್ಲುವುದು.

ಗೀರ್ಗಂಧ—ಗಂಧದ ಗೀರು (ಹಣೆಯ ಮೇಲೆ).

ದಾಮ—ನಡುಪಟ್ಟಿ.

ಬೇಹಾಗು ಆದಿ

ಹರಿ ಕುಣಿದ
ನಮ್ಮ
ಹರಿ ಕುಣಿದ ಪ

ಅಕಳಂಕ ಚರಿತ
ಮಕರ ಕುಂಡಲಧರ
ಸಕಲರ ಪಾಲಿಪ
ಹರಿ ಕುಣಿದ ೧

ಅರಳೆಲೆ ಮಾಗಾಯಿ
ಕೊರಳ ಮುತ್ತಿನ ಸರ
ತರಳೆಯರೊಡಗೂಡಿ
ಹರಿ ಕುಣಿದ ೨

ಅಂದುಗೆ ಪಾಡಗ
ಬಿಂದಲಿ ಬಾಪುರಿ
ಚಂದದಿ ನಲಿವುತ
ಹರಿ ಕುಣಿದ ೩

ಉಟ್ಟ ಪಟ್ಟೆಯು ದಟ್ಟಿ
ಇಟ್ಟ ಕಾಂಚಿಯ ದಾಮ
ದಿಟ್ಟ ಮಲ್ಲರ ಗಂಡ
ಹರಿ ಕುಣಿದ ೪

ಪರಮ ಭಾಗವತರ
ಕೇರಿಯೊಳಾಡುವ
ಪುರಂದರವಿಠಲ
ಹರಿ ಕುಣಿದ ೫

ಅರಳೆಲೆ—ಸಣ್ಣ ಮಕ್ಕಳ ಹಣೆಯ ಮೇಲೆ ತೊಡಿಸುವ ಆಭರಣ, ಅರಳಿ ಎಲೆಯ ಆಕಾರದ್ದು.

ಮಾಗಾಯಿ—ಕಿವಿಗೆ ತೊಡುವ ಓಲೆ, ಮಾವಿನಕಾಯಿಯ ಆಕಾರದ್ದು.

ಅಂದುಗೆ—ಕಾಲಬಳೆ.

ಪಾಡಗ—ಕಾಲಲ್ಲಿ ತೊಡುವ ಕಡಗ (ಪಾದಕಟಕ).

ಬಿಂದಲಿ—ಬಿಂದುಲಿ ; ಸಣ್ಣ ಗೆಜ್ಜೆ.

ಬಾಪುರಿ—ತೋಳಬಳೆ.

ಪಟ್ಟೆಯ ದಟ್ಟಿ—ಸೊಂಟಕ್ಕೆ ಸುತ್ತಿದ ರೇಷ್ಮೆಯ ವಸ್ತ್ರ.

ಕಾಂಚಿಯ ದಾಮ—ಉಡಿದಾರ.

೯೨

ಪಂತುವರಾಳಿ ಏಕ

ಕುಣಿದಾಡೊ ಕೃಷ್ಣ ಕುಣಿದಾಡೊ ಪ

ಫಣಿಯ ಮೆಟ್ಟಿ ಬಾಲವ ಪಿಡಿದು
ಕುಣಿ ಕುಣಿದಾಡುವ ಪಾದದೊಳೊಮ್ಮೆ ಅ

ಮುಂಗುರುಳುಂಗುರ ಜಡೆಗಳರಳೆಲೆ
ಪೊಂಗೊಳಲಲಿ ರಾಗಂಗಳ ನುಡಿಸುತ್ತ ತ್ರಿ
ಭಂಗಿಯಲಿ ನಿಂದು ಧಿಗಿಧಿಗಿತಾಂಗಿಣ
ತಾಂಗಿಣಾ ಥಕ್ಕಥಕ್ಕಧಿಮಿಯೆಂದು ೧

ಮುಖ ಜಾರಿದು ಪುಲ್ಲಗವಾಜಿಯೆ
ಝೆಂ ಝೆಂ ಝೆಂ ಚುಂಬನಕಾಗಿ
ಝುಣಾ ಝುಣಾ ಝೆಂ ಕಿಟತಾ ಕಿಟಕಿಟ ತೋಂಗಿಣತೋ
ಧಿಮಿ ತೋಂಗಿಣ ಪಾದದೊಳೊಮ್ಮೆ ೨

ಪ್ರಕಟದಿ ದಿನಗಳು ಪರಿಚಾರಂಗಳು
ವಿಕಲಿತ ನಾಟಕ ಭೇರಿಗಳು
ತೋಂಕಿಣಿ ತೊಂತಂ ತೊಂಡರಿ ತರಿಗಿಟ
ತಕ್ಕಿಟ ತರಿಕಿಟ ತಕಿಟ ಶಬ್ದದಿ ೩

ಪೆರಣಗಾಂಚಿತ್ತಲೆದಂವೆಗಂ
ಸರಹರಪ್ರತಿಜ ವಾಗರಶೆಂದ
ಶ್ರುಣಾಂ ಉರ್ರಾಂ ಎಂದು ಧಿಮಿಕಿಟ ಧಿಮಿಕಿಟ
ತಧಿಕುತ ಧಿಕುತಂ ತದ್ದಾಥೈ ಎಂದು ೪

ಪಂಚಸ್ಥಳದಲ್ಲಿ ಲಘುವಿಡಿದೊಮ್ಮೆ
ಗಣಪತಿ ನರಸಿಂಹ ಕೋನೇರಿ ತಿಮ್ಮ
ಪಂಚನಾಟಕಭೇದವ ವಾಜಿಸುತ್ತ
ಉಡುಪಿಲಿ ನಿಂದನು ಪುರಂದರವಿಠಲ ೫

ಧನಾಸರಿ ಅಟ್ಟ

ನೋಡುವುದೇ ಕಣ್ಣು ಕೇಳುವುದೇ ಕಿವಿ
ಪಾಡುವುದೇ ವದನ ಪ

ಗಾಡಿಕಾರ ಶ್ರೀ ವೇಣುಗೋಪಾಲನ
ಕೂಡಿ ಕೊಂಡಾಡುವ ಸುಖದ ಸೊಬಗನು ಅ

ಪೊಂಗೊಳಲೂದುತ ಮೃಗಪಕ್ಷಿಗಳನೆಲ್ಲ
ಸಂಗಳಿಸುತಲಿಪ್ಪನ
ಅಂಗಜ ಜನಕ ಗೋಪಾಂಗನೇರೊಡನೆ ಬೆಳ
ದಿಂಗಳೊಳಗೆ ಸುಳಿದಾಡೊ ರಂಗಯ್ಯನ ೧

ನವಿಲಂತೆ ಕುಣಿವ ಹಂಸೆಯಂತೆ ನಲಿವ
ಮರಿ ಕೋಗಿಲೆಯಂತೆ ಕೂಗುವ
ಎರಳೆಯ ಮರಿಯಂತೆ ಜಿಗಿಜಿಗಿದಾಡುವ
ತುಂಬಿ ಝೇಂಕರಿಸುವಂದದಿ ಝೇಂಕರಿಪನ ೨

ಮುರುಡು ಕುಬ್ಜೆಯ ಡೊಂಕು ತಿದ್ದಿ ರೂಪವ ಮಾಡಿ
ಸೆರೆಯ ಬಿಡಿಸಿಕೊಂಬನ
ಗರುಡಗಮನ ಸಿರಿ ಪುರಂದರವಿಠಲನ
ಶರಣಾಗತ ಸುರಧೇನು ರಂಗಯ್ಯನ ೩

ಗಾಡಿಕಾರ—ಚೆಲುವ.
ಪೊಂಗೊಳಲು—ಬಂಗಾರದ ಕೊಳಲು.
ಸಂಗಳಿಸುತಲಿಪ್ಪನ—ಸಂಗಡಿಸು, ಸೇರು.
ಎರಳೆಯ ಮರಿ—ಜಿಂಕೆಯ ಮರಿ.
ಮುರುಡು—ಮುದುಡಿಕೊಂಡಿರುವ, ಬಾಗಿರುವ.

ಮಧ್ಯಮಾವತಿ ಅಟ್ಟ

ತಾಳ ಬೇಕು ತಕ್ಕ ಮೇಳ ಬೇಕು ಶಾಂತ ಪ

ವೇಳೆ ಬೇಕು ಗಾನವನ್ನು ಕೇಳಬೇಕೆಂಬುವರಿಗೆ ಅ

ಯತಿಪ್ರಾಸವಿರಬೇಕು ಗತಿಗೆ ನಿಲ್ಲಿಸಬೇಕು
ರತಿಪತಿಪಿತನೊಳು ಅತಿ ಪ್ರೇಮವಿರಬೇಕು ೧

ಗಳ ಶುದ್ಧವಿರಬೇಕು ತಿಳಿದು ಪೇಳಲು ಬೇಕು
ಕಳವಳ ಬಿಡಬೇಕು ಕಳೆಮುಖವಿರಬೇಕು ೨

ಅರಿತವರಿರಬೇಕು ಹರುಷ ಹೆಚ್ಚಲಿಬೇಕು
ಗುರು ಮಧ್ವಪತಿ ವಿಠಲನೆ ಪರದೈವವೆನಬೇಕು ೩

೯೫

ಕಲ್ಯಾಣಿ | ಅಟ್ಟ

ಕೇಳನೋ, ಹರಿ ತಾಳನೊ ಪ

ತಾಳ ಮೇಳಗಳಿದ್ದು ಪ್ರೇಮವಿಲ್ಲದ ಗಾನ ಅ

ತಂಬೂರಿ ಮೊದಲಾದ ಅಖಿಳ ವಾದ್ಯಗಳಿದ್ದು
ಕೊಂಬು ಕೊಳಲು ಧ್ವನಿ ಸ್ವರಗಳಿದ್ದು
ತುಂಬುರು ನಾರದರ ಗಾನ ಕೇಳುವ ಹರಿ
ನಂಬಲಾರ ಈ ಡಂಭಕದ ಕೂಗಾಟ ೧

ನಾನಾ ಬಗೆಯ ರಾಗ ಭಾವ ತಿಳಿದು ಸ್ವರ
ಜ್ಞಾನ ಮನೋಧರ್ಮ ಜಾತಿಯಿದ್ದು
ದಾನವಾರಿಯ ದಿವ್ಯನಾಮರಹಿತವಾದ
ಹೀನ ಸಂಗೀತ ಸಾಹಿತ್ಯಕ್ಕೆ ಮನವಿತ್ತು ೨

ಅಡಿಗಡಿಗಾನಂದ ಬಾಷ್ಪಪುಳಕದಿಂದ
ನಡೆ ನುಡಿಗೆ ಶ್ರೀಹರಿಯೆನ್ನುತ
ದೃಢಭಕ್ತರನು ಕೂಡಿ ಹರಿ ಕೀರ್ತನೆ ಪಾಡಿ
ಕಡೆಗೆ ಪುರಂದರವಿಠಲನೆಂದರೆ ಕೇಳ್ವ ೩

೯. ಜೋಗುಳ ಪದಗಳು (ಲಾಲಿ)

೯೬

ಆರಭಿ ಆದಿ

ಲಾಲಿಸಿದಳು ಮಗನ ಯಶೋದೆ, ಲಾಲಿಸಿದಳು ಮಗನ ಪ

ಅರಳೆಲೆ ಮಾಗಾಯಿ ಬೆರಳಿಗುಂಗುರವಿಟ್ಟು
ತರಳನ ಮೈಸಿರಿ ತರುಣಿ ನೋಡುತ ಹಿಗ್ಗಿ ೧

ಬಾಲಕನೆ ಕೆನೆ ಹಾಲು ಮೊಸರನೀವೆ
ಲೀಲೆಯಿಂದಲಿ ಎನ್ನ ತೋಳ ಮೇಲ್ಮಲಗೆಂದು ೨

ಮುಗುಳು ನಗೆಯಿಂದ ಮುದ್ದು ತಾ ತಾರೆಂದು
ಜಗದೊಡೆಯನ ಶ್ರೀ ಪುರಂದರವಿಠಲನ ೩



೯೭

ಪೀಲು　　　　　　　　　　　　　　　　　　　　　　ಆದಿ

ಲಾಲಿ ಲಾಲಿ ನಮ್ಮ ಹರಿಯೆ ಲಾಲಿ, ಸುರ　　ಪ

ನರರಿಗೆ ಒಲಿದು ಕರುಣವ ಬೀರುವ ಧೊರೆಯೆ ಲಾಲಿ　　ಅ

ರಾಮ ಲಾಲಿ ಮೇಘಶ್ಯಾಮ ಲಾಲಿ
ರಮಾಮನೋಹರ ಅಮಿತ ಸದ್ಗುಣಧಾಮ ಲಾಲಿ　　೧

ಕೃಷ್ಣ ಲಾಲಿ ಸರ್ವೋತ್ಕೃಷ್ಟ ಲಾಲಿ
ದುಷ್ಟರ ಶಿಕ್ಷಿಸಿ ಶಿಷ್ಟರ ಪೊರೆವ ಸಂತುಷ್ಟ ಲಾಲಿ　　೨

ರಂಗ ಲಾಲಿ ಮಂಗಳಾಂಗ ಲಾಲಿ
ಗಂಗೆಯ ಪಡೆದ ತುಂಗಮಹಿಮ ನರಸಿಂಗ ಲಾಲಿ　　೩

ನಂದ ಲಾಲಿ ಗೋಪಿಕಂದ ಲಾಲಿ
ಮಂದರಗಿರಿಧರ ಮಧುಸೂದನ ಮುಕುಂದ ಲಾಲಿ　　೪

ಶೂರ ಲಾಲಿ ರಣಧೀರ ಲಾಲಿ
ಮಾರನಯ್ಯ ನಮ್ಮ ವರ ಪುರಂದರವಿಠಲ ಲಾಲಿ　　೫

ಶಂಕರಾಭರಣ ಚಾಪು

ತೂಗಿರೆ ರಂಗನ ತೂಗಿರೆ ಕೃಷ್ಣನ
ತೂಗಿರೆ ಅಚ್ಯುತಾನಂತನ ಪ

ತೂಗಿರೆ ವರಗಿರಿಯಪ್ಪ ತಿಮ್ಮಪ್ಪನ
ತೂಗಿರೆ ಕಾವೇರಿ ರಂಗಯ್ಯನ ಅ

ನಾಗಲೋಕದಲ್ಲಿ ನಾರಾಯಣ ಮಲಗ್ಯಾನೆ
ನಾಗಕನ್ನಿಕೆಯರು ತೂಗಿರೆ
ನಾಗವೇಣಿಯರು ನೇಣ ಪಿಡಿದುಕೊಂಡು
ಬೇಗನೆ ತೊಟ್ಟಿಲ ತೂಗಿರೆ ೧

ಇಂದ್ರಲೋಕದಲ್ಲುಪೇಂದ್ರ ಮಲಗ್ಯಾನೆ
ಇಂದುಮುಖಿಯರೆಲ್ಲ ತೂಗಿರೆ
ಇಂದ್ರಕನ್ನಿಕೆಯರು ಚಂದದಿ ಬಂದು ಮು
ಕುಂದನ ತೊಟ್ಟಿಲ ತೂಗಿರೆ ೨

ಆಲದೆಲೆಯ ಮೇಲೆ ಶ್ರೀಲೋಲ ಮಲಗ್ಯಾನೆ
ನೀಲಕುಂತಳೆಯರು ತೂಗಿರೆ
ವ್ಯಾಳಶಯನ ಹರಿ ಮಲಗು ಮಲಗುಯೆಂದು
ಬಾಲಕೃಷ್ಣಯ್ಯನ ತೂಗಿರೆ ೩

ಸಾಸಿರನಾಮನೆ ಸರ್ವೋತ್ತಮನೆಂದು
ಸೂಸುತ್ತ ತೊಟ್ಟಿಲ ತೂಗಿರೆ
ಲೇಸಾಗಿ ಮಡುವಿನೊಳ್ ಶೇಷನ ತುಳಿದಿಟ್ಟ
ದೋಷವಿದೂರನ ತೂಗಿರೆ ೪

ಅರಳೆಲೆ ಮಾಗಾಯಿ ಕೊರಳ ಮುತ್ತಿನಹಾರ
ತರಳನ ತೊಟ್ಟಿಲ ತೂಗಿರೆ
ಸಿರಿದೇವಿ ರಮಣನೆ ಪುರಂದರವಿಠಲನೆ
ಕರುಣದಿ ಮಲಗೆಂದು ತೂಗಿರೆ ೫

ಮಡುವಿನೊಳ್ ಶೇಷನ—ಕಾಳಿಂದಿ ಮಡುವಿನಲ್ಲಿ ಕಾಳಿಂಗನನ್ನು.

ಕುರಂಜಿ ಆದಿ

ಜೋ ಜೋ ಶ್ರೀ ಕೃಷ್ಣ ಪರಮಾನಂದ
ಜೋ ಜೋ ಗೋಪಿಯ ಕಂದ
ಮುಕುಂದ ಜೋ ಜೋ ಪ

ಪಾಲಗಡಲೊಳು ಪವಡಿಸಿದವನೆ
ಆಲದೆಲೆಯ ಮೇಲೆ ಮಲಗಿದ ಶಿಶುವೆ
ಶ್ರೀಲತಾಂಗಿಯಳ ಚಿತ್ತದೊಲ್ಲಭನೆ
ಬಾಲ ನಿನ್ನನು ಪಾಡಿ ತೂಗುವೆನಯ್ಯ ಜೋ ಜೋ ೧

ಹೊಳೆವಂಥ ರನ್ನದ ತೊಟ್ಟಿಲಮೇಲೆ
ಥಳಥಳಿಸುವ ಗುಲಗಂಜಿಯು ಮೇಲೆ
ಅಳದೆ ನೀ ಪಿಡಿದಾಡೆನ್ನಯ ಮುದ್ದು ಬಾಲ
ನಳಿನನಾಭನೆ ನಿನ್ನ ಪಾಡಿ ತೂಗುವೆನು ಜೋ ಜೋ ೨

ಯಾರ ಕಂದ ನೀನಾರ ನಿಧಾನಿ
ಯಾರ ರತ್ನವೊ ನೀನಾರ ಮಾಣಿಕವೊ
ಸೇರಿತು ಎನಗೊಂದು ಚಿಂತಾಮಣಿಯೆಂದು
ಪೋರ ನಿನ್ನನು ಪಾಡಿ ತೂಗುವೆನಯ್ಯ ೩

ಗುಣನಿಧಿಯೆ ನಿನ್ನನೆತ್ತಿಕೊಂಡಿದ್ದರೆ
ಮನೆಯ ಕೆಲಸವಾರು ಮಾಡುವರಯ್ಯ
ಮನಕೆ ಸುಖನಿದ್ರೆಯ ತಂದುಕೊ ಬೇಗ
ಫಣಿಶಯನನೆ ನಿನ್ನ ಪಾಡಿ ತೂಗುವೆನು ಜೋ ಜೋ ೪

ಅಂಡಜವಾಹನ ಅನಂತಮಹಿಮ
ಪುಂಡರೀಕಾಕ್ಷ ಶ್ರೀ ಪರಮಪಾವನ್ನ
ಹಿಂಡು ದೈವದ ಗಂಡ ಉದ್ದಂಡನೆ
ಪಾಂಡುರಂಗ ಶ್ರೀ ಪುರಂದರವಿಠಲ ಜೋ ಜೋ ೫

ಶ್ರೀಲತಾಂಗಿ—ಲಕ್ಷ್ಮೀದೇವಿ.
ನಿಧಾನಿ—ಆಶ್ರಯ.
ಅಂಡಜ—ಗರುಡ.

ಆನಂದಭೈರವಿ ತ್ರಿವಿಡೆ

ಜೋ ಜೋ ಯಶೋದೆಯ ನಂದ ಮುಕುಂದನೆ
ಜೋ ಜೋ ಕಂಸ ಕುಠಾರಿ
ಜೋ ಜೋ ಮುನಿಗಳ ಹೃದಯಮಂದಿರ
ಜೋ ಜೋ ಲಕುಮಿಯ ರಮಣ ಪ

ಹೊಕ್ಕಳಹೂವಿನ ತಾವರೆಗಣ್ಣಿನ ಇಕ್ಕಿದ್ದ ಮಕರಕುಂಡಲದ
ಜಕ್ಕರಿಸುವ ಕದಪಿನ ಸುಳಿಗುರುಳಿನ ಚಿಕ್ಕ ಬಾಯಿ ಮುದ್ದುಮೊಗದ
ಸೊಕ್ಕಿದ ಮದಕರಿಯಂದದಿ ನೊಸಲಲಿ ಇಕ್ಕಿದ ಕಸ್ತೂರಿತಿಲಕ
ರಕ್ಕಸರೆದೆದಲ್ಲಣ ಮುರ ವೈರಿಯೆ ಮಕ್ಕಳ ಮಾಣಿಕ
ಜೋ ಜೋ ೧

ಕಣ್ಣ ಬೆಳಗು ಪಸರಿಸಿ ನೋಡುತ ಅರೆಗಣ್ಣ ಮುಚ್ಚಿ ನಸುನಗುತ
ಸಣ್ಣ ಬೆರಳು ಬಾಯೊಳು ಢವಳಿಸುತ ಪನ್ನಗಶಯನ ನಾಟಕದಿ
ನಿನ್ನ ಮಗನ ಮುದ್ದು ನೋಡೆನುತ ಗೋಪಿ ತನ್ನ ಪತಿಗೆ ತೋರಿದಳು
ಚಿನ್ನತನದ ಸೊಬಗಿನ ಕಣಿಯೇ ಹೊಸ ರನ್ನ ಮುತ್ತಿನ ಬೊಂಬೆ
ಜೋ ಜೋ ೨

ನಿಡಿತೋಳ್ಗಳ ಪಸರಿಸುತಲಿ ಗೋಪಿಯ ತೊಡೆ ಮೇಲೆ ಮಲಗಿ ಬಾಯ ತೆರೆಯೆ
ಒಡಲೊಳು ಚತುರ್ದಶಭುವನವಿರಲು ಕಂಡು ನಡುನಡುಗಿ ಕಣ್ಣ ಮುಚ್ಚಿದಳು
ತಡೆಯದೆ ಅಡಿಗಳನಿಡುತಲಿ ಬಂದು ಮದದೇರ ಮುಖವ ನೋಡುತ ನಿಂದು
ಕಡು ದಯಾಸಾಗರ ಪುರಂದರವಿಠಲ ಬಿಡದೆ ರಕ್ಷಿಸು ಎನ್ನ ಸಲಹಬೇಕೆಂದು
ಜೋ ಜೋ ೩

ಜಕ್ಕರಿಸುವ ಕದಪು—ಉಕ್ಕಿಸೂಸುವ, ಮೋಹಕವಾದ ಕೆನ್ನೆ.
ಸುಳಿಗುರುಳು—ಗುಂಗುರು ಕೂದಲು.
ಮದಕರಿ—ಮದದಾನೆ.
ಎದೆದಲ್ಲಣ—ಎದೆಯನ್ನು ತಲ್ಲಣಗೊಳಿಸುವವನು.
ಢವಳಿಸುತ—ಹೊಳೆಯುತ್ತ.
ನಿಡಿ—ಉದ್ದವಾದ.

ಶಂಕರಾಭರಣ ಅಟ್ಟ

ಜೋ ಜೋ ಜೋ ಜೋ ಜೋ ಸಾಧುವಂತ
ಜೋ ಜೋ ಜೋ ಜೋ ಜೋ ಭಾಗ್ಯವಂತ
ಜೋ ಜೋ ಜೋ ಜೋ ಜೋ ಗುಣವಂತ
ಜೋ ಜೋ ಜೋ ಜೋ ಜೋ ಲಕ್ಷ್ಮೀಕಾಂತ
ಜೋ ಜೋ ಪ

ಭಕ್ತವತ್ಸಲ ಭವಹರನೇ ಜೋ ಜೋ
ಕೃತ್ತಿವಾಸಪ್ರಿಯ ಕೃಷ್ಣನೆ ಜೋ ಜೋ
ಮುಕ್ತಿದಾಯಕ ಮುರಹರನೇ ಜೋ ಜೋ
ಚಿತ್ತಜನಯ್ಯ ಪರವಸ್ತುವೇ ಜೋ ಜೋ ೧

ಕರುಣಾಕರ ಕರಿವರದನೆ ಜೋ ಜೋ
ಸುರನರಮುನಿವಂದಿತನೇ ಜೋ ಜೋ
ಗರುಡವಾಹನ ನಗಧರನೇ ಜೋ ಜೋ
ಖರದೂಷಣ ಸಂಹಾರನೆ ಜೋ ಜೋ ೨

ವಾರಿಜಾಕ್ಷ ವಿಶ್ವಪಾಲನೆ ಜೋ ಜೋ
ವಾರಿಧಿಶಯನ ನರಹರಿಯೆ ಜೋ ಜೋ
ಘೋರ ದುರಿತಸಂಹಾರನೆ ಜೋ ಜೋ
ನಾರಾಯಣ ನರಹರಿಯೆ ಜೋ ಜೋ ೩

ಮಂದರಧರ ಮಾಧವನೇ ಜೋ ಜೋ
ನಂದನ ಕಂದ ಮುಕುಂದನೆ ಜೋ ಜೋ
ಇಂದಿರೆಯರಸ ಗೋವಿಂದನೆ ಜೋ ಜೋ
ಸಿಂಧುಬಂಧನ ರಾಮಚಂದ್ರನೆ ಜೋ ಜೋ ೪

ಚಕ್ರಧರ ಚತುರ್ಭುಜನೆ ಜೋ ಜೋ
ಶಕ್ರತನಯಸಖ ದೇವನೆ ಜೋ ಜೋ
ಅಕ್ರೂರವರದ ಅಜತಾತನೆ ಜೋ ಜೋ
ವಿಕ್ರಮಿ ಪುರಂದರವಿಠಲನೆ ಜೋ ಜೋ ೫

ಕೃತ್ತಿವಾಸ—ಶಿವ (ಗಜಾಸುರನನ್ನು ಕೊಂದು ಗಜಚರ್ಮವನ್ನು ಹೊದ್ದವನು).

ಚಿತ್ತಜನಯ್ಯ—ಮನ್ಮಥನ ತಂದೆ.

ಕರಿವರದ—ಗಜೇಂದ್ರ ಮೋಕ್ಷದ ಸಂದರ್ಭ.

ನಗಧರ—ಮಂದರ ಪರ್ವತವನ್ನು ಕೂರ್ಮಾವತಾರದಲ್ಲಿಯೂ, ಗೋವರ್ಧನಗಿರಿಯನ್ನು ಕೃಷ್ಣಾವತಾರದಲ್ಲಿಯೂ ಎತ್ತಿ ಹಿಡಿದವನು.

ಖರದೂಷಣ ಸಂಹಾರ—ರಾವಣನ ಬಲತಾಯಿ ರಾಕೆಯೆಂಬುವಳ ಮಕ್ಕಳಾದ ಖರನನ್ನೂ ದೂಷಣನನ್ನೂ ರಾಮಾವತಾರದಲ್ಲಿ ಕೊಂದವನು.

ಶಕ್ರತನಯಸಖ—ಅರ್ಜುನನ ಸ್ನೇಹಿತ.

ಅಕ್ರೂರವರದ—ಕಂಸನ ಸಚಿವ ಅಕ್ರೂರನಿಗೆ ಒಲಿದು ವಿಶ್ವರೂಪವನ್ನು ತೋರಿಸಿದವನು.

ಅಜ ತಾತ—ಬ್ರಹ್ಮನ ತಂದೆ.

ಸೌರಾಷ್ಟ್ರ ಅಟ್ಟ

ಶೋಭಾನ ಶೋಭಾನವೆ ಪ

ಭೂದೇವಿಯರಸ ವೆಂಕಟರಾಯಗೆ
ಶೋಭಾನ ಶೋಭಾನವೇ ಅ

ಅಂದು ಕ್ಷೀರಾಂಬುನಿಧಿ ಮೊದಲಾಗಿ
ಇಂದಿರೆ ಹರುಷದಿಂದುದಿಸಿ ಬಂದು
ಕಂದರ್ಪಕೋಟಿ ಲಾವಣ್ಯ ಮೂರುತಿಯಾದ
ಮಂದಾರ ಮಾಲೆಯ ಹಾಕಿದ ದೇವಗೆ ೧

ಜನಕನ ಮನೆಯಲ್ಲಿ ರಾಜಾಧಿರಾಜರು
ಎಣಿಕೆಯಿಲ್ಲದಲೆ ಬರುತಿರಲು
ಸನಕಾದಿವಂದ್ಯನ ಕಂಡು ಸಂತೋಷದಿ
ಜಾನಕಿಗೆ ಮಾಲೆಯ ಹಾಕಿದ ರಾಮಗೆ ೨

ರುಕುಮನ ಶಿಶುಪಾಲಗನುಜೆಯೀಯುವನೆಂದು
ಸಕಲ ರಾಯರಲ್ಲಿ ನಿಂದಿರಲಾಗಿ
ಭಕುತ ವತ್ಸಲನನ್ನು ಕಂಡು ಸಂತೋಷದಿ
ರುಕುಮಿಣಿಗೆ ಮಾಲೆಯ ಹಾಕಿದ ಕೃಷ್ಣಗೆ ೩

ಸತ್ಯಭಾಮೆಯು ನೀಲೆ ಭದ್ರೆ ಕಾಳಿಂದಿಯು
ಮಿತ್ರವಿಂದೆಯು ಲಕ್ಷಣೆಯು ಜಾಂಬವತಿ
ಮತ್ತೆ ಆ ಸೋಳಸಾಹಸ್ರ ಕನ್ನಿಕೆಯರ
ಪ್ರತ್ಯಕ್ಷವಾಳಿದ ಕಲ್ಯಾಣನಿಗೆ ೪

ಪದುಮದೇಶದಲೊಬ್ಬ ದೇವಾಂಗನೆಯು
ಪದುಮಮುಖಿ ಶ್ರುತಿಸ್ಮೃತಿಯು
ಪದುಮನಾಭ ಶ್ರೀ ಪುರಂದರವಿಠಲಗೆ
ಪದುಮಾವತಿಪ್ರಿಯ ಶ್ರೀನಿವಾಸಗೆ ೫

ಭಾಗ ೨

ಸುಳಾದಿಗಳು

೧. ಸೃಷ್ಟಿಸುಳಾದಿ

ಸೌರಾಷ್ಟ್ರ ಧ್ರುವ

ನಿನ್ನ ಬೊಮ್ಮ ಮೂರುತಿಗೆ ನಮೋ ನಮೋ
ನಿನ್ನ ರುದ್ರ ಮೂರುತಿಗೆ ನಮೋ ನಮೋ
ನಿನ್ನ ಇಂದ್ರ ಮೂರುತಿಗೆ ನಮೋನಮೋ
ನಿನ್ನ ಚಂದ್ರ ಮೂರುತಿಗೆ ನಮೋನಮೋ
ನಿನ್ನ ಸೂರ್ಯ ಮೂರುತಿಗೆ ನಮೋನಮೋ
ನಿನ್ನ ಅಗ್ನಿ ಮೂರುತಿಗೆ ನಮೋನಮೋ
ನಿನ್ನ ಸ್ಥಾವರ ಮೂರುತಿಗೆ ನಮೋನಮೋ
ನಿನ್ನ ಜಂಗಮ ಮೂರುತಿಗೆ ನಮೋನಮೋ ಪುರಂದರವಿಠಲ
ನಿನ್ನ ವಿಶ್ವಮೂರುತಿಗೆ ನಮೋನಮೋ ೧

ಮಟ್ಟ

ಬೊಮ್ಮಾಂಡವೆ ಮಂಟಪ ಜ್ಯೋತಿಶ್ಚಕ್ರವೆ ದೀಪ
ಮಹಾಮೇರು ಸಿಂಹಾಸನ ಮಂದಾಕಿನಿ ಮಜ್ಜನ
ಮಂದರ ಪಾರಿಜಾತ ಮಾಲೆ
ಪುರಂದರವಿಠಲಗೆ ಅಮೃತವೇ ನೈವೇದ್ಯ ೨

ತ್ರಿವಿಡೆ

ಆಲಯವಂಬುವಾರಾಸಿಯಲ್ಲಿ ಆಲದೆಲೆ ಪೊಂದೊಟ್ಟಿಲು
ಅಂಗುಟವೆ ಜೋಕಾಯಿ ಬಾಲ ಮುಕುಂದ
ಶ್ರೀ ಪುರಂದರವಿಠಲಗೆ ೩

ಅಟ್ಟ

ಜಗವ ಪುಟ್ಟಿಸಿ ನೀನು ಜಗದೊಳಗಿರುವೆ
ಜಗದೊಳ ಹೊರಗೆ ನೀನೆ ಪೂರ್ಣ
ಜಗದನ್ಯನಾಗಿ ಜಗವ ಸಂಹರಿಸುವಿ
ಜಗದೊಳ ಹೊರಗೆ ನೀನೆ ಸ್ವಾತಂತ್ರ
ಜಗದೇಕ ವಸ್ತು ಪುರಂದರವಿಠಲ ೪

[ಜಗದುದ್ಧಾರಕನೆಂದು ಜಗವ ಮೋಹಿಸುವೆ
ಜಗದನ್ಯನಾಗಿದ್ದು ಜಗವ ಪುಟ್ಟಿಸುವೆ
ಜಗದೊಳು ಹೊರಗಿದ್ದು ಜಗವ ಪಾಲಿಸುವೆ
ಜಗನ್ನಾಥ ಪುರಂದರವಿಠಲ ಮೋಹನ್ನ]

ಪಾಠಾಂತರ

ಆದಿ

ಬೊಮ್ಮಾಂಡಕಟಹ ಪುಟಚೆಂಡೊ ಪುಟಚೆಂಡೊ
ಪುರಂದರವಿಠಲಗೆ ಬೊಮ್ಮಾಂಡಕಟಹ ॥

ಜೊತೆ

ಜಯ ಜಯ ಜನಾರ್ದನ ಪುರಂದರವಿಠಲ
ಜಯ ಜಯ ಜಯ ಬಾಢ ಮೋಹನ್ನ

[ಜಯ ಜಯ ಜನರಂಜನ
ಜನಾರ್ದನ ಪುರಂದರವಿಠಲ ಮೋಹನ್ನ]

ಪಾಠಾಂತರ

ಅಂಬುವಾರಾಸಿ—ಸಮುದ್ರ.

ಜೋಕಾಯಿ—ಬಾಯಿಗೆ ಬಾಗಿದ ಕಾಯಿ (ಕಾಲ ಹೆಬ್ಬೆರಳನ್ನು ಕೃಷ್ಣನು ಬಾಯಲ್ಲಿರಿಸಿ ಚೀಪುತ್ತಿರುವ ಕಲ್ಪನೆ).

ಬೊಮ್ಮಾಂಡಕಟಹ—ಬ್ರಹ್ಮಾಂಡ, ಕಡಾಯಿಯಂತೆ ಆಕಾರವುಳ್ಳದ್ದು.

೨. ಆನಂದಸುಳಾದಿ

ನಟ್ಟ ಧ್ರುವ

ಆ ಪಾದವಾನಂದ ಆ ನಖವಾನಂದ
ಆ ಜಾನು ಆ ಜಂಘೆ ಆನಂದಮಯವಯ್ಯಾ
ಆ ಊರು ಆನಂದ ಆ ಕಟಿ ಆ ಉರ ಆನಂದ ಆ ಭುಜ ಆನಂದ
ಆ ಕಂಠ ಆ ಮುಖ ಆನಂದಮಯವಯ್ಯ
ಆ ಶಿರೋರುಹಗಳು ಆನಂದಮಯವಯ್ಯ
ಆ ಸರ್ವಾಂಗದ ಅವಯವಗಳೆಲ್ಲ ಆನಂದಮಯವಯ್ಯ
ಪುರಂದರವಿಠಲ ೧

ಮಟ್ಟ

ಪಾವಕ ಕೋಟಿ ಸೂರ್ಯರ ಪ್ರಭೆಗಳ ಸೋಲಿಸುವ
ದೇವನಂಗಕಾಂತಿ ಆನಂದಮಯವಯ್ಯ
ಹಾವ ಭಾವ ಭ್ರೂವಿಭ್ರಮೆ ವಿಲಾಸಗಳು
ದೇವನಂಗಕಾಂತಿ ಆನಂದಮಯವಯ್ಯ
ದೇವರಾಟ್ ಶ್ರೀ ಪುರಂದರವಿಠಲನ್ನ ೨

ತ್ರಿವಿಡೆ

ದಶಮಾತುರಗಳು ಆನಂದಮಯವಯ್ಯ
ಹೃಷಿಕೇಶನ ಏಕಾದಶ ಹೃಷೀಕ ಆನಂದಮಯವಯ್ಯ
ಅಸಂಖ್ಯ ಆನಂದ ಪುರಂದರವಿಠಲಾ ೩

ಅಟ್ಟ

ಬೊಮ್ಮ ಬೊಮ್ಮ ಬೊಮ್ಮ ಶ್ರೀ ಹರಿಯ
ಕರ್ಮವಾನಂದ ಕರಣಗಳಾನಂದ
ಹಮ್ಮು ಆನಂದ ಹಾಸ್ಯವಾನಂದ
ಕಂಗಳಾನಂದ ನಮ್ಮ ಪುರಂದರವಿಠ್ಠಲರೇಯನ
ದಿವ್ಯ ಕೋಪವಾನಂದ ೪

ಏಕ

ಆನಂದವರ್ಧಾಂಗಿ
ಆ ನಂದನಕುಮಾರ
ಆನಂದಮೂರುತಿಯ ಆಳುಗಳಾಗಿ
ಆನಂದ ಪರಮಾನಂದ ಪುರಂದರವಿಠಲ ೫

ಜೊತೆ

ಜ್ಞಾನ ವಿಜ್ಞಾನ ಸುಗಂಧ ಸುಖದೇಹ
ಆನಂದಮಯವಯ್ಯ ಪುರಂದರವಿಠಲನ ಅವಯವಗಳೆಲ್ಲ ೬

ಪಾದ—ಅಡಿ.
ನಖ—ಉಗುರು.
ಜಾನು—ಮೊಳಕಾಲು.
ಜಂಘೆ—ಕಾಲು (ಮೊಳಕಾಲಿಂದ ಹಿಮ್ಮಡಿಯವರೆಗೆ).
ಊರು—ತೊಡೆ.
ಕಟಿ—ಸೊಂಟ.
ಉರ—ಎದೆ.
ಶಿರೋರುಹ—ಕೂದಲು.
ಹಾವ ಭಾವ ಭೂವಿಭ್ರಮವಿಲಾಸ—ಅಂಗಚೇಷ್ಟೆ, ಸನ್ನೆಸಂಜ್ಞೆ, ಹುಬ್ಬಿನ ಆಟ ಮೊದಲಾದುವು.
ದೇವರಾಟ್—ದೇವತೆಗಳಿಗೆ ಒಡೆಯ.
ದಶಮಾತುರು—ದಶಮಾತೃಕೆಗಳು ; ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು.
ಹೃಷೀಕ—ಇಂದ್ರಿಯ ; ಹನ್ನೊಂದನೆಯ ಇಂದ್ರಿಯ, ಮನಸ್ಸು.
ಶ್ರೀ ಹರಿಯ ಕರ್ಮ—ಬ್ರಹ್ಮಾಂಡದ ಸೃಷ್ಟಿ, ಸ್ಥಿತಿ, ಸಂಹಾರ.
ಕರಣಗಳು—ಅವನು ಬಳಸುವ ಸಂಕಲ್ಪ, ಕಾರುಣ್ಯ ಮೊದಲಾದುವು.
ಹಮ್ಮು—ಹೆಮ್ಮೆ.
ಕಂಗಳು—ನೋಟ.
ಆನಂದವರ್ಧಾಂಗಿ—ಲಕ್ಷ್ಮಿಯು ಹೆಂಡತಿ.

೩. ಪರಿಪೂರ್ಣಸುಳಾದಿ

ಆಹಿರಿ ಧ್ರುವ

ಪಾದ ನಖ ಪರಿಪೂರ್ಣ ಜಾನು ಜಂಘೆ ಪರಿಪೂರ್ಣ
ಊರು ಕಟಿ ಪರಿಪೂರ್ಣ ಜಘನ ಪರಿಪೂರ್ಣ
ಉದರ ತ್ರಿವಳಿ ವಕ್ಷಬಾಹು ಪರಿಪೂರ್ಣ
ಪದುಮ ಗದೆ ಚಕ್ರಶಂಖ ಪರಿಪೂರ್ಣ
ವದನಪರಿಪೂರ್ಣ ಕಂಬುಕಂಠ ಪರಿಪೂರ್ಣ
ಸರ್ವಾಂಗ ಪರಿಪೂರ್ಣ ಪುರಂದರವಿಠಲನ
ಸರ್ವಾಂಗ ಪರಿಪೂರ್ಣ ೧

ಮಟ್ಟ

ಮನ ಪರಿಪೂರ್ಣ ಬುದ್ಧಿ ಪರಿಪೂರ್ಣ
ಚಿತ್ತ ಪರಿಪೂರ್ಣ ಹಮ್ಮು ಪರಿಪೂರ್ಣ
ಆತುಮ ಪರಿಪೂರ್ಣ ಪುರಂದರವಿಠಲನು ಪರಿಪೂರ್ಣ
ಮೂರುತಿ ಮನದಲಿ ಪರಿಪೂರ್ಣ ಕಾಣಿರೊ ೨

ತ್ರಿವಿಡೆ

ವಿಶ್ವತೋಮುಖನಾಗಿ ವಿಶ್ವತೋಬಾಹುವಾಗಿ
ವಿಶ್ವತೋಚಕ್ಷುವಾಗಿ ಪುರಂದರವಿಠಲನು
ತಾನಿಹ ಕಾಣಿರೊ ವಿಶ್ವತೋಚಕ್ಷುವಾಗಿ ೩

[ಅನಂತ ಬಾಹುವಾಗಿ ಅನಂತ ಚಕ್ಷುವಾಗಿ
ಅನಂತ ಕಲ್ಪದಲ್ಲಿ ಅನಂತನಾಮ ಶ್ರೀ ಪುರಂದರವಿಠಲನ
ಅನಂತ ಅವತಾರಗಳು ಪರಿಪೂರ್ಣ]
ಪಾಠಾಂತರ

ಅಟ್ಟ

ಶ್ರೋತ್ರ ನೇತ್ರ ಪರಿಪೂರ್ಣ ಘ್ರಾಣತ್ವಗ್ರಸನ
ಪಾಣಿಪಾದವಾಯು ಉಪಸ್ಥಾದಿ ಈರೈದು
ಮಾತರಿಶ್ವಪ್ರಿಯ ಪುರಂದರವಿಠಲನ
ಜ್ಞಾನ ಕರ್ಮೇಂದ್ರಿಯಗಳು ಪರಿಪೂರ್ಣ ೪

ಆದಿ

ಆವಾವ ಕಾಲದಲ್ಲಿ ಆವಾವ ದೇಶದಲ್ಲಿ
ಆವಾವ ಜೀವರಲಿ ಶ್ರೀವಲ್ಲಭ ಪರಿಪೂರ್ಣ
ಭೂ ವಲ್ಲಭ ಪರಿಪೂರ್ಣ ಸಕಲ ಲೋಕದೊಳೊಬ್ಬ
ಪುರಂದರ ವಿಠಲನು ಪೂರ್ಣ ೫

ಜೊತೆ

ಪರಿಪೂರ್ಣ ಜ್ಞಾನಪೂರ್ಣಾನಂದ
ಪರಿಪೂರ್ಣ ಪುರಂದರವಿಠಲ ವಿಭುವೆ

[ಅರಸಿ ಇಂದಿರೆ ಪರಿಪೂರ್ಣ ಪುರಂದರವಿಠಲ
ಸರಸಿಜೋದ್ಭವ ಶರ್ವಾದಿಗಳೆಲ್ಲ ಅಪೂರ್ಣರು]
ಪಾಠಾಂತರ

ಪಾದ...—ಅರ್ಥಗಳು ಹಿಂದಿನ ಸುಳಾದಿಯಲ್ಲಿ ಬಂದಿವೆ.
ಉದರ—ಹೊಟ್ಟೆ.
ತ್ರಿವಳಿ—ಹೊಕ್ಕುಳಿನ ಸುತ್ತ ಮೂರು ವಂಕಿಗಳು (ಗೆರೆಗಳು).
ವಕ್ಷ—ಎದೆ.
ಕಂಬುಕಂಠ—ಶಂಖದಂತೆ ಚೆಲುವಾದ ಕತ್ತು.
ಹಮ್ಮು—ಹೆಮ್ಮೆ (ತನಗೆ ಎಣೆಯಾರು ಇರರೆಂಬುದು).
ಆತುಮ—ಆತ್ಮ.
ಮೂರುತಿ ಮನದಲಿ—ಬಿಂಬರೂಪ.
ವಿಶ್ವತೋಮುಖ...—ಋಗ್ವೇದದ ಮಂತ್ರಗಳ ಛಾಯೆ.
ಮಾತರಿಶ್ವ—ವಾಯು, ಮುಖ್ಯಪ್ರಾಣ.

೪. ಜೀವಬಿಂಬ ಸುಳಾದಿ

ಧ್ರುವ

ಕ್ಷೀರಸಾಗರದಲ್ಲಿ ಹಾವಿನ ಹಾಸಿಗೆ ಓಜೆಯೊಳೊರಗಿಪ್ಪ
ಎನ್ನೊಡೆಯ
ಹಾರ ಮಕುಟ ಕುಂಡಲ ಪೀತಾಂಬರ
ಧಾರಿಯಾಗಿಹ ಎನ್ನೊಡೆಯ
ನಾರದ ಗರುಡ ಗಂಧರ್ವರ ಗಾನದಿ
ಓರಂತೆ ಸುಖಿಸುವ ಎನ್ನೊಡೆಯ
ಮಾರ ಚಾಮರಗಳ ಢಾಳಿಸುತ್ತಿರಲು
ಮಾರುತಿ ಕಂಬಿವಿಡಿದು ನಿಲ್ಲಲು
ನೀರಜಾಲಯೆ ತಾನಡಿಗಳನೊತ್ತಲು ಉ
ದಾರ ದೇವರ ದೇವನೊಲುಮೆಯಿಂದ
ಕಾರುಣ್ಯ ಸುಧೆಯನು ಸುರಿವ ಭಕ್ತರ ಮೇಲೆ
ಭೂ ರಮಣನೆ ಪುರಂದರವಿಠಲರಾಯ ೧

ಮಟ್ಟ

ಇಂದ್ರ ನೀಲಾಚಲದಲ್ಲಿ ಇಂದ್ರಚಾಪವು ಮೂಡಿದಂತೆ
ಕುಂದ ಕುಸುಮನಂಗದಲ್ಲಿ ಚಂದ್ರಕಾಂತಿಗಳೆಸೆಯೆ
ತುಲಸೀಮಾಲೆಗಳೆಸೆಯೆ
ಮಂದಗಮನ ಗರುವರೇಯ ಉಪೇಂದ್ರ ಪುರಂದರವಿಠಲ ೨

ತ್ರಿವಿಡೆ

ನೀಲ ಮೇಘಶ್ಯಾಮಲನೇ
ಬಾಲ ಭಾಸ್ಕರ ವರ್ಣ ಉಡು
ಪಾಲಯ ಕೋಟಿ ಪ್ರಕಾಶನೆ ದೇವ
ಕೇಳಿ ಬಲ್ಲೆ ದೇವ ಕೇಳಿ ಬಲ್ಲೆ
ಅನೇಕ ವರ್ಣದಿಂದೋಲಗಿಪ ಪುರಂದರವಿಠಲ ದೇವ ೩

ಅಟ್ಟ

ನಿಚ್ಚ ಮಂಗಳ ನಿಧಿ ನೀನೆಂದು
ಸಚ್ಚಿದಾನಂದ ಸ್ವರೂಪ ನೀನೆಂದು
ಅಚ್ಯುತಾನಂತ ಗೋವಿಂದ ನೀನೆಂದು
ಮೆಚ್ಚಿದೆ ನಾ ನಿನ್ನ ಚರಣವ ಇಂದು
ಸಕಲ ಲೋಕಕಧಿದೈವ ನೀನೆಂದು
ರುಕುಮಿಣಿ ಪತಿ ಪುರಂದರವಿಠಲ ನೀನೆಂದು ೪

ರೂಪಕ

ಲೋಕದ ಮಾನವರೆಲ್ಲ ನಿರಾಕಾರನೆಂದೆನಲು ನಮ
ಗೇಕೋ ವಾದವಿವಾದ ಬರಿದೆ ಕಾಕರ ಕಣದೊಳಗೆ
ಸಾಕಾರವನರಿಯದ ಮೂಢಾಕಾರರ ಕೂಡೆ ನಮಗೇಕೋ ವಾದ
ಏಕೋವಿಷ್ಣುವೆಂಬ ಪುರಂದರವಿಠಲ ನೀನಿರಲು
ನಮಗಿನ್ನೇಕೋ ವಾದ ೫

ಆದಿ

ಎನಗೊಬ್ಬ ಒಡೆಯ ದೊರಕಿದ ದೊರಕಿದ
ಸುನಾಯಕ ದೇವ ಕಟ್ಟಲೆ ಕಂದಾಯವೀವಾ
ಬೇಡಿದ ಉಚಿತವ ನಮಗವನೀವ
ಕಷ್ಟ ನಷ್ಟಗಳಿಲ್ಲ ಒದೆಜಡಿತಗಳಿಲ್ಲ
ಎನ್ನ ಮನಬಂದಂತೆ ಓಲೈಸುವೆನು ನಾನು
ಎನ್ನ ಮನ ಬಂದಾಗ ಓಲೈಸಿಕೊಂಬ
ಕೇಡಿಲ್ಲದೊಡೆಯ ಪುರಂದರವಿಠಲ ೬

ಏಕ

ದೇವ ದೇವಕಿನಂದ ದೇವೋತ್ತಮ ಗೋವಿಂದ
ಗೋವರ್ಧನ ಗಿರಿಧರ ಧರಣೀಧರ
ಜೀವಬಿಂಬ ಪುರಂದರವಿಠ್ಠಲ ಓವಿ ನಿನ್ನದಯ್ಯಾ ದೇವ ೭

ಜೊತೆ

ಮನವಚನಕಾಯಕದಿಂದ ನಿನ್ನನೆ ನೋಡಿ
ಅನುದಿನ ನೆನೆವೆ ನಾನು ಪುರಂದರವಿಠಲ ೮

ಓಜೆ—ಕ್ರಮ, ವರಸೆ.
ಓರಂತೆ—ಎಂದಿನಂತೆ (ಎಂದೆಂದೂ).
ಮಾರ—ಮನ್ಮಥನು.
ಢಾಳಿಸುತ್ತಿರಲು—ಬೀಸುತ್ತಿರಲು, ಝಳಪಿಸುತ್ತಿರಲು.

ಕಂಬಿ—ವೇತ್ರದಂಡ.

ನೀರಜಾಲಯೆ—ಲಕ್ಷ್ಮಿ.

ಇಂದ್ರಚಾಪ—ಕಾಮನ ಬಿಲ್ಲು.

ಕುಂದ—ಮಲ್ಲಿಗೆ ಹೂ.

ಚಂದ್ರಕಾಂತಿ—ಬೆಳದಿಂಗಳು.

ಗರುವರೇಯು—ಠೀವಿಯಿಂದ ಬರುವ ರಾಯ.

ಉಡುಪಾಲಯು—ಚಂದ್ರನ ನೆಲೆಮನೆ, ಆಕಾಶ.

ಕಾಕರ ಕಣ—ನೀಚಜನರ ವಲಯ.

ಏಕೋವಿಷ್ಣು—ಒಬ್ಬನೇ ವಿಷ್ಣು ; ಅವನಿಗೆ ಸಮರೂ ಇಲ್ಲ, ಅಧಿಕರೂ ಇಲ್ಲ.

ಸುನಾಯಕ—ಒಳ್ಳೆಯ ದಾರಿಯಲ್ಲಿ ನಡೆಸುವವನು.

ಜೀವಬಿಂಬ—ಪ್ರತಿಬಿಂಬನಾದ ಜೀವನಿಗೆ ಬಿಂಬರೂಪನಾದವನು.

ಓವಿ—ಕಾಪಾಡುವ ಹೊಣೆ.

೫. ಅನಂತ ಮೂರುತಿಸುಳಾದಿ

ಧ್ರುವ

ತ್ರಿಶೂಲ ಡಮರುಗ ಭಸಿತ ರುದ್ರಾಕ್ಷಿ
ಪಶುವಾಹನನಾದುದೊಂದು ಮೂರುತಿ
ನೊಸಲೊಳು ಸಿರಿನಾಮ ಶಂಖ ಚಕ್ರಗದೆ
ಬಿಸಜವ ಪಿಡಿದಿಹದೊಂದು ಮೂರುತಿ
ಕುಶಲದಿ ಜಪಮಣಿಮಾಲೆ ಚತುರ್ಮುಖ
ವಸುಧೆಯ ಸೃಜಿಸುವದೊಂದು ಮೂರುತಿ
ಎಸೆವನಂತ ಕೋಟಿ ವೇದವರ್ಣಿಸಲು ಸಂ
ತಸದಿ ನೋಡುತಿಹುದೊಂದೆ ಮೂರುತಿ
ಸನ್ಮೋಹನವೆ ಏಕಮೇವ ಶ್ರುತಿಯೆಂಬ
ನಿರ್ಮಳವಾಗಿಹದೊಂದೆ ಮೂರುತಿ
ಸುಮ್ಮನಸರಿಗೊಮ್ಮೆ ಸುಳುವು ತೋರುವ ಪರ
ಬೊಮ್ಮನೆಂದು ಕರೆಸುವದೊಂದೆ ಮೂರುತಿ
ನಮ್ಮ ದೇವ ನಿಮ್ಮ ದೇವ ತಮ್ಮ ದೇವನೆಂತೆಂಬ
ಹಮ್ಮಿಂದಲಾಡುತಿಹದೊಂದೇ ಮೂರುತಿ
ಒಮ್ಮೊಮ್ಮೆ ನಾ ಕುರುಹು ಹಿಡಿವೆನೆಂದರೆ
ಅಮ್ಮದೆ ಪುರಂದರವಿಠಲನಾದೊಂದೆ ಮೂರುತಿ ೧

ಮಟ್ಟ

ಸತ್ತ್ವ ರಜಸ್ತಮೋಗುಣದ ಸಕಲ ಮೂರುತಿ
ಭೃತ್ಯರಂಗಸಂಗದಲ್ಲಿ ನಲಿವ ಮೂರುತಿ
ತತ್ತ್ವಪತಿಗಳೊಡನೆ ಇಪ್ಪ ದಿವ್ಯಮೂರುತಿ
ಸತ್ಯ ಪುರಂದರ ವಿಠಲನು ಒಂದೇ ಮೂರುತಿ ೨

ಝಂಪೆ

ಸಾಸಿರ ನಾಮಕ್ಕೆ ಸಾಸಿರ ಮೂರುತಿ
ವಾಸುಕಿಶಯನನಾದ ಅನಂತ ಮೂರುತಿ
ಸಾಸಿರದಳದೊಳಡಗಿಹ ಮೂರುತಿ
ಶಾಶ್ವತ ನೆನೆವರ ಸಲಹುವ ಮೂರುತಿ
ಯಶೋದೆ ಮೊಲೆವುಂಡ ನಮ್ಮ ಪುರಂದರವಿಠ್ಠಲ
ಅಸಮ ಕಾರುಣ್ಯಸಾಗರ ಮೂರುತಿ ೩

ತ್ರಿವಿಡೆ

ಅನಂತ ಮುಕುಟ ಅನಂತ ಶಿರಸ್ಸು ಅನಂತ ನಯನ
ಅನಂತ ನಾಸಿಕ ಅನಂತ ಕರಣ ಅನಂತ ಕಂಬು
ಅನಂತ ಓಷ್ಠ ಅನಂತ ವದನ ಅನಂತ ರದನ
ಅನಂತ ಕಂಠ ಅನಂತ ಅನಂತ ಬಾಹು
ಅನಂತ ವಕ್ಷ ಅನಂತ ಶ್ರೀ ತುಲಸಿ
ವೈಜಯಂತಿ ಮಾಲೆಯಿಂದೊಪ್ಪುವ
ಅನಂತ ನಾಭಿ ಅನಂತ ಉದರ ಅನಂತ ತ್ರಿವಳಿ
ಅನಂತ ಕಟಿಯು ಅನಂತ ಜಘನ ಅನಂತ ಊರು
ಅನಂತ ಜಾನು ಅನಂತ ಜಂಘೆ ಅನಂತ ಗುಲ್ಫ ಅನಂತ ಪೆಂಡೆ
ಅನಂತ ಚರಣ ಅನಂತ ನಖವು
ಅನಂತ ಜಗಗಳ ಒಳಗೆ ಹೊರಗೆ ಇಪ್ಪ ಸಾನ್ನಿಧ್ಯ
ಪುರಂದರವಿಠಲನೊಬ್ಬನೆ ಕಾಣಿರೊ ೪

ರೂಪಕ

ಅಣು ಮಹತ್ತಾಗಿ ತೋರುವ ಮೂರುತಿ
ತೃಣಕಾಷ್ಟಗಳಲ್ಲಿ ಪರಿಪೂರ್ಣ ಮೂರುತಿ
ಗಣನೆ ಇಲ್ಲದ ಮೂರುತಿ ಘನಗರುಡವಾಹನ ಮೂರುತಿ
ಸನಕಾದಿಗಳಲ್ಲಿ ಸಾನ್ನಿಧ್ಯ ಮೂರುತಿ
ಮನುಜೋತ್ತಮರಲ್ಲಿ ಮಿನುಗುವ ಮೂರುತಿ
ಎನ್ನ ಸ್ವಾಮಿ ಪುರಂದರವಿಠಲ ಮೂರುತಿ ೫

ಅಟ್ಟ

ಬೊಮ್ಮಗೆ ಸಿರಿರಂಗ ಮೂರುತಿ
ರುದ್ರಗೆ ನರಸಿಂಗ ಮೂರುತಿ
ಇಂದ್ರಗೆ ಉಪೇಂದ್ರ ಮೂರುತಿ
ಚಂದ್ರಗೆ ದಧಿವಾಮನ ಮೂರುತಿ
ಸೂರ್ಯಗೆ ನಾರಾಯಣ ಮೂರುತಿ
ಅಗ್ನಿಗೆ ಪರಶುರಾಮ ಮೂರುತಿ
ಈರೇಳು ಲೋಕಕ್ಕೆಲ್ಲ ಕಾಲಪುರುಷ
ಶ್ರೀವಿಷ್ಣುಮೂರುತಿ
ಎಮಗೆ ಮೂರುತಿ ಪರಿಪೂರ್ಣ ಸಿರಿ
ಪುರಂರದವಿಲಠ ಮೂರುತಿ ೬

ಆದಿ

ಏಕಾನೇಕ ಮೂರುತಿ ಲೋಕವೆಲ್ಲ ಈತನ ಮೂರುತಿ
ಕಾಲದೇಶಗಳಿಗೆ ಅಪರಿಚ್ಛಿನ್ನ ಮೂರುತಿ
ಲೋಕಲೋಕದೊಳಗೆಲ್ಲ ವ್ಯಾಪಕವಾದ ಮೂರುತಿ
ಏಕಮೇವ ಪುರಂದರವಿಠಲನೆಂಬೊ ಮೂರುತಿ ೭

ಜೊತೆ

ಅನಂತ ಮೂರುತಿ ಅನಂತ ಕೀರುತಿ
ಅನಂತನಾಮ ಪುರಂದರವಿಠ್ಠಲ ಮೂರುತಿ

[ಎಲ್ಲ ದೇವತೆಗಳಲ್ಲೂ ಹರಿಯೇ ಅಂತರ್ಯಾಮಿ, ಪ್ರೇರಕ, ನಿಯಾಮಕ, ಸಾಕ್ಷಿಕ.]

ತ್ರಿಶೂಲ... —ರುದ್ರ (ಸಂಹಾರ ದೇವತೆ).
ನೊಸಲೊಳು... —ವಿಷ್ಣು (ಸ್ಥಿತಿದೇವತೆ).
ಕುಶಲದಿ... —ಬ್ರಹ್ಮ (ಸೃಷ್ಟಿದೇವತೆ).
ಸಮ್ಮೋಹನ—ಸಜ್ಜನರ ಮನಸ್ಸನ್ನು ಸೆಳೆಯುವ.
ಏಕಮೇವಶ್ರುತಿ—'ಏಕಮೇವಾದ್ವಿತೀಯಂ ಬ್ರಹ್ಮ'; 'ನೇಹ ನಾನಾಸ್ತಿ ಕಿಂಚನ'.
ಸುಮ್ಮನಸರಿಗೊಮ್ಮೆ.... —ದೇವತೆಗಳಿಗೆ ಆಗಾಗ ತೋರಿಕೊಳ್ಳುವ.
ಪರಬೊಮ್ಮ—ಪರಬ್ರಹ್ಮ.
ನಮ್ಮ ದೇವ... —ದೇವತಾ ತಾರತಮ್ಯದಲ್ಲಿ ನಿತ್ಯನಿರಂತರವ್ಯಾಪ್ತಿಯುಳ್ಳವನಾಗಿ.
ಅಮ್ಮದೆ—ಸಾಧ್ಯವಾಗದೆ.
ಭೃತ್ಯರಂಗಸಂಗ—ದಾಸರ ಹೃದಯದಲ್ಲಿ ಬಿಂಬನಾಗಿ ತೋರಿಕೊಂಡು.
ತತ್ತ್ವಪತಿಗಳೊಡನೆ—ತತ್ತ್ವಾಭಿಮಾನಿದೇವತೆಗಳಲ್ಲಿ.
ಸಾಸಿರದಳದೊಳು—ಸಹಸ್ರಾರಚಕ್ರದಲ್ಲಿ.
ಅಣುಮಹತ್ತಾಗಿ—'ಅಣೋರಣೀಯಾನ್ ಮಹತೋ ಮಹೀಯಾನ್'.
ಮನುಜೋತ್ತಮರಲ್ಲಿ ಮಿನುಗುವ—ಬಿಂಬರೂಪಿಯಾದ.
ಬೊಮ್ಮಂಗೆ...—ಬ್ರಹ್ಮನಿಗೆ ಅಂತರ್ಯಾಮಿ ಶ್ರೀರಂಗ; ರುದ್ರನಿಗೆ ನರಸಿಂಹ ಇತ್ಯಾದಿ.

ದಧಿವಾಮನ—ಚಂದ್ರಮಂಡಲಮಧ್ಯಸ್ಥನಾಗಿ, ಪೂರ್ಣಚಂದ್ರನಂತೆ ಹೊಳೆಯುತ್ತ ಪದ್ಮಾಸನದಲ್ಲಿ ಕುಳಿತ ದ್ವಿಭುಜವಾಮನ.

ನಾರಾಯಣ—ಸೂರ್ಯಮಂಡಲ ಮಧ್ಯಸ್ಥನಾಗಿ, ಪರೋರಜನಾಗಿ, ಸವಿತೃನಾಮಕ ಪರಮಾತ್ಮ.

ಪರಶುರಾಮ—ಅಗ್ನಿಸ್ಥನಾಗಿ, ಸರ್ವದಾಹಕಗುಣವುಳ್ಳ, ಅಗ್ನಿವರ್ಣನಾದ, ಸರ್ವ ದೋಷ ಸಂಹಾರಕನಾದವನು.

ಕಾಲಪುರುಷ—ಕಾಲತತ್ತ್ವದ ನಿಯಾಮಕ.

ಏಕಾನೇಕ—ಸ್ವರೂಪದಿಂದ ಸ್ವಗತಭೇದವಿವರ್ಜಿತ ; ಮಹಿಮೆಯಿಂದ ನಾನಾರೂಪ ಗಳುಳ್ಳವನು (ವಿಶ್ವ).

೬. ಮಾಹಾತ್ಮ್ಯಸುಳಾದಿ

ಪಾಡಿ

ಧ್ರುವ

ಅಣುವಾಗಬಲ್ಲ ಮಹತ್ತಾಗಬಲ್ಲ
ಅಣುಮಹತ್ತೆರಡು ಒಂದಾಗಬಲ್ಲ
ರೂಪಾಗಬಲ್ಲ ಅರೂಪನಾಗಬಲ್ಲ
ರೂಪ ಅರೂಪವೆರಡೊಂದಾಗಬಲ್ಲ
ಸಗುಣನಾಗಲಿ ಬಲ್ಲ ನಿರ್ಗುಣನಾಗಲಿ ಬಲ್ಲ
ಸಗುಣ ನಿರ್ಗುಣ ಎರಡೊಂದಾಗ ಬಲ್ಲ
ವ್ಯಕ್ತನಾಗಲಿ ಬಲ್ಲ ಅವ್ಯಕ್ತನಾಗಲಿ ಬಲ್ಲ
ವ್ಯಕ್ತಾವ್ಯಕ್ತವು ಎರಡೊಂದಾಗಬಲ್ಲ
ಅಘಟಿತಘಟನಾಶಕ್ತ ಅಚಿಂತ್ಯಾದ್ಭುತ ಮಹಿಮ
ಸ್ವಗತಭೇದವಿವರ್ಜಿತ ಪುರಂದರವಿಠಲ ೧

ಮಟ್ಟ

ಕಣ್ಣಲಿ ಕೇಳುವ ಕಾಂಬುವನರಿವ
ಆಘ್ರಾಣಿಸುವ ಆಸ್ವಾದಿಸುವ
ರಸನದಿ ಕೇಳುವ ಕಾಂಬುವನರಿವ
ಸ್ಪರುಶದಿ ಕೇಳುವ ಕಾಂಬುವನರಿವ
ಆಘ್ರಾಣಿಸುವ ಆಸ್ವಾದಿಸುವ
ಶ್ರವಣದಿ ಕೇಳುವ ಕಾಂಬುವನರಿವ
ಆಘ್ರಾಣಿಸುವ ಆಸ್ವಾದಿಸುವ
ಘ್ರಾಣದಿ ಕೇಳುವ ಕಾಂಬುವನರಿವ
ಆಘ್ರಾಣಿಸುವ ಆಸ್ವಾದಿಸುವ
ಲೋಕ ವಿಲಕ್ಷಣ ದಿವ್ಯಕರ್ಮ
ಲೋಕಕಾಶ್ಚರ್ಯ ನಮ್ಮ ಪುರಂದರವಿಠ್ಠಲ ೨

ತ್ರಿವಿಡೆ

ಆವಾವ ಯುಗದಲ್ಲಿ ವಿಷ್ಣುವಿನಿಂದಲೇ ವ್ಯಾಪಕನಾಗಿ
ಆ ವಿಷ್ಣು ಇದ್ದಲ್ಲಿ ವಿಷ್ಣುಲೋಕ ತಾನಿಪ್ಪುದಾಗಿ
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ
ಸಾರಿಷ್ಣ ಎಂಬುದು ವಿಷ್ಣು ಇದ್ದಲ್ಲೆ ಇಪ್ಪುದು
ಪುರಂದರವಿಠ್ಠಲನೊಬ್ಬನೆ ಬೊಮ್ಮ ಭರಿತ ಪಂಚವಿಧ
ಮುಕ್ತಿದಾಯಕನು ೩

ಅಟ್ಟ

ಮೋದ ದಕ್ಷಿಣಪಕ್ಷ ಪ್ರಮೋದ ಉತ್ತರ ಪಕ್ಷ
ಆನಂದ ಆತುಮ ಆಪಾದ ಆನಖ ಆನಂದ
ಅಪ್ರಾಕೃತ ವಿಗ್ರಹ ನಮ್ಮ ಪುರಂದರವಿಠಲ ೪

ಆದಿ

ನಾರಾಯಣ ಪರ ಬೊಮ್ಮ ಗಡ
ಶ್ವೇತ ತನೂರುಹ ಬಲಭದ್ರ ಗಡ
ಕೃಷ್ಣ ತನೂರುಹ ಕೃಷ್ಣ ಗಡ
ಕೃಷ್ಣ ವಾಸುದೇವ ಪುರಂದರವಿಠಲ ೫

ಏಕ

ಹೊರಗಿಪ್ಪ ಒಳಗಿಪ್ಪ
ಹೊರಗಿರಲರಿಯ ಒಳಗಿಪ್ಪ
ಹೊರಗಿಪ್ಪ ಒಳಗಿರಲರಿಯ
ಒಳಗೆ ಹೊರಗೆ ತುಂಬಿಕೊಂಡಿಹ
ತಾನಿಲ್ಲದ ಠಾವು ಎಳ್ಳಿನಷ್ಟಿಲ್ಲ
ಸರ್ವವಿಷ್ಣು ವಾಸುದೇವ ಪರಿ
ಪೂರ್ಣ ಪುರಂದರವಿಠಲ ೬

ಜೊತೆ

ನಮೋ ನಮೋ ವಾಗೀಶ ಈಶ ಸರ್ವೇಶ
ನಮೋ ನಮೋ ಪುರಂದರವಿಠಲರೇಯ ೭

ಅಘಟಿತ ಘಟನ—ಪ್ರಾಕೃತ ಗುಣಗಳಿಂದ ಆಗದುದನ್ನೂ ಆಗಮಾಡಿಸುವವನು.

ಅಚಿಂತ್ಯಾದ್ಭುತಮಹಿಮ—ಅವನ ಹಿರಿಮೆಯ ಹೆಗ್ಗಳಿಕೆಯನ್ನು ನಾವು ಊಹಿಸುವುದೂ ಸಾಧ್ಯವಿರದು.

ಸ್ವಗತಭೇದವಿವರ್ಜಿತ—ಅವನ ಅನಂತ ರೂಪಗಳಲ್ಲಿ, ಆಯುಧಗಳಲ್ಲಿ, ಗುಣಗಳಲ್ಲಿ, ಕ್ರಿಯೆಗಳಲ್ಲಿ ಯಾವ ಭೇದವೂ ಇರದು ; ಅವುಗಳಿಂದ ಅವನು ಭಿನ್ನನಾಗುವುದಿಲ್ಲ.

ಕಣ್ಣಲಿ ಕೇಳುವ—ಮಧ್ವಾಚಾರ್ಯರು 'ಗೀತಾತಾತ್ಪರ್ಯ'ದಲ್ಲಿ ಹೇಳಿರುವ 'ಶೃಣೋತಿ ಚಕ್ಷುಷಾದೇವ...ಸರ್ವೇಂದ್ರಿಯೈಃ ಸರ್ವಂ ಕರೋತಿ' ಎನ್ನುವ ಮಾತಿನ ಕನ್ನಡರೂಪ.

ಸಾಲೋಕ್ಯ...—ಐದು ವಿಧವಾದ ಮುಕ್ತಿಗಳು. ವಿವರಣೆಗೆ ಎರಡನೆಯ ಸಂಪುಟ ನೋಡಿ.

ಮೋದ ದಕ್ಷಿಣಪಕ್ಷ...—ತೈತ್ತರೀಯ ಉಪನಿಷತ್ತಿನ ಒಕ್ಕಣೆಯನ್ನು ಅನುಸರಿಸಿದ್ದಾರೆ.

ಶ್ವೇತತನೂರುಹ—ಬಿಳಿಯ ಮೈಯುವನಾದ ಬಲರಾಮನಲ್ಲಿ (ಸಂಕರ್ಷಣನಲ್ಲಿ) ವಿಷ್ಣುವಿನ ಆವೇಶ.

ಕೃಷ್ಣ ತನೂರುಹ—ನೀಲಿಗಪ್ಪುಮೈಯುವನಾದ ವಾಸುದೇವ ಕೃಷ್ಣನು.

ಠಾವು—ಸ್ಥಳ, ಜಾಗ.

ವಾಗೀಶ—ಅಭಿವ್ಯಕ್ತಿಗಳ ಪ್ರೇರಕ, ನಿಯಾಮಕ.

೭. ಹರಿಸ್ವಾತಂತ್ರ್ಯ ಸುಳಾದಿ

ಸೌರಾಷ್ಟ್ರ ಧ್ರುವ

ನೀನೆ ಕಾರಣ ಅಕಾರಣರೊ ಬೊಮ್ಮಾದಿಗಳು
ನೀನೇ ಕರ್ತೃ ಅಕರ್ತೃಗಳವರು
ಸರ್ವ ಸ್ವತಂತ್ರ ನೀನು ಅಸ್ವತಂತ್ರರವರು
ಮೂಲ ನೀನು ಮಧ್ಯಮರವರು
ನಿತ್ಯನೆಂದೆನಿಪೆ ನೀನು ಲಯರಾಗುವರವರು
ಭೋಕ್ತೃ ಎಂದೆನಿಸುವೆ ಸರ್ವರಂತರಾತ್ಮಕನಾಗಿ
ಸ್ವೀಕರಿಸುವ ಶಕ್ತಿ ನಿನ್ನಾಧೀನವಯ್ಯಾ
ಅನಾದಿ ಕಾಲ ಕರ್ಮ ಗುಣಗಳನನುಸರಿಸಿ
ಫಲಗಳನುಣಿಸುವೆ ಪುರಂದರವಿಠಲ ೧

ಮಟ್ಟ

ತನ್ನಿಂದೊಂದೆರಡು ಜ್ಞಾನ ಗುಣಾಧಿಕರ
ಮೊದಲುಮಾಡಿಕೊಂಡು
ಬೊಮ್ಮನ ಪರಿಯಂತ ತಾರತಮ್ಯ ಪಂಚಭೇದ ಮಾರ್ಗವರಿತು
ನವವಿಧ ಸದ್ಭಕ್ತಿಯುಕ್ತನಾಗಿ
ನಿತ್ಯ ಜನನ ಮರಣ ದೂರ ಪುರಂದರ ವಿಠಲನ್ನ
ಗುಣ ರೂಪ ಕ್ರಿಯೆಯನ್ನು ತಿಳಿಯಬೇಕು ೨

ತ್ರಿವಿಡೆ

ಪುರುಷಸೂಕ್ತವೇ ಮೊದಲಾದ ವೇದಗಳಿಂದ
ಮತ್ತೆ ಕೆಲವು ಉಪನಿಷದ್ವೇದ್ಯನು ನೀನೆ
ಮಹಾಭಾರತ ಪುರಾಣಗಳಲ್ಲಿದ್ದ ರೂಪ
ಗುಣಕ್ರಿಯೆಗಳನು ಸಾರ್ವಭೌಮ ಬೊಮ್ಮ ಬಲ್ಲ
ಆತನಿಂದಲಿ ವಾಣಿ ಭಾರತಿಯರು ಬಲ್ಲರು
ವಾಣಿಯಿಂದಲಿ ಮಹಾದೇವ ತಾ ಬಲ್ಲನು
ರುದ್ರನಿಂದಲಿ ಉಮಾದೇವಿಯು ಬಲ್ಲಳು
ಉಮೆಯಿಂದ ಇಂದ್ರ-ಕಾಮರು ಬಲ್ಲರು
ಸಕಲ ದೇವತೆಗಳು ಪುರಂದರವಿಠಲನ
ಬಲ್ಲರರಿಯರೋ ಸಾಕಲ್ಯದಿಂದ ೩

ಅಟ್ಟ

ಓಂಕಾರ ಪ್ರತಿಪಾದ್ಯ ವ್ಯಾಹೃತಿಯೊಳಗಿದ್ದು
ಗಾಯತ್ರಿ ಎನಿಸುವೆ ಪುರುಷಸೂಕ್ತ ಮೇಯ
ಏಕೋತ್ತರಪಂಚಾಶದ್ವರ್ಣಗಳಲ್ಲಿ
ವರ್ಣಾಭಿಮಾನಿಗಳಿಂದ ವರಣೀಯನಾಗಿಪ್ಪೆ
ವರ ಕಲ್ಪಕಲ್ಪಕ್ಕು ವರದ ಪುರಂದರವಿಠಲ
ವ್ಯಾಹೃತಿಯೊಳಗಿದ್ದು ಗಾಯತ್ರಿ ಎನಿಸುವೆ ೪

ಆದಿ

ಓಂ ಅಶೇಷ ಗುಣಾಧಾರ ಇತಿ ಇತಿ ನಾರಾಯಣೋಪ್ಯಸೌ
ಪೂರ್ಣೋ ಭೂತಿ ವರೋನಂತಗುಣೋ
ಸುಖೋ ಯದ್ವ್ಯಾಹೃತೀರಿತಃ
ಗುಣೈಸ್ತತಃ ಪ್ರಸವಿತಾ
ವರಣೀಯಾನ್ ಗುಣೋನ್ನತೇಃ
ಭಾರಾತಿ ಜ್ಞಾನರೂಪತ್ವಾತ್ ಭರ್ಗೋಧ್ಯೇಯೋಖಿಳೈರ್ಜನೈಃ
ಪ್ರೇರಕೋ ಶೇಷ ಬುದ್ಧೀನಾಂ
ಸ ಗಾಯತ್ರ್ಯರ್ಥ ಈರಿತಃ
ಪುರಂದರವಿಠಲ ಸರ್ವೋತ್ತಮ ಕಾಣಿರೋ ೫

ಜೊತೆ

ನಿನ್ನ ಮಹಿಮೆಗಳ ನೀನೆ ಬಲ್ಲೆಯಲ್ಲದೆ
ಅನ್ಯರೇನು ಬಲ್ಲರು ಪುರಂದರವಿಠಲ ೬

ಕಾರಣ—ಮುಖ್ಯಕಾರಣ, ಮೂಲಕಾರಣ, ಸ್ವತಂತ್ರಕಾರಣ.

ಬೊಮ್ಮಾದಿಗಳು—ಬ್ರಹ್ಮನೇ ಮೊದಲಾದ ತತ್ತ್ವೇಶರು.

ತನ್ನಿಂದೊಂದೆರಡು...—ನೋಡಿ, ತಾರತಮ್ಯ ಸ್ತೋತ್ರದ ವಿವರಣೆ.

ಪುರುಷಸೂಕ್ತ—ಋಗ್ವೇದದ ಹತ್ತನೆಯ ಮಂಡಲದಲ್ಲಿ.

ಕೆಲವು ಉಪನಿಷತ್ತು—ದಶೋಪನಿಷತ್ತುಗಳು.

ಸಾಕಲ್ಯದಿಂದ—ದೇವತೆಗಳು ಕೂಡ ಪರಮಾತ್ಮನನ್ನು ಸಂಪೂರ್ಣವಾಗಿ ಅರಿಯಲಾರರು; ಅವನ ಮಹಿಮೆಯನ್ನು ಅವರು ತಮಗೆ ತಾರತಮ್ಯಾನುಸಾರ ಯೋಗ್ಯತೆಯಿದ್ದಷ್ಟು ಮಟ್ಟಿಗೆ ತಿಳಿಯುತ್ತಾರೆ.

ವ್ಯಾಹೃತಿಗಳು—ಭೂಃ, ಭುವಃ, ಸ್ವಃ ಮೊದಲಾದುವು,

ಏಕೋತ್ತರಪಂಚಾಶದ್ವರ್ಣ—ಐವತ್ತೊಂದು ವರ್ಣಗಳು, ಅಕಾರದಿಂದ ಳಕಾರದ ವರೆಗೆ.

'ಓಂ ಅಶೇಷಗುಣಾಧಾರ ಇತಿ'...—ಇದು ಮಧ್ವಾಚಾರ್ಯರ ಋಗ್ಭಾಷ್ಯದ ಮೊದಲನೇ ಅಷ್ಟಕದ, ಮೊದಲನೇ ಅನುವಾಕದ ವರ್ಗಾದಿಯಲ್ಲಿ ಬಂದಿರುವ ಒಕ್ಕಣೆ. ಇದು "ಸಕಲವೇದಾನಾಂ ಮುಖ್ಯತೋ ಭಗವತ್‌ಪ್ರತಿಪತ್ತಿ ಹೇತುತ್ವಾತ್" ಎಂಬುದರ ವಿವರಣೆಯೆಂದು ಜಯತೀರ್ಥರ ಟೀಕೆ.

೮. ಕಾಣಾಚಿಸುಳಾದಿ

ಯರುಕುಲಕಾಂಬೋದಿ ಧ್ರುವ

ಪರಿಪೂರ್ಣನು ನೀನು ಬೊಮ್ಮಾಂಡ ಕೋಟಿಗಳಿಗೆ
ಎಂತೆಡೆಗೊಟ್ಟೆ ಹೇಳಾ
ಪರಿಪೂರ್ಣನು ನೀನು ಲಕುಮಿದೇವಿಯರಿಗೆ
ಎಂತೆಡೆಗೊಟ್ಟೆ ಹೇಳಾ
ಪರಿಪೂರ್ಣನು ನೀನು ಬೊಮ್ಮಾದಿ ಸುರರಿಗೆ
ಎಂತೆಡೆಗೊಟ್ಟೆ ಹೇಳಾ
ಪರಿಪೂರ್ಣನು ನೀನು ಅನಂತ ವೇದಗಳಿಗೆ
ಎಂತೆಡೆಗೊಟ್ಟೆ ಹೇಳಾ
ಪರಿಪೂರ್ಣನು ನೀನು ಅವ್ಯಾಕೃತಾಕಾಶಕ್ಕೆ
ಎಂತೆಡೆಗೊಟ್ಟೆ ಹೇಳಾ
ಪರಿಪೂರ್ಣನು ನೀನು ಪುರಂದರ ವಿಠ್ಠಲ
ಎಂತೆಡೆಗೊಟ್ಟೆ ಹೇಳಾ ೧

ಮಟ್ಟ

ಅಣುವಿಂಗಣುವಿಂಗಣುವಿಂಗೆ
ಅಣುವಿಂಗಣುವಿಂಗಣುವು ಗಡಾ
ಮಹತ್ತು ಮಹತ್ತು ಮಹತ್ತು ಮಹತ್ತಿಗೆ
ಮಹತ್ತು ಮಹತ್ತು ಮಹತ್ತು ಮಹತ್ತು ಗಡಾ
ಮಹತ್ತಾದ ಅಪರಿಮಿತ ಗಡಾ
ಅಣೋರಣಿಯಾನ್ ಮಹತೋಮಹಿಯಾನ್
ಗುಣಗಣ ಭರಿತ ಪುರಂದರವಿಠಲ ೨

ಅಟ್ಟ

ಕಾಣಾಚಿ ನಿನ್ನುರವು ಲಕುಮಿದೇವಿಯರಿಗೆ
ಕಾಣಾಚಿ ನಿನ್ನ ಸರ್ವಾಂಗ
ಕಾಣಾಚಿ ನಿನ್ನ ಭವೇಂದ್ರಾದಿ ಸುರರಿಗೆ
ಕಾಣಾಚಿ ನಿನ್ನ ಸರ್ವಾಂಗ
ಕಾಣಾಚಿ ಎನಗೆ ನೀಪುರಂದರವಿಠಲ
ಕಾಣಾಚಿ ನಿನ್ನ ಸರ್ವಾಂಗ ೩

ಝಂಪೆ

ಅಗ್ನಿಯೊಳಗಿದ್ದು ದಾಹಕ ಶಕುತಿಯನೀವೆ
ವಾಯುವಿನಲ್ಲಿದ್ದು ಶೋಷಶಕುತಿಯನೀವೆ
ವರುಣನಲ್ಲಿದ್ದು ಕ್ಲೇದಶಕುತಿಯನೀವೆ
ನಾನಾ ವಸ್ತುವಿನಲ್ಲಿದ್ದು ಇಂಥ ನಾನಾ ಶಕುತಿಯನೀವೆ
ಆರು ಏನು ಘನ್ನ ಮಹಿಮರೋ ನೀನೆ ಘನ್ನ
ಪುರಂದರವಿಠಲ ೪

ಏಕ

ಕಂಡೆ ಕಂಡೆ ಕಮಲಾರಮಣನ
ಕಂಡೆ ಕಂಡೆ ಕಮಲಜನಯ್ಯನ
ಕಂಡೆ ಕಂಡೆ ಕೌಸ್ತುಭಧರನ
ಕಂಡೆ ಕಂಡೆ ವೈಜಯಂತಿಧರನ
ಕಂಡೆ ಕಂಡೆ ಚಕ್ರಪಾಣಿಯ
ಕಂಡೆ ಕಂಡೆ ಶಂಖಧರನ
ಕಂಡೆ ಕಂಡೆ ಕರುಣಾಳು ಪುರಂದರವಿಠಲನ ೫

ಜೊತೆ

ಇನಿತು ಕಾರಣಮನಿತು ನೀನೆ
ನಿನಗೂ ಎನಗೂ ಪುರಂದರವಿಠಲ

ಎಂತು ಎಡೆಗೊಟ್ಟೆ—ಹೇಗೆ ಅವಕಾಶವನ್ನು ಒದಗಿಸಿದೆ.

ಅವ್ಯಾಕೃತಾಕಾಶ—ನಾಮರೂಪಗಳಿಂದ ಸ್ಪಷ್ಟವಾಗದ ಆಕಾಶ ; ಮೂಲಭೂತ.

ಅಣೋರಣೀಯಾನ್...—ಇದು ಭಗವದ್ಗೀತೆಯಲ್ಲಿ ಬರುವ ಶ್ಲೋಕ (೮, ೯).

ಕಾಣಾಚಿ—ಹಿರಿಯರಿಂದ ಬರುವ ಸ್ವತ್ತು.

ಆರು ಏನು ಘನ್ನಮಹಿಮರೋ—ತತ್ತ್ವಾಭಿಮಾನಿಗಳು ಸ್ವತಂತ್ರರಲ್ಲ ; ನಿನ್ನ ಪ್ರೇರಣೆಯನ್ನು ಪಡೆದೇ ಅವರ ವ್ಯಾಪಾರ ('ಭೀಷಾಸ್ಮಾದ್ವಾತಃಪವತೇ' ಇತ್ಯಾದಿ ಮಂತ್ರದ ಆಧಾರ).

ಇನಿತು ಕಾರಣಮನಿತು—ಇವೆಲ್ಲಕ್ಕೂ ನೀನೇ ಕಾರಣವಲ್ಲವೆ ?

ನಿನಗೂ ಎನಗೂ—ನೀನು ನನಗೆ ಕಾರಣನಾದವನು ; ನೀನು ಬಿಂಬನಾದರೆ ನಾನು ಪ್ರತಿಬಿಂಬ. ನಿನಗೆ ನಿನ್ನನ್ನು ಬಿಟ್ಟು ಇನ್ನಾವ ಕಾರಣವೂ ಇರದು. ಆದ್ದರಿಂದ ನೀನು ನಿನಗೂ ನನಗೂ ಕಾರಣನಾದವನು.

೯. ಸೃಷ್ಟಿಪ್ರಕರಣಸುಳಾದಿ

ಭೈರವಿ ಧ್ರುವ

ಪ್ರಳಯೋದಕದಲ್ಲಿ ವಟಪತ್ರಶಯನನಾಗಿದ್ದ ಕಾಲದಲ್ಲಿ
ಶ್ರೀದೇವಿಯರು ಶ್ರೀ ಭೂ ದುರ್ಗಾ ರೂಪದಿ ನಿಂದು
ದಕ್ಷಿಣಾ ಯಜ್ಞ ನಾಮದಿಂದ ವೇದಂಗಳಿಂದ
ಕೊಂಡಾಡುವ ಮುಖ್ಯಾಭಿಮಾನಿಯಾಗಿ
ವರ್ಣಾತ್ಮಕದಿಂದ ನಿತ್ಯ ನಿಗಮಾರ್ಥಗಳಿಂದ
ತುತಿಸುವಳು ಆ ಆ ಆ ತ್ರಿಪ್ರಕಾರ
ಮಿತಿಯೆಂದು ಬೊಮ್ಮನ ನೂರರೊಳೆಂಟು ಭಾಗ
ದೊಳೊಂದು ಭಾಗ ವೀ ಲಕುಮಿದೇವಿಗೆ
ತಾ ಪ್ರೇರಿಸಲಾಗಿ
ತುತಿಸುವಂದದಿ ಪ್ರೇರಕನಾಗಿ ಪ್ರಾರ್ಥನೆ ಕೈಕೊಂಡು
ತಮ್ಮ ತಮ್ಮ ಸಾಧನಗಳು ಮಾಡಿಕೊಂಬಲ್ಲಿ
ನಿರೂಪಿಸಿದನು ಪುರಂದರವಿಠಲ ೧

ಮಟ್ಟ

ನೂರು ವರುಷವು ಇಂದಾಯಿತೆನಲು
ಉದಯಕಾಲದಿ ಚತುರ್ದಶ ಭುವನಾತ್ಮಕವಾದ ಚತುರ್ಮುಖ
ಬೊಮ್ಮನ ಪಡೆದೆ ನೀನು
ಒಮ್ಮೆ ಬಂದು ನಿನ್ನ ಪ್ರಳಯೋದಕವನು
ತೆರೆಗಳ ನೋಡಿ ಏನು ಕಾಣದೆ ಪೊಕ್ಕು ನಾಳದಲ್ಲಿ
ಮತ್ತೊಮ್ಮೆ ಬರಲು ನಿನ್ನ ಘೋರವಾದ
ನಿನ್ನ ರೂಪವ ಕಂಡು ಅಂಜಿ ಮತ್ತೆ
ನನ್ನ ಮನವೇನೆಂದು ಬಂದದು ಕಂಡು ಉದರ ಪ್ರವೇಶವಾದ
ಒಂದು ಭಯವು ಎರಡು ಅಜ್ಞಾನವು
ನಿನ್ನ ವಿಷಯದಲ್ಲಿ ಉಂಟಾದಡಾಗಲಿ
ಕಂತುಜನಕ ನೀನೆ ತಪತಪವೆನಲಾಗ
ತಪವನು ಮಾಡಿದ ಪುರಂದರವಿಠಲನ್ನ
ಒಲಿಸಿ ಸೃಷ್ಟಿಯ ಮಾಡಿದ ಸರಸಿಜಸಂಭವನು ೨

ರೂಪಕ

ಸೂಕ್ಷ್ಮರೂಪವಾದ ಇಪ್ಪತ್ತುನಾಲ್ಕು ತತ್ತ್ವಗಳ ಹೊರಗೆ
ಪಂಚಭೂತಗಳಿಗಭಿಮಾನಿಯಾದ
ಗಣೇಶ ಮೊದಲಾದ ಪಂಚಭೂತಗಳ ಸೃಜಿಸಿದನಾಗ
ಒಂದೊಂದಾವರಣದ ಅಭಿಮಾನಿಗಳಿಂದ
ಮಹತ್ತತ್ತ್ವಕೀಶ-ಅಹಂಕಾರಾಧೀಶನೆಂದು
ಬೊಮ್ಮಾಂಡವ ನಿರ್ಮಾಣವ ಮಾಡಿ
ಪೂರ್ವದಂತೆ ಆ ದೇವತೆಗಳ ಸೃಜಿಸಿ
ಬೊಮ್ಮಾಂಡವಾಧಾರವಾಗಿ ತನ್ನಾದೇಹವ
ಬೆಳಸಿದ ಚತುರ್ಮುಖನಾಗ
ಮೂಲ ರೂಪದಿಂದ ಪುರಂದರವಿಠಲ
ವಿರಾಟದಲ್ಲಿ ವಾಸವಾಗಿ ನಿಂದ ಜಗದಾಧಾರ ೩

ಝಂಪೆ

ಹಳೆಯ ಬೊಮ್ಮಗೆ ಅಂದು ಅವ್ಯಾಕೃತದಲ್ಲಿ
ವಿರಜೆಯಲಿ ಮುಳುಗಿಸಿ ಉದರದಲಿ ಪ್ರವೇಶ
ಬೊಮ್ಮಾದಿಗಳು ಇರಲು ಕೆಲವು ಲೋಕಂಗಳು ಸೃಷ್ಟಿಯಾದ
ಬಳಿಕ ಶ್ವೇತ ದೀಪದಲ್ಲಿದ್ದ ಮೂರುತಿಯ
ದರುಶನದಿ ಮುಕುತರೆನಿಸಿಕೊಂಡು
ಐದಿದರು ಪುರಂದರವಿಠಲನ ಚರಣ ಕಮಲವ ೪

ತ್ರಿವಿಡೆ

ಗಣನೆ ಇಲ್ಲದ ಅಪಾರ ರೂಪಂಗಳಲ್ಲಿ
ಒಂದು ರೂಪದಿ ಚತುರ್ಮುಖನಿಗೆ
ಸರ್ವಾಂಗ ಸಾಯುಜ್ಯವಿತ್ತ
ಮಂಗಳಾಂಗನು ಸಾಯುಜ್ಯವಿತ್ತ
ಪುರಂದರವಿಠಲ ಭಕುತರೊಡೆಯ ನೀನು
ಭಕುತರಧಿಪ ನೀನು ಸಾಯುಜ್ಯವಿತ್ತ ೫

ಅಟ್ಟ

ಶ್ವೇತದ್ವೀಪವು ಸುತ್ತಿದ ಉದಕವು
ಬಯಲಾದ ಮೇಲೆ ಅಂಧಂ ತಮಸು
ಏಳುಕೋಟಿ ಪರಿಮಿತವಾದ ನರಕವು
ಶುಕ್ಲ ಶೋಣಿತ ಮೂತ್ರ ಅಶುದ್ಧದಿಂದ

ಮಿಶ್ರವಾದ ತಮಸಿನೊಳು ಪೂರ್ಣ ಸಾಧನವನು
ಮಾಡಿದ ಜನರಿಗೆ ಹರಿದ್ವೇಷ ಭಕ್ತರಲ್ಲಿ
ಅನಾದಿಕಾಲದಿ ಮಾಡಿ ದುಃಖಭಾಜನರಾದ
ಪಾಪಿಜೀವರನು ವಾಯುಭೃತ್ಯರಿಂದ ಪ್ರೇರಿಸಲಾಗಿ
ಲಿಂಗ ಶರೀರವ ಹೋಳು ಮಾಡಿ
ಕೆಡಹಿತು ಅಂಧಂ ತಮಸಿನೊಳು
ಕ್ರಿಮಿ ಪಕ್ಷಿಗಳಿಂದ ಬಾಧೆಯಲ್ಲದೆ ಮೇಲೆ
ಪರ್ವತಂಗಳ ತಂದು ಬಿಸುಡುವರು
ಭೀಮನ ದೂತರಿಂದ ನೊಂದು
ದುಃಖಭಾಜನರಾದ ಪಾಪಿಜೀವರಿಗೆ
ಎಂತು ಮಾಡಿದರೆ ಅದರಂತೆ ಫಲವೀವ
ಕಂತುಜನಕ ಪುರಂದರವಿಠ್ಠಲರೇಯ ೬

ಆದಿ

ಇಂತು ಪ್ರಕೃತಿಸಂಬಂಧವಾದಡೆ
ಬೊಮ್ಮ ರುದ್ರ ಇಂದ್ರ ದಿಕ್ಪಾಲಕರು ಮತ್ತೆ
ದೇವತೆಗಳು ಮನು ಮುನಿಗಳು
ಶರೀರದಲಿ ವಾಸವಾಗಿ ಪುರಂದರವಿಠಲ
ಸೃಷ್ಟಿಸ್ಥಿತಿಲಯಕೆ ಕಾರಣ ೭

ಜೊತೆ

ಕರ್ಮಜಾಂಡಗಳ ಮರ್ಮಗಳ ತಿಳಿದು ಫಲವೀವ
ನಿರ್ಮಲ ಚರಿತ್ರ ಪುರಂದರವಿಠಲ ೮

[ವಿವರಣೆಗೆ ಎರಡನೇ ಸಂಪುಟದ ಪ್ರಸ್ತಾವನೆ ಮತ್ತು ತಾರತಮ್ಯಸ್ತೋತ್ರಗಳಿಗೆ ಕೊಟ್ಟಿರುವ ಅವತರಣಿಕೆಯನ್ನು ನೋಡಿ.]

೧೦. ವೇಂಕಟೇಶಸುಳಾದಿ

ಧ್ರುವ

ಮಂಗಳಾಂಗ ನಿನ್ನಂಗವಟ್ಟದಲ್ಲಿ ಸಂಗಸುಖವಿತ್ತಳವ್ವೆ
ಅಂಗನೆ ಲಕುಮವ್ವೆ ಕೆಂಬರಳಾಗಿಪ್ಪಳವ್ವೆ
ಶೃಂಗಾರವಾದಳವ್ವೆ ಬಂಗಾರವಾದಳವ್ವೆ
ರಂಗ ಶ್ರೀ ಪುರಂದರವಿಟ್ಠಲ ನಿನ್ನನೊಲಿದು ೧

ಮಟ್ಟ

ಉಟ್ಟ ದಟ್ಟಿ ಕಟ್ಟಿದ ಕಠಾರಿ
ತೊಟ್ಟಂಬು ತೊಡರು ತೋಮರ
ಮೆಟ್ಟಿದ ತಡಿಕೆರವಿನ ಹೆಜ್ಜೆ ಹೊನ್ನಗೆಜ್ಜೆ
ಸೃಷ್ಟಿರಕ್ಷಕ ಪುರಂದರವಿಠ್ಠಲ ತಿರುವೆಂಗಳಪ್ಪಗೆ ನಮೋ ೨

ಅಟ್ಟ

ಅಚ್ಯುತಾನಂತ ಗೋವಿಂದ ಮುಕುಂದ
ವಾಮನ ವಾಸುದೇವ ನಾರಾಯಣ ಹರಿ
ಸಚ್ಚಿದಾನಂದಸ್ವರೂಪ ಗೋಪಾಲ ಪುರುಷೋತ್ತಮ
ಪರಂಧಾಮ ನಾರಾಯಣ
ಮತ್ಸ್ಯಕೂರ್ಮ ವರಾಹ ನಾರಸಿಂಹ ವಾಮನ
ಭಾರ್ಗವ ರಾಘವ ಕೃಷ್ಣ ಬುದ್ಧ ಕಲ್ಕಿ
ಯವತಾರ ಅನಂತಾವತಾರ ನಾರಾಯಣ
ಅಪಾರ ಮಹಿಮ ಶ್ರೀ ನಾರಾಯಣ ಸರ್ಪಶಯನ
ಶ್ರೀ ಪುರಂದರವಿಠ್ಠಲ ವಿಬುಧೇಶ ತಿರುವೇಂಗಳಪ್ಪ
ಎನ್ನಪ್ಪನೆ ನಾರಾಯಣ ೩

ಝಂಪೆ

ಇದೆ ದನುಜಮರ್ದನ ಚಕ್ರಹಸ್ತ ಮ
ತ್ತಿದೆ ವೇದಮಯ ಶಂಖಹಸ್ತ
ಇದೆ ಈರೇಳು ಜಗವನೊಲಿದಿಂಬಿಟ್ಟು ಮೆರೆವ ಹಸ್ತ
ಇದೆ ಇದೆ ವೈಕುಂಠವೆಂದು ತೋರುವ ಹಸ್ತ
ಇದೇ ಪುರಂದರವಿಠ್ಠಲನ್ನ ಮೂರುತಿ
ಇದೇ ತಿರುವೇಂಗಳಪ್ಪನ ಇರವು ೪

ಏಕ

ಕಿರೀಟ ಕುಂಡಲಧರನ ಕಂಡೆ
ಹಾರವಣಿ ಭೂಷಣನ ಕಂಡೆ
ಸಿರಿಯಿಪ್ಪ ವಕ್ಷಸ್ಥಳವ ನಾ ಕಂಡೆ
ವರಾಂಬರನ ಕಂಡೆ ವರದೇಶನ ಕಂಡೆ
ತಿರುಮಲಗಿರಿಯಲಿ ಸಿರಿಪುರಂದರವಿಠಲನ
ಇರವ ನಾ ಕಂಡೆ ಚೆಲುವನ ನಾ ಕಂಡೆ ॥

ಜೊತೆ

ತಿರುವೇಂಗಳಪ್ಪ ಪುರಂದರವಿಠಲ
ನೆರೆ ನಂಬಿದೆನೊ ನಿನ್ನ ಚರಣಕಮಲವ

ಅಂಗವಟ್ಟದಲಿ—ಶರೀರದಲ್ಲಿ.
ಅವ್ವೆ—ಲಕ್ಷ್ಮೀದೇವಿ.
ಕೆಂಬರಳು—ಮಾಣಿಕ್ಯ.
ದಟ್ಟಿ—ಸೊಂಟಕ್ಕೆ ಕಟ್ಟಿದ ಬಟ್ಟೆ
ಕಠಾರಿ—ಶೂಲದಂಥ ಕತ್ತಿ.
ತೊಟ್ಟಂಬು—ಹಿಡಿದ ಬಾಣ.
ತೊಡರು—ಬಿರುದಶೃಂಖಲೆ.
ತೋವಮರ—ಆಯುಧ ವಿಶೇಷ ; ಈಟಿಯಂತೆ ಇರುವುದು.
ತಡಿಕೆರವು—ದಪ್ಪ ಅಟ್ಟೆಯ ಎಕ್ಕಡ.

೧೧. ತಿರುವೇಂಗಳಸುಳಾದಿ

ಭೈರವಿ ಧ್ರುವ

ವರಮಣಿಗಳ ಕೆತ್ತಿಸಿದ ಮಕುಟದ ಚಾರು
ತಿರುಮಲಗಿರಿಯ ತಿಮ್ಮರಾಯನ ಕಂಡೆ ನಾ
ಪೆರೆಯನೊಸಲತಿಲಕದ ದಿವ್ಯಮಧುಕರ
ಕುರುಳುಭ್ರೂಲತೆಯ ಸಿರಿ ಕರ್ಣಯುಗಳ
ಅರಳಿದ ಅರುಣ ಸರಸಿಜದಳನಯನ
ವರದಂತಪಂಕ್ತಿಯೆಸೆವ ಅಧರ ಚುಬುಕಾಗ್ರ
ಪರಿಮಳಿಪ ಚಂಪಕನಾಸಕ ವದನದಿ
ಸ್ಫುರಿತ ಕಂಬುಕಂಠ ತ್ರಿರೇಖೆಯ ಚತುರ್ಭುಜ
ಅರಿ ಶಂಖ ಕಟಿಶೋಭ ಅಭಯಹಸ್ತನನು ಕಂಡೆ
ಸಿರಿವರಸುಳಿನಾಭಿ ಜಠರ ಲೋಕವ ಕಂಡೆ
ಎರಡೇಕಾವಳಿ ಶೋಭೆ ಕನಕಾಂಬರನ ಕಂಡೆ
ತರಣಿಯಾನಂತಕಿರಣ ಜಾನುಜಂಘೆಯ
ಕಿರುಗೆಜ್ಜೆ ಎರಡು ಪಾದಾಂಗುಳಿ ನಖದ
ವರವಜ್ರಾಂಕುಶ ಧ್ವಜರೇಖೆಯಿಂದೊಪ್ಪುವ
ಚರಣೇಂದೀವರಯುಗ್ಮಗಳ ಕಂಡೆನೊಲವಿಂದ
ಪರಮ ಪುರುಷ ಗುಣಪೂರ್ಣ ನೀಲಮೇಘಶ್ಯಾಮಂ
ಶರೀರ ಸಿರಿಪುರಂದರವಿಠಲರಾಯನ ಕಂಡೆ ೧

ಮಟ್ಟ

ಅಂದುಗೆ ಕಡೆಯ ಪೆಂಡೆಯ ಮೆರೆವ
ಚೆಂದದ ಕಾಂಚಿದಾಮನ ಕಂಡೆನು
ಕುಂದುಗಳಿಲ್ಲದ ಜಘನದಲಿ
ಹೊಂದಿದ ಚಿನ್ನದ ಸೂತ್ರನ ಕಂಡೆನು
ಅಂದದಲಿಪ್ಪ ಕೌಸ್ತುಭಹಾರ
ಗಂಧ ವೈಜಯಂತಿಯ ಕಂಡೆನು
ಇಂದ್ರುವಿನಂದದಿ ನಿರುಪಮ ಕುಂಡಲ
ಬಂಧುರ ಮಹಿಮ ಬಾಹುಕೀರ್ತಿಯಾ
ನಂದದಿ ನಿರುಪಮ ತಿರುವೇಂಗಳಪ್ಪ ಪು
ರಂದರ ವಿಠಲರಾಯನ ಕಂಡೆ ನಾ ೨

ತ್ರಿವಿಡೆ

ತಮನ ಕೊಂದವನೀತ ಮಂದರೋದ್ಧರನೀತ
ಭೂಮಿಯ ನೆಗಹಿ ತಂದವನೀತ
ಕುಮತಿ ರಕ್ಕಸನೊದ್ದು ಬಲಿಯ ಬೇಡಿದನೀತ
ಜಮದಗ್ನಿಭವ ರಘುನಾಥನೀತ
ಸುಮನಸೇಂದ್ರನ ತನುಸಂಭವ ಸಖನೀತ
ಚಮತ್ಕೃತಿಯಿಂಲಿ ಮೂರೂರು ಗೆಲಿದನೀತ
ಅಮಲಕಲ್ಕಿ ಮೊದಲಾದ ಅನಂತ ಅವತಾರನೀತ
ಕಮಲೇಶ ಪುರಂದರವಿಠಲನೀತ ೩

ಅಟ್ಟ

ಮಡುವಿನೊಳಗೆ ಗಜೇಂದ್ರನ ಕಾಯ್ದನೀತ
ಮಡದಿ ದ್ರೌಪದಿಯಭಿಮಾನರಕ್ಷಕನೀತ
ಮಿಡಕುವಜಾಮಿಳನ ಪಾಪ ಪರಿಹರಿಸಿದನೀತ
ಕಡು ಮೆಚ್ಚಿ ಧ್ರುವಗೆ ಉನ್ನತ ಪದವಿತ್ತನೀತ
ಕಡಲಶಯನನೀತ ಕರುಣಾಂಬುಧಿಯೀತ
ಸಡಗರದ ಪುರಂದರವಿಠಲನೀತ ೪

ಆದಿ

ಶರಣು ಸಕಲ ಜಗತ್ಪಾಲಕದೇವ
ಶರಣು ವಿರಿಂಚಿವಂದಿತ ಪಾದ
ಶರಣು ಮುನಿಹೃತ್ಕುಮುದಚಂದ್ರ
ಪರಿಪೂರ್ಣ ಗುಣನಿಧಿ ಪರಮಾನಂದ
ಪುರಂದರವಿಠಲ ಪರಿಪೂರ್ಣಕಾಮ ೫

ಜೊತೆ

ಧರೆಗಿದೆ ವೈಕುಂಠವೆಂದು ತೋರುವ ಹಸ್ತ
ತಿರುವೇಂಗಳಪ್ಪ ಶ್ರೀ ಪುರಂದರವಿಠಲ

ಪೆರೆಯ ನೊಸಲ ತಿಲಕ—ಅಗಲವಾದ ಹಣೆಯ ಮೇಲೆ ಇಟ್ಟ ತಿಲಕ.

ದಿವ್ಯ ಮಧುಕರ ಕುರುಳು—ದುಂಬಿಯಂತೆ ಕಪ್ಪಾದ ಕೂದಲ ಮುಂಗುರುಳುಗಳು.

ಚುಬುಕಾಗ್ರ—ಗದ್ದ.

ಪರಿಮಳಿಪ ಚಂಪಕನಾಸಿಕ—ಸುಗಂಧವಾದ ಸಂಪಿಗೆಯಂತಿರುವ ಮೂಗು.

ಕಂಬು ಕಂಠ—ಶಂಖದಂತಿರುವ ಕತ್ತು ; ಅದರಲ್ಲಿ ಕಾಣುವ ಮೂರು ಗೆರೆಗಳು.

ಕಟಿಶೋಭ—ನಡುವಿನ ಚೆಲುವು.

ಸುಳಿನಾಭಿ—ಹೊಕ್ಕುಳಲ್ಲಿ ಸುಳಿಯಂತೆ ಗೆರೆ.

ಏಕಾವಳಿ—ಒಂದು ಮುತ್ತಿನ ಸರ.

ತರಣಿಯಾನಂತಕಿರಣ—ಸೂರ್ಯನಂತೆ ಹೊಳೆಯುವ.

ವರವಜ್ರಾಂಕುಶ... —ಅಡಿಗಳಲ್ಲಿ ತೋರುವ ಮಹಾಪುರುಷ ಚಿಹ್ನೆಗಳು.

ಚರಣೇಂದೀವರಯುಗ್ಮ—ಅಡಿದಾವರೆಗಳು ಎರಡು.

ತಮನ... —ಇಲ್ಲಿ ದಶಾವತಾರದ ಚಿತ್ರಣವಿದೆ.

ಮೂರೂರು—ತ್ರಿಪುರ (ಬೌದ್ಧಾವತಾರ).

ಮಿಡುಕುವ—ದುಗುಡದಿಂದ ಕೂಡಿದ.



೧೨. ಶರಣುಸುಳಾದಿ

ಸೌರಾಷ್ಟ್ರ ಧ್ರುವ

ವಿಶ್ವನೆನಿಸಿ ವಿಶ್ವಜಾಗರವ ಪ್ರೇರಿಸುವೆ ದೇವ
ತೈಜಸನೆನಿಸಿ ಲೋಕವ ಸ್ವಾಪನವೈದಿಸುವೆ ದೇವ
ಪ್ರಾಜ್ಞನೆನಿಸಿ ಲೋಕವ ಸುಪ್ತಿಯು ಐದಿಸುವೆ ದೇವ
ತುರಿಯನೆನಿಸಿ ಚೇತನರಿಗೆ ಪರಗತಿಯು ಐದಿಸುವೆ ದೇವ
ಆತುಮ ಅಂತರಾತುಮನೆನಿಸಿ ನೀನೆ ಶುಭಸಾರವ ಭೋಗಿಪೆ ದೇವ
ಅನಿರುದ್ಧನೆನಿಸಿ ಲೋಕವ ಆದಿಯಲಿ ಸೃಜಿಸುವೆ ದೇವ
ಪ್ರದ್ಯುಮ್ನನೆನಿಸಿ ಲೋಕವ ಅನುವರಿತು ಪಾಲಿಸುವೆ ದೇವ
ಸಂಕರುಷಣನೆನಿಸಿ ಲೋಕವ ನಿನ್ನೊಳಗಿಡುವೆ ದೇವ
ವಾಸುದೇವನೆನಿಸಿ ಜೀವರಿಗೆ ಕೈವಲ್ಯವನೀವೆ ದೇವ
ಸರ್ವವ್ಯಾಪಾರಕೆ ಕಾರಣ ನೀನೆ
ಎಲೆ ಪುರಂದರವಿಠಲ ವಿಭುವೆ ದೇವ ೧

ಮಟ್ಟ

ಒಂದವತಾರದೊಳನಂತ ಮಹಿಮೆ
ಒಂದೊಂದವಯುವದೊಳನಂತ ವ್ಯಾಪಾರ
ಒಂದೊಂದು ರೋಮದೊಳು ಅಜಭವಾದಿ ಕಾರ್ಯ
ಒಂದೊಂದು ನಿನ್ನ ಮಹಿಮೆ ಪುರಂದರವಿಠಲ ವಿಭುವೆ ೨

ತ್ರಿವಿಡೆ

ಉಗುರು ಬೊಮ್ಮಾಂಡಖರ್ಪರವನೊಡೆದಿತು
ಅಂಗುಟವು ದುರ್ಯೋಧನನ ಕೆಡಹಿತು
ಬಾಹು ಕೇಶಿಯನೆತ್ತಿ ಕೆಡಹಿ ಬಿಸಾಟಿತು
ಪಾದ ಶಕಟನ್ನ ನುಗ್ಗೊತ್ತಿತು
ದೃಷ್ಟಿ ಕೌರವ ಸೇನೆ ನಸುಗುಂದಿಸಿತು
ಜಗಜಟ್ಟಿ ಪುರಂದರವಿಠಲಗಿದುರುಂಟೆ ೩

ಅಟ್ಟ

ರಂಗನ ಚರಣಗಳನ್ನು ಹಿಂಗದೆ ನೀ ನೆನೆ ಮನವೆ
ಗಂಗಾಜನಕನ ಶರಣರ ಸಂಗದಲಿರಿಸೆಲೆ ಮನವೆ
ಹಿಂಗು ಭವವ ನಂಬು ಪಾಂಡುರಂಗ ಪುರಂದರವಿಠಲನ್ನ ೪

ಆದಿ

ಸಂಸಾರ ಸಾಗರದ ತೆರೆಗಳ ಭರದೊಳು
ಮುಳುಗುತ ಏಳುತ ಮುನಿಯುತಲೈದೇನೊ ದೇವ
ಕಡೆ ಹಾಯಿಸೋ ಪುರಂದರವಿಠಲ ೫

ಜೊತೆ

ನಮೋ ನಮೋ ಶರಣು ಪುರಂದರವಿಠಲ
ತ್ವಮೇವ ಶರಣಂ ಪುರಂದರ ವಿಠಲ ೬

ವಿಶ್ವನೆನಿಸಿ—ವಿಶ್ವವೆಂಬುದು ವಿಷ್ಣುಸಹಸ್ರನಾಮದಲ್ಲಿ ಮೊದಲ ಹೆಸರು ; ವಿಶ್ವವೆಂದರೆ ಜಾಗ್ರತಾವಸ್ಥೆಗೆ ಪ್ರೇರಕತತ್ತ್ವವೂ ಹೌದು ; ತೈಜಸ ಸ್ವಪ್ನಕ್ಕೆ, ಪ್ರಾಜ್ಞ ಸುಷುಪ್ತಿಗೆ.

ಪರಗತಿ—ಮುಕ್ತಿ.

ಆತುಮ ಅಂತರಾತುಮ—ಆತ್ಮ, ಅಂತರಾತ್ಮ ('ಆತ್ಮಾಂತರಾತ್ಮೇತಿ ಹರಿಃ' ಎಂದು ಬೃಹತ್ಸಂಹಿತೆಯ ಒಕ್ಕಣೆ).

ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ—ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಕ್ಕೆ ಕಾರಣರಾದ ರೂಪಗಳು.

ಉಗುರು ಬ್ರಹ್ಮಾಂಡಖರ್ಪರವನೊಡೆಯಿತು—ತ್ರಿವಿಕ್ರಮಾವತಾರದಲ್ಲಿ.

ಅಂಗುಟ...—ಇವೆಲ್ಲ ಕೃಷ್ಣಾವತಾರದ ಸಂದರ್ಭಗಳು.

ಹಿಂಗು ಭವವ—ಸಂಸಾರದಲ್ಲಿ ಆಸಕ್ತಿಯನ್ನು ಬಿಡು.

ಮುನಿಯುತಲೈದೇನೋ—ಕಳವಳಪಡುತ್ತಿದ್ದೇನೆ.

೧೩. ಹರಿಕರ್ತೃತ್ವಸುಳಾದಿ

ಭೈರವಿ ಧ್ರುವ

ಹರಿ ನಡೆಯದಿರಲು ನಡೆಯಲಿಲ್ಲೀ ಜಗವು
ಹರಿ ನುಡಿಯದಿರಲು ನುಡಿಯಲಿಲ್ಲೀ ಜಗವು
ಹರಿ ನೋಡದಿರಲು ನೋಡಲಿಲ್ಲೀ ಜಗವು
ಹರಿ ಮಾಡದಿರಲು ಮಾಡಲಿಲ್ಲೀ ಜಗವು
ಹರಿ ಉಸರಿಕ್ಕದಿರೆ ಉಸರಿಕ್ಕದೀ ಜಗವು
ಹರಿ ಎವೆಯಿಕ್ಕದಿರೆ ಎವೆಯಿಕ್ಕದೀ ಜಗವು
ಹರಿ ಸರ್ವಚೇಷ್ಟಕ ಹರಿ ಪುರಂದರವಿಠಲ
ಹರಿ ಆಡಿಸಿದಂತೆ ಆಡುತಿಪ್ಪುದೀ ಜಗವು ೧

ಮಟ್ಟ

ಸಿರಿವತ್ಸ ಸಿರಿಧರ ಸುಮನಸ ನಿ
ಕರಮಕುಟಮಂಡಿತಚರಣಾರವಿಂದ
ಗಿರಿಗೋವರ್ಧನಧರ ಪುರುಷೋತ್ತಮ ವಾಮನ ವಾಸುದೇವ
ಹರಿ ದೇವೋತ್ತಮ ಭೂವಲ್ಲಭ ಪರಮೇಶ್ವರ
ಪುರಂದರವಿಠಲರಾಯ ಪುಂಡರೀಕದಳನಯನ ಪುರುಷೋತ್ತಮ ೨

ತ್ರಿವಿಡೆ

ಮುಂದೆ ನೃಕಂಠೀರವ ಕಂಬಿಕಾರನಾಗಿ
ನಂದಗೋಪನಂದನರು ಹಿಂದಿನ ಕಾವಲು
ಅಂಜದಿರೆಲೆ ಜೀವ ತಂದೆತಾಯಿ ಶಿಶುವಿನ ಪೊರೆ
ವಂದದಿ ರಾಮ ಲಕ್ಷ್ಮಣರು ಧನುರ್ಧರರಾಗಿ
ಚಂದಲೈದಾರೆ ಅಂಜದಿರೆಲೊ ಜೀವ ಅನಿಮಿತ್ತ
ಬಂಧು ತನುಸಂಬಂಧಿಯಂತಲ್ಲ ಅನವರತ ಪು
ರಂದರ ವಿಠಲನ ಕಾವಲು ಘನವೋ ೩

ಝಂಪೆ

ನೀನು ಮಹಾಮಹಿಮನೆಂದರಿತು ಮ
ತ್ತೇನ ಶಂಕೆ ಇಲ್ಲದೆ ನಡೆನುಡಿಗೊಮ್ಮೆ
ನಾ ನಿರಂತರ ನೆನೆವೆನು ಅಡಿಗಡಿಗೆ
ನಾ ನಿನ್ನವನಯ್ಯ ಆನು ನುಡಿಗೊಮ್ಮೆ ಕರೆವೆ
ಈ ಯಪರಾಧಕ್ಕೆ ತೊಂಡನೆಂದೆನಿಸು ಮನೆ ಮುಂದೆ ಬಿಡದೆ
ಶ್ರೀನಾಥ ಪುರಂದರವಿಠಲ ನಿನ್ನ
ತೊಂಡನಾಗಿ ನಾನಿರುತಿಪ್ಪೆ ನಿತ್ಯ ೪

ರೂಪಕ

ನಿನ್ನಂಥವನು ನಾನಾಗಲಿ ಎಂದು ಎಂದೂ ಕಾಮಿಸೆನೆ
ನಿನ್ನಂಥವರಿಲ್ಲವಾಗಿ ನೀನೇ ಅವತರಿಸಿ
ಮುನ್ನಿನ ಮುನಿಗಳಿಗೆ ಮನುಗಳಿಗೆ ಮತ್ತವರುಗಳಿಗೆ
ನಿನ್ನಂಥವರಿಲ್ಲವಾಗೆ ನೀನೇ ಸರಿ ಪುರಂದರವಿಠಲ ೫

ಅಟ್ಟ

ಆಂಜನೇಯನ ಕೂಡಿಕೊಂಡು ಆಗ
ಭುಂಜಿಸಬೇಕೆಂದು ರಾಮ ಕರೆಯಲಾಗಿ
ಎಂಜಲ ಹರಿವಾಣವನೆತ್ತಿಕೊಂಡು ಬಂದು
ಭುಂಜಿಸಿ ಉಣ ಕಲಿಸಿದ ಹನುಮಂತ
ಕಂಜಾಕ್ಷ ಪುರಂದರವಿಠಲನ ಎಂಜಲ
ಎಂಜಲನಿತ್ತ ಸಕಲ ದೇವತೆಗಳಿಗೆ ೬

ಏಕ

ಅಂದು ಇಂದು ಹರಿ ಹರಿ
ಎಂದೆಂದು ನೀನೆ ಗತಿ ಮತಿ ಇ
ನ್ನಿಂದಿರೇಶ ಹರಿ ನಂದನಂದನನೆ
ಒಂದೆ ಮಾತು ಪುರಂದರವಿಠಲ ತಪ್ಪದು ೭

ಜೊತೆ

ನಿತ್ಯಾನಿತ್ಯ ವಸ್ತುಗಳಲ್ಲಿ
ನಿತ್ಯತೃಪ್ತ ಪುರಂದರವಿಠಲ ೮

ಹರಿ ನಡೆಯದಿರಲು...—'ತೇನ ವಿನಾ ತೃಣಮಪಿ ನ ಚಲತಿ' ಎನ್ನುವ ಭಾವ.

ಸಿರಿವತ್ಸ ಸಿರಿಧರ—ಶ್ರೀವತ್ಸ ಶ್ರೀಧರ.

ಸುಮನಸನಿಕರ...—ದೇವತೆಗಳ ಗಡಣವು ತಮ್ಮ ತಲೆಯ ಮೇಲಣ ಕಿರೀಟಗಳಿಂದ ಹರಿಯ ಅಡಿದಾವರೆಗಳನ್ನು ಮುಟ್ಟುತ್ತಿರುವುದು.

ನೃಕಂಠೀರವ ಕಂಬಿಕಾರನಾಗಿ—ನರಸಿಂಹನು ಕಟ್ಟಿಗೆಯುವನಾಗಿ ; ಮುಂಗಾವಲಿಗೆಂದು ಪರಿಚಾರಕನೊಬ್ಬ ಬೆಳ್ಳಿಯ ಕೋಲನ್ನು ಹಿಡಿದು ನಡೆಯುವುದನ್ನು ಉತ್ಸವಗಳಲ್ಲಿ ಕಾಣಬಹುದು.

ನಂದಗೋಪನಂದನರು—ಬಲರಾಮ, ಕೃಷ್ಣ.

ಈ ಕಲ್ಪನೆಗೆ ಹಿನ್ನೆಲೆಯ ಶ್ಲೋಕ—

'ಅಗ್ರತೋ ನಾರಸಿಂಹಶ್ಚ ಪೃಷ್ಠತೋ ಗೋಪನಂದನಃ
ಉಭಯಃ ಪಾರ್ಶ್ವಯೋರಾಸ್ತಾಂ ಸಶರಾ ರಾಮಲಕ್ಷ್ಮಣೌ'

ಅನಿಮಿತ್ತ ಬಂಧು—ಕರೆಯಿಸಿಕೊಳ್ಳದೆ, ಪ್ರತಿಫಲಾಪೇಕ್ಷೆಯಿಲ್ಲದೆ ಸಮಯಕ್ಕೆ ಒದಗುವವನು.

ತೊಂಡ—ಭಕ್ತ, ಸೇವಕ.

ನಿನ್ನಂಥವನು...—ಜೀವವೇ ಪರಮಾತ್ಮನೆಂಬ ಭ್ರಮೆಯಾಗಲಿ, ಜೀವವು ಸ್ವತಂತ್ರ ಕರ್ತೃವೆಂಬ ಭ್ರಮೆಯಾಗಲಿ ಇಲ್ಲದವನು.

ಆಂಜನೇಯನ...—ವಿವರಣೆ ಆಗಲೇ ಬಂದಿದೆ.

೧೪. ನಿಂದಾಸ್ತುತಿಸುಳಾದಿ

ಪಂತುವರಾಳಿ ಧ್ರುವ

ಗೋಪಿದೇವಿಯಂತೆ ಒರಳಿಗೆ ಕಟ್ಟದೆ ಬರಿದೆ ದೈನ್ಯವ ಪಡುವೆ ನಾನು
ಭೃಗುಮುನಿಯಂತೆ ನಿನ್ನೆದೆ ಮೇಲೊದೆಯದೆ ಬರಿದೆ ದೈನ್ಯವ ಪಡುವೆ ನಾನು
ಭೀಷ್ಮನಂತೆ ನಿನ್ನ ಹಣೆಯ ಒಡೆಯದಲೆ ಬರಿದೆ ದೈನ್ಯವ ಪಡುವೆ ನಾನು
ಹಿಡಿಹಿಡಿ ಎಲೊ ದೈವ ಒರಳತೋರೆಂಬಂತೆ ಬರಿದೆ ಎನ್ನನು ಬಳಲಿಸಿ ಕಾಡುವೆ
ಕೊಂಕಣಿಗರ ಎಮ್ಮೆಗೆ ಕೊಡತಿಯೆ ಮದ್ದೆಂಬಂತೆ
ಅವರೇ ನಿನಗೆ ಮುದ್ದು ಪುರಂದರವಿಠಲ ೧

ಮಟ್ಟ

ಕಾಳಿಂಗನಂತೆ ನಿನ್ನ ಕಟ್ಟಿ ಬಿಗಿಯಲು ಬೇಕು
ಬಲಿಯಂತೆ ನಿನ್ನನ್ನು ಬಾಗಿಲ ಕಾಯಿಸಬೇಕು
ಕುಬುಜೆಯಂತೆ ನಿನ್ನ ರಟ್ಟು ಭೂತವನೆ ಮಾಡಿ
ಮುಂಜೆರಗೆನೆ ಪಿಡಿದು ಗುಂಜಿ ಹಾಕಲು ಬೇಕು
ನಾವು ಪುಟ್ಟಿದೂರೊಳು ತಿರುದುಂಬುವಂತೆ ಮಾಡಿದೆ
ಪುರಂದರವಿಠಲ ನಿನಗಂಜದಿರಬೇಕು ೨

ತ್ರಿವಿಡೆ

ಪಾಂಡುತನಯನಂತೆ ಕರೆಕರೆದು ನಿನ್ನ
ಅಟ್ಟಿಸಾಲಕ್ಕೆ ಮಣೆಗಳ ಹಾಕಿಸಬೇಕು
ಅರ್ಜುನನಂತೆ ನಿನ್ನ ಬಂಡಿಬೋವನ ಮಾಡಿ
ವಾಜಿಯ ಹಗ್ಗಗಳ ಪಿಡಿಸಲಿಬೇಕು
ಅಂಬು ತಾ ಬಿಲ್ಲು ತಾ ಎನ್ನಲುಬೇಕು
ನಾ ನಿನ್ನ ಅನುದಿನ ಪೂಜಿಸಿ ಪೂಜಿಸಿ
ಮೋಸ ಹೋದೆನಯ್ಯ ಪುರಂದರವಿಠಲ ೩

ಅಟ್ಟ

ಇಂದ್ರನಂತೆ ಮಳೆಗರೆದು ಗೋಕುಲದಲ್ಲಿ
ನಿಂದಿರಿಸಲಿಬೇಕು ಏಳು ದಿನ
ಕುಂದದೆ ಬೆಟ್ಟವ ಪೊರಿಸಿ ದಣಿಸಲುಬೇಕು
ವೃಂದಾರಕರಂತೆ ಅಂಜದಲೇ
ಸಂದೇಹ ಮಾಡಬಾರದೆಲೊ ಈ ಮಾತಿಗೆ
ಸಿಂಧುಶಯನ ವಾಸ ಪುರಂದರವಿಠ್ಠಲ ೪

ಏಕ

ಬಲಿಯಂತೆ ಮುಕುಟವ ಕಿತ್ತುಕೊಂಡೋಡಬೇಕು
ವಾಲಿಯಂತೆ ನಿನ್ನ ಮೂದಲಿಸಬೇಕು
ಸುಗ್ರೀವನಂತೆ ನಿನ್ನ ಲೆಕ್ಕಿಸದಿರಬೇಕು
ಅಟ್ಟು ಇಟ್ಟು ಸುಟ್ಟು ಕೊಟ್ಟು ಮುಟ್ಟಿ
ಮೋಸ ಹೋದೆನಯ್ಯ ಪುರಂದರವಿಠಲ ೫

ಜೊತೆ

ಅಂಜುವರಿಗೆ ಅರಳಿಮರನೆ ರಕ್ಕಸನಂತೆ
ಅಂಜೆನು ನಿನಗಿನ್ನು ಪುರಂದರವಿಠ್ಠಲ

[ಬಹುಮಟ್ಟಿಗೆ ಕೃಷ್ಣಾವತಾರದ ಸಂದರ್ಭಗಳನ್ನು ಉಲ್ಲೇಖಿಸಿ ಗೋಪಿ, ಭೃಗು, ಭೀಷ್ಮ, ಕಾಳಿಂಗ, ಬಲಿ, ಕುಬ್ಜೆ, ಧರ್ಮರಾಜ, ಅರ್ಜುನ, ಇಂದ್ರ ಮೊದಲಾದವರು ಕೃಷ್ಣನನ್ನು ಕಾಡಿದುದನ್ನು ನೆನಪಿಗೆ ತಂದು, ಅವರಂತೆ ನಾನೇನು ನಿನ್ನನ್ನು ತೊಂದರೆ ಗೀಡುಮಾಡದೆ ಭಕ್ತಿಮಾಡಿದುದಕ್ಕೆ ನನ್ನ ಕೈಬಿಡುವುದು ತರವೇ ಎಂದು ಹೇಳುತ್ತಾರೆ. ಐದನೆಯ ನುಡಿಯಲ್ಲಿ ರಾಮಾವತಾರದ ಸಂದರ್ಭದಲ್ಲಿ ವಾಲಿ, ಸುಗ್ರೀವರ ಉಲ್ಲೇಖ ಎದೆ. ಕೃಷ್ಣಾವತಾರದ ಪ್ರಸಂಗಗಳ ವಿವರಣೆ ಆಗಲೆ ಬಂದಿದೆ. ರಾಮನು ಮರೆಯಲ್ಲಿ ನಿಂತು ವಾಲಿಯನ್ನು ಕೊಂದಾಗ ವಾಲಿ ಅವನನ್ನು ಅನ್ಯಾಯಕಾರಿಯೆಂದು ನಿಂದಿಸುತ್ತಾನೆ. ಸುಗ್ರೀವನು ಕಿಷ್ಕಿಂಧೆಯ ಒಡೆಯನಾದಮೇಲೆ, ರಾಮನ ಅಳಲನ್ನು ಲೆಕ್ಕಿಸದೆ ಹಲವು ತಿಂಗಳು ಸುಖಲೋಲಾಪ್ತಿಯಲ್ಲಿ ಕಳೆಯುತ್ತಾನೆ.]

ಬಲಿಯಂತೆ ಮುಕುಟವ...—ಸಂದರ್ಭ ತಿಳಿಯುವುದಿಲ್ಲ.

ಅಟ್ಟು ಇಟ್ಟು ಸುಟ್ಟು ಕೊಟ್ಟು ಮುಟ್ಟಿ—ಕ್ರಮವಾಗಿ ಪಾಕಮಾಡಿ, ಎಡೆಯಿಟ್ಟು, ವೈಶ್ವದೇವಬಲಿಹರಣ ಮಾಡಿ, ಪ್ರಸಾದವನ್ನು ಸಂವಿಭಾಗ ಮಾಡಿ, ಪಾದ ಸ್ಪರ್ಶ ಮಾಡಿ (ಪೂಜೆಯ ವಿವರಗಳು).

ಅರಳಿ ಮರನೆ ರಕ್ಕಸ—ಬ್ರಹ್ಮರಾಕ್ಷಸ.

೧೫. ಜೀವಪಾರತಂತ್ರ್ಯಸುಳಾದಿ

ಕಾಂಬೋದಿ ಧ್ರುವ

ನಿನ್ನಾಧೀನ ಎನ್ನ ತನು ಮನ
ನಿನ್ನಾಧೀನ ಎನ್ನ ಧನ ಧಾನ್ಯ
ಎನ್ನ ವಸ್ತು ವಾಹನ ನಿನ್ನಾಧೀನ
ಎನ್ನ ಪುತ್ರ ಮಿತ್ರ ಕಳತ್ರರು ನಿನ್ನಾಧೀನ
ಎನ್ನ ಅನ್ನೋದಕ ನಿನ್ನಾಧೀನ
ಎನ್ನಾಧೀನ ಆವುದುಂಟು ನೀನೆ ನೋಡು
ಎನ್ನ ಇಚ್ಛೆಯೇ ಪುರಂದರವಿಠಲರೇಯಾ ೧

ಮಟ್ಟ

"ತೃಣಮಪಿ ನ ಚಲತಿ" ಎಂದು ಪ್ರಮಾಣ
"ಅಣೋರಣೀಯಾನ್ ಮಹತೋ ಮಹೀಯಾನ್"
ಮಣಿಗಣಕಾಧಾರ ಗುಣಿ ಇದ್ದಂತೆ
ಗುಣಗಣಭರಿತ ಪುರಂದರವಿಠಲ
ಅಣೋರಣೀಯಾನ್ ಜಗಕೆ ನಿನ್ನಾಧಾರ ೨

ರೂಪಕ

ನಿನ್ನವನೆಂದೆನ್ನ ಕೈಯ್ಯ ಪಿಡಿಯಲು
ನಿನ್ನ ಸೇವೆಯ ಸಾಧನಕೆ ಯತ್ನಮಾಳ್ಪೆ
ಎನ್ನ ಯತ್ನಕ್ಕೆ ನಿನ್ನ ಸಹಾಯವು
ನಿನ್ನ ಯತ್ನವು ನಿನ್ನ ಸ್ವಾಧೀನ
ನಿನ್ನ ಯತ್ನಕ್ಕೆ ನಿನ್ನ ಸಹಾಯವು
ನಿನ್ನಾಧೀನ ಸರ್ವವು ಪುರಂದರವಿಠಲ ೩

ಝಂಪೆ

ಸ್ಮೃತಿಯೆ ಪಥಗತಿಯೆ ನಿನ್ನ ತಿಳಿಸುವ
ಪಥದ ಗತಿಯೆ ಮತಿಹೀನ ಕರ್ಮಠ
ಜನರು ಬಲ್ಲರೆ ಜಗದ ಪತಿಯೇ ನಿನ್ನ
ಸ್ಥಿತಿಯ ಜಗದ ಉತ್ಪತ್ತಿ ಸ್ಥಿತಿಗತಿಗೆ
ನೀನೆ ಕಾರಣನೆಂದು
ಮತಿವಂತರೆಲ್ಲ ಬಲ್ಲರಯ್ಯ ಪುರಂದರವಿಠಲ ೪

ತ್ರಿವಿಡೆ

ಶ್ರುತಿ ಉಪನಿಷತ್ತುಗಳಲ್ಲಿ
ಸ್ಮೃತಿ ಪುರಾಣಗಳಲ್ಲಿ
ಇತಿಹಾಸ ಪಂಚರಾತ್ರಾಗಮಗಳಲ್ಲಿ
ಪ್ರತಿಪಾದ್ಯನು ನೀನೆ ಅತಿಶಯರಿಗತಿಶಯು
ಚತುರ್ಮುಖ ಪಂಚಮುಖ ದೇ
ವತೆಗಳಿಗೆಲ್ಲ ಗತಿ ನೀನೆ ಪುರಂದರವಿಠಲ ದೇವ ೫

ಅಟ್ಟ

ವೇದಗಳೆಂಬೊ ದಾವಣಿಗಳಲ್ಲಿ
ನಾಮಗಳೆಂಬೊ ಮೂಗುನೇಣುಗಳಿಂದ
ಜೀವರುಗಳೆಂಬ ಎತ್ತುಗಳನೆ ಕಟ್ಟಿ
ಭಕುತಿರಸವೆಂಬೊ ಮುಟ್ಟುಗಳನೆ ಹಾಕಿ
ಕರ್ಮವೆಂಬ ಭಾರವನು ಹೇರಿ
ಆಡುವನೊಬ್ಬ ಪುರಂದರವಿಠಲನೆಂಬೊ
ದೊಡ್ಡ ಬೇಹಾರಿಗ ಕಾಣಿಕೋ ೬

ಆದಿ

ಸಚರಾಚರ ಪ್ರೇರಿಸುವವರು ಆರಯ್ಯ
ಸ್ವಾತಂತ್ರರಾರಯ್ಯ ಯಂತ್ರವಾಹಕನಾರೋ
ಪುರಂದರವಿಠಲರೇಯ ನೀನಲ್ಲದೆ ಇನ್ನಾರಯ್ಯ ೭

ಜೊತೆ

ನಿನ್ನನೆ ನಿನ್ನನೆ ನಿನ್ನನೆ ಮೊರೆಹೊಕ್ಕೆ
ಮನ್ನಿಸಿ ಕಾಯಯ್ಯ ಪುರಂದರವಿಠಲಯ್ಯ ೮

'ತೃಣಮಪಿ...'—'ತೇನ ವಿನಾ ತೃಣಮಪಿ ನ ಚಲತಿ', ಅವನ ಇಚ್ಛೆಯಿಲ್ಲದೆ ಶಕ್ತಿಯಿಲ್ಲದೆ ಒಂದು ಹುಲ್ಲುಕಡ್ಡಿಯೂ ಅಲುಗಾಡದು.

'ಅಣೋರಣೀಯಾನ್...'—'ಅಣೋರಣೀಯಾನ್ ಮಹತೋ ಮಹೀಯಾನ್, ಆತ್ಮಾಸ್ಯ ಜಂತೋರ್ನಿಹಿತೋ ಗುಹಾಯಾಂ'; ಸಣ್ಣದಕ್ಕಿಂತ ಸಣ್ಣವನು, ದೊಡ್ಡದಕ್ಕಿಂತ ದೊಡ್ಡವನು ; ಅಷ್ಟು ವ್ಯಾಪಕನಾದರೂ ಎಲ್ಲರ ಹೃದಯ ಗುಹೆಯಲ್ಲಿ ಅಡಗಿದ್ದಾನೆ.

'ಮಣಿಗಣಕಾಧಾರ...'—'ಸೂತ್ರೇ ಮಣಿಗಣಾ ಇವ' : ಮಾಲೆಯ ಮಣಿಗಳೆಲ್ಲ ದಾರದ ಆಧಾರದ ಮೇಲೆ ನಿಂತಿರುವಂತೆ ಎಲ್ಲವೂ ಅವನನ್ನು ಆಶ್ರಯಿಸಿವೆ.

ಗುಣಿ—ಹಗ್ಗ, ದಾರ.

ಸ್ಮೃತಿಯೆ ಪಥಗತಿಯೆ—ನಾಮಸ್ಮರಣೆಯೇ ಮೋಕ್ಷಕ್ಕೆ ದಾರಿ.

ದಾವಣಿ—ಡಾವಣಿ, ಹಸು ಕಟ್ಟುವ ಹಗ್ಗ ('ದಾಮನಿ'ಯ ತದ್ಭವ).

ಮೂಗುನೇಣು—ಮೂಗುದಾರ.

ಮುಟ್ಟು—ಸಾಧನೆ, ಉಪಕರಣ.

ಬೇಹಾರಿಗ—ವ್ಯಾಪಾರಿ.

ಸಚರಾಚರ—ಸ್ಥಾವರ ಜಂಗಮವಾದ ಪ್ರಪಂಚ.

ಯಂತ್ರವಾಹಕ—'ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ' (ಭಗವದ್ಗೀತೆಯ ಒಕ್ಕಣೆ).



೧೬. ಭಕ್ತಪಾಲಕಸುಳಾದಿ

ಶಂಕರಾಭರಣ ಧ್ರುವ

ತಾಯಿ ಲಕುಮಿ ತಂದೆ ವಿಠಲ
ದಾಯಿಗ ಚತುರಾನನ
ವಾಯುತನುಜ ರಕ್ಷಕನು
ಸಹಾಯಕರು ದೇವತೆಗಳು
ಮಾಯೆ ಅವರ ಮನೆತೊತ್ತು ರಘು
ರಾಯನ ಡಿಂಗರಿಗೆ ಸರಿಯಾರಯ್ಯ
ಚತುರ್ದಶ ಭುವನಂಗಳಲ್ಲಿ
ಪ್ರತಿ ಪಕ್ಷಿಗಳಿಲ್ಲ ಇವರಿಂಗೆ
ಪುರಂದರವಿಠಲರೇಯನ
ಶರಣರ ಭಾಗ್ಯವಿನ್ನೆಂತೊ ೧

ಮಟ್ಟ

ಒಡಲೊಳು ಪೋಗುವನ್ನಕ
ಎರೆವರೋ ನಾಮಸುಧೆಯ
ಕೊಡುವರು ಮುಕುತಿಯ
ತಡೆವರು ಭವಸಿಂಧುವ
ಒಡೆಯ ಮುಕುಂದನ
ಒಡನಾಡಿಸಿ ತೋರ್ಪರು
ಮೃಡಸಖ ಪುರಂದರವಿಠಲನ ನಿಜದಾಸರು
ತಡೆವರು ಭವಸಿಂಧುವ ೨

ತ್ರಿವಿಡೆ

ನಿನ್ನನೆ ಪಾಡುವೆ ನಿನ್ನನೆ ಪೊಗಳುವೆ
ನಿನ್ನನೆ ಬೇಡಿ ಬೇಸರಿಸುವೆ ರಂಗಯ್ಯ
ನಿನ್ನ ಕಾಲ ಪಿಡಿವೆ ನಿನ್ನನೆ ಹಾರೈಸುವೆ
ನಿನ್ನ ತಂಬುಲಕೆ ಕೈಯಾನುವೆ ರಂಗಯ್ಯ
ನಿನ್ನಂತೆ ಸಾಕಬಲ್ಲ ಸ್ವಾಮಿ ಮತ್ತುಂಟೆ
ನಿನ್ನಾಣೆ ಪುರಂದರವಿಠಲನೆ ದಮ್ಮಯ್ಯ ೩

ಅಟ್ಟ

ಅಚ್ಯುತನ ಭಕುತಿಗೆ ಆವನ ಚಿತ್ತ
ಮೆಚ್ಚದೋ ಅವ ಪಾಪಿ ಅವನೊಳನಾಡೆ
ನೋಡೆನು ನುಡಿಸೆ ಅವ ಮನುಜವೇಷದ
ರಕ್ಕಸನವನೋಳನಾಡೆ ನೋಡೆ ನುಡಿಸೆ
ಸಚ್ಚಿದಾನಂದ ಪುರಂದರವಿಠಲನ
ತೊತ್ತಿನ ತೊತ್ತಿನ ಮಗನಲ್ಲದವ
ರೊಳಗಾಡೆ ನೋಡೆ ನುಡಿಸೆ ೪

ಆದಿ

ನಿನ್ನಾಳೆಂದೆ ಹರಿ ಹರಿ
ಎನ್ನನ್ನ ಆಳೆಂದೆ
ಇನ್ನೇನಿನ್ನೇನಿನ್ನೇನು
ಎನ್ನ ಸಾಕದಿರಲು ನೀ
ಎನ್ನ ಸಲಹದಿರಲು
ನಿನ್ನನೇ ಲೋಕ
ನಗುವರೊ ಹರಿ ನಗುವರೋ
ಎನ್ನಾಳದೆ ನೀನಾದ್ಯ
ಘನ್ನ ಘನ್ನ ಮಹಿಮ
ಸಿರಿ ಪುರಂದರವಿಠಲ
ಇನ್ನು ಸಾಕದಿಹರೆ ೫

ಜೊತೆ

ಲಕುಮಿಯ ರಮಣನೆ ಭಕುತರ ಪಾಲನೆ
ರಕ್ಕಸಾಂತಕ ಸಿರಿ ಮುಕುತಿದಾಯಕ
ಶ್ರೀ ಪುರಂದರವಿಠಲನೇ

ಲಕುಮಿ—ಲಕ್ಷ್ಮಿ.
ದಾಯಿಗ—ದಾಯಕ ; ಹಕ್ಕುಳ್ಳ ನಂಟ.
ಚತುರಾನನ—ಬ್ರಹ್ಮ.
ವಾಯುತನುಜ—ಹನುಮಂತ ; ಮುಖ್ಯಪ್ರಾಣ.
ಮಾಯೆ—ಹರಿಯ ಸಾಕಲ್ಯಜ್ಞಾನವಿಲ್ಲದಿರುವ ಸ್ಥಿತಿ.
ಡಿಂಗರು—ಸೇವಕರು.
ಲೋಕ—ಲೋಕದ ಜನರು.

೧೭. ಮಹಿಮಾಸುಳಾದಿ

ಧ್ರುವ

ಅಕಿಂಚನಗನರ್ಘ್ಯವಾದಂತೆ ಅರತಗರತವಾದಂತೆ
ಅಂಧಕಂಗೆ ಅಕ್ಷಿಯಾದಂತೆ ಅರವಿಂದಗಾದಿತ್ಯವಾದಂತೆ
ಅಳಿಗೆ ಅಮರಾಂಘ್ರಿಪವಾದಂತೆ
ಆ ಪುಣ್ಯಕ್ಕೆ ಅಮೃತವಾದಂತೆ
ಅಯ್ಯಾ ಅಕಿಂಚನಗೆ ಅಪಾರ ಸಂಸಾರಭಯಭೇದ
ಅನೇಕ ಅಧಿಪತಿಯಾದ ಪುರಂದರವಿಠ್ಠಲರೇಯ
ಎನಗೆ ನಿನ್ನ ಸಿರಿನಾಮ ದೊರಕಿತು ದೇವ ೧

ಅಟ್ಟ

ಅಕಳಂಕಚರಿತ ನಮೋ ಸಕಲಸ್ವರೂಪ ನಮೋ ನಮೋ
ಭಕುತವತ್ಸಲ ನಮೋ ನಮೋ
ಬಕವಿದಾರಣ ನಮೋ ನಮೋ
ಅಕುತೋಭಯ ನಮೋ ನಮೋ
ರುಕುಮಿಣಿಪತಿ ಪುರಂದರವಿಠಲ ನಮೋ ನಮೋ ೨

ಏಕ

ಹೃದಯಕಮಲದಲ್ಲಿ ನಾ ನಿನ್ನ ಪಾದ
ಪದುಮವ ನೆನೆವಂತೆ ಮಾಡು
ಯದುರಾಜಾಧಿರಾಜ ಸುದರುಶನಧರ
ಇದನೆ ಕೃಪೆ ಮಾಡೆನಗೆ
ಮದನಪಿತ ಪುರಂದರವಿಠಲರೇಯಾ ೩

ಆದಿ

ಮನೆಯಾಶೆ ಮನ್ನಣೆ ಕೆಡಿಸುತಲಿದೆ
ಎನ್ನ ಮನ ಮನೆವಾರುತೆಯಾಶೆ ಬಲು ಬಾಧಿಸುತಿದೆ
ಧನದಾಶೆ ದೈನ್ಯ ಬಡಿಸುತಿದೆ
ಇನಿತಾಶೆಯ ಬಿಡಿಸು ಬುದ್ಧಿಯಲಿ ನಿನ್ನ
ನೆನೆವಂತೆ ಮಾಡೆನಗೆ ಪುರಂದರವಿಠಲ ೪

ಅಟ್ಟ

ಮೊರೆಹೊಕ್ಕವರ ಕಾವ ಮಾರಾಂತಕಗೊಲಿವ
ದೇವ ನಿನಗಲ್ಲದುಂಟೆ ಸಚರಾಚರದೊಳು
ನಾ ನಿನ್ನ ಮೊರೆಹೊಕ್ಕೆನಯ್ಯಾ
ನೀ ಎನ್ನ ಕಾದುಕೋ ಪುರಂದರವಿಠಲ ೫

ಜೊತೆ

ನಿತ್ಯಾನಿತ್ಯ ವಸ್ತುಗಳೊಳಗೆಲ್ಲ
ನಿತ್ಯ ಸುನಿತ್ಯ ಪುರಂದರವಿಠಲ

ಅಕಿಂಚನಗೆ—ಏನೂ ಇಲ್ಲದ ಬಡವನಿಗೆ.

ಅನರ್ಘ್ಯ—ಬಹು ಬೆಲೆಬಾಳುವ ಒಡವೆ.

ಅರತಗೆ ಅರತವಾದಂತೆ—ಅರ್ಥಿಗೆ (ಬೇಡುವವನಿಗೆ) ಅರ್ಥ (ಬೇಡಿದ್ದು)ದೊರಕಿದಂತೆ.

ಅಂಧಕಂಗೆ... —ಕುರುಡನಿಗೆ ಕಣ್ಣು ಬಂದಂತೆ.

ಅರವಿಂದಗೆ... —ತಾವರೆ ಹೂವಿಗೆ ಸೂರ್ಯನಿದ್ದಂತೆ.

ಅಳಿಗೆ ಅಮರಾಂಘ್ರಿಪವಾದಂತೆ—ದುಂಬಿಗೆ ದೇವಲೋಕದ ಮರ (ಪಾರಿಜಾತ) ವಿದ್ದಂತೆ.

ಅಪಾರಸಂಸಾರಭಯಭೇದ — ಮೇರೆಯಿಲ್ಲದ ಸಂಸಾರದ ಭಯವು ನೀಗಿ ಹೋಗುವಂತೆ.

ಬಕವಿದಾರಣ—ಕೃಷ್ಣಾವತಾರದಲ್ಲಿ ಬಕಾಸುರನನ್ನು ನಿಗ್ರಹಿಸಿದವನು.

ಅಕುತೋಭಯ—ಯಾವ ದಿಕ್ಕಿನಿಂದಲೂ, ಯಾವ ಕಾರಣದಿಂದಲೂ ಭಯವಿಲ್ಲದವನು.

ಯದುರಾಜಾಧಿರಾಜ—ಯದುವಂಶದ ಅರಸ, ಕೃಷ್ಣ,

ಇನಿತಾಶೆಯ—ಇಷ್ಟು ಆಶೆಯನ್ನು.

ಮಾರಾಂತಕಗೊಲಿವ—ಶಿವನಿಗೆ ಒಲಿದವನು.

ನಿನಗಲ್ಲದೆ—ನಿನ್ನ ಅಧೀನದಲ್ಲಿರದೆ.

೧೮. ಉಮ್ಮತ್ತೂರುಸುಳಾದಿ

ಭೈರವಿ ಧ್ರುವ

ಅಚ್ಯುತ ಸುಳಿದ ಎನ್ನ ಕಣ್ಣಮುಂದೆ ಯವ್ವಾ
ಕಸ್ತೂರಿಮೃಗದಂತೆ ಘಮಘಮಿಸುತ್ತ
ಅನಂತ ಸುಳಿದ ಎನ್ನ ಕಣ್ಣಮುಂದೆ ಯವ್ವಾ
ಮೇರೆದಪ್ಪುತ ಏನೆಂಬೆ ಎನ್ನಪ್ಪುತ
ಗೋವಿಂದ ಸುಳಿದ ಎನ್ನ ಕಣ್ಣಮುಂದೆ ಯವ್ವಾ
ನಗುತ ನೋಡುತ ನುಡಿಯುತ ಎನ್ನಪ್ಪುತ
ಮಾಧವ ಸುಳಿದ ಎನ್ನ ಕಣ್ಣಮುಂದೆ ಯವ್ವಾ
ಮನ್ಮಥಕೋಟಿಲಾವಣ್ಯನಂತೆ ಮೆರೆವ
ಗೋಪಾಲ ಸುಳಿದ ಎನ್ನ ಕಣ್ಣಮುಂದೆ ಯವ್ವಾ
ದಿನಕರಕೋಟಿತೇಜನಂತೆ ಹೊಳೆಯುತ
ಎನ್ನ ಮನದುತ್ಸಾಹ ಸೂರೆಗೊಂಡನವ್ವಾ
ಉಮ್ಮತ್ತೂರ ಅಜನಯ್ಯಾ ಪುರಂದರವಿಠಲ ೧

ಮಟ್ಟ

ಸುಳಿದರೆ ಸುಂಕವ ಕೊಂಬ ಪುಂಡಗಾರ
ಹರಿಯಲ್ಲದಾರು ಹೇಳಲೆ ಎಲೆ ಗೆಳತಿ
ಉಮ್ಮತ್ತೂರಜನಯ್ಯ ಪುರಂದರವಿಠಲ ಹರಿ ೨

ತ್ರಿವಿಡೆ

ಮಧುರಪಟ್ಟಣರಾಯಾ ಬೀದಿಯಲ್ಲಿ ಇದ್ದ
ದಾಮ ಸುದಾಮರು ಕೈ ಹೊಯ್ದು ನಗಲು
ಚದುರೆಯ ಮಾಡಿ ಕುಬುಜೆಯ ಕೂಡಿದ ನಕ್ಕ
ಚದುರ ಸನ್ನೆ ನೋಟದಿ ನಗುತ ಆಕೆಯ ಬಿಟ್ಟ
ಉಮ್ಮತ್ತೂರಜನಯ್ಯ ಪುರಂದರವಿಠಲ ೩

ಅಟ್ಟ

ಆರ ಮಡಿಯನುಟ್ಟೆ ಆರ ಗಂಧವನಿಟ್ಟೆ
ಆರ ಪೂಗಳ ಮುಡಿದೆ ಆರ ರಾಜ್ಯವ
ನಾರಿಗಿತ್ತು ಮೆರೆದೆ ದೇವ ಆರ ಪೂಗಳ ಮುಡಿದೆ
ಬಲ್ಲಿದರಿಗೆ ಬಟ್ಟಿಸೆ ಸಾರವೆಂಬಂತೆ ಉಮ್ಮ
ತ್ತೂರ ಅಜನಯ್ಯ ಪುರಂದರವಿಠಲ ೪

ಆದಿ

ಕೊಂಬು ಕೊಳಲು ತಿತ್ತಿರಿ ಮವುರಿಗಳು
ಭೊಂ ಭೊಂ ಭೊಂ ಭೊಂ ಭೋರೆನುತ
ಸರಿಗಮಧನಿಸ ತುತ್ತುರೆ ಎನುತ
ಝಂ ಝಂ ಝಂ ಝಂ ಝಣಿಲೆನುತ
ಮಧುರೆಯೊಳಗೆ ಕೋಲಾಹಲವಮಾಡಿ ಮುಸುಕಲು
ಭೊಂ ಭೊಂ ಭೊಂ ಭೊಂ ಭೋರೆನುತ
ಉಮ್ಮತ್ತೂರು ಅಜನಯ್ಯನೆ ಪುರಂದರವಿಠಲ
ಝಂ ಝಂ ಝಂ ಝಂ ಝಣರೆನುತ ೫

ಜೊತೆ

ಅಸುರರ ಸಂಹರಿಸಿ ಸುರರ ಪಾಲಿಪ ನಮ್ಮ
ಉಮ್ಮತ್ತೂರ ಅಜನಯ್ಯ ಪುರಂದರವಿಠಲ ೬

[ಇದು ಉಮ್ಮತ್ತೂರು ಕ್ಷೇತ್ರದ ಅಜಪಿತ ಕೃಷ್ಣನನ್ನು ಕುರಿತ ರಚನೆ.]

ಮೀರೆದಪ್ಪುತ—ವಿಗ್ರಹವಾಗಿ ಸ್ಥಾವರವಾದರೂ, ಅದರ ಮಿತಿಯನ್ನು ಮೀರಿ (ಎಂದರೆ ಚೈತನ್ಯವನ್ನು ಪಡೆದು)

ಸುಳಿದರೆ ಸುಂಕವ ಕೊಂಬ—ಹತ್ತಿರ ಬಂದರೆ ಭಕ್ತಿಯನ್ನು ಪಡೆದುಕೊಳ್ಳುವ.

ಆರ ಮಡಿಯನುಟ್ಟೆ...—ಕಂಸನ ಆಣತಿಯಂತೆ ಮಧುರೆಗೆ ಬಂದಾಗ ಕೃಷ್ಣನು ಮಾಡಿದ ಲೀಲೆಗಳು.

ತಿತ್ತಿರಿ—ತುತ್ತೂರಿ.

ಮವುರಿ—ಮೌರಿ ; ಕ್ಲೇರಿಯೊನೆಟ್ ಬಗೆಯ ವಾದ್ಯ.

ಮುಸುಕಲು—ಎಲ್ಲೆಲ್ಲೂ ಹರಡಿಕೊಂಡು ಉಳಿದೆಲ್ಲವನ್ನೂ ಮರೆಮಾಡಲು.

೧೯. ಸಂಭ್ರಮಸುಳಾದಿ

ಗೌಳಿ ಝಂಪೆ

ಮಣಿಮೌಳಿ ಮೊಲ್ಲೆಮಲ್ಲಿಗೆಯ ದಂಡೆ
ಪಿಂಛೆದೊಂಗಲ ಉತ್ತಮಾಂಗ
ಮೆರೆವ ಕರ್ಣ ಕುಂಡಲ ಕೌಸ್ತುಭ ಕಮಲಮಾಲೆ
ಕಂಬು ಕಂಠ ಶ್ರೀವತ್ಸ ಸಿರಿಗಂಧ ಸಿರಿ ತುಲಸಿ ಸಿರಿವಕ್ಷಸ್ಥಳ
ಮರಕತಮಣಿಯ ಕಂಕಣಕಡೆ ತೊಡರು ಸಮಚರಣ
ಹೇಮವಸನ ಶ್ಯಾಮ ಕೋಮಲಾಂಗ
ಆಹೋ ಗೋಪಿಯರ ಮೋಹಿಸುತಿದೆ ಕೃಷ್ಣ
ಆಹೋ ಜಗಜ್ಜನರ ಪಾಲಿಸುತಿದೆ
ಆಹೋ ಪುರಂದರವಿಠಲನ ಬಾಲಲೀಲೆ ೧

ಮಟ್ಟ

ಪೊಂಬಟ್ಟೆಯ ಮೇಲೆ ಕಾಂಚೀದಾಮವು ಒಲ್ಲಿಯ ಸುತ್ತಿ
ಜಂಬು ನೀಲ ಚೂತ ಎಳೆದಳಗಳು ಮುಕುಟದ ಮೇಲೆ ಸುತ್ತಿಕೊಂಡು
ಕಂಬು ಕೊಳಲು ತುತ್ತೂರಿ ಮೌರಿಗಳು
ಭೊಂ ಭೊಂ ಭೊಂ ಭೋಂ ಭೋರಿಡುತ ಝುಂ ಝುಂ ಝುಂ
ಎಂಬೋ ರಾಮಕೃಷ್ಣ ಗೋವಳರ
ಸಂಭ್ರಮವು ಸುರರನೊಲಿಸಿತು
ಜಂಭಭೇದಿ ಶಂಭು ಅಂಬುಜ ಸಂಭವನುತ
ಕಂಬುಗ್ರೀವ ತಿರುವೇಂಗಳಪ್ಪ ಪುರಂದರವಿಠಲ
ಎಂಬೊ ಸಂಭ್ರಮಂ ಸುರರನೊಲಿಸಿತು ೨

ತ್ರಿವಿಡೆ

ಜಯ ಜಯ ಶ್ರೀ ನರಸಿಂಹ ಮಹಭಯನಿವಾರಣ
ಜಯ ಜಯ ಶ್ರೀ ದಿವ್ಯಸಿಂಹ ಘೋರದುರಿತ ನಿವಾರಣ
ಜಯ ಜಯ ಶ್ರೀ ನಾರಸಿಂಹ ಮಹಭಯ ನಿವಾರಣ
ಪ್ರಹ್ಲಾದಪಾಲಕನೆ ವರದ ನಮೋನಮೋ ಪುರಂದರವಿಠಲರಾಯ ೩

ಅಟ್ಟ

ಕಾಮ ಕ್ರೋಧ ಬಿಡದನ್ನಕ ಪರ
ಬೊಮ್ಮನೊಲಿಮೆಯೆತ್ತ ನೀನೆತ್ತ
ಮರುಳೆ

ಕಾಮ ಅಹಂಕಾರ ಮಮಕಾರವಳಿಯದೆ
ಶರಧಿಶಯನ ದೊರಕೊಂಬೋನೆ
ಮರುಳೆ
ವಿಹಂಗವಾಹನ ದೊರಕೊಂಬೋನೆ
ಮರುಳೆ
ಆ ಹರಿದಾಸರ ಪದಪದ್ಮಕ್ಕೆರಗದೆ
ಪುರಂದರವಿಠಲನು ಸುಲಭನೆ
ಮರುಳೆ ೪

ಆದಿ

ವಾಮನ ವಾಸುದೇವ ಪದ್ಮನಾಭಹರೇ
ದಾಮೋದರ ಪ್ರದ್ಯುಮ್ನ ಸಂಕರುಷಣ ವಾಸುದೇವ
ಅನಿರುದ್ಧ ಪುರಂದರವಿಠಲಾಧೋಕ್ಷಜ ೫

ಜೊತೆ

ಮನೋವಚನಗಳಲ್ಲಿ ಕಾಯಕರ್ಮಗಳಲ್ಲಿ
ಕಾಯೋ ಕೊಲ್ಲೋ ನಿನ್ನ ನಂಬಿದೆ ಪುರಂದರವಿಠಲ

ಮಣಿಮೌಳಿ—ತಲೆಯ ಮೇಲೆ ಮಣಿಯ ಒಡವೆ.
ಪಿಂಛೆ—ನವಿಲುಗರಿ.
ದೊಂಗಲ—ಗುಡ್ಡದಂತೆ ಮೇಲೆತ್ತಿ ಕಟ್ಟಿದ ಕೂದಲು.
ಉತ್ತಮಾಂಗ—ತಲೆ.
ತೊಡರು—ಸರಪಳಿ.
ಕಾಂಚಿದಾಮ—ಉಡಿದಾರ.
ಜಂಭಭೇದಿ—ಇಂದ್ರ.
ಅಂಬುಜಸಂಭವ—ಬ್ರಹ್ಮ.
ಕಂಬುಗ್ರೀವ—ಶಂಖದಂತೆ ಕತ್ತು.

೨೦. ಬಾಲಲೀಲಾಸುಳಾದಿ

ಧ್ರುವ

ಎಲೆ ಎಲೆ ಸಿಡಿಲು ಮಿಂಚೆ ಗರ್ಜಿಸದಿರಿ ನೀವು
ಎಲೆ ಎಲೆ ಮೇಘರಾಜ ಮಳೆಗರೆಯದಿರು
ಎಲೆ ಎಲೆ ಭೂದೇವಿ ನವರತುನಗಳಿಂದ
ನೆಲೆ ಕಟ್ಟಿ ಕಟ್ಟಿಕೊಂಡು ಥಳಿಥಳಿಸುತಲಿರು
ಹುಲಿ ಉಗುರು ಅರಳೆಲೆ ಮಾಗಾಯಿ ಕಂಕಣ
ಘಲು ಘಲು ಘಲುಕೆಂಬೋ ಕಾಲಪೆಂಡೆಯನಿಟ್ಟು
ಬಲರಾಮ ಪುರಂದರವಿಠ್ಠಲ ಗೋಪಾಲಕೃಷ್ಣ
ನಲಿಯುತ ಅಂಬೆಗಾಲನಿಕ್ಕಿ ಬರುತಾರೆ ೧

ಮಟ್ಟ

ಬೆಣ್ಣೆ ಬಲದೊಡೆಯ ಮೇಲಿಟ್ಟುಕೊಂಡು
ಅಣ್ಣ ಬಲರಾಮನ ಕೂಡಿಕೊಂಡು
ಚೆನ್ನಾಗಿ ಡೊಗ್ಗಾಲೂರಿ ಮೆಲುವ ಕೃಷ್ಣ
ಅಣ್ಣನ ಒಡಗೂಡಿ ಬರುತಾನೆ ಹಸುಮಗನಂತೆ
ನಿನ್ನ ಮಗನೆ ಇವನು ಕೇಳೆಲೆ ಗೋಪಿದೇವಿ
ಸಣ್ಣವನಿವನೇನೆ ಕಣ್ಣು ಬಿಡುವನೆ ಪುರಂದರವಿಠ್ಠಲ ೨

ತ್ರಿವಿಡೆ

ಇದೆ ಇದೇ ಕೈ ಬೆಣ್ಣೆ ಇದೆ ಅಂಗ ಸಿಲುಕಿತು
ಇದೆ ಇದೇ ಕಟಬಾಯಿಯಿಕ್ಕಿ ಸುರುವ ಬೆಣ್ಣೆ
ಇದೆ ಇದೇ ಗೋಪಿದೇವಿ ನಿನ್ನ ಮಗ ಕಳ್ಳನೇ
ಇದೆ ಇದೇ ಹಿಡಿದು ತಂದೆವು ನೋಡೆ ನೋಡೆ
ಹದುಳದಿಂದಿಡೆ ಲೇಸು ಇಲ್ಲದಿದ್ದರೆ ನಿನ್ನ
ತದುವೆ ತದುವೆನಯ್ಯ ಪುರಂದರವಿಠ್ಠಲ ೩

ಆದಿ

ನೀಲ ಮೇಘಶ್ಯಾಮ ಕೋಮಲನೆ
ಹಾಲು ಕುಡಿಯಲು ಬಾರೊ ಹಸಿದೆಯೋ ರಂಗಯ್ಯ
ಹಾಲು ಮೊಸರು ಬೆಣ್ಣೆ ಹಾವಳಿಗಾರನೋ ಶ್ರೀ
ಲೋಲ ಪುರಂದರವಿಠ್ಠಲ ಗೋಪಾಲಕೃಷ್ಣ ೪

ಅಟ್ಟ

ಮಲ್ಲಿಗೆ ಮೊಗ್ಗುಗಳಂತೆ
ಹಲ್ಲು ಬಂದಿವೆ ರಂಗಯ್ಯಗೆ
ಹಲ್ಲು ಬಂದಿವೆ ಕೃಷ್ಣಯ್ಯಗೆ
ಎಲ್ಲೋ ಎಲ್ಲೋ ಬಾಯಿದೆರೆಯೆನೆ
ಎಲ್ಲ ಬೊಮ್ಮಾಂಡಗಳನೆ ತೋರಿದ
ಎಲ್ಲರಂತೆ ಕಂದನಲ್ಲಿವ
ಬಲ್ಲವರಿಗೆ ಪುರಂದರವಿಠ್ಠಲನು ೫

ಜೊತೆ

ಅನವರತ ಭಕುತಿಯಲಿ ನಿನ್ನ ಬಾಲಲೀಲೆ
ನೆನೆವಂತೆ ಮಾಡೊ ಶ್ರೀ ಪುರಂದರವಿಠಲ



೨೧. ಗೋಪಾಲಕೃಷ್ಣಸುಳಾದಿ

ಸೌರಾಷ್ಟ್ರ ಧ್ರುವ

ಹೊಡೆಮರಳಲು ಕಲಿತ ಶ್ರೀ ಕೃಷ್ಣ ನಾಗರ
ಹೆಡೆಯಂತೆ ತಲೆಯೆತ್ತಲು ಕಲಿತ ಕೃಷ್ಣ
ಕಡು ಮುದ್ದು ಸುರಿವಂತೆ ನಗಲು ಕಲಿತ ಕೃಷ್ಣ
ನುಡಿಯು ಕಲಿತ ಉಗ್ಗು ಉಗ್ಗು ಎಂದು ಕೃಷ್ಣ
ಉಡಿಘಂಟೆ ಹುಲಿಯುಗುರಳೆಲೆ ಮಾಗಾಯಿ
ಕೊರಳ ಪದಕ ಮುದ್ರೆ ಮೆರೆವ ಕೃಷ್ಣ
ಕಡಗ ಕಂಕಣದಿಂದ ಮೆರೆವ ಕೃಷ್ಣ
ಮಡದಿಯರೆತ್ತಿ ಮುದ್ದಾಡಿಸಲವರ ಓ
ರುಡಿಯ ಮೇಲೆದ್ದು ಕುಣಿವನು ಕೃಷ್ಣ
ಹಿಡಿಹೊನ್ನು ತಾ ಹೊನ್ನು ಗುಬ್ಬಿಯುಂದದಿ ಹೆ
ಜ್ಜೆ ಹಿಡಿದು ಚಪ್ಪಳೆಯಿಕ್ಕುವನು ಕೃಷ್ಣ
ಮೃಡಮುಖ್ಯ ಸುರರು ಅಂಬರದಲಿ ನೋಡಿ ನೋಡಿ
ಕಡುವೊಪ್ಪಿ ತುತಿಸಿ ಹಾರೈಸುತಿರೆ
ಕಡೆಗಣ್ಣಿನಿಂದವರನು ನೋಡಿ ನಲಿವ ನಮ್ಮ
ಒಡನಾಡುವ ಪುರಂದರವಿಠಲ ಗೋಪಾಲಕೃಷ್ಣ ೧

ಮಟ್ಟ

ಗಂಡಸ್ಥಳದಲ್ಲಿ ಮಣಿಮುಕುಟ ಮುತ್ತಿನ ಮಕರ
ಕುಂಡಲಗಳ ಪ್ರಭೆಯು ಪ್ರತಿಫಲಿಸುತ ತೂಗಿ
ಪುಂಡರಿಕಾಕ್ಷನ ಉತ್ತಮಾಂಗದ ರವಿ
ಮಂಡಲಗಳ ಪ್ರಭೆ ಮಸುಳಿಸುತಿರೆ ಮುಕುಟ
ಹಿಂಡು ಗೋಪಿಯರೊಡನೆ ಆಟವನಾಡುವ ಉ
ದ್ದಂಡಬಾಲಕ ಪುರಂದರವಿಠಲ ಗೋಪಾಲಕೃಷ್ಣ ೨

ರೂಪಕ

ಕನ್ನಡಿಯಂತೆ ಕೋರೈಸುತಿಹ
ರನ್ನದಾಕಾರ ರಾಜಾಂಗಣದಲ್ಲಿ
ಘನ್ನ ಮಹಿಮ ಅಂಬೆಗಾಲನಿಕ್ಕುತ ಬರುವ
ತನ್ನ ರೂಹವ ಕಂಡು ಸನ್ನೆ
ಮಾಡುವ ಮತ್ತೆ ನಗುವ

ಚೆನ್ನವಾಡಲು ನಗುತ ಜೋ ಎಂದಮ್ಮ
ಚಿನ್ನಾಟನಾಡುವ ಹೋಯೆಂದು ಪಾಡುವ
ಎನ್ನ ಮುದ್ದು ಪುರಂದರವಿಠಲರೇಯಾ
ಚೆನ್ನಿಗ ಚೆಲುವ ಗೋಪಾಲಕೃಷ್ಣ ೩

ಝಂಪೆ

ಅಂಬೆಗಾಲಿಕ್ಕುತಲಿ ಬಂದ ಗೋವಿಂದ
ದುಂಬಿಗುರುಳರಳೆಲೆಯು ನೊಸಲೊಲಿವುತ
ಉಂಬೆ ಇನ್ನೊಮ್ಮೆ ಎಂದೆನುತಚ್ಯುತ
ತುಂಬಿದೊಳಗಿನ ಜಗಂಗಳುವೊಲಿವುತ
ನಕ್ಕರೆ ನಗುವ ನಂಬಿದವರ ಪೊರೆವ
ಭಕ್ತರ ಕುಟುಂಬಿ ಪುರಂದರವಿಠಲ ಗೋಪಾಲಕೃಷ್ಣ ೪

ತ್ರಿವಿಡೆ

ಬಲಗೈಯಿಂದಲಿ ತೆಗೆದು ಎಡಗೈ ಬೆಣ್ಣೆಮುದ್ದೆಯ
ಮೆಲುವ ಕೃಷ್ಣ ಗೆಳೆಯ ಗೋವಳರಿಗೆಲ್ಲ
ಮೆಲಿಸುತ್ತ ಬಲಭದ್ರರಾಮಗೆ ಸವಿದೋರುತ್ತ
ಜಗದಯ್ಯ ಪುರಂದರವಿಠಲ ಗೋಪಾಲಕೃಷ್ಣ ೫

ಅಟ್ಟ

ವಟಪತ್ರದಲ್ಲೊರಗಿ ಪ್ರಳಯದಲ್ಲಿ
ಪುಟ ಪುಟ್ಟ ಕೈಯಲಿ ಪುಟ ಪುಟ್ಟ ಪಾದ ಅಂ
ಗುಟ ಚಪ್ಪರಿಸುತ ಆಡುವ ಶಿಶುವೀತನು
ಸೃಷ್ಟೀಶ ಪುರಂದರವಿಠಲ ಗೋಪಾಲಕೃಷ್ಣ ೬

ಆದಿ

ಮಂದರಗಿರಿಯನೆತ್ತಿದ ತೋಳನ್ನಾಡೈ ತೋಳು ತೋಳು ಕೃಷ್ಣ
ಸಿಂಧುವಿನಂಬಿನ ಮನೆಗೆ ತಂದ ತೋಳು ಕೃಷ್ಣ
ಬಂದಿಬಾಹು ಬಳೆಯನಿಟ್ಟ ತೋಳು ತೋಳು ತೋಳು ಕೃಷ್ಣ
ಚಂದನ ಕುಂಕುಮ ಗಂಧವನಿಟ್ಟ ತೋಳು ಕೃಷ್ಣ
ಇಂದಿರೆ ದೇವಿಯನಪ್ಪುವ ತೋಳು ತೋಳು ಕೃಷ್ಣ ಇ
ತ್ತೆಂದು ಮಗನ್ನ ತೋಳನಾಡಿಸೆ
ಪುರಂದರವಿಠಲ ನೀ ತೋಳನ್ನಾಡೈ ೭

ಜೊತೆ

ಬಾಲಕ ರೂಪವೆ ಮೂಲ ರೂಪ
ಮೂಲ ರೂಪವೆ ಬಾಲ ಪುರಂದರವಿಠಲ

ಹೊಡೆಮುರಳಲು—ಲಾಗ ಹಾಕಲು.
ಉಗ್ಗು—ತೊದಲು ನುಡಿ.
ಉಡಿಘಂಟೆ...—ಮಕ್ಕಳಿಗೆ ತೊಡಿಸುವ ಆಭರಣಗಳು.
ಓರುಡಿ—ಓರಣವಾದ ಉಡಿ, ಸೊಂಟ.
ಹಿಡಿಹೊನ್ನು—ಒಂದು ಆಟ.
ಮೃಡಮುಖ್ಯ ಸುರರು—ಶಿವನೇ ಮೊದಲಾದ ದೇವತೆಗಳು.
ಗಂಡಸ್ಥಳ—ಹಣೆ, ತಲೆ.
ಉತ್ತಮಾಂಗ—ತಲೆ.
ಮುಸುಳಿಸುತಿರೆ—ಮುಸುಕುತ್ತಿರಲು.
ರೂಹು—ರೂಪ.
ದುಂಬಿಗುರುಳು ಅರಳೆಲೆಯ ನೊಸಲ ಒಲಿವುತ—ದುಂಬಿಯಂತೆ ಕಪ್ಪಾದ ಗುಂಗುರು ಕೂದಲುಗಳು ಹಣೆಯ ಮೇಲೆ ಸುಳಿದಾಡುತ್ತಿರಲು.
ಸಿಂಧುವಿನಂಬಿನ ಮನೆಗೆ ತಂದ—ರಾಮಾವತಾರದಲ್ಲಿ ಸೇತುಬಂಧನದ ಸಂದರ್ಭ.

೨೨. ಹರಿಸುಲಭಸುಳಾದಿ

ಕಾಂಬೋದಿ ಧ್ರುವ

ಕೆಲವರು ಕೆಂದಾವರೆಯ ಹಾಸಿ ಪವಡಿಸೆನೆ ಪವಡಿಸುವೆ
ಕೆಲವರು ಉಪಬರ್ಹವನೀಯಲು ನೀನೊರಗುವೆ
ಕೆಲವರು ಕೇತಕೀಚಾಮರ ಬೀಸಲು ನೀನಲಿವೆ
ಕೆಲವರು ಪಾದಪದುಮಗಳನೊತ್ತಲು ನೀವೊಲಿವೆ
ಕೆಲವರು ತೋಳ್ತೊಡೆ ಮೈ ಮೊಗವೊರಸೆ ಅಪ್ಪಾಲು ಮರಳಪ್ಪುವೆ
ಕೆಲವರು ಕೊಂಬು ಕೊಳಲು ತಿತ್ತಿರಿ ಮೌರಿಗಳ ಬಾರಿಸೆ ನೀ ನಲಿವೆ
ಕೆಲವರು ಮಂದರ ಮಧ್ಯಮ ತಾರಕ ಅನೇಕ ರಾಗಗಳ ಪಾಡೆ
ಝಣಝಣಝಣರೆಂದುಗ್ಗಡಿಸೆ ಕೆಲವರು
ಧಿಂ ಧಿಂ ಧಿಂ ಧಿಮಿಕೆನುತಲಿ ಕೆಲರು
ನೃತ್ಯವನಾಡೆ ಸುಖಿಸುವೆ
ಜಲಜಾಕ್ಷ ಏನಿನ್ನಿವರ ಪುಣ್ಯವನೆಂತು ಬಣ್ಣಿಪೆ
ಹಲಧರನು ನಿಮ್ಮೊಡನೆ ನಿನ್ನೊಳಾಡುವ
ಗೋಪ ಗೋಪೀ ಗೋಕುಲಕ್ಕೆ ನಮೋ ಪುರಂದರವಿಠಲ ೧

ಮಟ್ಟ

ನಖದ ಬೆಳಕು ಚಂದ್ರ ಸೂರ್ಯರ
ಸೋಲಿಸಿ ಮೆರೆಯುತಿದೆ ನೋಡು
ಮುಖದಧಿಪತಿಯೆ ನಿನ್ನ ಸರ್ವಾಂಗದ ಕಾಂತಿ
ಲಾವಣ್ಯಗಳನೆ ಕಂಡು
ಸುಖಿಸಿದರಂತವರು ನಿನ್ನೊಡನೆ ಇದ
ನಿಖಿಳ ಜಗತ್ಕಾರಣ ನೀನೆ ಬಲ್ಲೆ
ಮಕರ ಕುಂಡಲಾಭರಣವೆಸೆಯೆ
ವಿಖನಸಾರ್ಚಿತ ಶ್ರೀಪುರಂದರವಿಠಲರೇಯಾ ೨

ತ್ರಿವಿಡೆ

ರತ್ನಮುಕುಟವು ರತ್ನಮುಕುಟದಂತೆ
ರತ್ನಮುಕುಟಕ್ಕೆ ತುಂಬಿಯೆರಗಲು
ಕತ್ತಾರೆ ವೀರೆಯ ದಂಡೆ ಮೆರೆಯೆ
ಪೀತಾಂಬರ ಕಾಂಚಿದಾಮಾದಿ ಶೋಭಿತ
ಚಿತ್ತವಲ್ಲಭ ಪುರಂದರವಿಠಲನೊಳು
ಉತ್ತರೋತ್ತರದ ಶೃಂಗಾರವಪ್ಪಾ ೩

ಅಟ್ಟ

ಅನಂತವೇದಸಮೂಹಗಳಿಂದಲಿ
ಅಜಾದಿ ಸುರರು ಅರಸಲೇತಕ್ಕಿನ್ನು
ಆ ನಂದಯಶೋದೆಯರ ಮನೆಯಲ್ಲಿ
ವೃಂದಾವನದಿ ಕಾಣಿಸಿಕೊಂಡನವ್ವಾ
ನಂದನಂದನಕಂದ ಪುರಂದರವಿಠಲ
ಪರದೇವತೆ ಈತನಲ್ಲವೇನವ್ವಾ ೪

ಆದಿ

ಬೆಣ್ಣೆಯ ಬಟ್ಟಲ ಕಂಡು ಮರಳ ಮೇಲೇರಿಕೊಂಡು
ಚಿಣ್ಣರಿಗೆ ತುತ್ತೀವ ಠಕ್ಕುತನವೇನೆಂದು
ಕಣ್ಣ ಝಂಕರಿಸುತ್ತ ಕಂಜಾಕ್ಷನೆಂದು ಗೋಪಿ
ದೊಣ್ಣೆಯ ಕೊಂಡಟ್ಟಿದಳಪ್ರತಿಮಪ್ರಭಾವನ್ನ
ಹೆಣ್ಣೇನು ನೋಂತಳೋ ಪುರಂದರವಿಠಲನ್ನ
ಕಣ್ಣಿಯಲಿ ಕಟ್ಟಿ ಆಳಿದಳೋ ವಿಶ್ವಕಾಯನ್ನ ೫

ಜೊತೆ

ನಂದ ದಾಮವ ಬಿಟ್ಟು ಕಂದನ್ನ ಬಿಗಿದಪ್ಪಿ
ಅಂದು ವಂದಿಸಿದನು ಪುರಂದರವಿಠಲನ

ಉಪಬರ್ಹ—ತಲೆದಿಂಬು.
ಅಪ್ಪಾಲು ಮರಳಿ ಅಪ್ಪುವೆ—ಹೊರಳುವೆ.
ಮಖದ ಅಧಿಪತಿ—ಯಜ್ಞಕ್ಕೆ ಒಡೆಯನಾದವನು.
ಕತ್ತಾವರೆ ವೀರೆ—ಕರಿಯತಾವರೆ (ಕನ್ನೈದಿಲೆ)ಯ ಪರಿಮಳ.
ನೋಂತಳೋ—ನೋಂಪಿ ಮಾಡಿದಳೋ ; ನೋಂಪಿಯೆಂದರೆ ವ್ರತ.
ದಾಮವ—ಕೈಯಲ್ಲಿ ಹಿಡಿದ ಹಗ್ಗವನ್ನು.

೨೩. ವೈಕುಂಠಸುಳಾದಿ

ಧ್ರುವ

ಗಲಭೆ ಇದೇನೊ ಬೊಮ್ಮಾದಿಗಳ
ಉಲುಹು ಇದೇನೊ ರುದ್ರಾದಿಗಳ
ಸುಳಿಸದಿರೆಲೊ ಗರುಡಾದಿಗಳ
ಸುಳಿದರೆ ಹೊಯ್ಯೊ ಸುರಾದಿಗಳ
ನಿಲಹೇಳೆಲೊ ಇಂದ್ರ ಚಂದ್ರಾದಿಗಳ
ತೊಲಗಹೇಳೆಲೊ ಸನಕಾದಿಗಳ
ನಳಿನಪತ್ರಾಕ್ಷನೋಲಗಶಾಲೆಗೆ
ಸಲುವರೆ ಲಿಂಗಶರೀರಿಗಳು
ಕಾಲಕಾಲದಲಿ ಲಕುಮಿಯು ಅರಸಿ
ಸುಲಭನೊಪ್ಪಿಹ ಪುರಂದರವಿಠಲ ೧

ಮಟ್ಟ

ಮುಕುತ ವಿರಿಂಚಿ ವಿಹಂಗಪತಿಗಳ ಕೈಯ್ಯ
ಉಕುತಿಗಳಿಂದಲಿ ತುತಿಸಿ ಕೊಂಬುವದೆತ್ತ
ಆಕಳ ಕಾಯುವಾ ಗೋಪ ಗೊಲ್ಲತಿಯರ
ಮಕ್ಕಳ ಕೈಯಿಂದ ಎತ್ತಿಸಿಕೊಂಬುವದೆತ್ತ
ಸಕಲಸುರರು ನಗರೆ ರಂಗಯ್ಯಾ
ನಿನಗೆ ತಕ್ಕುದ ಮಾಡಿದೆಯೊ ಪುರಂದರವಿಠಲ ೨

ತ್ರಿವಿಡೆ

ಬದಿಯು ಬಲಿದು ಕಡಹದ ಮರನೇರಿ
ಕಾಲಿಂದಿಯು ಮಡುವ ಧುಮುಕಿ ಅವನ ಶಿರದಲ್ಲಿ
ಧಿಂ ಧಿಂ ಧಿಮಿಕೆಂದು ಕುಣಿಯಲು
ಧಂಧಣ ಧಣವೆಂದು ಬೊಮ್ಮ ಮದ್ದಲೆ ಪಿಡಿಯೆ
ತಂದನ್ನತಾ ಎಂದು ಹನುಮಂತ ಪಾಡೆ
ನಂದಿವಾಹನ ತಾಳವಿಡಿದು ತಥೈ ಎನ್ನೆ
ನಂದನ ಕಂದ ನಲಿದಾನಂದದಿಂದ
ಬಂದು ಕುಣಿದ ಗೋಪಾಲ ಗೋವಿಂದ
ಎಂದವಗೊಲಿದ ಪುರಂದರವಿಠಲ ೩

ಅಟ್ಟ

ಪಂಕಜಲೋಚನ ಪಂಕಜನಾಭ
ಪಂಕಜಾಪತಿ ಪಂಕಜಮತಿ
ಪಂಕಜಸಂಭವವಂದಿತಾಂಘ್ರಿ
ಪಂಕಜಪಾಣಿ ಪಂಕಜಮಾಲ
ಪಂಕಜಮಿತ್ರಾನಂತಕೋಟಿತೇಜ
ಪಂಕಜನಾಭ ಪುರಂದರವಿಠಲ ೪

ಆದಿ

ಚತುರಾನನ ಚತುರಮೂರುತಿ
ಚತುರಾತ್ಮ ಚತುರಕೀರುತಿ
ಚತುರ್ಭುಜ ಚತುರವಾಣಿ
ಚತುರ ಆಯುಧ ಚತುರ್ವಿಧ ಮುಕ್ತಿದಾಯಕ
ಚತುರ್ದಶಭುವನೇಶ ಪುರಂದರವಿಠಲ ೫

ಜೊತೆ

ಹಾರಲೊದೆಯೊ ಸಂಚಿತಾಗಾಮಿಗಳನು
ತೋರೊ ನಿನ್ನ ಚರಣ ಪುರಂದರವಿಠಲ

ಗಲಭೆ—ವೈಕುಂಠದಲ್ಲಿ ಸಂಭ್ರಮ.
ಉಲುಹು—ಶಬ್ದ
ಸಲುವರೆ ಲಿಂಗಶರೀರಿಗಳು—ಜೀವರಲ್ಲಿ ಪ್ರಾಕೃತಸಂಬಂಧವಿದ್ದವರು ಲಿಂಗ ಶರೀರಿಗಳು ; ವಿರಜಾನದಿಯಲ್ಲಿ ಲಿಂಗಭಂಗವಾದನಂತರವೇ ವೈಕುಂಠದಲ್ಲಿ ಪ್ರವೇಶ.
ನಳಿನಪತ್ರಾಕ್ಷನ ಓಲಗಶಾಲೆ—ವೈಕುಂಠ.
ವಿರಿಂಚಿ ವಿಹಂಗಪತಿ—ಬ್ರಹ್ಮ, ಗರುಡ.
ಉಕುತಿ—ಉಕ್ತಿ, ಮಾತು.
ತುತಿಸಿಕೊಂಬುವದು—ಸ್ತುತಿಸಿಕೊಳ್ಳುವುದು.
ಬದಿಯ...—ಕೊಳದ ಪಕ್ಕದಲ್ಲಿದ್ದ (ಗೋಪಿಕಾವಸ್ತ್ರಾಪಹರಣದ ಸಂದರ್ಭ).

ನಂದಿವಾಹನ—ಶಿವ.

ಪಂಕಜಾಪತಿ—ಲಕ್ಷ್ಮಿಯ ಗಂಡ.

ಪಂಕಜಸಂಭವ—ಬ್ರಹ್ಮ.

ಪಂಕಜಮಿತ್ರ—ಸೂರ್ಯ.

ಚತುರವಮೂರುತಿ — ವ್ಯೂಹಗಳು ; ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ.

ಚತುರಾತ್ಮ—ಆತ್ಮ, ಅಂತರಾತ್ಮ, ಪರಾತ್ಮ, ಜ್ಞಾನಾತ್ಮ.

ಚತುರಾಯುಧ—ಶಂಖ, ಚಕ್ರ, ಗದಾ, ಪದ್ಮ.

ಚತುರ್ವಿಧಮುಕ್ತಿ—ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ.

ಚತುರ್ದಶಭುವನ—ಹದಿನಾಲ್ಕು ಲೋಕಗಳು. ವಿವರಣೆ ಆಗಲೆ ಬಂದಿದೆ.

ಹಾರಲೊದೆಯೊ—ಹಾರಿಹೋಗುವಂತೆ ಒದೆಯೊ.

ಸಂಚಿತಾಗಾಮಿಗಳು—ಮೂರು ಬಗೆಯಾದ ಕರ್ಮಗಳಲ್ಲಿ ಸಂಚಿತ, ಆಗಾಮಿಗಳು ಭಕ್ತಿಯಿಂದ ಹಾರಿಹೋಗಬಲ್ಲುವು.

೨೪. ಕೃಷ್ಣಮಹಿಮಾಸುಳಾದಿ

ಧ್ರುವ

ರತಿಪತಿಪಿತನೆಂತೆಂಬ ಚೆಲುವ ನೀನುಳಿದು
ಕ್ಷಿತಿಯಲಿ ವರಾಹರೂಪ ಧರಿಸುವರೇನೊ ಹರಿಯೆ
ಸಿರಿ ಭೂದೇವಿಯರು ಸತಿಯರಾಗಿರಲು
ಅಡವಿಯೊಳಾಡುವ ಕರಡಿಯ ಮಗಳನು ಕೂಡುವರೆ
ಎಲೆ ಪುರಾಣಪುರುಷೋತ್ತಮನೆ ನೀನಮೃತಕ್ಕೆ
ನೆಲೆಯು ನೀನಾಗಿ ಮೋಹಿಪರೆ
ಜಗಕಿನ್ನಾಶ್ಚರ್ಯಚಾರಿತ್ರ್ಯ ಉಂಟೆ
ಪುರಂದರವಿಠಲ ದೇವರ ದೇವ
ಶರಣರಾಭರಣವೆ ನಿನಗೆ ನಾ ನಮೊ ಎಂಬೆ ೧

ಮಟ್ಟ

ಜ್ಞಾನ ಭಕ್ತಿ ಏನು ಇಲ್ಲದ ಹೀನನಾದ ಕಾರಣ
ನಾನು ನನ್ನದೆಂಬ ಹಮ್ಮು ಮಮತೆಗಳನು ಮಾಡಿ
ಬೆನ್ನ ಬಿಡವೊ ಅವು ನೀನೆ ಸ್ವತಂತ್ರನೊ
ನಿನ್ನ ದಾಸನು ನಾನು ಎನಿಸುವೆನೊ ಪುರಂದರವಿಠಲ ೨

ತ್ರಿವಿಡೆ

ಆನೊಬ್ಬನೆ ನಿನ್ನ ದಾಸನಾದೆನೊ ದೇವ
ನೀನೊಬ್ಬನೆ ಎನ್ನ ಸ್ವಾಮಿಯಾದೆಯೊ ದೇವ
ಏನೆಂದಾಡುವೆ ಆಳವಡುವೆ ಪಾಡುವೆ
ಏನೆಂದೋಡುವೆ ಹೋಲ್ಯಾಡುವೆ ಪಾಡುವೆ
ನೀನಾರ ಸಂಗಡ ಹೋದೆಯೊ ರೇಯಾ
ಏನು ನಾರಸಿಂಗ ಬಲು ಹೆದ್ದೈವರಾಯ
ನೀನೆ ನೀನೆ ಎಂದು ನಿನ್ನನೆ ನಂಬಿದೆ
ಮಾಣೊ ಛಲವ ಮಾಣೊ ಪುರಂದರವಿಠಲ ೩

ಅಟ್ಟ

ಬಿಲ್ಲು ಮುರಿಯೊ ದನುಜರ ಹೊಯ್ಯೊ ಕೃಷ್ಣ
ಮಲ್ಲ ಬಂದನು ಕಾಣೊ ಮಥುರೆಗೆ
ಹುಲ್ಲುಮಲ್ಲರ ತಿವಿಯೊ ಮಾವನ ಕೊಲ್ಲೊ ರಂಗ
ನಮ್ಮ ಪುರಂದರವಿಠಲ ಬಲ್ಲಿದ ಕಾಣೊ
ಊರ್ಜಿತ ಕಾಣೊ ಮಲ್ಲ ಕೃಷ್ಣ ೪

ಆದಿ

ಗಜವನಟ್ಟಿ ರಜಕನ ಮುರಿದೊಟ್ಟಿ
ಮಾವನ ಮುಡಿಯುಟ್ಟು ಕುಬುಜೆ ತಂದ ದಿವ್ಯ
ಗಂಧವ ಪೂಸಿ ಮಾವನ ಮಡಿ ಉಟ್ಟು
ದಾಮ ಸುದಾಮರ ಪೂಗಳ ಮುಡಿದು
ಪುರಂದರವಿಠಲ ಬಿಡದೆನ್ನ ಮನದಲಿ ೫

ಜೊತೆ

ಜ್ಞಾನಂ ದೇಹಿ ಭಕುತಿ ವಿರುಕುತಿ ಅ
ನ್ಯೂನಂ ದೇಹಿ ಪುರಂದರವಿಠಲ

ರತಿಪತಿಪಿತ—ಮನ್ಮಥನ ತಂದೆ.
ಕರಡಿಯ ಮಗಳನು—ಜಾಂಬವತಿಯನ್ನು.
ಮೋಹಿಪರೆ—ಮೋಹಿಸುವರೆ (ಅಮೃತಮಂಥನ ಸಂದರ್ಭದಲ್ಲಿ ಮೋಹಿನಿಯಾಗಿ).
ಮಾಣೊ—ಬಿಡು.
ಬಿಲ್ಲು ಮುರಿಯೊ...—ಕಂಸನ ಕರೆಯಂತೆ ಮಥುರೆಗೆ ಕೃಷ್ಣನು ಬಂದಾಗ ನಡೆದ ಪ್ರಸಂಗಗಳು ಮುಂದಿನೆರಡು ನುಡಿಗಳಲ್ಲಿವೆ.
ಹುಲ್ಲು ಮಲ್ಲರ—ಹುಲು, ಸಾಧಾರಣ ; ಮಲ್ಲರು, ಜಟ್ಟಿಗಳು.
ಖುಲ್ಲ ಮಾವ—ಕ್ಷುದ್ರನಾದ ಮಾವ, ಕಂಸ.
ಜ್ಞಾನಂ...—ಜ್ಞಾನ, ಭಕ್ತಿವೈರಾಗ್ಯಗಳನ್ನು ಕೊಡು ; ಕೊರೆಯಾಗದಂತೆ (ಅನ್ಯೂನ) ಕೊಡು.

೨೫. ಹರಿಸ್ಮರಣಸುಳಾದಿ

ಧ್ರುವ

ಎನ್ನ ಹೃದಯದಲ್ಲಿ ಎಲ್ಲಿ ಅನುವನೀಯಲೊ ಹರಿಯೆ
ಎನ್ನ ಭಾವದಲ್ಲಿ ಬರಿದೆ ಸುಕೃತ ದುಷ್ಕೃತದಿ
ಬನ್ನ ಬಡಿಸಿ ನೀ ನೋಡುತಿಹರೆ
ಎನ್ನ ಅವಗುಣಗಳೆಣಿಸುವರೆ ಕಡೆಯುಂಟೆ
ನಿನ್ನ ಘನತೆ ನೋಡಿ ಪಾಲಿಸೆಲೊ ಹರಿಯೆ
ಎನಗನ್ಯಥಾ ಗತಿಯಿಲ್ಲ ಅನಾಥ ನಾನಯ್ಯ
ಅನಾಥಬಂಧು ಪುರಂದರವಿಠಲರೇಯ
ನಿನ್ನ ಡಿಂಗರಿಗನೆನಿಸಲೋ ಕೃಪಾಂಬುಧಿಯೆ ೧

ಮಟ್ಟ

ಮನವೆ ಕೇಳು ಮಾಮನೋಹರನ
ಮನಸಿಜಪಿತನ ನಿತ್ಯ ನಾನನುದಿನದಲಿ ಅಗಲದಿಪ್ಪೆ
ಘನಮಹಿಮ ದೇವ ವರನನು ನೆನೆವುದೇನು
ನೇಹಮಾಡಿದವನ
ಮನವನೀಯೆ ತನ್ನನೀವನು ಆ ದನುಜ
ಮನುಜ ದಿವಿಜರೊಡೆಯುಗೆ
ತನುವ ಪ್ರಾಣ ಒಪ್ಪಿಸುವನನು
ಅನುದಿನದಲಿ ಪೊರೆವನು ಪುರಂದರವಿಠ್ಠಲ
ನೆನವದೇನು ನೇಹ ಮಾಡಿದವನ ೨

ತ್ರಿವಿಡೆ

ಕಟ್ಟುವನೆ ಕೌರವ ಅನಂತನನು
ಮುಟ್ಟುವುದೆ ಗೂಗೆ ಭಾನುಮಂಡಲವನು
ಸೃಷ್ಟಿ ಸಂಹಾರ ಕಾರಣ ಮೂರುತಿಯನು
ಮೆಟ್ಟಿ ಆಳುವ ಕೇಶವನೆಂದರಿಯದೆ
ಸೃಷ್ಟಿ ಸಂಹಾರ ಕಾರಣ ಮೂರುತಿಯನು
ಕಟ್ಟಿದಳೋ ಗೋಪಿ ದಾಮದಲಿ ಪುರಂದರ
ವಿಠ್ಠಲರೇಯ ಯಮಳಾರ್ಜುನಭಂಜನ ೩

ಅಟ್ಟ

ಅಂತಿಂತೊಂದು ಕ್ಷಣ ಅನಂತನಿಲ್ಲದೆ ಎನಗೆ
ಚಿಂತಿಸುತಿದೆ ಎನ್ನ ಮನ ಚಿಂತಿಸುತಿದೆ
ಕಂತುಪಿತನ ಬರವ ಬಯಸಿ
ಚಿಂತಿಸುತಿದೆ ಎನ್ನ ಮನ ಚಿಂತಿಸುತಿದೆ
ಸಂತತ ಪುರಂದರವಿಠಲನ ನೆನೆವ
ಭಾಗ್ಯವ ದೊರಕಬೇಕೆಂದು ಚಿಂತಿಸುತಿದೆ ೪

ಆದಿ

ರಂಗ ನಮೋ ರಘುನಂದ ನಮೋ ನಮೋ
ಕೃಷ್ಣ ನಮೋ ಕೃಪಾಳುವೆ ನಮೋ ನಮೋ
ದೇವ ನಮೋ ದೇವರಾಯ ನಮೋ ನಮೋ
ಈವ ಕಾವ ಕರುಣಾಕರ ನಮೋ ನಮೋ
ಪುಂಡರೀಕಮನಃಪ್ರಿಯನೆ ನಮೋ ನಮೋ
ಪಂಢರಿರಾಯ ಪುರಂದರವಿಠಲದೇವ ನಮೋ ನಮೋ ೫

ಜೊತೆ

ಹರಿಯ ನೆನೆವೆ ನರಹರಿಯ ನೆನೆವೆ ಮುರ
ಹರನ ನೆನೆವೆನೋ ಪುರಂದರವಿಠಲನ

೨೬. ಒಡೆಯಸುಳಾದಿ

ಪಂತುವರಾಳಿ ಧ್ರುವ

ಒಡೆಯ ನೀನಡಿಯಿಡೆ ಹಾವಿಗೆಯವ ನಾನು
ಒಡೆಯ ಮೆಲ್ಲಡಿಯಿಡಲು ಕಟ್ಟಿಗೆಯವ ನಾನು
ಒಡೆಯ ತಾಂಬೂಲವನುಗುಳುವೆಡೆಯಲ್ಲಿ
ಪಡಿಗ ಕಾಳಂಜಿ ಪಿಡಿಯುವವ ನಾನು
ಒಡೆಯನೊಡ್ಡೋಲಗದಿ ಒಪ್ಪುತಲಿರೆ ಕ
ನ್ನಡಿ ಛತ್ರ ಚಾಮರ ಪಿಡಿಯುವವ ನಾನು
ಒಡೆಯ ಪುರಂದರವಿಠಲರಾಯನ
ಉಗುರು ಇಟ್ಟಲ್ಲಿ ಶಿರವ ಕೊಡುವೆ ನಾನು ೧

ಮಟ್ಟ

ಹರಿಯನೋಲೈಸುವ ನಮ್ಮಣ್ಣಗಳಿರ ಕೇಳಿ
ಶರಧಿಯು ಕಟ್ಟಬೇಕು ಲಂಕೆಯು ಮುತ್ತಬೇಕು
ಇರಿದಾಡುತ್ತಿರಬೇಕು ರಾವಣಾದಿಗಳ ಕೂಡ
ಪುರಂದರವಿಠಲನ್ನ ಊಳಿಗದೂಳಿಗ ಘನ್ನ ಘನ್ನಾ ೨

ತ್ರಿವಿಡೆ

ಚಂದಿರಗೊಂದು ಕ್ಷಣ ನಿಂದಿರೆ ತೆರವಿಲ್ಲ
ಇಂದ್ರಾದಿಗಳಿಗೆ ಕುಳ್ಳಿರಲಿಕ್ಕೊಟ್ಟಿಲ್ಲ
ಒಂದು ಕ್ಷಣವಾದರು ಸೂರ್ಯಾದಿಗಳಿಗೆ
ನಿಂದು ತಲೆ ತುರಿಸಿಕೊಳ್ಳಲು ಹೊತ್ತಿಲ್ಲ
ಪುರಂದರವಿಠಲರಾಯ ಕಟ್ಟರಸು ಕಾಣಿರೋ ೩

ಅಟ್ಟ

ಕೃಷ್ಣರಾಯನರಮನೆಯು ಗಾಯಕರಾವು
ಭಟ್ಟರಾವು ವಿದ್ಯಾವಂತರಾವು
ಉತ್ತಮಾಂಗನ್ನ ತೊತ್ತಿಗರಾವು
ಪುರಂದರವಿಠಲರಾಯನ ಪೊಗಳುವವರಾವು ೪

ಆದಿ

ಧರೆ ಅಂಜುತಲಿದೆ ಗಿರಿಗಳಂಜುತಲಿವೆ
ಮರಬಳ್ಳಿಗಳಂಜಿ ಫಲಗಳೀವುತಲಿವೆ
ಸರಿತುಸಮುದ್ರಗಳಂಜಿ ಬಿಚ್ಚಾಡುತಲಿವೆ
ಮರುತ ಪಾವಕರಂಜಿ ಚರಿಸಿ ದಹಿಸುತಿವೆ
ಪುರಂದರವಿಠಲ ನೀನೆಂಥ ಅರಸೋ ೫

ಜೊತೆ

ನಾ ಘನ ನೀ ಘನ ತಾ ಘನ ಎನ್ನದಿರಿ
ಘನನೊಬ್ಬನೆ ಕಾಣಿರೋ ಪುರಂದರವಿಠಲ

[ಇದು ಪರಮಾತ್ಮನ ಅನುಲ್ಲಂಘ್ಯ ನಿಯಮವನ್ನು ಹೇಳುವ ಕೃತಿ. ಇದಕ್ಕೆ ಆಧಾರವಾಗಿ ಈ ಉಪನಿಷತ್ತಿನ ಮಂತ್ರ
'ಭೀಷಾಸ್ಮಾದ್ವಾತಃ ಪವತೇ ಭೀಷೋದೇತಿ ಸೂರ್ಯಃ ।
ಭೀಷಾದಿಂದ್ರಶ್ಚಾಗ್ನಿಶ್ಚ ಮೃತ್ಯುರ್ಧಾವತಿ ಪಂಚಮಃ' ॥]

ಹಾವುಗೆ—ಮೆಟ್ಟು
ಕಟ್ಟಿಗೆಯುವ—ಬೆಳ್ಳಿಯ ಕೋಲನ್ನು ಹಿಡಿದು, ದಾರಿ ಬಿಡಿಸುತ್ತ, ಮುಂದೆ ಸಾಗುವವ.
ಪಡಿಗ—ಪತದ್ಗ್ರಹ; ಥೂಕದಾನಿ.
ಕಾಳಂಜಿ—ಕಾಳಾಂಜಿ, ಉಗುಳುವ ಪಾತ್ರೆ.
ಭಟ್ಟರು—ಹೊಗಳುಭಟ್ಟರು, ಭಟ್ಟಂಗಿಗಳು.
ತೊತ್ತಿಗರು—ಸೇವಕರು.
ಮರುತ ಪಾವಕರು—ಗಾಳಿ, ಬೆಂಕಿ.

೨೭. ಮಿಥ್ಯಾಭಕ್ತಿಸುಳಾದಿ

ಪಂತುವರಾಳಿ ಧ್ರುವ

ನರಲೋಕದ ಸಿರಿ ಹೇಯುವೆಂಬೋದು ಗಡ
ಸುರಲೋಕದ ಸಿರಿ ಹೇಯುವೆಂಬೋದು ಗಡ
ಅತಳ ಲೋಕದ ಸಿರಿಯು ಹೇಯುವೆಂಬೋದು ಗಡ
ಸತ್ಯಲೋಕದ ಸಿರಿ ಹೇಯುವೆಂಬೋದು ಗಡ
ಯುಕುತಿ ಪಾಥೇಯುವದು ಹೇಯುವೆಂಬೋದು ಗಡ
ಯೋಗಪದ್ಧತಿಯಿನ್ನು ಹೇಯುವೆಂಬರು ಗಡ
ಪುರಂದರವಿಠಲನ ಶ್ರೀಪಾದಪದುಮದ
ಬಂಡುಂಡು ಬದುಕುವ ಮಧುಕರರೆನಿಪರು ೧

ಮಟ್ಟ

ಆಶಾಪಾಶಗಳುಳ್ಳ ಬದ್ಧ ಆರೋಹಣ ಭಕುತರಾವು
ಕಾಸುವೀಸಕ್ಕಾಗಿ ಕಳ್ಳಭಕುತರಾವು
ದೇಶ ದೇಶ ತಿರುಗುವ ಕೀಳುಭಕುತರಾವು
ರಾಯ ಮುಕುಂದನಲ್ಲಿ ಭಕುತಿರಹಿತರಾವು
ಪುರಂದರವಿಠಲನ ದಾಸರೆತ್ತ ನಾವೆತ್ತ ಬಣಗುಗಳು ೨

ತ್ರಿವಿಡೆ

ಭಾಗವತನೆಂಬ ಪೆಸರು ಬಂದಿದೆ ಯೋಗ ಯೋಗ್ಯವೆ
ಜಗದೊಳಗೆಲ್ಲ ಇದು ನಗೆಗೇಡಲ್ಲವೆ ಯೋಗ ಯೋಗ್ಯವೆ
ಪುರಂದರವಿಠಲನ ದಾಸಾನುದಾಸರ ದಾಸನೆನಿಸದಲೆ
ಭಾಗವತನೆಂದು ಕರೆಸಿಕೊಂಬುವ ಯೋಗ ಯೋಗ್ಯವೆ ೩

ಅಟ್ಟ

ಎನಗೆ ಶ್ರೀಹರಿಯಲ್ಲಿ ಭಕುತಿಲ್ಲವೆಂಬುದು ಇದೆ ಕುರುಹು
ಧನಧಾನ್ಯದಾಕಾಂಕ್ಷೆ ಇದೇ ಕುರುಹು
ವನಿತೆ ಸುತರ ಭ್ರಾಂತಿ ಇದೇ ಕುರುಹು
ಪುರಂದರವಿಠಲನ ದಾಸನೆನಿಸಿಕೊಂಡು
ಪರರಿಗಾಲ್ಪರಿವದೆ ಇದೇ ಕುರುಹು ೪

ಆದಿ

ಬಾ ಎಂದೆನೆ ಹೋಗೆಂದೆನೆ
ಅಯ್ಯ ಸಾಹಯ್ಯ ಜೀಯ್ಯ
ಅವಧಾರೆಂದರೆ
ರಾಯ ರಾಯ ರಾಯ ಪುರಂದರವಿಠಲನ
ಬಾ ಎಂದೆನೆ ಹೋಗೆಂದೆನೆ 8

ಜೊತೆ

ಕುಂಚ ವಿರಿಂಚನ ಕೈಯಲ್ಲಿ ಕಾಳಂಜಿ
ಪಂಚಬಾಣನ ಪಿತ ಪುರಂದರವಿಠಲನಿಗೆ

ಪಾದಪದುಮದ ಬಂಡುಂಡು...—ಅಡಿದಾವರೆಗಳ ಜೇನನ್ನು ಸವಿದು ಬದುಕುವ ದುಂಬಿ.

ಭಕುತರಾವು—ಭಕ್ತರು ನಾವು.

ಬಣಗು—ನೀಚ, ತುಚ್ಛ.

ಯೋಗ ಯೋಗ್ಯವೆ—ಹೆಸರು ಬಂದಿರುವುದು ಉಚಿತವೇ, ಸರಿಯಾದುದೆ ?

ಕುರುಹು—ಚಿಹ್ನೆ, ನಿದರ್ಶನ.

ಸಾಹಯ್ಯ—ತಾಳಿಕೋ.

ಜೀಯ್ಯ—ಒಡೆಯ.

ಕುಂಚ—ಬಾಗಿದ, ನಮಸ್ಕರಿಸುವ.

ಕಾಳಂಜಿ—ಉಗುಳನ್ನು ಹಾಕಲು ಪಾತ್ರೆ (ಥೂಕದಾನಿ).

೨೮. ನವವಿಧಭಕ್ತಿಸುಳಾದಿ

ಶ್ಲೋಕ

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮ ನಿವೇದನಂ
ವಿಷ್ಣೋಸ್ತು ಶ್ರವಣೇ ಪರೀಕ್ಷಿದಭವತ್ ವೈಯಾಸಕಿಃ ಕೀರ್ತನೇ
ಪ್ರಹ್ಲಾದಃ ಸ್ಮರಣೇ ತದಂಘ್ರಿಭಜನೇ ಲಕ್ಷ್ಮೀ ಪೃಥುಃ ಪೂಜನೇ
ಅಕ್ರೂರಸ್ತ್ವಭಿವಂದನೇ ಚ ಹನುಮಾನ್ ದಾಸ್ಯೇ ಸಖ್ಯೇಽರ್ಜುನಃ
ಸರ್ವಸ್ವಾತ್ಮನಿವೇದನೇ ಬಲಿರಭೂತ್ ಕೈವಲ್ಯಮೇಷಾ ಸಮಃ

ಹರಿಯು ಒಂಭತ್ತು ಭಕ್ತಿಯ ಬಲ್ಲ ಧೀರ
ಮರಳಿ ಸಂಸೃತಿಯ ದಾರಿಗೆ ಹುಟ್ಟಿ ಬಾರ
ದುರಾಚಾರ ದುಷ್ಕೃತಿಗಳ ಕಂಡು ಸೇರ
ಹಿರಿಯರೊಳು ಬಿರು ನುಡಿಯು ಜಿಹ್ವೆಗೆ ತಾರ
ಪುರಂದರವಿಠಲರಾಯನುದಾರ
ಚರಣಾಬ್ಜ ನಿಷ್ಠೆಯಂಗಡಿಯಿಟ್ಟು ತೋರ ೧

ಶ್ರವಣ ಭಕ್ತಿ

ಹರಿಕಥಾ ಶ್ರವಣಕ್ಕೆ ಮನವಿತ್ತ ಪ್ರೌಢ
ಅರವತ್ತು ಘಳಿಗೆ ವ್ಯರ್ಥದಿ ಹೋಗಾಡ
ಪರಮ ಪದವಿಯನೈದುವನವ ಗಾಢ
ನಿರಯದ ಬಟ್ಟೆ ದೂರದಲೊಮ್ಮೆ ನೋಡ
ಪುರಂದರವಿಠಲರಾಯನಂಘ್ರಿಯ ಗಾಢಾ
ದರದಲಪ್ಪುವ ಮೈಮರೆದು ಮಾತಾಡ ೨

ಕೀರ್ತನ ಭಕ್ತಿ

ಹರಿಯ ಕೀರ್ತನೆ ಭಕುತಿತುಂಬಿ ಪೇಳ್ವ
ಚಿರಸ್ವಭಾವದಲಿ ಕಣ್ಣೊರತೆಯನೆ ತಾಳ್ವ
ಹರಿಯೆಂದು ಕೂಗಿ ಸಜ್ಜನರೊಳಗೆ ಬಾಳ್ವ
ದುರಿತ ಗಜಗಳ ಮಂಡೆಯನೇರಿ ಸೀಳ್ವ
ಹರುಷಾಮೃತಾಬ್ಧಿಯೊಳು ಮುಳುಗೇಳ್ವ
ಪುರಂದರವಿಠಲರಾಯನ ಹೊಂದಿ ಬಾಳ್ವ ೩

ಸ್ಮರಣ ಭಕ್ತಿ

ಹರಿಸ್ಮರಣೆಗೆ ವಿಸ್ಮೃತಿಯಾದವನ ಜರಿವ
ಚಿರಕಾಲದಘವ ಒಮ್ಮೆಂದೊಮ್ಮೆ ತರಿವ
ಪರಮ ಭಾಗವತರ ಸಮ್ಮೇಳನದಿ ಬೆರೆವ
ನೆರೆಹಿತದವರಿಗೆ ಮುಕುತಿಯನೊರೆವ
ವರ ಬಿಂಬ ಕಾಂಬ ಕಣ್ಗಳನು ತೆರೆವ
ಪುರಂದರವಿಠಲರಾಯನ ದಯ ಹೊಂದಿ ಮೆರೆವ ೪

ಪಾದಸೇವನಾ ಭಕ್ತಿ

ಹರಿಪಾದ ಸೇವನ ಧ್ಯಾನವ ಬಲ್ಲಣ್ಣ
ವರ ಪುಟವಿಟ್ಟ ಚಿನ್ನವು ಮುಖ ಬಣ್ಣ
ದುರುರುಚಿ ದುರ್ವಿಷಯಕ್ಕೆ ಎತ್ತನು ಕಣ್ಣ
ಹರಿ ಗುರುಗಳಿಗಲ್ಲದೆ ಶರಣೆನ್ನ
ಪುರಂದರವಿಠಲರಾಯ ಪತಿತ ಪಾವನ್ನ
ಚರಣಾಬ್ಜ ರಸವೀಂಟಿ ಮೊಲೆವಾಲನುಣ್ಣ ೫

ಅರ್ಚನಾ ಭಕ್ತಿ

ಹರಿಯರ್ಚನೆಯ ಭಕ್ತಿಯ ಪ್ರವೀಣ
ತೆರತೆರದಿ ಬರುವ ಎಡರನು ಒಮ್ಮೆ ಕಾಣ
ಹರಿಗೆ ದೇಹೇಂದ್ರಿಯವರ್ಪಿಸಿ ಪ್ರಾಣ
ಹರಿಪುರದೊಳಗೆ ಮಾಡಿದ ತನ್ನ ಠಾಣ
ಪುರಂದರವಿಠಲನ್ನ ಪೂಜೆಯ ತ್ರಾಣ
ಅರಿತು ಕಾಯದೊಳಿಟ್ಟು ಪಡೆವ ನಿರ್ವಾಣ ೬

ವಂದನಾ ಭಕ್ತಿ

ಹರಿಗೆ ಅಷ್ಟಾಂಗದಿ ಪೊಡಮಟ್ಟ ನಿಚ್ಚ
ಉರಪಾಪಾಟವಿಗೆ ಗಮ್ಮನೆಯಿಟ್ಟ ಕಿಚ್ಚ
ಸುರಲೋಕ ಮುಂತಾದ ಸಿರಿಗವ ಮೆಚ್ಚ
ನರರ ಸಂಪದವೆಲ್ಲ ಸ್ಥಿರವೆಂದು ನೆಚ್ಚ
ಪುರಂದರವಿಠಲರಾಯನ ನಂಬಿದ ಹುಚ್ಚ
ನಿರಯದರಸನಿಗೆ ಬೆದರನು ಬೆಚ್ಚ ೭

ದಾಸ್ಯ ಭಕ್ತಿ

ಹರಿದಾಸರ ದಾಸತ್ವವ ಪಡೆದ
ನರ ಜೀವನ್ಮುಕ್ತನೆನಿಸಿ ಕೀರ್ತಿ ಪಡೆದ
ಹರಿ ನಾನೆಂಬುವನ ಎದೆಯ ಮೆಟ್ಟಿ ನಡೆದ
ಹರಿಯ ಭಂಟರ ಬಾಕುಳಿಗ ವೃತ್ತಿ ಹಿಡಿದ
ಪುರಂದರವಿಠಲರಾಯನ ಎಡದ
ಚರಣ ನಿರ್ಜರತರುಛಾಯೆಯ ಹಿಡಿದ ೮

ಸಖ್ಯ ಭಕ್ತಿ

ಹರಿಯಲ್ಲಿ ಭಕುತಿಯ ಗೆಳೆತನವಿಟ್ಟ
ತರುಣಿ ಸಂಪದ ವ್ರಜಗಳ ಸ್ನೇಹ ಬಿಟ್ಟ
ಕರ್ಮತ್ರಯಂಗಳನವ ಹಿಂದಕಿಟ್ಟ
ತಿರುಗಿ ಬರುವ ಉರು ಬಟ್ಟೆಯ ಮೆಟ್ಟ
ಪುರಂದರವಿಠಲನಲಿ ಚಿತ್ತವಿಟ್ಟ
ನರಸಿಂಹನೊಲಿಸಿ ಲಿಂಗಾಂಗವ ಸುಟ್ಟ ೯

ಆತ್ಮನಿವೇದನ ಭಕ್ತಿ

ಹರಿಗೆ ತನ್ನಾತ್ಮ ನಿವೇದನದಿಂದ
ಉರಿ ಜಲ ಮಣ್ಣು ಬೆಳಕು ಗಾಳಿಯ ಪೊಂದ
ಸ್ವರೂಪವ ಹರಿಯಂಘ್ರಿಗರ್ಪಿಸಿ ನಿಂದ
ಹರುಷವನುಂಬ ಉನ್ಮಾಹಂಗಳಿಂದ
ಪುರಂದರವಿಠಲರಾಯನ ದಯದಿಂದ
ಸುರಋಷಿ ನರರಿಗೆಲ್ಲವು ನಿಜಾನಂದ ೧೦

ನವವಿಧಭಕ್ತಿ

ಹರಿ ಶ್ರವಣ ಕೀರ್ತನ ಹರಿನಾಮಸ್ಮರಣ
ಹರಿಪಾದ ಸೇವನ ಹರಿಪೂಜಾ ವಂದನ
ಹರಿದಾಸ್ಯ ಸಖ್ಯತ್ವ ಹರಿಗಾತ್ಮಾರ್ಪಣ
ಹರಿಭಕ್ತಿಯೆ ಮುಕ್ತಿಪಥ ತತ್ತ್ವ
ಪುರಂದರವಿಠಲನೆ ಪರಮಾತ್ಮ ಸಿದ್ಧ
ವರ ಮಧ್ವಮತ ಶ್ರುತಿಸ್ಮೃತಿಯೊಳ್ ಪ್ರಸಿದ್ಧ ೧೧

ಸಂಸೃತಿ—ಸಂಸಾರ.

ಅಂಗಡಿಯಿಟ್ಟು ತೋರ—ತನ್ನ ಗುಪ್ತಭಕ್ತಿಯನ್ನು ಬಯಲು ಮಾಡುವುದಿಲ್ಲ.

ನಿರಯದ ಬಟ್ಟೆ—ನರಕದ ದಾರಿ.

ಕಣ್ಣೊರತೆ— ಕಣ್ಣೀರು, ಆನಂದ ಬಾಷ್ಪ.

ದುರಿತಗಜ—ಪಾಪಗಳೆಂಬ ಆನೆ.

ಚಿರಕಾಲದಘ—ತುಂಬ ಹಿಂದಿನಿಂದ ಅನುಸರಿಸಿ ಬಂದ ಪಾಪ.

ನೆರೆಹಿತದವರಿಗೆ—ಅಧಿಕಾರಿಗಳಿಗೆ, ಆಪ್ತರಿಗೆ.

ವರ ಬಿಂಬ—ತನ್ನ ಹೃದಯದಲ್ಲಿ ಬಿಂಬರೂಪಿ ಪರಮಾತ್ಮನನ್ನು ಕಾಣುವ ಒಳಗಣ್ಣನ್ನು ತೆರೆವ.

ಎಡರನು—ತೊಂದರೆಗಳನ್ನು.

ಹರಿಪುರದೊಳಗೆ—ವೈಕುಂಠದಲ್ಲಿ.

ಠಾಣ—ನೆಲೆ (ಸ್ಥಾನ).

ನಿರ್ವಾಣ—ಭವಬಂಧನದಿಂದ ಮುಕ್ತಿ.

ಅಷ್ಟಾಂಗದಿ ಪೊಡಮಟ್ಟ—ಶರೀರದ ಎಂಟು ಭಾಗಗಳನ್ನು ಭೂಮಿಗೆ ಮುಟ್ಟಿಸಿ ನಮಸ್ಕಾರ ಮಾಡುವುದು; ಎದೆ, ತಲೆ, ಎರಡು ಪಾದಗಳು, ಎರಡು ಕೈಗಳು, ಎರಡು ಮೊಣಕಾಲುಗಳು ('ಉರಸಾ ಶಿರಸಾ ಪದ್ಭ್ಯಾಂ...')

ಉರುಪಾಪಾಟವಿಗೆ—ಹೆಚ್ಚಾದ ಪಾಪಗಳೆಂಬ ಕಾಡಿಗೆ.

ನಿರಯದರಸನಿಗೆ— ನರಕದ ಒಡೆಯನಿಗೆ, ಯಮನಿಗೆ.

ಬಾಕುಳಿಗ—ಪಿರಿದಾಸೆ.

ನಿರ್ಜರತರು—ದೇವಲೋಕದ ಮರ ; ಕಲ್ಪವೃಕ್ಷ.

ವ್ರಜ—ಗುಂಪು.

ಕರ್ಮತ್ರಯಂಗಳೆ—ಸಂಚಿತ, ಆಗಾಮಿ, ಪ್ರಾರಬ್ಧಗಳೆಂಬ ಕರ್ಮಗಳನ್ನು.

ತಿರುಗಿ ಬರುವ ಉರುಬಟ್ಟೆ—ಸಂಸಾರದ ದಾರಿ.

ಲಿಂಗಾಂಗವ—ಸಂಸಾರ ಬಂಧನಕ್ಕೆ ಕಾರಣವಾದ ಲಿಂಗಶರೀರವನ್ನು.

ಉರಿ ಜಲ...—ಪಂಚ ಭೂತಗಳು.

ಉನ್ನಾಹ—ಸಂಭ್ರಮ, ಉನ್ನತಿ.

[ವಾಡಿಕೆಯಲ್ಲಿ ಇದನ್ನು 'ನವವಿಧಭಕ್ತಿಸುಳಾದಿ'ಯೆಂದು ಕರೆಯುತ್ತಾರೆ. ಆದರೆ ಇದರಲ್ಲಿ ಸುಳಾದಿಯ ಲಕ್ಷಣಗಳಿಲ್ಲ. 'ನವವಿಧ ಭಕ್ತಿಪ್ರಶಂಸೆ'ಯೆನ್ನುವ ನಿರ್ದೇಶನವೂ ಉಂಟು.]

೨೯. ದಾಸಸುಳಾದಿ

ಧ್ರುವ

ಮನವೆ ಆಲಿಸಿ ಕೇಳು ಬಿನ್ನೈಸುವೆನು ನಿನಗೆ
ಚಿನುಮಯಮೂರ್ತಿಯ ಘನಗುಣನಾಮ ಕೀ
ರ್ತನ ಮಾಳ್ಪ ಬಗೆಯನು ನಿನಗೆ ತಿಳಿಸುವೆನು
ಘನ ಮಹಿಮ ನಾರಾಯಣನ ಅಮಿತ ಅದ್ಭುತ ಶಕ್ತಿ
ಅನುಭವಕೆ ತಂದುಕೊಂಡು ಸ್ತುತಿಸುವುದು
ಮನ ಮೊದಲಾದ ಸರ್ವೇಂದ್ರಿಯಂಗಳ ಅ
ವನ ಪಾದದಲ್ಲಿಟ್ಟು ಕೀರ್ತನೆಗೈಯೊ ಮನವೆ
ನಿನಗೆ ಮುಖ್ಯಗತಿಗೆ ಸಾಧನವೆಂದು ಸಾರಿದೆ
ಅನುಮಾನ ಮಾಡೆ ಸಲ್ಲ ಎಂದೆಂದಿಗು
ಬಿನುಗು ದೈವಂಗಳ ಕಾಲಿಲಿ ಒದ್ದು ಮಧ್ವ
ಮುನಿ ಮತದಲ್ಲಿ ಬದ್ಧದೀಕ್ಷಿತನಾಗು ಕು
ಜನರ ನೆರಹಿಕೊಂಡು ಕುಚೇಷ್ಟೆ ಕಥೆ ಪೇಳಿ
ಘನ ಅಂಧಂತಮಸಿನೊಳು ಬೀಳದಿರು
ವನಜಭವಾಂಡದೊಳು ಹರಿದಾಸತ್ವ ದೀಕ್ಷೆ
ಯನು ಬಲು ಕಷ್ಟ ಕಷ್ಟವೆಂದು ಕಾಣೊ
ಮನುಜಾಧಮಗಿದು ಸುಲಭವಲ್ಲವೊ ಪ್ರಾಣಿ ಇನಿತು
ಇದರೊಳಗೆ ತ್ರಿವಿಧ ಬಗೆಯುಂಟು
ಗುಣವಂತನಾಗಿ ನೀನು ಕಾಲಕ್ರಮಣ ಮಾಡು
ಅನುದಿನದಲ್ಲಿ ಹರಿಸೇವೆಗೆ ವಿಮುಖನಾಗದೆ
ತನುವುಬ್ಬಿ ರೋಮಾಂಚನಾನಂದ ಬಾಷ್ಪದಿ ಗಾನ
ವನು ಮಾಡು ಘನ ಜ್ಞಾನ ಪುಟ್ಟುವುದು ಅನಿಮಿಷೇ
ಶನ ಪ್ರೀತಿ ದಿನದಿನಕೆ ವೆಗ್ಗಳವಾಗುವುದು
ನಿನಗೆ ಪೇಳಿದೆ ಶುದ್ಧ ದಾಸ ಭಾವವಿದನು
ಮನಸಿಗೆ ತಂದುಕೊಂಡು ಜ್ಞಾನಿಯಾಗೊ ಗುಣ
ಗಣಾಂಬುಧಿ ನಮ್ಮ ಪುರಂದರವಿಠಲ
ಅನುಸಾರಿಯಾಗಿ ತಾನು ಹಿಂದೆ ತಿರುಗುತಿಪ್ಪ ೧

ಮಠ

ಉದಯಕಾಲದಲೆದ್ದು ಮುದದಿಂದ ಹರಿನಾಮ
ಒದಗಿ ಆರತನಾಗಿ ವದನದಿ ಕೊಂಡಾಡಿ
ವಿಧಿಪೂರ್ವಕವಾಗಿ ಸ್ನಾನಾದಿ ಕರ್ಮ ಮುಗಿಸಿ
ಬುಧರಲ್ಲಿಗೆ ಪೋಗಿ ಕಥಾಶ್ರವಣ ಮಾಡಿ
ಆದರ ತರುವಾಯ ಉದರಕ್ಕೆ ಸಲುವಾಗಿ
ಸಾಧುಗಳ ಮನೆಯಲ್ಲಿ ಶುದ್ಧವೃತ್ತಿಯ ಮಾಡಿ
ಇದ್ದನಿತರೊಳು ಸಾಕ್ಷಿ ಭೂತನಾಗಿ
ಮೆದ್ದು ಸತ್ಕಾಲವನ್ನು ಕಳೆಯಬೇಕು
ಪದ್ಧತಿ ತಪ್ಪದಂತೆ ಈ ಧರೆಯೊಳಗೆ ಹೀ
ಗಿದ್ದವನೆ ನಿಜದಾಸನು ಕಾಣೊ
ಮುದ್ದು ಮೋಹನರಂಗ ಪುರಂದರವಿಠಲಗೆ
ಮುದ್ದಾಗುವವನೆ ನಿಜದಾಸನು ಸಿದ್ಧ ೨

ತ್ರಿವಿಡೆ

ಯಾಮರಾತ್ರಿಯೊಳು ನೀ ಸತ್ಕರ್ಮದ
ನೇಮವ ಮುಗಿಸಿ ಬಲು ಭಕುತಿಯಿಂದ
ಶ್ರೀಮುಕುಂದನಿಗೆ ಅರ್ಪಣವನು ಮಾಡಿ
ವಾಮಭಾಗದಿ ತನ್ನ ಸತಿಯಿಂದಲೊಡಗೂಡಿ
ಶ್ರೀ ಮನೋಹರನ ತುತಿಸಿಕೊಳುತ
ಪ್ರೇಮದಿಂದಲಿ ನಿದ್ರೆ ಕಳೆದು ನಿತ್ಯ
ಕಾಮಿನಿಯಳ ಬಿಟ್ಟು ಪೃಥುಕು ಶಯನನಾಗೆ
ಭೂಮಿಯೊಳವನೆ ಪಾವನನೊ
ಯಾಮವ ಮೀರಿ ಮಾಡಿದ ಸಾಧನ
ಆ ಮಹಾದೈತ್ಯರು ಸೆಳೆಕೊಂಬರು
ಮಾಮನೋಹರನ ದಿನದಲ್ಲಿ ಅವರ
ಸ್ವಾಮಿತ್ವ ನಡೆವುದಿಲ್ಲವು ಕಾಣಿರೊ
ಭೂಮಿಜಾಪತಿ ತನ್ನ ಚಕ್ರವ ತಿರುಗಿಸುವ ಕಾಮಕೆ
ದೈತ್ಯರ ಅಳಿವುದಕ್ಕೆ
ಪಾಮರ ಮನುಜರು ದಾಸವೇಷವ ಧರಿಸಿ
ನೇಮ ನಿತ್ಯಗಳೆಲ್ಲ ಪೋಗಾಡಿಸಿ
ಕಾಮಚಾರಿಗಳಾಗಿ ಕಂಡಲ್ಲಿ ಸಂಚರಿಸಿ
ಮಾಮನೋಹರನ ಲೀಲೆಯ ಪೇಳಿದರೇನೊ

ತಾಮಸದಾಸನೆಂದು ತಿಳಿಯೊ ಘೋರ
ತಮಸು ಅವಗಾಗುವುದು ಸಂದೇಹವಿಲ್ಲ
ಈ ಮಹಿಯೊಳು ಮೃಷ್ಟಾನ್ನ ಭೋಜನ ವಸನ
ವೇ ಮಹಾಫಲವೆಂದು ಹಿಗ್ಗಿ ಕೆಟ್ಟು ಹೋಗುವನು
ಕಾಮಿತಪ್ರದದೇವ ಅಂಥಾದ್ದೆ ಅವನಿಗೆ
ನೇಮಿಸಿಪ್ಪನು ಅವನ ಯೋಗ್ಯತೆಯಂತೆ
ಸ್ವಾಮಿ ತನ್ನ ನಿಜದಾಸನಾದವನಿಗೆ ನಾಮಸುಧೆಯನುಣಿಸಿ
ಸಲಹುತಿಪ್ಪ
ಈ ಮಹಾಭಾಗ್ಯಕ್ಕೆ ಎಣೆಗಾಣೆ ಎಣೆಗಾಣೆ
ಭ್ರಾಮಕನಾಗಿ ನೀ ಕೆಡಬೇಡವೊ
ಕಾಮಜನಕ ನಮ್ಮ ಪುರಂದರವಿಠಲನ್ನ
ಈ ಮನವೆಂಬ ಧಾಮದೊಳಗೆ ನಿಲಿಸಿ
ಪೂಜೆಯ ಮಾಡುವುದು ಸುಖ ಕಾಣೊ ೩

ಅಟ್ಟ

ಒಂದು ಪದವ ಪಾಡುತಲದನು
ಹಿಂದು ಕಳೆದು ಮತ್ತೊಂದು ಪಾಡಲು
ನೊಂದುಕೊಂಬರು ವರ್ಣಾಭಿಮಾನಿಗಳು
ಸಂದೇಹಜ್ಞಾನವುಳ್ಳ ಹರಿದಾಸ ಕಾಣೊ
ಒಂದೆರಡು ಸ್ಥಳದಿಂದ ತಿರುಗಿ ಪುಟ್ಟಿಸುವ
ಬಂದು ಉಂಟನು ಸಕಲ ಸೌಖ್ಯಂಗಳೆ
ಇಂದಿರೇಶನು ಇವಗೆ ಇದೇ ಕ್ಲುಪ್ತ ಮಾಡಿಪ್ಪ
ಮಂದಮನವೆ ಕೇಳು ಮದಡನಾಗಿ ನಾ
ನಂದ ಮಾತುಗಳೆಲ್ಲ ತಾರದೆ ನಮ್ಮ
ಕಂದರ್ಪನಯ್ಯಗೆ ದೂರನಾದೀ ಕಂಡ್ಯ
ವಂದಿಸಿ ನಿನಗೆ ಬೇಡಿಕೊಂಬೆನು
ಮಂದರಧರ ಸಿರಿ ಪುರಂದರವಿಠಲನ
ಹೊಂದಿ ಸಂಸಾರ ದುಃಖ ಕಳೆದು ಮುಕ್ತನಾಗೊ ೪

ಆದಿ

ನಿರುಪಾಧಿಕವಾಗಿ ಹರಿಸೇವೆ ಮಾಡದಪ್ಪಾಂಗೆ
ನರರ ನೀಕ್ಷಿಸಿಕೊಂಡು ಕುಳ್ಳಿರುವನು ಪಾ
ಮರನೊ ಹರಿದಾಸನಲ್ಲ ನರರೊಳು ವಾ
ನರನೊ ಪರಮ ಭಕುತಿಯಿಂದ ನರಹರಿ

ಚರಿತ್ರೆಯ ವರ ಸುಧಾಧಾರೆಯ
ಸುರಿಯಬೇಕು ತನ್ನ ಸ್ವರೂಪ ತೋರಗೊಡದೆ
ದುರುಳ ಜನಕೆ ದುರಾಚಾರಿಯಂತೆ ತೋರಬೇಕು ಅ
ವರು ಹೊಗಳುವಂದದಿ ಪೊಗಳುತ್ತಲೆ
ನರ ಜಾಣನಾದವ ಹಗಲು ಇರುಳು
ಹರಿದಾಸರ ಚರಣರಜವನ್ನು ಧರಿಸುವ
ಶಿರ ಬಾಗಿ ಪರಮಯೋಗ್ಯನಾಗಿ
ಪರಮ ಭಕುತಿಯ ಕೈಕೊಂಡು ಎಲೆ
ಮನವೆ ಇದು ಕಲಿಯುಗದೊಳು ಈ ಭಾಗ್ಯ ದುರ್ಲಭ
ಕರುಣಾಕರ ರಂಗ ಪುರಂದರವಿಠಲನೆ
ಪರಮಪ್ರಿಯನು ಇವನೆ ಹರಿದಾಸ ಕಾಣೊ ೫

ಜೊತೆ

ಜ್ಞಾನ ಭಕ್ತಿ ವೈರಾಗ್ಯ ನೀನು ಪಡೆಯೊ ಮನವೆ
ಶ್ರೀನಿಧಿ ಪುರಂದರವಿಠಲನ ದಯೆಯಿಂದ

ಮುಖ್ಯಗತಿ—ಮುಕ್ತಿ.
ಬಿನುಗುದೈವಂಗಳ—ಕೆಟ್ಟ, ಕ್ಷುದ್ರ ದೇವತೆಗಳ.
ಅನಿಮಿಷೇಶ—ಅನಿಮಿಷರೆಂದರೆ ದೇವತೆಗಳು ; ಅವರ ಒಡೆಯ.
ವೆಗ್ಗಳ—ಹೆಚ್ಚು.
ಆರತ—ಸಂತೋಷದಿಂದ.
ಶುದ್ಧವೃತ್ತಿ—ಉಂಛವೃತ್ತಿ.
ಇದ್ದನಿಸರೊಳು—ಇದ್ದವರಲ್ಲಿ (ಹೆಂಡತಿ, ಮಕ್ಕಳು, ಬಂಧು, ಬಳಗ).
ಧಾಮ—ಮಂದಿರ.
ಮದಡ—ಬುದ್ಧಿಯಿಲ್ಲದವ.
ನಿರುಪಾಧಿಕವಾಗಿ—ಯಾವ ಚಿಂತೆಯೂ ಇಲ್ಲದೆಲೆ.
ಚರಣರಜ—ಕಾಲಧೂಳು.

೩೦. ಭಕ್ತವತ್ಸಲಸುಳಾದಿ

ಪಂತುವರಾಳಿ ಧ್ರುವ

ಭಕುತರಿಗಾಗಿ ಬಾಳುವೆ ಅಯ್ಯಾ ನೀನು
ಭಕುತರಿಗಾಗಿ ಬದುಕುವೆ ಅಯ್ಯಾ ನೀನು
ಭಕುತರಿಗಾಗಿ ಗಳಿಸುವೆ ಅಯ್ಯಾ ನೀನು
ಭಕುತರಿಗಾಗಿ ಸಂತೈಸುವೆ ನೀನು
ಸಕಳೇಶ್ವರ ನಿನಗೊಂದು ಕಾರಣವಿಲ್ಲ
ಮುಕುತೇತರ ನಿನಗೊಂದು ಕಥನವಿಲ್ಲ
ಭಕುತರಿಗಾಗಿ ನಿನ್ನ ಜೀವನವಯ್ಯಾ
ಭಕುತವತ್ಸಲ ನಮ್ಮ ಪುರಂದರವಿಠಲ ೧

ಮಟ್ಟ

ಬೊಮ್ಮನ ಪಡೆದೆ ಬೊಮ್ಮನ ಪದದಲಿ ನಿಲಿಸಿದೆ
ರುದ್ರನ ಪಡೆದೆ ರುದ್ರನ ಪದದಲ್ಲಿ ನಿಲಿಸಿದೆ
ಇಂದ್ರನ ಪಡೆದೆ ಇಂದ್ರನ ಪದದಲಿ ನಿಲಿಸಿದೆ
ಚಂದ್ರನ ಪಡೆದೆ ಚಂದ್ರನ ಪದದಲಿ ನಿಲಿಸಿದೆ
ಎಲ್ಲ ದೇವರ್ಕಳ ಪಡೆದೆಲ್ಲ ಪದದಲಿ ನಿಲಿಸಿದೆ
ಭಕುತರುಂಡದ್ದೆ ಉಂಡದ್ದು ಭಕುತರುಟ್ಟಿದ್ದೆ ಉಟ್ಟಿದ್ದು
ಭಕುತರೊಡೆಯ ನೀನು ಭಕುತರಾಧೀನ ನೀನು
ಭಕುತವತ್ಸಲ ನಮ್ಮ ಪುರಂದರವಿಠಲ ೨

ರೂಪಕ

ಗಾಳಿ ಬೀಸಲು ಪೊಂದದಂತೆ ನೀನು
ಶೀಲಚಕ್ರವನಟ್ಟಿ ಭಕುತರ ಕಾಯಿದೆ
ಭಕುತವತ್ಸಲ ನಮ್ಮ ಪುರಂದರವಿಠಲ
ಅರಿ ಚಕ್ರವನಟ್ಟಿ ಭಕುತನ ಕಾಯಿದೆ ೩

ಝಂಪೆ

ಭಕುತರೆಂದರೆ ನೀನು ತೇಯುತಿಹೆ ಅಯ್ಯಾ
ಅರಗಿನಂತೆ ಕರಗಿ ಕರಗುತಿಹೆ ಅಯ್ಯಾ
ಭಕುತರಿಚ್ಛೆಯನು ನೀನು ನಡೆಸುತಿಹೆ ಅಯ್ಯಾ
ಭಕುತರವಸರಕೆ ಒದಗುವೆ ಅಯ್ಯಾ
ಭಕುತವತ್ಸಲ ನಮ್ಮ ಪುರಂದರವಿಠಲ ೪

ತ್ರಿವಿಡೆ

ಮೇರು ಮಂದರಾದಿ ಗಿರಿ ಗುಹೆಗಳಲ್ಲಿ
ಸಪ್ತಾಂಬುಧಿಗಳಲ್ಲಿ ಸಪ್ತ ದ್ವೀಪಗಳಲ್ಲಿ
ಮನಬಂದಂತೆ ಭಕುತರುಂಡದ್ದುಣುವಂತೆ
ನಿನ್ನ ಲಾಲನೆ ಎಂತೋ ಪುರಂದರವಿಠಲ ನಿನ್ನ ಲಾಲನೆ ಎಂತೊ ೫

ಅಟ್ಟ

ಭಕುತರಿಚ್ಛೆಯು ಮಾತ್ರದಲ್ಲಿ ಇದ್ದುದನು
ಕಂಡು ಕೇಳಿ ಉಂಡು ಬಲ್ಲೆನಯ್ಯ ನಾನು
ಅನವರತ ಅನುಭವಿಸಿ ಬಲ್ಲೆನಯ್ಯ ನಾನು
ನಮ್ಮ ಪುರಂದರವಿಠಲನ ಶೀಲ ಸ್ವಭಾವ ೬

ಏಕ

ಭಕುತರಿಗಾಗಿ ನಡೆವೆ ನುಡಿವೆ ನೀನು
ಭಕುತರಿಗಾಗಿ ಕೊಡುವೆ ಕೊಳ್ಳುವೆ ನೀನು
ಭಕುತರಿಗಾಗಿ ಬರುವೆ ಹೋಗುವೆ ನೀನು
ಭಕುತರ ಪ್ರಭು ನೀನು ಭಕುತರಧೀನ ನೀನು
ಭಕುತವತ್ಸಲ ನಮ್ಮ ಪುರಂದರವಿಠಲ ೭

ಜೊತೆ

ಬಂಟ ಬದಿಗನಾದೆ ಭಂಡಿಯ ಬೋವನಾದ
ಬಂಟರಿಗೆ ಬಂಟನಾದೆ ಪುರಂದರವಿಠಲ

ನಿನಗೊಂದು ಕಾರಣವಿಲ್ಲ—ಆಪ್ತಕಾಮನಾದುದರಿಂದ ಯಾವ ಪ್ರಯೋಜನಾಪೇಕ್ಷೆಯೂ ಇಲ್ಲ.

ಶೀಲಚಕ್ರವನಟ್ಟಿ—ಅಂಬರೀಷನನ್ನು ಕಾಪಿಡಲು ದುರ್ವಾಸಮುನಿಯ ಮೇಲೆ ಚಕ್ರ ಎರಗಿದ ಸಂದರ್ಭ.

ಅರಿಚಕ್ರವನಟ್ಟಿ—ಗಜೇಂದ್ರಮೋಕ್ಷದ ಸಂದರ್ಭ.

ಭಕುತರವಸರಕೆ—ಭಕ್ತರ ಆಪತ್ತಿನಲ್ಲಿ ಕಾಪಾಡುವುದಕ್ಕೆ.

ಬಂಟ ಬದಿಗನಾದೆ—ಸೇವಕನಾದೆ ; ಪಾಂಡವರಿಗೆ, ಬಲಿಚಕ್ರವರ್ತಿಗೆ.

ಭಂಡಿಯ ಬೋವ—ಅರ್ಜುನನಿಗೆ ಸಾರಥಿಯಾದೆ.

೩೧. ಆಪದ್ರಕ್ಷಕಸುಳಾದಿ

ಕೇದಾರಗೌಳ ಧ್ರುವ

ಇದರಿಂ ಬಿಟ್ಟಿನ್ನಿಲ್ಲೆಂಬ ಮಹಾಬಾಧೆ ಬರಲಿ
ಮತ್ತಿದರಿಂ ಬಿಟ್ಟಿನ್ನಿಲ್ಲೆಂಬ ಮಹಾಭೀತಿ ಬರಲಿ
ಮತ್ತಿದರಿಂ ಬಿಟ್ಟಿನ್ನಿಲ್ಲೆಂಬ ಮಹಾಅಪಾಯ ಬರಲಿ
ಮತ್ತಿದರಿಂ ಬಿಟ್ಟಿನ್ನಿಲ್ಲೆಂಬ ಮಹಾಉಪಾಯ ಬರಲಿ
ಆದಕೊಂದು ಇದಕೊಂದು ಯೋಚಿಸಬೇಡಿ ಕಾಣಿರೊ
ಪುರಂದರವಿಠ್ಠಲ ತನ್ನ ನಂಬಿದವರ
ಹಿಂದಿಕ್ಕಿಕೊಂಬ ಕಾಣಿರೊ ೧

ಮಟ್ಟ

ಅಪಾಯಕೋಟಲೆಗಳಿಗೆ ಉಪಾಯ ಒಂದೆ
ಹರಿದಾಸರು ತೋರಿಕೊಟ್ಟ ಉಪಾಯ ಒಂದೆ
ಅಪಾಯಕೋಟಿಕೋಟಿಗಳಿಗೆ ಉಪಾಯ ಒಂದೆ
ಪುರಂದರವಿಠ್ಠಲನೆಂದು ಬಾಯ್ಬಿಟ್ಟು ಕರೆವ
ಉಪಾಯ ಒಂದೆ ಕಾಣಿರೊ ೨

ತ್ರಿವಿಡೆ

ಅಜಾಮಿಳನ ಯಮದೂತರು ಎಳೆಯಲು
ಆಗಲಲ್ಲಿಗೆ ಬಂದರಚ್ಯುತನ ದೂತರು
ಯಮದಂಡವ ಖಂಡ ತುಂಡಿಸಲಾಕ್ಷಣ
ನಾರಾಯಣ ಎಂದು ಚೀರುವ ಧ್ವನಿ ಕೇಳಿ
ಆಗಲಲ್ಲಿಗೆ ಬಂದರಚ್ಯುತನ ದೂತರು
ಪುರಂದರವಿಠ್ಠಲ ಕರುಣಿಪನಾಗಿ ೩

ಅಟ್ಟ

ಹಾ ಕೃಷ್ಣ ದ್ವಾರಕಾವಾಸಿ ಎಂಬುದ ಕೇಳಿ
ದ್ರೌಪದಿಯ ಮಾನವ ಕಾಯಬೇಕೆನುತಲಿ
ಶ್ರೀಪತಿಯಕ್ಷಯವಸ್ತ್ರವರವನಿತ್ತು
ದ್ರೌಪದಿಯ ಮಾನವ ಕಾಯ್ದ ನಮ್ಮ
ಆಪತ್ತಿಗೆ ನೆಂಟ ಪುರಂದರವಿಠ್ಠಲ ೪

ಆದಿ

ಹರಿ ಹರೀ ಎಂದು ಕರೆವುದೆ ತಡ
ಕರೆದಲ್ಲಿಗೆ ಬಾಹ ಸುರನರ
ಉರಗ ಲೋಕದಲ್ಲಿದ್ದರು ಸರಿ ನೀ
ಕರೆವಲ್ಲಿಗೆ ಬಾಹ ಪುರಂದರ
ವಿಠ್ಠಲನೆಂದೊಮ್ಮೆ ಕರೆಯಲು ೫

ಜೊತೆ

ತನ್ನ ಡಿಂಗರಿಗರ ತಾನೆತ್ತಿಕೊಂಬಲ್ಲಿ
ಸನ್ನದ್ಧ ಸರ್ವದಾ ಪುರಂದರವಿಠಲ

ಇದರಿಂ—ಇದನ್ನು.
ಬಾಹ—ಬರುವ.
ಸುರ ನರ ಉರಗ ಲೋಕದಲ್ಲಿದ್ದರು—ದೇವಲೋಕ, ಭೂಲೋಕ, ಪಾತಾಳ ಲೋಕದಲ್ಲಿದ್ದರೂ.
ಡಿಂಗರಿಗರ—ಭಕ್ತರನ್ನು.
ಸನ್ನದ್ಧ—ಸಿದ್ಧ.

೩೨. ಸುಂದರಕಾಂಡಸುಳಾದಿ

ಭೈರವಿ ಧ್ರುವ

ಅಯ್ಯಯ್ಯ ಕೈಕೆ ಮುನಿದರೆ ಏನವ್ವ
ದಿವೌಕಸರನಾಳುವ ನಿನ್ನ ಅದ್ವೈತತನ
ಅಚಿಂತ್ಯಶಕ್ತಿ ಹೋಹುದೆ ಪ್ರಭುವೆ
ಅಯ್ಯ ಮಂಥರೆ ಜರಿದರೆ ಲೋಕ
ಪಂತಿಯನಾಳುವ ನಿನ್ನ ತಿಂತಿಣಿಯ
ಗೆಲುವ ಶೀಲವಹುದೆ
ವಿಭುವೆ ಅಯ್ಯಯ್ಯ ತಂದೆಯಲ್ಲದಿರೆ
ತರುಲತೆಗೆ ಪಶುಪಕ್ಷಿಗೆ ಚೇತನ ವೃಂದಕೆ
ಮುಕುತಿಯನಿತ್ತ ಮಹಿಮೆ ಹೋಹುದೆ ಅಯ್ಯ
ಆರು ಮುನಿದರೆ ಆರು ಜರಿದರೆ ಆರೊಲ್ಲದಿದ್ದರೆ ಹೀನವುಂಟೆ
ತಾರಕಬ್ರಹ್ಮ ದ್ವಿರೂಪನೆ ನಿನಗೆ ಅಯ್ಯ
ಜಾನಕಿವಲ್ಲಭ ಲಕ್ಷ್ಮಣಾಗ್ರಜ ಹನುಮನಾಳ್ದ
ರಾಮರಾಯ ಪುರಂದರವಿಠಲ ಅಯ್ಯ ೧

ಮಟ್ಟ

ತುಂಗವಕ್ಷ ತುರೀಯ ಮೂರುತಿಯ
ರಥಾಂಗಪಾಣಿಯ ತಂಗಿ ತಾರೆ
ಪರಮಪುರುಷ ಹರಿಯ ತರಣಿತೇಜನ
ಅಂಗನೆಯರ ಮನವ ಸೂರೆಗೊಂಬ ಸೂರೆಗೊಂಬ ತಂಗಿ ತಾರೆ
ತರಣಿತೇಜನ ತಂಗಲೇಕೆ ತಗರಲೇಕೆ
ಸಾರಂಗದಾಮನೊಲಿದರನದೇಕೆ ತಂಗಿ ತಾರೆ
ತರಣಿತೇಜನ
ರಂಗೇಶ ಪುರಂದರವಿಠಲ ಮಂಗಳಾಂಗ ೨

ರೂಪಕ

ಅರಿದನೊಬ್ಬ ನಾಸಿಕವ ನಿನ್ನನುಜೆಯ
ಪುರವನುರುಪಿ ದಾನವರ ಗೆದ್ದನೊಬ್ಬ
ಶರನಿಧಿಯ ದಾಂಟಿದನೊಬ್ಬ
ಸಿರಿಮುಡಿಯ ಮುಕುಟವ ಕಿತ್ತಿಟ್ಟನೊಬ್ಬ
ಪುರಂದರವಿಠಲರಾಯನ ತೋಟ ಬೇಡ
ಶರಣು ಹೊಕ್ಕು ಬದುಕುವ ಬಾರೆಲೊ ಅಣ್ಣಣ್ಣ ೩

ಅಟ್ಟ

ರಾಮ ರಾಮ ಎನುತ ಅಂಬುಧಿಯ ದಾಂಟಿದೆ
ರಾಮ ರಾಮ ಎನುತ ಅಸುರರ ಗೆಲಿದೆ
ಶ್ರೀರಾಮ ರಾಮ ಎನುತ ಭೂಮಿಸುತೆಯ ಪಾದವ ಕಂಡು
ಶ್ರೀರಾಮ ರಾಮ ಎನುತ ಪುರಂದರವಿಠಲ ಉಂಗುರವಿತ್ತ
ರಾಮನರ್ಧಾಂಗಿ ದೇವಿ ಚಿತ್ತೈಸು ಎನುತ ೪

ಏಕ

ರಾಮನೊಳು ಹನುಮನು ಸೇರುವನೆಂದರಿಯಿರೊ
ರಾಮನ ಕೈಯಿಂದ ಹತವಾಯ್ತು ರಾವಣನ
ಕಟಕವೆಂದರಿಯಿರೋ
ರಾಮನ ಪ್ರಸಾದದ ಧೊರೆಗಳ ಕೆಣಕದಿರಿರೋ
ರಾಮಬಾಣಕಿದಿರಾಗದಿರಿರೊ ದನುಜರೆಲ್ಲ
ರಾಮ ನಿಮ್ಮ ರಾವಣನ ಶಿರವ ಚೆಂಡಾಡುವನು
ರಾಮಪುರಂದರವಿಠಲನ ಪೊಂದಿ ಬದುಕಿರೊ ೫

ಜೊತೆ

ಸಹಸ್ರನಾಮ ಸಮ ರಾಮನಾಮ
ಮಹಾಮಹಿಮನು ಪುರಂದರವಿಠಲರಾಮ

[ಈ ಸುಳಾದಿಯು ಹನುಮಂತನ ಮಾತಿನಲ್ಲಿದೆ. ಎರಡನೆಯ ನುಡಿಯಲ್ಲಿ ವಾಲಿಯ ಹೆಂಡತಿ ತಾರೆಯನ್ನೂ ಮೂರನೆಯ ನುಡಿಯಲ್ಲಿ ರಾವಣನನ್ನೂ ಕುರಿತು ಹೇಳಿದಂತಿದೆ. ಉಳಿದೆರಡು ನುಡಿಗಳು ಸ್ವಗತ.]

ದಿವೌಕಸರರು—ದೇವತೆಗಳು.

ಅದ್ವೈತತನ—ಎಣೆಯಿಲ್ಲದ ಸ್ಥಿತಿ (ಏಕಮೇವಾದ್ವಿತೀಯ).

ಅಚಿಂತ್ಯಶಕ್ತಿ—ಊಹೆಗೂ ನಿಲುಕದ ಸಾಮರ್ಥ್ಯ.

ಲೋಕಪಂತಿ—ಲೋಕಪಂಕ್ತಿ, ಹದಿನಾಲ್ಕು ಲೋಕಗಳ ಸಾಲು.

ತಿಂತಿಣಿ—ಗಡಣ, ಸೇನೆ.

ತುರೀಯ ಮೂರುತಿ—ಜಾಗ್ರದಾದಿ ಮೂರು ಅವಸ್ಥೆಗಳಿಗೂ ಮೀರಿದ ಮೂರ್ತಿ.

ರಥಾಂಗಪಾಣಿ—ಚಕ್ರವನ್ನು ಹಿಡಿದವನು, ವಿಷ್ಣು (ರಾಮಾವತಾರಿ); ವಾಲಿಯ ಹೆಂಡತಿಯಾದ ತಾರೆಯನ್ನು ಸಲಹುವುದಾಗಿ ರಾಮನು ವಾಲಿಗೆ ವಾಗ್ದಾನ ಮಾಡಿದನಾಗಿ ಅವನ ತಂಗಿ.

ತರಣಿತೇಜ—ಸೂರ್ಯನ ತೇಜಸ್ಸುಳ್ಳವ.

ತಂಗಲೇಕೆ ತಗರಲೇಕೆ—ತಡೆಹಿಡಿಯಲೇಕೆ.

ನಿನ್ನನುಜೆಯು—ನಿನ್ನ ತಂಗಿ ಶೂರ್ಪನಖಿಯು (ಮೂಗನ್ನು ಕತ್ತರಿಸಿದ).

ಉರುಪಿ—ಸುಟ್ಟು.

ತೋಟ—ಜಗಳ.

ಕಟಕ—ಸೇನೆ.

ಸಹಸ್ರನಾಮಸಮ—ವಿಷ್ಣುಸಹಸ್ರನಾಮಕ್ಕೆ ಸರಿಯಾದುದು.

೩೩. ಹರಿಭಕ್ತಮಹಿಮಾಸುಳಾದಿ

ಧ್ರುವ

ಐವರು ನಡೆವ ಪಥ ರಾಜಪಥ
ಐವರು ನುಡಿದುದೆ ವೇದಾರ್ಥ
ಐವರು ಮಿಂದುದೆ ಗಂಗೆ ತೀರ್ಥ
ಐವರು ಮಾಡಿದುದೆ ನಾರಾಯಣ
ಐವರು ರಾಜಾಧಿರಾಜರುಗಳು ಕಾಣಿರೊ
ಐವರು ರಾಜಪರಮೇಶ್ವರರು ಕಾಣಿರೊ
ಐವರ ಗೋಷ್ಠಿಯಲ್ಲಿ ಪುರಂದರವಿಠಲನಿಪ್ಪ ೧

ಮಟ್ಟ

ಹಸ್ತಿನಪಟ್ಟನವ ನೇಗಿಲಲಿ ಎತ್ತಿದ್ದನೊಬ್ಬ
ಅಸ್ತಮಿಸಿ ದಿನಮಂಡಲ ಉದಯವಿತ್ತನೊಬ್ಬ
ಪೃಥ್ವಿಯ ಬಿಲ್ಲಿಂದ ಹರಹಿ ಇತ್ತವನೊಬ್ಬ
ಪೃಥ್ವಿಯಂ ಗೋವಿನಂತೆ ಕರೆದು ಕೊಟ್ಟವನೊಬ್ಬ
ವಸ್ತು ಪುರಂದರವಿಠಲನಿತ್ತ ಸಲಿಗೆಯೆಂತೊ ೨

ತ್ರಿವಿಡೆ

ಐವತ್ತು ಸಾವಿರ ಯೋಜನವೆತ್ತ
ಲಂಕಾಪಟ್ಟಣವೆತ್ತ ಸಂಜೀವನವೆತ್ತ
ಇದನಿಲ್ಲಿಂದಲ್ಲಿಗೀಡಾಡುವುದೆತ್ತ
ಪುರಂದರವಿಠಲನವರಪ್ರತಿಮರು ಕಾಣಿರೊ ೩

ಅಟ್ಟ

ಸ್ವರ್ಗದ ಮುತ್ತಿಗೆಯನು ಬಿಡಿಸುವರು
ಮಾರ್ಗಣದಿಂದೆಚ್ಚತ್ತು ಪಾತಾಳದುದಕವ
ವಿಗ್ರಹ ಭೂಮಿಯಲ್ಲಿಟ್ಟು ಮೆರೆವರು
ಆಗ್ರಣಿ ಪುರಂದರವಿಠಲನಾಳುಗಳು ೪

ಆದಿ

ಭಾಗೀರಥಿಯನೀಂಟಿದವರುಂಟೆ
ಸಾಗರವಾಪೋಶನ ಕೊಂಡವರುಂಟೆ
ನಾಗಾಭರಣವ ಮಾಡಿದವರುಂಟೆ
ಪುರಂದರವಿಠಲನ ದಾಸರಲ್ಲದಲೆ ೫

ಜೊತೆ

ಹರಿದಾಸರಿಗಿನ್ನು ಏನು ತೀರದಯ್ಯಾ
ಪುರಂದರವಿಠಲನ ಕರುಣ ಓವಿ ಕಾವುತಲಿದೆ

[ಮೊದಲ ಎರಡು ನುಡಿಗಳಲ್ಲಿ ಮಹಾಭಾರತದ ಪ್ರಸಂಗಗಳು, ಮೂರನೆಯ ನುಡಿಯಲ್ಲಿ ಹನುಮಂತನ ಸಾಹಸ, ಉಳಿದೆರಡು ನುಡಿಗಳಲ್ಲಿ ಇತರ ಹರಿಭಕ್ತರ ಸಾಹಸ ಗಳು ಉಲ್ಲೇಖಕ್ಕೆ ಬಂದಿವೆ.]

ಸ್ವರ್ಗದ ಮುತ್ತಿಗೆಯನು ಬಿಡಿಸುವರು—ದಶರಥ.

ಭಾಗೀರಥಿಯನೀಂಟಿದವರು...—ಅರ್ಜುನ (ಭೀಷ್ಮನು ಶರಶಯ್ಯೆಯಲ್ಲಿದ್ದಾಗ).

ಸಾಗರವಾಪೋಶನ...—ಅಗಸ್ತ್ಯ.

ನಾಗಾಭರಣವ...—ಶಿವ.

೩೪. ನರಸಿಂಹಸುಳಾದಿ

ಸಾವೇರಿ ಧ್ರುವ

ಅಂಜುವೆ ನಾನೀ ಸಿಂಗದ ಮೊಗದವ
ಹುಂಕರಿಸುವಿ ಮರೆದೊಮ್ಮೊಮ್ಮೆ
ಅಂಜುವೆ ನಾನೀ ತೆರೆವಾಯ ತೆರೆಯುತ
ಗಹಗಹಿಸುವಿ ಮರೆದೊಮ್ಮೊಮ್ಮೆ
ಅಂಜುವೆ ನಾನೀ ಘುಡಿಘುಡಿಸುತ
ಕಿಡಿಗಳೆರಗಿಸುವಿ ಒಮ್ಮೊಮ್ಮೆ
ಅಂಜುವೆ ನಾನೀ ಕಿವಿಯನುಳುಪಿ ಮೇಲೆ
ಕವಿದೆರಗುವಿ ಮರೆದೊಮ್ಮೊಮ್ಮೆ
ಅಂಜುವೆ ನಾನೀ ಸಿರಿ ಮುದ್ದುನರಸಿಂಹ
ಪುರಂದರವಿಠಲ ನೀ ಉರಿಮೋರೆದೈವವೆಂದಂಜುವೆ ೧

ಮಟ್ಟ

ಹಿರಣ್ಯಕಶಿಪುವಿನ ಉದರವ ಬಗೆದಬಳಿಕ
ಕರುಳುಮಾಲೆಯ ತೆಗೆದು ಕೊರಳೊಳಿಟ್ಟಬಳಿಕ
ಉರಿಯನುಗುಳಲೇತಕೆ ಸಿರಿಯ ನುಡಿಸಲೇತಕೆ
ಹರಬೊಮ್ಮಾದಿಗಳನು ಸರಕು ಮಾಡಲೇತಕೆ
ಸಿರಿ ಮುದ್ದುನರಸಿಂಹ ಪುರಂದರವಿಠಲ
ಪ್ರಹ್ಲಾದ ದೇವ ಬಂದರೆ ಹಿಡಿದು ಮುದ್ದಾಡಲೇತಕೆ ೨

ತ್ರಿವಿಡೆ

ಅಟ್ಟಹಾಸಕಬುಜಜಾಂಡ
ಕಟ್ಟಾಹ ಪ್ರತಿಧ್ವನಿಯುಗೊಡುತಿರೆ
ಮೆಟ್ಟಿದಿಳೆ ತಲೆ ಕೆಳಗಾಗುತಲಿರೆ
ಬೆಟ್ಟಗಳುರುಳುರಳಿ ಬೀಳುತಿರೆ
ಅಷ್ಟ ದಿಕ್ಕುಗಳ ಬೆಳಗುತಿರೆ
ಧಿಟ್ಟ ಮುದ್ದುನರಸಿಂಹ ಪುರಂದರ
ವಿಠಲ ನಿನಗೆದಿರಾರೀ ಜಗದೊಳು ೩

ಅಟ್ಟ

ಉರಿ ಸಾಗರಗಳು ಸುರಿಯೆ ನಾಲಿಗೆಯಿಂದ
ಚರಾಚರಂಗಳು ಚಾರಿವರಿಯುತಲಿರೆ
ಬ್ರಹ್ಮಾಂಡ ಒಂದೆ ಸಿಡಿದು ಹೋಗುತಿತ್ತು
ಬ್ರಹ್ಮ ಪ್ರಳಯ ಒಂದಾಗಿ ಪೋಗುತಿತ್ತು
ಸಿರಿ ಮುದ್ದುನರಸಿಂಹ ಪುರಂದರವಿಠಲ
ಪ್ರಹ್ಲಾದ ದೇವನು ನಿಲಿಸದಿರೆ ೪

ಆದಿ

ಹಿರಣ್ಯಕಶಿಪುವಿನುದರ ಬಗೆದುಗುರಲಿ
ಸರಸವಾಡಿದಿರ ನರಹರಿ ಸರಸವಾಡಿದಿರ ನಾನಂಜುವೆ
ಸರಸವಾಡಿದಿರ ಗರುಡಾಚಲವಾಸ
ಸಿರಿಮುದ್ದುನರಸಿಂಹ ಪುರಂದರವಿಠಲ
ಪುರಹರವಂದಿತ ಸರಸವಾಡದಿರಿ ನಾನಂಜುವೆ ೫

ಜೊತೆ

ಸಿರಿ ಮುದ್ದುನರಸಿಂಹ ಪುರಂದರವಿಠಲ
ಶರಣ ಪ್ರಹ್ಲಾದ ಸಂರಕ್ಷಕ ಜಯ ಜಯ

ಮರೆದು—ಅವತಾರಪ್ರಯೋಜನವು ಪೂರಯಿಸಿತೆನ್ನುವುದನ್ನು ಮರೆತು.
ಗಹಗಹಿಸುವಿ—ಜೋರಾಗಿ ನಗುವೆ.
ಸರಕುಮಾಡಲೇತಕೆ—ಸರುಕಿಸಲೇತಕ್ಕೆ ; ದೂರ ಸರಿಸುವುದೇತಕ್ಕೆ.
ಅಬುಜಾಂಡಕಟ್ಟಾಹ—ಬ್ರಹ್ಮಾಂಡಕಟಾಹ.
ಮೆಟ್ಟಿದಿಳೆ—ಕಾಲಿಂದ ತುಳಿದ ಭೂಮಿ.
ಚಾರಿವರಿಯುತಲಿರೆ—ಅತ್ತಿತ್ತ ಸುಳಿದಾಡುತ್ತಿರಲು, ಆಕ್ರಮಿಸುತ್ತಿರಲು.
ಬ್ರಹ್ಮಪ್ರಳಯ—ಬ್ರಹ್ಮನ ನೂರುವರ್ಷಗಳು ಕಳೆದಮೇಲೆ ಒದಗುವ ಮಹಾಪ್ರಳಯ.
ಪುರಹರವಂದಿತ—ತ್ರಿಪುರಗಳನ್ನು ಹಾಳುಮಾಡಿದ ರುದ್ರನಿಂದ ಪೂಜಿಸಲ್ಪಟ್ಟವನು.

೩೫. ಕ್ಷೇತ್ರಸುಳಾದಿ

ಧ್ರುವ

ವರಗಿರಿಯಿಂದ ತಿಮ್ಮಪ್ಪ ಬಂದ ಹಸ್ತಿ
ಗಿರಿಯಿಂದ ವರದರಾಜ ಬಂದ ಯದು
ಗಿರಿ ಶ್ರೀ ನಾರಾಯಣ ಬಂದ ಕಾವೇರಿ
ಶ್ರೀ ರಂಗನಾಥ ಬಂದ ಶ್ರೀಮುಷ್ಣದಿಂದ ಶ್ವೇತ
ವರಾಹ ಬಂದ ಪಂಢರಪುರದಿಂದ ಎನ್ನ ಮನೆಗೆ ಮನ್ನಿಸಿ
ಪುರಂದರವಿಠಲರಾಯ ಬಂದ ೧

ಮಟ್ಟ

ಬದರಿಕಾಶ್ರಮದಿಂದ ಬಾದರಾಯಣ ಬಂದ
ಕಿಂಪುರುಷಖಂಡದಿಂದ ಹನುಮನೊಡೆಯ ರಾಮ
ಚಂದ್ರ ಬಂದ ಕ್ಷೀರವಾರಿಧಿಯಿಂದ ಶ್ರೀಮಂತ ಪು
ರಂದರ ವಿಠಲರಾಯ ಬಂದ ೨

ತ್ರಿವಿಡೆ

ಶ್ರೀಮದನಂತಶಯನದಿಂದ
ಶ್ರೀಮದನಂತಶಯನ ಬಂದ
ಶ್ರೀ ಮಧ್ವಾಚಾರ್ಯರ ಮನೆದೈವ
ಶ್ರೀ ಮದ್ದ್ವಾರಾವತಿಯಿಂದ ಬಂದ
ಶ್ರೀಮದುಡುಪಿನ ಕೃಷ್ಣರಾಯ ಬಂದ
ಶ್ರೀಪತಿ ಪುರಂದರವಿಠಲರಾಯ ಬಂದ ೩

ಅಟ್ಟ

ಪ್ರಯಾಗ ಮಾಧವ ಕಾ
ಶಿಯಾದಿಕೇಶವ ಕ್ಲೇಶನಾಶನ ಬಂದ
ಗಯಾ ಗದಾಧರ ದಾಸರಿಗೊಲಿದು
ಪುರಂದರವಿಠಲರಾಯ ಬಂದ ೪

ಆದಿ

ಅತಳವಿತಳದಿಂದ ಸುತಳ ತಳಾತಳ ರ
ಸಾತಳ ಮಹಾತಳ ಪಾತಾಳದಿಂದ

ಭೂತಳ ನಭಸ್ಥಳದಿಂದಾನು ವಿಜನ ಮಹರ್ಲೋಕ
ಸತ್ಯಲೋಕದಿಂದ ಪರಮಪದವೀವ ಪರಿಪೂರ್ಣ
ಪುರಂದರವಿಠಲರಾಯ ಬಂದ ೫

ಜೊತೆ

ಲೋಕಸಂರಕ್ಷಣ ಅಸುರರ ಸಂಹರಣ
ಲೋಕೇಶ ಪುರಂದರವಿಠಲರಾಯ ಬಂದ

೩೬. ಉಡುಪಿ ಕೃಷ್ಣಸುಳಾದಿ

ಸಾವೇರಿ ಧ್ರುವ

ಅಂಗುಟ ಮಾತುರವೆಂಬ ಮೂರುತಿ ಪರೀಕ್ಷಿಸಿತು
ಕಂಡು ಕಂಡರಸಿಕೊಂಬ ಕಮನೀಯ ಮೂರುತಿಯು
ಆತುಮ ಮೂರುತಿ ಅಂತರಾತುಮ ಮೂರುತಿಯು
ಬಿಂಬಮೂರುತಿ ಜೀವದಾಕಾರ ಮೂರುತಿಯು
ಅಣುರೇಣುವೆಂಬ ಚಿನ್ಮಯ ಮೂರುತಿಯು
ಮುನಿಗಳ ಮನದಲ್ಲಿ ಮಿನುಗುವ ಮೂರುತಿಯು
ಬೊಮ್ಮಗಾದಾ ಮೂರುತಿಯು ತಾನೆಲ್ಲಿಂದಲ್ಲಿ ಬಂದಿತು
ಅಮರರಾಭರಣ ತಾ ಎಲ್ಲಿಂದದೆಲ್ಲಿಗೊದಗಿತೋ
ಎನಗೆ ಪ್ರಸನ್ನನಾದ ಉಡುಪಿನ ಕೃಷ್ಣಮೂರುತಿ
ಪುರಂದರವಿಠಲನನೊಲುಮೆ ಎಂತೋ ೧

ಜಗಣಮಟ್ಟ

ಮಂದಾರಮಲ್ಲಿಗೆ ತುರುಬಿಲಿ ದಿವ್ಯಾಂಬರನುಟ್ಟು ಗೋ
ವಿಂದನಾಡಿದಾಟಗಳನು ಪ್ರಬಂಧಗೀತೆಗಳ ಮಾಡಿ
ಚೆಂದಚೆಂದದಲಿ ಪಾಡಿದಳು ಮೊಸರುಮಂಥನದಲಿ ತನ್ನ
ಕಂದನ್ನ ಅದ್ವಿತೀಯ ಅಪ್ರಮೇಯಾಗಮ್ಯಗೋಚರನೆಂದು
ನಂದವ್ರಜವೆತ್ತ ಉಡಪಿನ ಕೃಷ್ಣನ ಮಹಿಮೆ ಎತ್ತಲೆಂದು
ವೃಂದಾರಕವಂದ್ಯ ಪುರಂದರವಿಠ್ಠಲನೆ ಬಲ್ಲನೆನುತಿರೆ ೨

ತ್ರಿವಿಡೆ

ಪೊಂಬಟ್ಟೆ ಪಾಲ್ ಮೊಸರಿಂದ ತೋದಿದೆ
ಕಂಬುಕಂಧರ ಕೆನೆಬೆಣ್ಣೆಯುಲೊರೆದಿದೆ
ಅಂಬುಜನಾಭ ನೀ ಎಲ್ಲೆಲ್ಲಿ ತುಡುತಿಂದೆ
ಎಂಬ ಗೋಪಿಗೆ ಕೃಷ್ಣ ಅಂಜುತಿರ್ದುದ ಕಂಡೆ
ಅಂಬುಜಭವಪಿತ ಈ ಉಡಪಿನ ಕೃಷ್ಣ
ತಾ ಬಾಲಕನಾದ ಪುರಂದರವಿಠ್ಠಲ ೩

ಅಟ್ಟ

ದೇವತರುವು ನಮ್ಮೀ ದೇವ ಕೊಳಲನೂದೆ
ದೇವನಾರಿಯರುಟ್ಟ ದೇವಾಂಗ ದುಗುಲವ
ಆವ ಸುಸ್ವರವೋ ಆವ ಸುಜಾತಿಯೋ
ಆವ ಮೋಹನವೋ ಇದಾವ ಮೂರ್ಛನವಪ್ಪ
ದೇವ ಪುರಂದರವಿಠ್ಠಲನಂಘ್ರಿಗಳನೆ
ಈ ಉಡಪಿನ ಕೃಷ್ಣನಾದ ಮೂರುತಿ ತಪ್ಪಾ ೪

ಆದಿ

ಒಂದು ಕೈಯಲಿ ಕಡೆಗೋಲು ಮ
ತ್ತೊಂದು ಕೈಯಲಿ ಕಡೆವ ನೇಣು
ನಿಂದು ತಾಯ ಮೊಗವ ನೋಡಿ
ನಂದನ ಕಂದ ನಲಿದಾಡುವ
ಧಿಂ ಧಿಂ ಧಿಂ
ಧಿಂ ಧಿತ ಮುದ್ದು ಪುರಂದರವಿಠಲ
ಉಡಪಿನ ಕೃಷ್ಣ ೫

ಜೊತೆ

ಉಡುಪಿನ ಸಿರಿಕೃಷ್ಣ ಪುರಂದರವಿಠ್ಠಲ
ಬಿಡೆನೊ ಬಿಡೆನೊ ನಿನ್ನ ಚರಣಕಮಲವ

ಅಂಗುಟ ಮಾತುರ—'ಅಂಗುಷ್ಠ ಮಾತ್ರಃ ಪುರುಷಃ'; ಹೃದಯಲ್ಲಿರುವ ಪರಮಾತ್ಮನ ಪರಿಮಾಣ ಹೆಬ್ಬೆರಳು ಮಾತ್ರವೆಂದು ಕಠೋಪನಿಷತ್ತಿನ ಒಕ್ಕಣೆ.

ಕಂಡು ಕಂಡರಸಿಕೊಂಬ—'ನಿಧಿಯ ಮೇಲಿದ್ದು ನಿಧಿಯ ಕಾಣದಂತೆ'.

ಆತುಮ—ಆತ್ಮ.

ಬಿಂಬಮೂರುತಿ—ಪ್ರತಿಬಿಂಬನಾದ ಜೀವನಲ್ಲಿ ಪ್ರೇರಕ, ನಿಯಾಮಕ, ಸಾಕ್ಷಿಕನಾಗಿರುವ ಬಿಂಬರೂಪೀ ಪರಮಾತ್ಮ.

ಬೊಮ್ಮಗಾದಾ—ಬ್ರಹ್ಮನಿಗೆ ಸೃಷ್ಟಿವ್ಯಾಪಾರದಲ್ಲಿ ಒದಗಿದ.

ಅಮರರಾಭರಣ—ದೇವತೆಗಳಿಗೆ ಭೂಷಣಪ್ರಾಯನಾದ.

ಉಡುಪಿನ—ಉಡುಪಿಯು ; ಉಡ್ಪು ಎಂಬುದು ಕ್ಷೇತ್ರದ ಹಳೆಯ ಹೆಸರು.

ನಂದವ್ರಜ—ನಂದಗೋಕುಲ.

ಪೊಂಬಟ್ಟೆ —ಬಂಗಾರದಂತೆ ಹೊಳೆಯುವ ಬಟ್ಟೆ.

ತೋದಿದೆ—ತೊಯ್ದಿದೆ.

ಅಂಬುಜಭವಪಿತ—ಬ್ರಹ್ಮನ ತಂದೆ, ವಿಷ್ಣು.

ದೇವತರುವು—ಕಲ್ಪವೃಕ್ಷ.

ದುಗುಲ—ದುಕೂಲ, ಬಟ್ಟೆ.

ಮೂರ್ಛನ—ಗಾನದ ಒಂದು ಕ್ರಿಯೆ.

೩೭. ಗೋರಂಟ್ಲ ಕೃಷ್ಣಸುಳಾದಿ

ಧ್ರುವ

ಕ್ಷೀರಾಂಬುಧಿಯೊಳಿಹ ವಿಷ್ಣುವೆ ನೀನು
ದೇವಕೀಜಠರದೊಳಿಹುದೇನಾಶ್ಚರ್ಯ
ಅನಂತಾಸನದಲ್ಲಿ ಅನಂತನು ನೀನು
ದೇವಕೀ ಜಠರದೊಳಿಹುದೇನಾಶ್ಚರ್ಯ
ವಿಶ್ವವ್ಯಾಪಕ ನೀನು ವಿಷ್ಣುವೆ ನೀನು
ಅಪ್ರಾಕೃತಾಪ್ರಮೇಯ ನಿರ್ವೀರ್ಯ ನೀನು
ಭಕ್ತರ ಪರಾಧೀನ ನೀನಾದೆಯಲ್ಲೊ
ಗೋರಂಟ್ಲ ಚೆನ್ನರಾಯ ಪುರಂದರವಿಠಲ ೧

ಮಟ್ಟ

ಅರಸೆ ಇದು ಅರಮನೆಯಂತೆ ನೋಡಾ
ಹರಿ ನೀ ದೇವಕಿ ಜಠರದೊಳಿರ್ದೆಯೆಂದು
ದೇವಕಿಯ ಜಠರ ವೈಕುಂಠ ನೋಡಾ
ಗೋರಂಟ್ಲ ಚನ್ನರಾಯ ಪುರಂದರವಿಠಲ ೨

ತ್ರಿವಿಡೆ

ವಾಸುದೇವ ಗರ್ಭವಾಸವ ಮಾಡಿದ ನೋಡಾ
ಹಾಸು ಮಂಚ ಶೇಷ ಶ್ರೀಸತಿಯು ತೊಡೆಯಲ್ಲಿ
ಈಶನಿಗೆ ಗುರುವಾದನೀತ
ವಾಸವಾದಿಗಳು ಆಳುಗಳಯ್ಯ
ಲೇಸು ಧಣಿ ಗೋರಂಟ್ಲ ಚನ್ನರಾಯ ಪುರಂದರವಿಠಲ ೩

ಅಟ್ಟ

ಬೊಮ್ಮಾದಿ ದೇವರುಗಳು
ಬೊಮ್ಮಾಂಡದಲ್ಲಿ ಚರಾಚರರು
ಚಾರಿವರಿವುತ್ತಲಿರಲು
ಬೊಮ್ಮಾಂಡ ಒಂದೆ ಬೊಮ್ಮಸ್ವರೂಪ
ಗೋರಂಟ್ಲ ಚನ್ನರಾಯ ಪುರಂದರವಿಠಲ ೪

ಏಕ

ಆನಂದವಾಗೆ ಅರ್ಧಾಂಗಿಯಾಗೆ
ಗೋರಂಟ್ಲ ಚನ್ನರಾಯ ಪುರಂದರವಿಠಲ ೫

ಜೊತೆ

ಗರ್ಭವಾಸ ಗೋರಂಟ್ಲ ಚನ್ನರಾಯ
ಪುರಂದರವಿಠಲ ನಮೋ ನಮೋ

ನಿರ್ವೀರ್ಯ—ಹೆಚ್ಚಾದ ವೀರ್ಯವುಳ್ಳವನು.

ಅರಮನೆ—ವೈಕುಂಠ.

ಚಾರಿವರಿವುತ್ತಿರಲು—ಗೋಗರೆಯುತ್ತಿರಲು, ಅಂಗಲಾಚುತ್ತಿರಲು, ಯುಕ್ತಿಯಿಂದ ಒಳನುಗ್ಗುತ್ತಿರಲು.

ಆನಂದ—ಲಕ್ಷ್ಮಿಯ ಹೆಸರು.

೩೮. ಹನುಮಂತಸುಳಾದಿ

ಸಾವೇರಿ

ಧ್ರುವ

ಹನುಮಂತನ ಬಲಗೊಂಡರೆ ಹರಿಪಾದಸೇವೆ ದೊರಕೊಂಬೋದೊ
ಹನುಮಂತನ ಬಲಗೊಂಡರೆ ನವವಿಧ ಭಕುತಿಯು ದೊರಕೊಂಬೋದೊ
ಹನುಮಂತನ ಬಲಗೊಂಡರೆ ತಾರತಮ್ಯ ಪಂಚಭೇದ
ಜ್ಞಾನ ದೊರೆಕೊಂಬೋದೊ

ಹನುಮಂತನ ಬಲಗೊಂಡರೆ ದಯದಿಂದ
ಪುರಂದರವಿಠಲ ತಾನೆ ಕೈಯ ಪಿಡಿವ ೧

ಮಟ್ಟ

ಹನುಮಂತನ ಕಾಣದೆ ವಾಲಿ ಬಳಲಿದ
ಹನುಮಂತನ ಕಂಡು ಸುಗ್ರೀವ ಬದುಕಿದ
ಹನುಮಂತನ ಪ್ರಿಯ ಪುರಂದರವಿಠಲ ೨

ಝಂಪೆ

ಎಂದೆಂದು ತನ್ನ ಮನ ಅಗಲದೆ ಇರು ಎಂದು
ಅಂದೇ ಇತ್ತನು ಬೊಮ್ಮಪದವಿ ಹನುಮಂತಗೆ
ತಂದೆ ಶ್ರೀ ರಾಮಚಂದ್ರ ಪುರಂದರವಿಠಲ
ಅಂದೇ ಇತ್ತನು ಬೊಮ್ಮಪದವಿ ಹನುಮಂತಗೆ ೩

ಅಟ್ಟ

ರೋಮ ಕೋಟಿಲಿಂಗ ಹೇಮಕುಂಡಲಧರ
ಭೀಮ ಒಡೆಯ ಬೆಳೆದನು ಬ್ರಹ್ಮಾಂಡಕ್ಕೆ
ಸ್ವಾಮಿ ಪುರಂದರವಿಠಲನ್ನ ನಿಜದೂತ ೪

ಆದಿ

ಹಬ್ಬಿದರ್ಜುನನ ಧ್ವಜಾಗ್ರದಲಿ
ಬೊಬ್ಬಿಟ್ಟು ಪರಬಲ ಬರಿದು ಮಾಡಿದ
ಸಬ್ಬಲ ಸೂರೆಗೊಂಡನು ಹನುಮಂತ
ಪುರಂದರವಿಠಲನ ಬಲುಬಂಟ ಹನುಮಂತ ೫

ಜೊತೆ

ವಿಜಯಿೂ ಭವ ಹನುಮಂತ ವಿಜಯಿೂ ಭವ ಗುಣವಂತ
ವಿಜಯಿೂ ಭವ ಪುರಂದರವಿಠಲರಾಯನ ಬಲುಬಂಟ ಹನುಮಂತ ೬

ನವವಿಧಭಕುತಿ—ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ದಾಸ್ಯ, ಸಖ್ಯ, ಅರ್ಚನ, ವಂದನ, ಆತ್ಮನಿವೇದನ.

ತಾರತಮ್ಯ ಪಂಚಭೇದ—ವಿವರಣೆಗೆ ಎರಡನೇ ಸಂಪುಟದ ಪ್ರಸ್ತಾವನೆ ನೋಡಿ.

ಬೊಮ್ಮಪದವಿ—ಮುಂದಿನ ಕಲ್ಪದಲ್ಲಿ ಈಗಿನ ಬ್ರಹ್ಮನು ಮುಕ್ತನಾಗಿ ಹನುಮಂತನು ಬ್ರಹ್ಮಪದವಿಯನ್ನು ಪಡೆಯುವನೆಂಬ ಕಲ್ಪನೆ. ವಿವರಣೆ ಆಗಲೆ ಬಂದಿದೆ.

ರೋಮ ಕೋಟಿಲಿಂಗ—ವಿವರಣೆ ಆಗಲೆ ಬಂದಿದೆ.

ಸಬ್ಬಲ—ಸರ್ವಬಲ.

೩೯. ಸಾಧನವಿಚಾರಸುಳಾದಿ

ಧ್ರುವ

ಸ್ವರ್ಗ ಮರ್ತ್ಯಪಾತಾಳದಲ್ಲಿ ತಿರುತಿರುಗಿ ಬಳಲಿದೆನು
ದೇಹ ಯೋಗ ವಿಯೋಗ ಹಮ್ಮು
ಮಮತೆಯಿಂದಲಿ ಬಳಲಿದೆನು
ಯಮನ ಪಟ್ಟಣಕ್ಕೆಂಭತ್ತೆಂಟು ಸಾಸಿರ ಬಾರಿ
ಹೋಗಿ ಬಂದು ಬಳಲಿದೆನಯ್ಯ ಅಲ್ಲಿ
ಯಮನಾಳುಗಳಿಂದ ನೊಂದೆನು ನಾನಲ್ಲಿ
ವೈತರಣಿಯಿಂದ ಬಳಲಿದೆನು ಅಲ್ಲಿ
ನರಕ ಭಾಜನನಾಗಿ ಹೋದೆನೋ ಪುರಂದರವಿಠಲ
ಇನ್ನಾರೆ ಆರೆನಯ್ಯ ಕರುಣಿಸು ಕರುಣಿಸಯ್ಯಾ
ಕರುಣಾಕರನೆ ದಮ್ಮಯ್ಯ ದಮ್ಮಯ್ಯ ೧

ಮಟ್ಟ

ಸಂಚಿತ ಕರ್ಮಗಳನಂತ ಕೋಟಿಗಳು
ಪ್ರಾರಬ್ಧ ಕರ್ಮಗಳು ಕೋಟಿ ಕೋಟಿಗಳು
ಆಗಾಮಿ ಕರ್ಮಗಳು ಕೋಟಿಕೋಟಿಗಳು
ಪುರಂದರವಿಠಲನ ಕಂಡಲ್ಲದೆಲ್ಲಿಯ ಮುಕುತಿ ೨

ಝಂಪೆ

ಜ್ಞಾನ ಭಕುತಿ ವೈರಾಗ್ಯವಿಲ್ಲದ
ಮಾನವ ಜನುಮವದೇತಕೆ ಸುಡುಸುಡು
ಆಹಾರ ಭಯ ನಿದ್ರೆ ಸ್ತ್ರೀಗೋಷ್ಠಿ ಎಂಬಿವು
ವಿಹಾರ ಪಶುಪಕ್ಷಿಮೃಗಕೆ ದಕ್ಕಲು ಸರಿ
ದೀನವತ್ಸಲ ಪುರಂದರವಿಠಲನ
ನೆನೆವ ಕ್ರಿಮಿಕೀಟಕಜನುಮವೆ ಸಾಕು ೩

ರೂಪಕ

ಕೃಛ್ರ ತಪದಿಂದ ಬರಿದೆ ಬಳಲುವರು ಗೋ
ವತ್ಸ ಪಥದಂತೆ ಭವ ಸಾಗರವ ದಾಂಟಿ ಆ
ಚಿತ್ಸುಖನೋಲೈಸಬಲ್ಲವರು ಗೋ
ವತ್ಸಪದದಂತೆ ಭವಸಾಗರವ ದಾಂಟಿ ಶ್ರೀ
ವತ್ಸಚಿಹ್ನ ಪುರಂದರವಿಠಲನವರು ೪

ತ್ರಿವಿಡೆ

ಚಂದ್ರಮ ನಿನ್ನ ಕಿತ್ತುಡಿಯ ಹಣ್ಣಿಂದ
ಇಂದ್ರ ನಿನ್ನ ಪಾರಿಜಾತವ ತಂದ
ಎಲೆ ದೇವತೆಗಳಿರ ಅಂಜಿ ಬೆಚ್ಚುತಲಿರಿ
ಪುರಂದರವಿಠಲನೆ ಉದ್ದಂಡ ದೈವ ನೋಡಿ ೫

ಅಟ್ಟ

ವರುಣದೂತರು ಬಂದು ನಂದಗೋಪನ ಪಿಡಿದುಕೊಂಡು
ವರುಣಪಾಶದಿ ಕಟ್ಟಿಕೊಂಡೊಯ್ಯಲು ವರುಣ
ಲೋಕಕ್ಕೆ ಧಾಳಿಯನ್ನಿಟ್ಟು
ವರುಣನ ಕೈಯಲಿ ಪೂಜೆ ಮಾಡಿಸಿಕೊಂಡ
ಪುರಂದರವಿಠಲ ಈಶರಿಗೀಶ ೬

ಆದಿ

ಸಾಸಿರಪುರುಷನೆ ಸಾಸಿರಲೋಚನನೆ
ಸಾಸಿರಕಂಠನೆ ಸಾಸಿರ ಭುಜನೆ
ಸಾಸಿರಚರಣನೆ ನಮೋ ಪುರಂದರವಿಠಲ ೭

ಜೊತೆ

ಎಲ್ಲಿ ಕಂಡೆರಗುವೆ ಎಲ್ಲಿ ಕೊಂಡಾಡುವೆ
ಫುಲ್ಲಲೋಚನ ನಮ್ಮ ಪುರಂದರವಿಠಲ

೪೦. ಭವಾಂಬುಧಿಸುಳಾದಿ

ಧ್ರುವ

ಹುಟ್ಟುವ ಭೀತಿ ಹೊಂದುವ ಭೀತಿ
ವಿಠಲನಂಘ್ರಿಯ ನೆನೆಯದವಗೆ
ಕಾಲದ ಭೀತಿ ಕರ್ಮದ ಭೀತಿ ಗೋ
ಪಾಲನ ದಾಸನಾಗದವಗೆ
ಅರಿಷಡ್ವರ್ಗದ ಮಹಾಭೀತಿ ಶ್ರೀ
ಹರಿನಾಮ ಉಚ್ಚರಿಸದವಗೆ
ಹಲವು ಮಾತಿನ್ನೇನು ಹಲವು ಭೀತಿ
ಶ್ರೀ ಪುರಂದರವಿಠಲನ ಪೂಜಿಸದವಗೆ ೧

ಮಟ್ಟ

ನಿನ್ನ ದಿವ್ಯನಾಮ ಸುಧಾಂಬುಧಿಯಲ್ಲಿ
ಮನ ಮುಳುಗಿಪ್ಪ ಮಹಾಮಹಂತರ
ನಿನ್ನ ದಿವ್ಯ ಚಿನುಮಾತ್ರ ಮೂರುತಿಯ
ಅನುಭವಿಸುವಾನಂದ ಭರಿತರ
ಅನುದಿನ ಅವರೊಳಿರಿಸೆನ್ನ
ಘನಮಹಿಮ ಪುರಂದರವಿಠಲವಿಭುವೆ ೨

ತ್ರಿವಿಡೆ

ನೀಲಘನಶ್ಯಾಮ ಕೋಮಲಾಂಗನ ಕಂಡು
ಅವ್ವ ಅವ್ವಾ ಎಂತು ನಿಲ್ಲಬಹುದೆ
ಇನ್ನೆಂತು ಸೈರಿಪೆನೆ ಆರಾದಡೇನಾದಡೆನ್ನ
ಚಿಣ್ಣನು ಪುರಂದರವಿಠಲನ್ನ ಅಪ್ಪಿದೆನವ್ವ ೩

ಅಟ್ಟ

ಮಂಗಳಮಯ ವಿಷ್ಣು ವಾಮನ
ಗಂಗಾಪಿತ ಹರಿಯೆ ಎನ್ನಲೆನ್ನ
ಅಂಗ ಪುಳಕಾಂಕವೆಂದಪ್ಪುದೆನ್ನ
ಕಂಗಳೆಲ್ಲಿ ಜಲವು ಉಕ್ಕುವುದು
ಪುರಂದರವಿಠಲನಂಘ್ರಿ ಭಜಕನೆಂದು ೪

ಆದಿ

ಮಂದರಧರನ ಮೊರೆಹೊಕ್ಕು ಬದುಕುವೆನೆ
ಇಂದು ನಾಳೆ ನಾಡದ್ದೆಂಬ ಮಂದಮತಿಯನಿನ್ನೇನೆಂಬೆ
ಹಿಂದೆ ಮುಂದೆ ಸುತ್ತಿ ಬಪ್ಪ ಮೃತ್ಯು ವಿಚಾರಿಸದೆ
ತಂದಂದು ಕೆಡಹುತಲಿದೆ ಭವಾಂಬುಧಿಯಲ್ಲಿ
ತಂದೆನಿಂದು ಪರಿಯಂತ ಈ ಬೆಂದ ಮನದೀಪ್ತಿಯ
ತಂದೆ ಕರುಣಿಸೆಲೆ ಪುರಂದರವಿಠಲ ವಿಭುವೆ ೫

ಜೊತೆ

ಮಾರರಮಣ ಭೂರಮಣ ಪುರಂದರವಿಠಲ
ಸಾರ್ವಭೌಮ ರಮಾರಮಣ

ಅರಿಷಡ್ವರ್ಗ—ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ.
ಮಹಾಮಹಂತರು—ಭಕ್ತರು.
ಆರಾದಡೇನಾದಡೆ—ಯಾರಾಗಲಿ, ಏನಾಗಲಿ.

೪೧. ಸಾತ್ತ್ವಿಕಭಕ್ತಿಸುಳಾದಿ

ಧ್ರುವ

ಒಂದಪರಾಧವೆ ಹರಿ ಹರಿ
ಎರಡಪರಾಧವೆ ಹರಿ ಹರಿ
ಒಂದೊಂದು ಪರ್ವತ ಎಂಥಾದ್ದೋ ದೇವ
ಒಂದನಂತ ಸಾಸಿರ ಲಕ್ಷ ಕೋಟಿ ಅಪರಾಧ
ಒಂದಾಗಿ ನೋಡದೆ ಹರಿ ನೀ ಹಿಂದಿಕ್ಕಿಕೊಂಡು ಕಾದೆ ಹರಿ ಹರಿ
ಎಂದೆಂದು ನಿನಗೆ ನಾ ಸಲೆ ದೂರ ಹೋದೆ ಪು
ರಂದರವಿಠಲ ಕೃಪಾಸಿಂಧುವೆ ನೀನಲ್ಲದುಂಟೆ ೧

ಮಟ್ಟ

ಆನೆಂತಾಡುವೆ ಆನೆಂತು ಪಾಡುವೆ
ಆನೆಂತೆಂತು ಮನಬಂದಂತೆ ನಡೆವೆ ನುಡಿವೆ
ಒಡನಾಡಿಸಿ ಅನುವಾಗಿಪ್ಪ ಪುರಂದರವಿಠಲನೊಬ್ಬನೆ ಕಾಣಿರೊ ೨

ತ್ರಿವಿಡೆ

ಶ್ರುತಿಗಳಿವೆ ಸ್ಮೃತಿಗಳಿವೆ ಯತಿತತಿ ವರಕೋಟಿಗಳ ಮಂತ್ರಗಳಿವೆ
ಇದೇನಯ್ಯ ಅತರ್ಕ್ಯನ ಅಪ್ರಮೇಯನಾಗಿ
ಪುರಂದರವಿಠಲನು ಒಲಿದವರಿಗೆ ಅಳವಡವೆ ೩

ಅಟ್ಟ

ಉತ್ತುಂಗ ತತ್ವ ಉತ್ತುಂಗ ಸತ್ವ
ಉತ್ತುಂಗ ನಾಮ ಉತ್ತುಂಗ ಮಹಿಮೆ
ತುರಿಯ ತುರಿಯ ತುರಿಯಾತೀತ
ಉತ್ತುಂಗ ಪಾಂಡುರಂಗ ಉತ್ತುಂಗ ಪುರಂದರವಿಠಲರೇಯ ೪

ರೂಪಕ

ಹಿರಿಯರಿಗೆ ಗುರುಗಳಿಗೆ ದೈವಜ್ಞರುಗಳಿಗೆ
ಶರಣೆನ್ನದನ್ಯಥಾ ಹರಿ ಭಕುತಿ ನಿಜ ಭಕುತಿ ಪುಟ್ಟುವದೆ
ಪುರಂದರವಿಠಲ ಹಿರಿಯರ ಕೈಪಿಡಿದವನಯ್ಯಾ ೫

ಆದಿ

ಸಾತ್ವಿಕರ ದೈವವೆ ನಿನ್ನ ಸಾತ್ವಿಕ ಭಕುತಿ ದೊರೆಗೊಂಬುದಲ್ಲದೆ
ಸಾತ್ವಿಕಪ್ರಿಯ ಪುರಂದರವಿಠಲರೇಯ ೬

ಏಕ

ಸನಕ ಸನಂದನ ಸನಾತನ ಸನತ್ಕುಮಾರ ಸನತ್ಸುಜಾತ
ಹನುಮಂತ ತುಂಬುರು ನಾರದಾದಿಗಳು ಅನೇಕ ವಿಧದಲಿ ಪಾಡುತಿರೆ
ಅನರ್ಘ್ಯರತುನಾದಿಗಳು ಪಾದಾರ್ಚನೆ ಗೈಸಿರಿ ಬರೆ ನೋಡೆ ನುಡಿಸಿ
ಅನೇಕ ವಿಧದಲಿ ಪಾಡುತಿರೆ ಇದೇನು ಮಹಿಮೆ
ಇದೇನು ಘನತೆಯೊ ನೀನೆ ಬಲ್ಲೆ ಪುರಂದರವಿಠಲ ೭

ಜೊತೆ

ವೈಕುಂಠಪುರದಲ್ಲಿ ಯೋಗಿಹೃದಯದಲ್ಲಿ
ಸೂರಿಯನಲ್ಲಿ ನೀನಿಪ್ಪೆ ಕಂಡ್ಯಾ ವೈಕುಂಠಪ್ರಿಯ ಪುರಂದರವಿಠಲ

ಆನೆಂತು—ನಾನು ಹೇಗೆ.

ಅನುವಾಗಿಪ್ಪ—ಅನುಕೂಲವಾಗಿರುವ.

ಸಾತ್ತ್ವಿಕಭಕುತಿ—ಏಕಾಂತಭಕ್ತಿ ; ವಿವರಣೆಗೆ ಎರಡನೇ ಸಂಪುಟದ ಪ್ರಸ್ತಾವನೆ ನೋಡಿ.

ವೈಕುಂಠಪುರದಲ್ಲಿ...—'ವೈಕುಂಠೇ ಯೋಗಿನಾಂ ಹೃದಿ ರವೌ' ಎನ್ನುವ ಸ್ಮೃತಿ ವಚನದ ಛಾಯೆ.

೪೨. ಕಲಿಕಾಲಸುಳಾದಿ

ಧ್ರುವ

ಅತಿಮೀರಿತು ಶ್ರೀಹರಿ ಹರಿ ಅನ್ಯಾಯ
ಕಲಿಕಾಲ ದುಷ್ಕಾಲ ಅತಿ ಅತಿ ಮೀರಿತು
ಅಕರ್ಮ ಕುಕರ್ಮ ಅತಿ ಅತಿ ಮೀರಿತು
ಪತಿಕರಿಸೆನ್ನ ಪುರಂದರವಿಠಲರೇಯ ೧

ಮಟ್ಟ

ಇನ್ನೆಂತೀ ಕಲಿಕಾಲವ ಕಳೆವೆ
ಇನ್ನೆಂತೀ ಪರಸುಖ ಗತಿಪಡವೆ
ಆನೆಂತು ನಿನ್ನ ಕಾಂಬುವೆ ಪುರಂದರವಿಠಲ ೨

ರೂಪಕ

ಈ ಕಲಿಯುಗದೊಳೊಂದೊಡಕಲ ಕವಡೆಗೆ
ದೇಹಬಂಧನಗಳ ಬಿಟ್ಟು ಕಾಂಬುತಿಹರೆ
ತನುಪ್ರಾಣಂಗಳ ತೊರೆದು ಕಾಂಬುತಿಹರೆ
ರನ್ನವನೆಂದರೆ ಮರೆದು ಕಾಂಬುವರೆ
ಆನೆಂತು ಜೀವಿಪೆ ಪುರಂದರವಿಠಲ ೩

ಆದಿ

ಇಂತೀ ಪಾಪವ ಕಳೆವೆಯಾಗಲಿ
ಎಂತು ಅಕರ್ಮವ ಕಳೆವೆಯಾಗಲಿ
ಎಂತಹ ನಾಯಕ ನರಕವೆ ಆಗಲಿ
ಎಂತಹನಾಥ್ಯ ಪುರಂದರವಿಠಲ ೪

ಏಕ

ಶ್ರೀಮನ್ನಾರಾಯಣ ಹರಿಪರಾಯಣರು
ಅಂಜುವರೆ ಭಯಕೆ ಪುರಂದರವಿಠಲ
ಹರಿಪರಾಯಣರು ೫

ಜೊತೆ

ಒಂದೆ ನಾಮವೆ ಸಾಕು ಮುಕುತಿಗೆ ಪು
ರಂದರ ವಿಠಲರೇಯ ಮಿಕ್ಕ ನಾಮಕೆ ಋಣಿ

ಅಕರ್ಮ—ವಿಹಿತವಾದ ಕರ್ಮಗಳನ್ನು ಮಾಡದೆ ಇರುವುದು.

ಕುಕರ್ಮ—ನಿಷಿದ್ಧವಾದ ಕರ್ಮಗಳನ್ನು ಮಾಡುವುದು.

ಪತಿಕರಿಸು—ನನ್ನನ್ನು ಒಪ್ಪಿಸಿಕೊಂಡು ಕಾಪಾಡು.

ಆನೆಂತು—ನಾನು ಹೇಗೆ.

ಹರಿಪರಾಯಣ—ಹರಿಯನ್ನೇ ಉತ್ತಮ ಗತಿಯನ್ನಾಗಿ ಭಾವಿಸಿಕೊಂಡವರು (ಪರ, ಮಿಗಿಲಾದ; ಅಯನ, ದಾರಿ).

೪೩. ಮುಕ್ತಿಸಾಧನಸುಳಾದಿ

ಧ್ರುವ

ಎಂಭತ್ತುನಾಲ್ಕು ಲಕ್ಷ ಯೋನಿಮುಖಂಗಳಲ್ಲಿ ಪುಟ್ಟಿ ಪುಟ್ಟಿ
ಹೊಂದಿ ಹೊಂದಿ ಬಳಲಿದೆನಯ್ಯಾ ನಾನು
ಸುಕೃತ ದುಷ್ಕೃತವೆಂಬೊ ಕರ್ಮಕೋಟಲೆಯಿಂದ
ತಾಪತ್ರಯದಿ ಬೆಂದು ಬಳಲಿದೆನಯ್ಯಾ ನಾನು
ಇಪ್ಪತ್ತೆಂಟುಕೋಟಿ ನಾಯಕನರಕಂಗಳಲಿ ಕಾಲನವರಿಗೆ ಸಿಲುಕಿ ಕಡು
ನೊಂದೆನಯ್ಯಾ ನಾನು
ಎಂದಿಗೆ ಮನುಷಜನ್ಮ ದೊರಕೊಂಡೆನೋ ಹರಿಯೇ
ಎಂದಿಗೆ ನಿನ್ನವರಂಘ್ರಿ ದೊರಕೊಂಡೆ
ಇನ್ನು ನಿನ್ನ ಬಿಟ್ಟು ಬಾಳಲಾರೆನಯ್ಯಾ ನಾನು
ಮೊರೆಹೊಕ್ಕೆ ಪುರಂದರವಿಠಲರಾಯ
ಕಾಯ್ದುಕೋ ದಮ್ಮಯ್ಯ ೧

ಮಟ್ಟ

ಅನಂತಾನಂತ ಜನ್ಮವೈದಾವೆ ಅನಂತಾನಂತ ಕರ್ಮಗಳೈದಾವೆ
ಅನಂತಾನಂತ ಪರಿಯಲಿ ಅವರಾಡಿಸಿ ನೋಡಲಾಗದೆ
ಅನಂತಾನಂತ ಪರಿಯಲಿ ಎನ್ನೊಬ್ಬನ ಸಂಸಾರಿಯ ಮಾಡದಿದ್ದರೆ
ಕಡಿಮೆಯೆ ನಿನಗೆ ಪುರಂದರವಿಠಲ ೨

ಅಟ್ಟ

ಸಂಸಾರಿಗೆ ಮನಸೋತು ಮೆಚ್ಚಿದ ಹೆಣ್ಣು
ಸಂಸಾರವನೆಂದು ಸಂತವಿಟ್ಟರಯ್ಯ
ಕಂಸಾರಿಗೆ ಮನಸೋತ ಮಾಧವಿಯರು
ಸಂಸಾರವನೆಂತು ಸಂತವಿಟ್ಟರಯ್ಯ
ಹಂಸಮೂರುತಿ ಪುರಂದರವಿಠಲನಲ್ಲಿ
ಹಂಸಿ ಹತ್ತಿದ ಬಳಿಕನ್ಯವನರಿಯರು ೩

ಝಂಪೆ

ಹರಿಯ ಭಕುತಿ ನರಹರಿಯ ಭಕುತಿ
ಸಿರಿಹರಿಯ ಭಕುತಿ ಎಂಬ ಸುಧೆಯ ಸಾಗರವಿರೆ
ಅರಿವರೆ ವಿಷಯವೆಂಬ ಕೊಳಚೆಯ ನೀರ

ಎಲೆ ಎಲೆ ಮನವೆ ನಳಿನನಾಭನ ನೆನೆ
ಎಲೆ ಮನವೆ ಜಲರುಹಾಕ್ಷನ ನೆನೆ
ಮರಳಿ ಮರಳಿ ಒಹ ಸಂಸಾರವ
ಗೆಲುವರೆ ಪುರಂದರವಿಠಲನ ಸ್ನೇಹಶಿಷ್ಟರ ನೆನೆ ೪

ಏಕ

ಸಾದೃಷ್ಟ ದೈವವೆಂಬ ಸಾಸಿರ ಮಂದಿ ಪ್ರಕೃಷ್ಟ ವಾದಿಗಳ ಕಾಲ್ಪಿಡಿದು ಬದುಕಿರಯ್ಯ
ವಿಠಲನೆಂಬಂತೆ ಕಾರಣ ಕಾಲ್ಪಿಡಿದು ಬದುಕಿರಯ್ಯ
ಸೃಷ್ಟಿಸ್ಥಿತಿಲಯಕೆ ಪುರಂದರವಿಠಲನೊಬ್ಬನೆ ಕರ್ತೃ ಕಾಣಿರೊ ೫

ಜೊತೆ

ಅಹಂಕಾರ ಮಮಕಾರಗಳಳಿದು
ಧಿಂ ಧಿಧಿಂ ಧಿಧಿಂ ಧಿ ಪುರಂದರವಿಠಲ

ಎಂಭತ್ತುನಾಲ್ಕು ಲಕ್ಷಯೋನಿ—ವಿವರಣೆ ಆಗಲೆ ಬಂದಿದೆ.
ಸುಕೃತ ದುಷ್ಕೃತ—ಪುಣ್ಯ, ಪಾಪ.
ತಾಪತ್ರಯ—ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ದುಃಖಗಳು.
ನಾಯಕನರಕಗಳು—ಮಹಾನರಕಗಳು ; ತಾಮಿಸ್ರ, ರೌರವ, ಕುಂಭೀಪಾಕ, ವಜ್ರ ಕಂಟಕ ಮೊದಲಾದುವು.
ಕಾಲನವರಿಗೆ—ಯಮದೂತರಿಗೆ.
ನಿನ್ನವರಂಘ್ರಿ—ನಿನ್ನ ಭಕ್ತರ ಅಡಿಗಳು.
ಸಂಖವಿಟ್ಟರಯ್ಯ—ಸುಖವಾಗಿ ಇರಿಸಿದರು.
ಮಾಧವಿಯರು—ಗೋಕುಲದ ಹೆಂಗಳೆಯರು.
ಹಂಸಮೂರುತಿ—ಪರಮಾತ್ಮ ; ಬಿಂಬರೂಪಿ.
ಹಂಸಿ—ಮುಕ್ತಿಯೋಗ್ಯ ಜೀವ.
ಗೆಲುವರೆ—ಗೆಲ್ಲಬೇಕಾದರೆ.
ಸ್ನೇಹ ಶಿಷ್ಟರು—ಭಕ್ತರು, ಭಾಗವತರು.
ಸಾದೃಷ್ಟ ದೈವ—ಅದೃಷ್ಟ (ಪರಮಾತ್ಮ)ನಿಂದ ಕೂಡಿದ ದೇವತೆಗಳು.
ಪ್ರಕೃಷ್ಟವಾದಿಗಳ—ಹರಿ ಸರ್ವೋತ್ತಮನೆಂದು ಹೇಳುವವರ.

೪೪. ಖಳಕೋಪಸುಳಾದಿ

ಧ್ರುವ

ಖಳರ ನೋಟವೇ ಹಾವಲ್ಲದೆ
ಹಾವ ಬೇರಿನ್ನರಸಲೇತಕೆ
ಖಳರ ನೋಟವೇ ಹುಲಿಯಲ್ಲದೆ
ಹುಲಿಯು ಬೇರಿನ್ನಸರಲೇತಕೆ
ಖಳರ ಕೂಟವೇ ವಿಷವಲ್ಲದೆ
ವಿಷವು ಬೇರಿನ್ನರಸಲೇತಕಯ್ಯ
ಖಳರೊಳಗೆನ್ನ ಹುಟ್ಟಿಸಿದೆ
ಖಳರಿಗೊಪ್ಪಿಸಿಕೊಟ್ಟೆಯಲ್ಲ
ಖಳರ ಖಂಡದಿಂಡೆಯು ಮುರಿವನೊ
ಖಳರ ನಿವಾರಣ ಪುರಂದರವಿಠಲ ೧

ಮಟ್ಟ

ಖಳರೈಶ್ವರ್ಯ ಖಳರ ವಿಭೂತಿ
ಖಳರಲಿ ದೌತ್ಯ ಖಳರ ವಿದ್ಯೆಗಳು
ಖಳರ ತ್ಯಾಗ ಖಳರ ಕರ್ಮ
ಖಳರ ಕಷ್ಟ ನಿಷ್ಠೂರಂಗಳು
ಪುರಂದರವಿಠಲನ ಪರಮಪ್ರಿಯರ
ಅವಮನ್ನಣೆ ಇವು
ಸದಾ ಸರ್ವದಾ ನೋಡಾ ೨

ರೂಪಕ

ಖಳರ ಕಷ್ಟ ನಿಷ್ಠೂರಂಗಳ ತಾಳಿದರೆಲಾ ಮನುಗಳು
ತಾಳಿದರೆಲಾ ಮುನಿಗಳು ತಾಳಿದರೆಲಾ ಸಕಲದೇವತೆಗಳು
ತಾಳಿದರೆಲಾ ಪುರಂದರವಿಠ್ಠಲನೊಲಿವನ್ನಕ್ಕ ೩

ಅಟ್ಟ

ಪಾಷಂಡರ ಕೂಡೆ ಕಾಳಗ
ವಿಷ್ಣುದ್ವೇಷಿಗಳ ಕೂಡೆ ಕಾಳಗ
ಕಾಳಗ ಕಾಳಗ ನಾಸ್ತಿಕರ ಕೂಡೆ
ಕಾಳಗ ಹರಿಡಂಭಿಕರ ಕೂಡೆ
ಪುರಂದರವಿಠಲ ಮೆಚ್ಚಿ ಕಾದಿಸಿ
ನಮ್ಮನೇ ಗೆಲಿಸುವ ೪

ಏಕ

ಅಸುರರ ಬದುಕು ಆ ಬಿಸಿಲಗುದುರೆ
ಆ ಸುರರ ಬದುಕು ಸುಸ್ಥಿರ ಕಾಣಿರೋ
ಅದಾವ ಜಗಜಗಂಗಳೊಳಗೆ
ಸುರರ ಬದುಕು ಸುಸ್ಥಿರ ಕಾಣಿರೊ
ಪುರಂದರವಿಠ್ಠಲನ ಕೋಪ ಪ್ರಸಾದದಿಂದ ೫

ಜೊತೆ

ಖಳಕುಲತಿಮಿರ ದಿವಾಕರನರ್ಥಿಯು
ಖಳಕಮಲೇಂದು ಪುರಂದರವಿಠ್ಠಲ

ಖಳೆರ—ಕೆಟ್ಟವರ.
ಖಂಡದಿಂಡೆ—ವ್ಯೆ.
ಅವಮನ್ನಣೆ— ನಿಂದನೆ, ಅವಮಾನ.
ಒಲಿವನ್ನಕ್ಕ—ಒಲಿಯುವವರೆಗೆ.
ಪಾಷಂಡರು—ಸಚ್ಛಾಸ್ತ್ರದಲ್ಲಿ ದೋಷಗಳನ್ನು ಹುಡುಕುವವರು ; ಸಿದ್ಧಾಂತವನ್ನೆಲ್ಲ ಮೂದಲಿಸುವವರು.
ಹರಿಡಂಭಕರ—ಹರಿಭಕ್ತರೆಂದು ಸೋಗುಹಾಕಿರುವವರ.
ಕೋಪ ಪ್ರಸಾದದಿಂದ—ಖಳರಲ್ಲಿ ಕೋಪ, ಭಕ್ತರಲ್ಲಿ ಪ್ರಸಾದ.
ಖಳಕುಲತಿಮಿರ ದಿವಾಕರ—ಕೆಟ್ಟವರ ಗುಂಪೆಂದು ಕತ್ತಲೆಗೆ ಸೂರ್ಯನಂತಿರುವ ಪರಮಾತ್ಮನನ್ನು.
ಅರ್ಥಿಯು—ಬಯಸುವವನು.
ಖಳಕಮಲೇಂದು—ರಾತ್ರಿಯಲ್ಲಿ ಅರಳುವ ನೈದಿಲೆಗೆ ಚಂದ್ರನಂತಿರುವ.

೪೫. ಗೋಪೀಗೀತಸುಳಾದಿ

ಧ್ರುವ

ಹಸುಗಳ ಕರೆವ ಧ್ವನಿ ಕರುಗಳ ಪಿಡಿದು ಬಿಡುವ ಧ್ವನಿ
ರಶನ ಕಂಕಣಗಳನಿಟ್ಟ ಯಶೋದೆಯು ಮೊಸರ
ಕಡೆವ ಧ್ವನಿ
ಪಯೋಬ್ಧಿಶಯನನ ಒಸೆದು ಪಾಡುವ ಧ್ವನಿ
ಸೆಳೆಮಂಚದ ಮೇಲೆ ಯೋಗನಿದ್ರೆಯೊಳಿಪ್ಪ
ಕುಸುಮಾಕ್ಷನುಪ್ಪವಡಿಸಲು ಮೈಮುರಿದೆದ್ದು
ಬಂದು ಗೋಪಿಯರ ನಿರಿಯು ಪಿಡಿದುಕೊಂಡು
ಮೊಲೆಯು ಕೊಡು ಹಸಿದೆನೆಂದೆಂಬ ಹರಿಯನೆತ್ತಿಕೊಂಡು
ತೊಡೆಯ ಮೇಲಿಟ್ಟು ಹನಿವ ಮೊಲೆಯೂಡಲು
ಆಡುವ ಕೃಷ್ಣರಾಯ ಬಿಡದೆ ಭಕುತಜನರ ಸಲಹುವ
ಸುಕುಮಾರಕ ಪುರಂದರವಿಠಲ ೧

ಮಟ್ಟ

ಪೊಂಬಣ್ಣದಂಬರವನುಟ್ಟು ಕಂಬಳಿಯ ಹೊದ್ದಿರೆ
ಅಂಬುಜಸಂಭವನಾಗಮ ಉಚ್ಚರಿಸೆ
ಕೊಂಬು ಕೊಳಲು ತುತ್ತೂರಿಗಳೂದುತಿರೆ
ಪುರಂದರವಿಠಲ ಎಂಬುದನರಿವೆ ನಾನು ೨

ಅಟ್ಟ

ಕೋಗಿಲೆಯಂತೆ ಕೂಗುವೆಯೊಮ್ಮೆ
ಗಿಳಿಯಂತೆ ಮಾತನಾಡುವೆಯೊಮ್ಮೆ
ದುಂಬಿಯಂತೆ ನಲಿದು ಪಾಡುವೆಯೊಮ್ಮೆ
ನವಿಲಂತೆ ಗರಿಕೆದರಿ ಆಡುವೆಯೊಮ್ಮೆ
ಒಮ್ಮೆ ಕೊಕ್ಕರೆಯಂತೆ ಕುಕ್ಕಿ,
ಒಮ್ಮೆ ಗೂಳಿಯಂತೆ ಗುಟುರಿ
ಒಮ್ಮೆ ಗೋವಳರಂತೆ ಗೋಲಿಯಾಡುವೆ
ಆವ ಲೀಲೆಯೋ ಪುರಂದರವಿಠಲ ೩

ರೂಪಕ

ಕಂಡೆವು ನಿನ್ನ ನೆಲೆ ಕೃಷ್ಣ ವೊಸರ ಬಿಸಳಿಗೆ
ಬೆಣ್ಣೆಯ ಗುಂಡಿಗೆವೆರೆಸಿ ಒಲುಮೆಯಿಂದ
ಕುಶಲವಾಡಿ ಮೀಸಲಳಿವೆ ಕಾಂಬ ಕಾಂಬರಿಗೆ
ಅಂಜುವೆವೆ ಪಾಂಡುರಂಗ ಪುರಂದರವಿಠಲ
ದೇವತೆಗಳ ಮಾನಿ ೪

ಝಂಪೆ

ವಿತ್ತದಹಂಕಾರ ಮಮಕಾರಗಳಿಂದ
ಸುತ್ತಿ ಸುತ್ತಿ ಸುಣ್ಣವಾದುದ ಕಂಡು
ಇತ್ತ ಬಾ ಇತ್ತಬಾರೆಂದು
ಉತ್ತರಿಸೆ ಸಂಸಾರಸಾಗರವ
ಭೃತ್ಯನಪ್ಪೆ ಪುರಂದರವಿಠಲ ೫

ಆದಿ

ಆವ ತೀರ್ಥದಲಿ ಮುಳುಗಿದೆನೊ ನಾ
ನಾವ ಕ್ಷೇತ್ರಗಳ ಮೆಟ್ಟಿದೆನೊ ನಾ
ನಾವ ಕ್ರತುಗಳ ನೆರೆ ನಡೆಸಿದೆನೊ ನಾ
ನಾವ ದೈವಗಳ ಭಜಿಸಿದೆನೊ
ದೇವ ಶ್ರೀಪುರಂದರವಿಠಲ ನಿನ್ನ
ಪಾವನ ಮೂರ್ತಿಯ ಕಂಡೆನೊ ನಾನಿಂದು ೬

ಏಕ

ಉಪಾಧಿಯಿಂದಲೆ ನಿನ್ನ ಭಜಿಸುವೆನೊ ನಿ
ರುಪಾಧಿ ನೀನೆಂಬುದನು ನಾನರಿಯದ ಕಾರಣ
ಅಪಾರಮಹಿಮನೆ ಉಪಾಧಿಯನಳಿದು ನಿ
ರುಪಾಧಿಯೆಂಬಂತೆ ಭಕುತಿಯ ನೀಡಯ್ಯ
ಅಪವರ್ಗವೀವ ಪುರಂದರವಿಠಲರಾಯ ೭

ಜೊತೆ

ಎನ್ನ ತನು ಮನ ಧನವಿಂದು ಸಾರ್ಥಕವಯ್ಯ
ನಿನ್ನನೆ ಸಾರಿದೆನೊ ಪುರಂದರವಿಠಲ

ರಶನ—ಹಗ್ಗ ; ಮೊಸರು ಕಡೆಯುವಾಗ ಕೈಯಲ್ಲಿ ಹಿಡಿದದ್ದು.

ಪಯೋಬ್ಧಿಶಯನ—ಕ್ಷೀರಸಮುದ್ರದಲ್ಲಿ ಪವಡಿಸಿರುವವನು.

ಒಸೆದು—ಸಂತೋಷಪಟ್ಟು.

ನಿರಿ—ಸೀರೆಯ ಮಡಿಕೆ.

ಅಂಬುಜಸಂಭವನಾಗಮ—ಬ್ರಹ್ಮನು ವೇದವನ್ನು.

ಗುಂಡಿಗೆ—ಕುಂಡಿಕೆ, ಸಣ್ಣಪಾತ್ರೆ.

ಬಿಸಳಿಗೆ—ಕೊಡ, ಗಂಗಾಳ.

ಕ್ರತು—ಯಜ್ಞ.

ಉಪಾಧಿ—ಕಾಮನೆ ; ಪ್ರಯೋಜನಾಪೇಕ್ಷೆ ; ಅಹಂಕಾರ ಮಮಕಾರಗಳಿಂದ ಒದಗಿದುದು.

ನಿರುಪಾಧಿ—ಯಾವ ಕಾಮನೆಯೂ ಇಲ್ಲದವನು ; ಆಪ್ತಕಾಮ, ಅಕಾಮ, ನಿತ್ಯತೃಪ್ತ.

ಅಪವರ್ಗ—ಮೋಕ್ಷ.

೪೬. ಜೋಗುಳಸುಳಾದಿ

ಧ್ರುವ

ಅಂಬುಧಿ ತೊಟ್ಟಿಲಾಗೆ ಆಲದೆಲೆಯಾಗಿ
ಅನಂತ ಮೃದುಹಾಸಿಗೆಯಾಗಿ ಅಯ್ಯ
ವೇದ ನೇಣುಗಳಾಗಿ ವೇದಾಂತದೇವಿಯರು
ಪಾಡಿ ಮುದ್ದಾಡಿ ತೂಗುವರಾಗಿ
ಆನಂದ ಗೋಪಿಯರು ಇನ್ನೆಂಥ ಪರಮಾನಂದವನುಂಬರೊ
ಪುರಂದರವಿಠಲ ಬಲ್ಲನಯ್ಯ

ಮಟ್ಟ

ಜೋ ಜೋ ಜೋ ಎನ್ನ ಸಿರಿಹರಿ ಮೂರುತಿ
ಜೋ ಜೋ ಜೋ ಎನ್ನ ಬೊಮ್ಮದ ಮರಿಯೆ
ಜೋ ಜೋ ಜೋ ಪುರಂದರವಿಠಲ
ಜೋ ಜೋ ಜೋ ಎನ್ನ ತಮ್ಮ ದಮ್ಮಯ್ಯ
ಜೋ ಜೋ ಜೋ ಎನ್ನ ಕಂದ ಗೋವಿಂದ ೨

ತ್ರಿವಿಡೆ

ಅಷ್ಟಮಹಿಷಿಯರು ಇಟ್ಟು ಗುಟ್ಟಲಿ ಅಯ್ಯ
ಸೋಳ ಸಾಸಿರ ಮಂದಿ ಆಳು ಮಾಡುವರೆನ್ನ
ಸೋಳ ಸಾಸಿರ ಮಂದಿ ಬೀಳುಮಾಡುವರೆನ್ನ
ಪುರಂದರವಿಠಲನ್ನ ಕಂಡಲ್ಲೆ ಬಿಡುವೆನೆ
ಮೇಲೆ ಬಂದದ್ದು ಮತ್ತೆ ನೋಡಿಕೊಂಬೆ ಅಯ್ಯ ಅಯ್ಯಾ ೩

ಅಟ್ಟ

ಮಂಥನ ಮಾಡಲು ಮಾಧವ ಮೊಸರೆ ಮೀಸಲು
ಇಂಥಾದ್ದುಂಟೆ ಬಿಡು ಬಿಡು ಕರದಲ್ಲಿ ಕಡೆಗೋಲು
ಎಂಥವನೊ ನೀನಂಜದೆ ಎನ್ನಾಳಿದೆ
ಪುರಂದರವಿಠಲ ಇಂಥಾದ್ದುಂಟೆ ಬಿಡು
ಬಿಡು ಕರದಲ್ಲಿ ಕಡಗೋಲು ೪

ಆದಿ

ದೇಹವ ಮಾಡಿದೆ ದೇಹವ ಕೂಡಿದೆ
ದೇಹವು ತಾನೆಂಬ ಭ್ರಮೆಯ ಬಿಡಿಸಿದೆ
ದೇಹಿ ನಾನಾದೆನೊ ದೇವ ನೀನಾದೆಯೋ
ಶ್ರೀವರನಾಥ ಪುರಂದರವಿಠಲ ॥

ಜೊತೆ

ಅನಂತಮೂರುತಿ ಅನಂತಕೀರುತಿ
ಅನಂತನಾಭ ಪುರಂದರವಿಠಲ

ನೇಣು—ಹಗ್ಗ

ವೇದಾಂತ ದೇವಿಯರು—ಉಪನಿಷತ್ತುಗಳೆಂಬ ಕನ್ನಿಕೆಯರು.

ಬೊಮ್ಮದ ಮರಿ—ಬಿಂಬರೂಪಿ.

ಅಷ್ಟಮಹಿಷಿಯರು—ರುಕ್ಮಿಣಿ, ಸತ್ಯಭಾಮೆ, ನೀಲೆ (ಸತ್ಯೆ), ಭದ್ರೆ, ಮಿತ್ರವಿಂದೆ, ಕಾಳಿಂದಿ, ಲಕ್ಷಣೆ ಮತ್ತು ಜಾಂಬವತಿಯರು.

ಸೋಳ ಸಾಸಿರ—ಹದಿನಾರು ಸಾವಿರ.

ಬೀಳಂ—ಬರಡು

ಮಂಥನ—ಕಡೆಯುವುದು.

ಭಾಗ ೩

ಉಗಾಭೋಗಗಳು

ಲೋಕನೀತಿ
ಹರಿಸ್ಮರಣೆ
ಹರಿದಾಸರು
ಹರಿದಾಸ್ಯ
ಆಹ್ನೀಕ–ಆಚಾರ
ಭಕ್ತಿ
ಮುಕ್ತಿ
ಫಲಶ್ರುತಿ

ಲೋಕನೀತಿ

೧

ಬೇವಿನ ಬೀಜ ಬಿತ್ತಿ ಬೆಲ್ಲದ ಕಟ್ಟೆಯ ಕಟ್ಟಿ
ಜೇನಮಳೆಗರೆದರೆ ವಿಷ ಹೋಹುದೇನಯ್ಯ
ಏನು ಓದಿದರೇನು ಏನು ಕೇಳಿದರೇನು
ಮನದೊಳಗಿನ ತಾಮಸ ಮಾಣದನಕ
ಕೊಳಲ ದನಿಗೆ ಸರ್ಪ ತಲೆದೂಗುವಂದದಿ
ಎನ್ನೊಡೆಯ ಕೇಳಯ್ಯ ಶ್ರೀಪತಿ ಪುರಂದರವಿಠಲ

ತಾಮಸ—ಕೆಟ್ಟತನ.

೨

ಹೃದಯದ ಮಲವನ್ನು ತೊಳೆಯಲರಿಯದೆ ತಾವು
ಉದಯದಲೆದ್ದು ಮಿಂದು ಗದಗದ ನಡುಗುತ್ತ
ಅದರಿಂದೇನು ಫಲ ಅದಕ್ಕಿಂತ ಉದಯಾಸ್ತಮಾನ
ನೀರೊಳಗಿಪ್ಪ ಮುದಿ ಕಪ್ಪೆ ಮಾಡಿದ ತಪ್ಪೇನಯ್ಯ
ಪುರಂದರವಿಠಲನ ನಾಮವ ನೆನೆಯದೆ
ದಿನಕಿನ್ನು ನೂರು ಬಾರಿ ಮುಳುಗಿದರೇನಯ್ಯ

೩

ಮರವಿದ್ದರೇನಯ್ಯ ನೆರಳಿಲ್ಲದನಕ
ನೆರಳಿದ್ದರೇನಯ್ಯ ನೀರಿಲ್ಲದನಕ
ನೀರಿದ್ದು ಫಲವೇನು ಒರತಿಲ್ಲದನಕ
ಧನವಿದ್ದು ಫಲವೇನು ಕೊಡುವ ಮನವಿಲ್ಲದನಕ
ಮನವಿದ್ದರೆ ಫಲವೇನು ಜ್ಞಾನವಿಲ್ಲದನಕ
ದೇವ ಪುರಂದರವಿಠಲರಾಯನ
ಊಳಿಗ ಮಾಡದವನ ಬಾಳುವೆಯಿದ್ದೇನು

ಒರತೆ—ಯಾವಾಗಲೂ ಉಕ್ಕಿ ಹರಿಯುವ ನೀರಿನ ಹಳ್ಳ.

೪

ಉರಿಗಂಜೆ ಸೆರೆಗಂಜೆ ಶರೀರದ ಭಯಕಂಜೆ
ಹಾವಿಗಂಜೆ ಚೇಳಿಗಂಜೆ ಕತ್ತಿಯ ಧಾರೆಗಂಜೆ
ಇನ್ನೊಂದಕ್ಕಂಜುವೆ ಇನ್ನೊಂದಕ್ಕಳುಕುವೆ
ಪರ ಧನ ಪರಸತಿಗೆರಡಕ್ಕಂಜುವೆನಯ್ಯ
ಹಿಂದೆ ಕೌರವ ರಾವಣರೇನಾಗಿ ಪೋದರು
ಮುಂದೆ ಸಲಹೊ ಪುರಂದರವಿಠಲ

೫

ನೀರಮೇಲಣ ಗುಳ್ಳೆಯಂತೆ ಈ ದೇಹ
ನಿಮಿಷವೋ ನಿಮಿಷಾರ್ಧವೊ ಕಾಣಬಾರದು
ಹಾರಲೇಕೆ ಪರಧನಕೆ ಪರಸತಿಗೆ
ಹಾರುವನ ಕಟ್ಟಬೇಕು ಹಾರುವನ ಕುಟ್ಟಬೇಕು
ಹಾರುವರನ ಕಂಡರೆ ಕೆನ್ನೆಯ ಮೇಲೆ ಹಾಕಬೇಕು
ಹಾರಲೇಕೆ ಪರಧನಕೆ ಪರಸತಿಗೆ
ಊರೊಳಗೆ ಐದು ಮಂದಿ ಹಾರುವರ್ಯೈದಾರೆ
ನೀನೆ ವಿಚಾರಿಸೊ ಪುರಂದರವಿಠಲ

[ಹಾರುವರೆಂದರೆ ಬ್ರಾಹ್ಮಣರು ; ವಿಷಯಗಳ ಕಡೆ ಹಾರುವುವು ಇಂದ್ರಿಯಗಳೂ ಹೌದು. ಪರಧನ ಪರಸತಿಗೆ ಆಸೆಪಡುವ ಬ್ರಾಹ್ಮಣರು ಯೋಗ್ಯರಲ್ಲ ; ಅವರನ್ನು ದಂಡಿಸಬೇಕು ಎಂದು ಶ್ಲೇಷಾರ್ಥ. ಇಂದ್ರಿಯಗಳನ್ನು ನಿಗ್ರಹಿಸಿಕೊಳ್ಳಬೇಕು ಎಂಬುದು ತಾತ್ಪರ್ಯ].

೬

ಸುಖವಾದಡೆ ಎನ್ನಿಂದಾಯಿತೆಂಬರು
ದುಃಖವಾದರೆ ದೈವ ಮಾಡಿತೆಂಬರು
ಸುಖಕೆ ತಾನಾರೊ ದುಃಖಕೆ ತಾನಾರೊ
ವಿಕಲನಾಗಿ ಕೆಡಬೇಡ ಮನುಜ
ರುಕುಮಣಿಯರಸ ಪುರಂದರ ವಿಠಲ
ಸುಖದುಃಖವ ಮಾಡಿಸುವ ಕಾಣೋ

ವಿಕಲ—ತಳಮಳಗೊಂಡು.

೭

ಕೀರ್ತಿ ಕಿಂಕರಗೆ ಅಪಕೀರ್ತಿ ಮಂಕುಗಳಿಗೆ
ನಷ್ಟ ಕಷ್ಟರಿಗೆ ಲಾಭ ಮಹಾತ್ಮರಿಗೆ
ದಾರಿದ್ರ್ಯ ದ್ರೋಹಿಗಳಿಗೆ ಅಂಧಂತಮವು ವಚನಭ್ರಷ್ಟರಿಗೆ
ಸಂದೇಹವಿಲ್ಲದಕೆ ಶ್ರೀ ಪುರಂದರವಿಠಲ

ಕಿಂಕರಗೆ—ಕೆಲಸಮಾಡುವವಗೆ.
ಕಷ್ಟರಿಗೆ—ಕಷ್ಟಕೊಡುವವರಿಗೆ.
ವಚನಭ್ರಷ್ಟರಿಗೆ—ಮಾತು ಕೊಟ್ಟು ತಪ್ಪುವವರಿಗೆ.

೮

ಕುಡಿಯಕೊಟ್ಟ ಅಮೃತದಂಥ ನೊರೆಹಾಲನೊಲ್ಲದೆ
ಬಟ್ಟಲೊಳಗೆ ತಿರಿತಿಂಬುವರು ಕೆಲರು
ಪಟ್ಟವಾಳಿಯ ನೀಡೆ ಅರಿವೆಯನೆ ಬಯಸುವರು ಈ
ಭ್ರಷ್ಟರಿಗೇನೆಂಬೆನೊ ಪುರಂದರವಿಠಲ

ಪಟ್ಟವಾಳಿ—ಬೆಲೆಬಾಳುವ ರೇಷ್ಮೆಯ ಬಟ್ಟೆ.
ಅರಿವೆ—ತುಂಡುಬಟ್ಟೆ.

೯

ಅಲ್ಲದ ಕರ್ಮವ ಆಚರಿಸಿದವ ಕೆಟ್ಟ
ಲಲ್ಲೆ ಮಾತಿನ ಸತಿಯ ನಂಬಿದವ ಕೆಟ್ಟ
ಎಲ್ಲರೊಳಗೆ ವಿರೋಧಿಸಿದವ ಕೆಟ್ಟ
ಬಲ್ಲಿದರೊಡನೆ ಸೆಣಸಾಡುವವ ಕೆಟ್ಟ
ಫುಲ್ಲನಾಭ ಶ್ರೀ ಪುರಂದರವಿಠಲನ
ಮೆಲ್ಲಡಿಗಳನು ನಂಬದವನು ಕೆಟ್ಟ ನರಗೇಡಿ

ಅಲ್ಲದ—ನಿಷಿದ್ಧವಾದ.
ಮೆಲ್ಲಡಿಗಳನು—ಮೃದುವಾದ ಪಾದಗಳನ್ನು.

೧೦

ಮನ ಶುದ್ಧಿಯಿಲ್ಲದವಗೆ ಮಂತ್ರದ ಫಲವೇನು
ತನು ಶುದ್ಧಿಯಿಲ್ಲದವಗೆ ತೀರ್ಥದ ಫಲವೇನು
ಮಿಂದಲ್ಲಿ ಫಲವೇನು ಮೀನುಮೊಸಳೆಯಂತೆ
ನಿಂದಲ್ಲಿ ಫಲವೇನು ಶ್ರೀಶೈಲದ ಕಾಗೆಯಂತೆ
ಹೊರಗೆ ಮಿಂದು ಒಳಗೆ ಮೀಯದವರ ಕಂಡು
ಬೆರಗಾಗಿ ನಗುತಿದ್ದ ಪುರಂದರ ವಿಠಲ

ತನುಶುದ್ಧಿ—ದೇಹದ ಶುಚಿ.
ಶ್ರೀಶೈಲದ ಕಾಗೆಯಂತೆ—ಶ್ರೀಶೈಲದ ದೇಗುಲದಲ್ಲಿ ಕಾಗೆ ನಿಂತೇ ಇರುತ್ತದೆ; ಭಕ್ತಿಯಿಂದಲ್ಲ ತಿನ್ನಲು ಏನಾದರೂ ದೊರೆತೀತೋ ಎಂದು.

೧೧

ಮನೆಯೆಂಬ ಆಸೆಯು ಎನ್ನ ಮುಂದುಗೆಡಿಸುತಿದೆ
ಮನೆವಾರುತೆಯು ಎನ್ನ ಭಂಗಪಡಿಸುತಿದೆ
ಧನದಾಸೆಯು ಎನ್ನ ದೈನ್ಯಪಡಿಸುತಿದೆ
ಇನಿತಾಸೆಯುಳಿದು ಬುದ್ಧಿ ನಿನ್ನಲ್ಲಿ
ನಿಲುವಂತೆ ಮಾಡೋ ಸಿರಿ ಪುರಂದರವಿಠಲ

ಮನೆವಾರುತೆ—ಗೃಹಕೃತ್ಯದ ತೊಂದರೆ.
ಇನಿತು—ಇಷ್ಟು.

೧೨

ಅನುಕೂಲವಿಲ್ಲದ ಸತಿಯು ವರ್ಜಿಸಬೇಕು
ವಿನಯದಿ ಗುರುಹಿರಿಯರ ಪೂಜಿಸಬೇಕು
ಮನಕೆ ಬಾರದ ಠಾವು ಬಿಟ್ಟು ತೊಲಗಬೇಕು
ವನಜನಾಭನ ದಾಸರ ಸಂಗವಿರಬೇಕು
ಪುರಂದರವಿಠಲನ ಚರಣವನು ನಿತ್ಯ ನೆನೆಯುತಲಿರಬೇಕು

ಠಾವು—ಸ್ಥಳ.

೧೩

ಬೇಡುವ ಕಷ್ಟಕ್ಕಿಂತ ಸಾವುದೆ ವರ ಲೇಸು
ಬೇಡುವವರಿಗೆ ವೊಬ್ಬಿ ಉಳಿಯೋದುಂಟೇನೊ ದೇವ
ಧೊರೆಯುಂಟು ಗೂಡು ಕಿರಿದುಮಾಡಿ
ಬಲಿಯ ದಾನವ ಬೇಡಿ ನಾಡು ಅರಿಯಲು
ಸ್ಥೂಲ ಸೂಕ್ಷ್ಮ ನಿನ್ನದೆ
ಬೇಡುವ ಕಷ್ಟವನು ನೀನೆ ಬಲ್ಲೆಯೊ
ಸ್ವಾಮಿ ಎನ್ನ ಬೇಡದಂತೆ ಮಾಡಯ್ಯ ಪುರಂದರವಿಠಲ

ವೊಬ್ಬಿ—ಒಂದೇ ಬಾರಿಯೆಂಬ ನಿಯಮ.

೧೪

ಏನ ಓದಿದರೇನು ಏನ ಕೇಳಿದರೇನು
ಹೀನ ಗುಣಗಳು ಹಿಂಗದ ಜನರು
ಮಾನಾಭಿಮಾನವ ನಿನಗೊಪ್ಪಿಸಿದ ಮೇಲೆ
ನೀನೆ ಸಲಹಬೇಕೊ ಪುರಂದರವಿಠಲ

೧೫

ಆಯುಸ್ಸು ಇದ್ದರೆ ಅನ್ನಕ್ಕೆ ಕೊರತಿಲ್ಲ
ಜೀವಕ್ಕೆ ಎಂದೆಂದು ತನುಗಳ ಕೊರತಿಲ್ಲ
ಸಾವು ಹುಟ್ಟು ಎಂಬೊ ಸಹಜಲೋಕದೊಳಗೆ
ಕಾಲಕಾಲದಿ ಹರಿಕಲ್ಯಾಣ ಗುಣಗಳ
ಕೇಳದವನ ಜನ್ಮ ವ್ಯರ್ಥ ಪುರಂದರವಿಠಲ

ತನುಗಳ—ದೇಹಗಳ (ಕರ್ಮದ ಅನುಭೋಗಕ್ಕಾಗಿ).

೧೬

ಒಂದು ಕಾಲದಲ್ಲಿ ಆನೆ ಕುದುರೆ ಮೇಲ್ಮೆರೆಸುವೆ
ಒಂದು ಕಾಲದಲ್ಲಿ ಬರಿಗಾಲಲ್ಲಿ ನಡೆಸುವೆ
ಒಂದು ಕಾಲದಲ್ಲಿ ಮೃಷ್ಟಾನ್ನವುಣಿಸುವೆ
ಒಂದು ಕಾಲದಲ್ಲಿ ಉಪವಾಸವಿರಿಸುವೆ
ನಿನ್ನ ಮಹಿಮೆಯ ನೀನೆ ಬಲ್ಲೆಯೊ ದೇವ
ಪನ್ನಗಶಯನ ಶ್ರೀ ಪುರಂದರವಿಠಲ

೧೭

ಹಸಿವಾಯಿತೇಳು ದೇವರ ತೊಳೆಯೆಂಬರು
ಹಸನಾಗಿ ಮನಮುಟ್ಟಿ ಪೂಜೆಯ ಮಾಡರು
ಹಾಸಿ ಹಾವಿನ ಬುಟ್ಟಿಯಂತೆ ಮುಂದಿಟ್ಟುಕೊಂಡು
ವಸುಧೆಯೊಳಗೆ ಉರಗಗಾರನ ಆಟ ಆಡುವರಯ್ಯ
ಪರಧನ ಪರಸತಿ ಪರದ್ರವ್ಯಕ್ಕೆರಗುವರು
ತೊರೆಯದಿದ್ದರೆ ದುರಿತ ಪೋಗುವುದೆ
ಸರುವವೆಲ್ಲವ ತೊರೆದು ಹರಿಯ ಧ್ಯಾನವ ಮಾಡಿದರೆ
ವರವ ಕೊಡುವ ನಮ್ಮ ಪುರಂದರವಿಠಲ

ಉರಗಗಾರ—ಹಾವಾಡಿಗ.
ಸರುವ—ಸರ್ವ, ಎಲ್ಲವನ್ನೂ.

೧೮

ಕೋಳಿಗೆ ಯಾತಕ್ಕೆ ಹೊನ್ನ ಪಂಜರವು
ಬೋಳಿಗೆ ಯಾತಕ್ಕೆ ಜಾಜಿ ಮಲ್ಲಿಗೆ ದಂಡೆ
ಆಳಿಲ್ಲದವನಿಗೆ ಅರಸುತನವ್ಯಾತಕ್ಕೆ ನಿನ್ನ
ಊಳಿಗವ ಮಾಡದನ ಬಾಳು ಇನ್ಯಾತಕ್ಕೆ
ಪೇಳಯ್ಯ ದೇವ ಶ್ರೀ ಪುರಂದರವಿಠಲ

೧೯

ಕೆಟ್ಟೆನೆಂದೆನಲೇಕೋ ಕ್ಲೇಶ ಪಡುವುದೇಕೋ ಗೇಣು
ಹೊಟ್ಟೆಗಾಗಿ ಪರರ ಕಷ್ಟ ಬಡಿಸಲೇಕೊ
ಹುಟ್ಟಿಸಿದ ದೇವ ಹುಲ್ಲು ಮೇಯಿಸುವನಲ್ಲ
ಬೆಟ್ಟದ ಮೇಲಿದ್ದರೇನು ವನದೊಳಿದ್ದರೇನು
ಸೃಷ್ಟಿ ಮಾಡಿದ ದೇವ ಸ್ಥಿತಿ ಮಾಡಲರಿಯನೆ
ಗಟ್ಟ್ಯಾಗಿ ಸಲಹುವ ಪುರಂದರವಿಠಲ

೨೦

ಗುರಿಯನೆಚ್ಚವನೆ ಬಿಲ್ಲಾಳು
ಹರಿಯ ಭಜಿಸಲರಿಯದವನೆ ಮಾಸಾಳು
ಹರಿಯೆಂದು ಓದದೆಲ್ಲವು ಹಾಳು
ಪುರಂದರವಿಠಲ ಪಾರ್ಥನ ಮನೆಯಾಳು

ಮಾಸಾಳು—ಮಾಸವಳ ; ಮಹಾವೀರ.
ಪಾರ್ಥ—ಅರ್ಜುನ.

೨೧

ಧರ್ಮಪಥವ ಮೆಟ್ಟಲು ಮನವೆರಗದು ದು
ಷ್ಕರ್ಮಕಾದೊಡೆ ಜಿಗಿಜಿಗಿದಾಡುವುದು ಯುಗ
ಧರ್ಮವೋ ಇದು ಹರಿಯೆ ಜೀವನ ಕರ್ಮವೋ
ದುರ್ಮಾಯ ಯುಕ್ತಿಯಿಂದ ಚರಿಸುವವರ ಮೈಯ
ಚರ್ಮವ ಸುಲಿಸದೆ ಬಿಡನೊ ಪುರಂದರವಿಠಲ

ದುರ್ಮಾಯಯುಕ್ತಿ—ಕೆಟ್ಟತನದ ಉಪಾಯಗಳು

೨೨

ಶ್ವಾನವ ಕಂಕುಳೊಳಿಟ್ಟು ವಾರಣಾಸಿಗೆ ಪೋದಂತೆ
ಮಾನವನೆ ಕೇಳೊ ಮದಮತ್ಸರಗಳ ಬಿಡದೆಲೆ
ಏನ ಮಾಡಿದರೇನು, ವ್ಯರ್ಥ
ಜ್ಞಾನಿ ಪುರಂದರವಿಠಲನ ನೆನೆಯೊ ಮರುಳೇ

೨೩

ಶರಧಿ ಸಡ್ಡೆಯ ಮಾಡಿ ಧರೆಯ ಕೂರಿಗೆ ಮಾಡಿ
ಹರಬೊಮ್ಮರೆಂಬ ಎರಡೆತ್ತುಗಳ ಹೂಡಿ
ನರ ಜೀವರಾಶಿಗಳೆಂಬ ಬೀಜವನೆ ಎತ್ತಿ
ಧರೆಯಲ್ಲಿ ಬಿತ್ತುವಾತ ಇಂದ್ರ ಬೆಳೆಸುವಾತ ಚಂದ್ರ
ಕಳೆಯ ಕೀಳುವವ ಯಮಧರ್ಮನಯ್ಯ
ಬಿತ್ತಿದಾತನು ಬೆಳೆಯನು ಒಕ್ಕಿಕೊಂಡೊಯ್ಯೆ
ದುಃಖವೇತಕೆ ಸಿರಿಪುರಂದರವಿಠಲ

೨೪

ಶ್ರೀಪತಿಯ ಕಟಾಕ್ಷವೀಕ್ಷಣವು ತಪ್ಪುವಾಗ
ಅನೇಕ ಬಂಧುಗಳು ಲಕ್ಷ ವೈದ್ಯರುಗಳು
ಇರಲಾಗಿ ಕಣ್ಣಕಣ್ಣ ಬಿಡುವರು
ತಾಪಸಿಯರಣ್ಯದೊಳಗೆ ಒಬ್ಬ ಒಂಟಿಯಾಗಿರಲು
ಅಂಜಬೇಡೆಂದು ನಮ್ಮ ಕಂಜನಾಭನೆ ಬಂದು
ಆಪತ್ತುಗಳ ಪರಿಹರಿಸುವ ನಮ್ಮ ಪುರಂದರವಿಠಲ

೨೫

ತುಲಸಿಯಿರಲು ತುರುಚಿಯನು ತರುವಿರೋ
ಗಂಗೆಯಿರಲು ತೋಡಿದ ಕೂಪದಿ ಪಾನವ ಮಾಡಿದೆ
ರಾಜಹಂಸವಿರಲು ಕೋಯೆಂದು ಕೂಗುವ ಕೋಳಿಗೆ ಹಾಲೆರೆದೆ
ಬಾವನ್ನವಿರಲು ಬೇಲಿಯ ನೆಳಲೊಳೊರಗಿದೆ
ತಾಯಿಯ ಮಾರಿ ತೊತ್ತನು ತರುವ ಮಾನವನಂತೆ
ಪುರಂದರವಿಠಲ ನೀನಿರಲನ್ಯತ್ರ ದೈವಂಗಳ ಎಣಿಸಿದೆನೊ

ಬಾವನ್ನ—ಗಂಧದ ಮರ.

೨೬

ಹೊಲೆಯು ಬಂದಾನೆಂದು ಒಳಗೆ ದೇವರಮಾಡಿ
ಘಣ ಘಣ ಘಂಟೆ ಬಾರಿಸುತ
ತನುವಿನ ಕೋಪ ಹೊಲೆಯಲ್ಲವೇನಯ್ಯ
ಮನಸಿನ ವಂಚನೆ ಹೊಲೆಯಲ್ಲವೇನಯ್ಯ
ಇಂಥಾ ಹೊರಗಿದ್ದ ಹೊಲೆಯನ್ನ ಒಳಗೆ ತುಂಬಿಟ್ಟುಕೊಂಡರೆ
ಇದಕೇನು ಮದ್ದೋ ಪುರಂದರವಿಠಲ

೨೭

ಮನ ಚಂಚಲದಿ ತಪವ ಮಾಡಲಶಕ್ಯವು
ಘನ ಅಜ್ಞಾನದಿ ಹಲವು ಕರ್ಮ ಹತ್ತವು
ಧನಶುದ್ಧಿಯಿಲ್ಲದ ದಾನವು ವ್ಯಥಾ ಇವು
ಇನಿತಾದ್ದರಿಂದ ಪುರಂದರವಿಠಲ ಈ ಯುಗದಿ
ತನ್ನ ನಾಮಸ್ಮರಣೆ ಲೇಸೆಂದನು

ಹತ್ತವು—ಪಕ್ವವಾಗುವುದಿಲ್ಲ.
ಧನಶುದ್ಧಿಯಿಲ್ಲದ ...—ಹಣವನ್ನು ನೀತಿಯಿಂದ ಗಳಿಸದಿದ್ದರೆ, ಅದರ ದಾನವು ವ್ಯರ್ಥ.
ಇನಿತಾದ್ದರಿಂದ—ಹೀಗಿರುವುದರಿಂದ.



ಹರಿಸ್ಮರಣೆ

೨೮

ಹರಿಯೆಂಬೋದು ಲಗ್ನಬಲವು
ಹರಿಯೆಂಬೋದೆ ಸುದಿನ ಬಲವು
ಹರಿಯೆಂಬೋದೆ ತಾರಾಬಲವು
ಹರಿಯೊಬೋದೆ ಚಂದ್ರಬಲವು
ಹರಿಯೆಂಬೋದೆ ವಿದ್ಯಾಬಲವು
ಹರಿಯೆಂಬೋದೆ ದ್ರವ್ಯಬಲವು
ಹರಿ ಲಕ್ಷ್ಮೀಪತಿ ಪುರಂದರವಿಠಲನೆ
ಬಲವಯ್ಯ ಸರ್ವ ಸುಜನರಿಗೆ

೨೯

ಕ್ರಿಮಿಕೀಟನಾಗಿ ಹುಟ್ಟಿದಂದು ಹರಿ ಶರಣೆಂತೆನಲುಂಟೆ
ಹರಿ ಹರಿಣನಾಗಿ ಹುಟ್ಟಿದಂದು ಹರಿ ಶರಣೆಂತೆನಲುಂಟೆ
ಕತ್ತೆ ಕರಡಿಯಾಗಿ ಹುಟ್ಟಿದಂದು ಹರಿ ಶರಣೆಂತೆನಲುಂಟೆ
ಹಂದಿ ಶುನಕನಾಗಿ ಹುಟ್ಟಿದಂದು ಹರಿ ಶರಣೆಂತೆನಲುಂಟೆ
ಮರೆತೀಯೆ ಮಾನವ ನಿನ್ನ ಹಿಂದಿನ ಭವಗಳ ನೊಂದು
ಮಾನುಷದೇಹ ಬಂದಿತೋ ನಿನಗೀಗ
ಬೇಗ ನೆನೆಯುಲೋ ಪುರಂದರವಿಠಲರಾಯನ

ಹರಿ—ಸಿಂಹ.
ಹರಿಣ—ಜಿಂಕೆ.
ಶುನಕ—ನಾಯಿ.

೩೦

ಗುರುಕರುಣ ಹೊಂದುವುದು ಪರಮದುರ್ಲಭವಯ್ಯ
ಪರಿಪರಿವ್ರತಗಳನಾಚರಿಸಲು ಫಲವೇನು
ಶರೀರಾದಿ ಪುತ್ರ ಮಿತ್ರ ಕಳತ್ರ ಬಾಂಧವರು
ಇರಿಸುವರೆ ಸದ್ಗತಿಗೆ ಸಾಧನದಿ
ನಿರುತವು ಗುರುಪಾದ ನಿಜವಾಗಿ ಮನದಲ್ಲರಿತು ಭಜಿಸಲು
ಅಖಿಲಸಂಪದವಕ್ಕು ಪುರಂದರವಿಠಲ

೩೧

ಅಪಾಯ ಕೋಟಿ ಕೋಟಿಗಳಿಗೆ
ಉಪಾಯಂವೊಂದೆ
ಉಪಾಯವೊಂದೆ ಹರಿಭಕ್ತರು ತೋರಿಕೊಟ್ಟ
ಉಪಾಯವೊಂದೆ
ಪುರಂದರವಿಠಲನೆಂದು ಭೋರಿಟ್ಟು ಕರೆವ
ಉಪಾಯವೊಂದೆ

೩೨

ಒಬ್ಬರ ಭಂಟನಾಗಿ ಕಾಲ ಕಳೆವುದಕ್ಕಿಂತ
ನಿರ್ಬಂಧವಿಲ್ಲದೆ ತನ್ನಿಚ್ಛೆಯೊಳಿದ್ದು
ಲಭ್ಯವಾದೊಂದು ತಾರಕ ಸಾಕು ಎನಗೆ
ಅಬ್ಬರ ಒಲ್ಲೆನಯ್ಯ ಅಷ್ಟರಲ್ಲೆ ಸಂತುಷ್ಟಗರ್ಭಿ
ಕರುಣಾಕರ ಪುರಂದರವಿಠಲ ಲಭ್ಯ
ಒಂದು ತಾರಕ ಸಾಕು ಸಾಕು

ತಾರಕ—ಸಂಸಾರವನ್ನು ದಾಟಿಸುವ ಮಂತ್ರ.
ಸಂತುಷ್ಟಗರ್ಭಿ—ನೆಮ್ಮದಿಯ ಒಡಲುಳ್ಳವನು.

೩೩

ಹರಿಸರ್ವೋತ್ತಮನೆಂಬ ಹಿರಿಯ ಪುತ್ರನಿರಲಾಗಿ ಈ
ನರಪುತ್ರರಿಂದ ಆಹೋದೇನಯ್ಯ
ಪದ್ಮನಾಭನೆಂಬ ದೊಡ್ಡ ಪುತ್ರನಿರಲಾಗಿ
ಈ ದಡ್ಡ ಪುತ್ರರಿಂದಲಿ ಆಗುವ ಗತಿಯೇನಯ್ಯ
ಶ್ರೀ ಕೇಶವನೆಂಬ ಜ್ಯೇಷ್ಠ ಪುತ್ರನಿರಲಾಗಿ
ಈ ನಷ್ಟ ಪುತ್ರರಿಂದಾಗುವ ಸ್ಥಿತಿಯೇನಯ್ಯ
ಪುರಂದರವಿಠಲನೆಂಬ ಪುಣ್ಯಪುತ್ರನಿರಲಾಗಿ
ಈ ಅನ್ಯಪುತ್ರರಿಂದಲಿ ಆಗುವ ಮತಿಯೇನಯ್ಯ

೩೪

ಶ್ರೀದೇವಿಯ ಮೂರುತಿಯಲ್ಲಿ ಭೂದೇವ ಪರಿಪೂರ್ಣ ನೀನೆ
ಅವ್ಯಕ್ತಾಕಾಶದಲಿ ಸ್ವಾಮಿ ಅವ್ಯಕ್ತ ಪರಿಪೂರ್ಣ ನೀನೆ
ಅನಂತಾನಂತದಲಿ ಸ್ವಾಮಿ ಅನಂತ ಪರಿಪೂರ್ಣ ನೀನೆ
ಜಗನ್ನಾಯಕ ಪುರಂದರವಿಠಲನೇ ಸರ್ವಜಗಕೆ ಪರಿಪೂರ್ಣ

೩೫

ನಿನಗೆ ನೀನೇ ಮೋಹ ನಿನಗೆ ನೀನೇ ಪ್ರೀತಿ
ನಿನಗೆ ನೀನೇ ಭಕ್ತ ನಿನಗೆ ನೀನೇ ದ್ವೇಷಿ
ನಿನಗೆ ನೀನೇ ಜ್ಞಾನಿ ನಿನಗೆ ನೀನೇ ಮಾಳ್ಪೆ
ನಿನಗೆ ನೀನೇ ಪುರಂದರವಿಠಲ

೩೬

ಸಿರಿವಿರಿಂಚ್ಯಾದಿಗಳು ಅರಿಯದಿಹ ಮಹಿಮೆಯು
ನರಿತು ಪಾಡಲು ಜಗದಿ ಅರಹರಾರಯ್ಯ
ಅರವಿಂದದಳನಯನ ಶರಣೆಂದವರ ಕಾವ
ಕರುಣಸಾಗರ ನಮ್ಮ ಪುರಂದರವಿಠಲ

೩೭

ಕಾವ ದೈವವು ನೀನೆ ಕೊಲುವ ದೈವವು ನೀನೆ
ಕೈವಲ್ಯ ಫಲದಾಯಕ ಕೇಶವನು ನೀನೆ
ಆವ ದೈವಕ್ಕು ಈ ವೈಭವವ ನಾ ಕಾಣೆ
ರಾವಣಾಂತಕ ಸ್ವಾಮಿ ಪುರಂದರವಿಠಲ

೩೮

ಹರಿ ನೀ ಮುನಿದರೆ ಆರು ಒಲಿದೇನ ಮಾಡುವರು
ಹರಿ ನೀ ಒಲಿದರೆ ಆರು ಮುನಿದೇನ ಮಾಡುವರೊ
ಪುರಂದರವಿಠಲ

೩೯

ಎಡಕೆ ಬಾವಿಯುಂಟು ಬಲಕೆ ಕೆರೆಯು ನೋಡು
ಮುಂದೆ ಕಾಡ್ಕಿಚ್ಚು ಹಬ್ಬಿದೆಯೊ ಎಲೆ ದೇವ
ಹಿಂದೆ ಹುಲಿ ಬೆನ್ನಟ್ಟಿ ಬರುತಲಿದೆ
ಆರಿಗೆ ಆರೋ ಪುರಂದರವಿಠಲ

4–20

೪೦

ಅನ್ಯರೊಬ್ಬರನು ಕಾಣೆ ಮನ್ನಿಪರೆನ್ನ ಆ
ಪನ್ನರಕ್ಷಕ ನೀನೆ ಪಾಲಿಸೊ ಇನ್ನು
ಪನ್ನಂಗಶಯನ ಶ್ರೀ ಪುರಂದರವಿಠಲನೆ

೪೧

ನಿನ್ನಡಿ ಇಳೆಯನೀರಡಿಮಾಡಿತು
ನಿನ್ನುಂಗುಟವು ಬ್ರಹ್ಮಾಂಡವನೊಡೆಯಿತು
ನಿನ್ನುಗುರು ಸುರನದಿಯನೆ ತಂದಿತು
ನಿನ್ನ ಕರ ಮಧುಕೈಟಭರನೊರಸಿತು
ನಿನ್ನೆರಡು ಭುಜ ಸಿರಿಲಕುಮಿಯನಪ್ಪಿತು
ನಿನ್ನ ಪಾದದ ನೆನಹು ಸಕಲಸಂಪದವೋ
ಪುರಂದರವಿಠಲ

ನಿನ್ನಡಿ—ವಾಮನಾವತಾರ.
ಸುರನದಿ—ಗಂಗೆ.

೪೨

ಶ್ವೇತದ್ವೀಪದಿ ಆಮುಕ್ತಸ್ಥಳದಲ್ಲಿ
ಚತುರ್ಮುಖಭವೇಂದ್ರಾದಿಸುರರು
ಭೂಭಾರವನಿಳುಹೆಂದು
ನಿನ್ನ ಬೇಡಿ ಕೊಂಡಾಡೆ ಬಹುಕಾಲ
ಮತ್ಸ್ಯಕೂರ್ಮ ವರಾಹನಾಗಿ
ಕಾಲಕಾಲದಲಿ ಶಿಷ್ಟರ ಪಾಲಿಪನೆಂಬ
ಬಿರುದು ಸಲ್ಲುವುದೊ ನಿನಗೆ
ಶರಣಾಗತವಜ್ರಪಂಜರ ಪುರಂದರವಿಠಲ

೪೩

ಕಾಳಿಂದಿಯ ಮಡುವಿನಲಿ ಧುಮುಕಿ
ಕಾಳಿಂಗನ ಫಣೆಫೂತ್ಕಾರ ಮೇಲುಸುರದನ್ನ
ಭಾವೆಯೆಳಸಿರಲು ತೋಂಧಿಗಿಧಿಗಿ ಧಾಂಧಾಂಧಿಮಿ
ಗೊಳಿಸಿ ಅಜ ಮೃದಂಗವ ತಟ್ಟೆ ಇಂದುಧರ
ತಾಳ ಪಿಡಿದು ಘಟ್ಟಿಸಲು ತಥಂತನನ ಎಂದು
ಸ್ವರವೆತ್ತಿ ನಾರದ ಪಾಡಲು ಕುಣಿ ಎದೆಯಲ್ಲಿ ಕೃಷ್ಣ
ಎಂದವಗೆ ವರವಿತ್ತು ಮನ್ನಿಸಿ ಪೂಜೆಗೊಂಡು
ಗೋವಿಂದ ಗೋಪಾಲಕರನೊಲಿಸಿ
ಗೋವಳರಂಕದರ್ಪ ಕೇಳಿ ನಂದಗೋಪಿಯರಿ
ಗಾನಂದ ತಂದಾತನೀತ ಪುರಂದರವಿಠಲ

೪೪

ನಿತ್ಯ ಪತಿಭಾವ ಶ್ರೀ ಲಕುಮಿದೇವಿಗಯ್ಯ
ನಿತ್ಯ ಪುತ್ರಭಾವ ಬೊಮ್ಮಪ್ರಾಣರಿಗೆ
ನಿತ್ಯ ಪೌತ್ರಭಾವ ಗರುಡ ಶೇಷ ರುದ್ರರಿಗೆ
ನಿತ್ಯ ಭೃತ್ಯಭಾವ ಇಂದ್ರ ಕಾಮ ಆತ್ಮ ಜೀವರಿಗೆ
ಇಂತೆಂದ ಪುರಂದರವಿಠಲ

ಪೌತ್ರ—ಮೊಮ್ಮ.
ಭೃತ್ಯ—ಊಳಿಗದವನು
(ದೇವತಾತಾರತಮ್ಯದ ಎಣಿಕೆ ಇಲ್ಲಿದೆ)

೪೫

ಹರಿ ಸಿರಿ ಚರಣವಿರಲು ಮಿಕ್ಕ
ಭೂರಿ ದೈವಗಳೇಕೆ ಭಜಿಸುವೆ ಮರುಳೆ
ನೀರಡಿಸಿ ಜಾಹ್ನವಿಯ ತೀರದಲ್ಲಿರೆ
ಕೆರೆಯ ನೀರ ಕುಡಿವ ಮಾನವರುಂಟೆ
ಕಾರುಣ್ಯವಿರಲು ವೈಕುಂಠ ವಿಠಲರೇಯನ
ತಿರುವೇಂಗಳಪ್ಪ ಸಿರಿಪುರಂದರವಿಠಲನ

ಭೂರಿ—ಹೆಚ್ಚಾದ ಸಂಖ್ಯೆಯ.
ನೀರಡಿಸಿ—ಬಾಯಾರಿಕೆಯನ್ನು ಹೊಂದಿದ್ದು.

೪೬

ಅಣುವಿಗೆ ಅಣುವಾಗಿ ಘನಕೆ ಘನವಾಗಿ
ಗುಣತ್ರಯ ತತ್ತ್ವಕ್ಕೆ ಮೀರಿದ ದೊರೆಯಾಗಿ
ತೃಣ ಮೊದಲಾಗಿ ಮೇರುಪರಿಯಂತ ಇರುವವ ನೀನಾಗಿ
ಗುಣನಿಧಿ ಪುರಂದರವಿಠಲ ನಿನ್ನ ಮಹಿಮೆ
ಎಣಿಕೆ ಮಾಡುವರು ಯಾರೋ ಎನ್ನಪ್ಪನೆ

ಗುಣತ್ರಯ—ಸತ್ತ್ವ, ರಜಸ್ಸು, ತಮಸ್ಸು.
ತತ್ತ್ವ—ಇಪ್ಪತ್ತನಾಲ್ಕು ತತ್ತ್ವಗಳು ; ಪಂಚಮಹಾಭೂತಗಳು, ತನ್ಮಾತ್ರಗಳು, ಇತ್ಯಾದಿ.
ತೃಣ—ಹುಲ್ಲು.
ಮೇರು—ಸುಮೇರು, ಅತ್ಯಂತ ದೊಡ್ಡದಾದ ಬಂಗಾರದ ಬೆಟ್ಟ.

೪೭

ಸಕಲ ಶ್ರುತಿ ಪುರಾಣಗಳೆಲ್ಲ ದಾವನ ಮಹಿಮೆ
ಸುಖಪೂರ್ಣ ಸುರವರಾರ್ಚಿತವಾದ
ಶಕಟ ಮರ್ದನ ಶರದೇಂದುವಕ್ತ್ರ
ರುಕ್ಮಿಣೀರಮಣ ಪರಿಪೂರ್ಣ ನಮ್ಮ ಪುರಂದರವಿಠಲ

ದಾವನ—ಯಾವನ.

೪೮

ಅಣುರೇಣು ತೃಣದಲ್ಲಿ ಪರಿಪೂರ್ಣನಾಗಿರುವ
ಗುಣವಂತನೆ ನಿನ್ನ ಮಹಿಮೆಯ ಗಣನೆಮಾಡುವರಾರು
ಎಣಿಸಿ ನೋಡುವಳಿನ್ನು ಏಣಾಕ್ಷಿ ಸಿರಿದೇವಿ
ಜ್ಞಾನಸುಗುಣ ತತ್ತ್ವ ವೇಣುಗೋಪಾಲ ಹರಿಯೆ
ಕಾಣಿಸೋ ನಿನ್ನ ಮಹಿಮೆಯನು ಪುರಂದರವಿಠಲ

ಏಣಾಕ್ಷಿ—ಜಿಂಕೆಯ ಕಣ್ಣುಗಳಂತೆ ಕಣ್ಣುಳ್ಳ.

೪೯

ಕಾವ ದೈವವು ನೀನೆ ಕೈಮುಗಿವೆನು ನಾನು
ಕೈವಲ್ಯ ಫಲದಾತ ಕೇಶವನೆ ರಘುನಾಥ
ಯಾವ ದೈವಕಿನ್ನು ಈ ವೈಭವಗಳ ಕಾಣೆ
ರಾವಣಾಂತಕ ಶ್ರೀ ಪುರಂದರವಿಠಲ

೫೦

ಸತ್ಯಜನಾಭನೆ
ಸತ್ಯಮಹಿಮನೆ
ಸತ್ಯಕಾಮನೆ
ಸತ್ಯ ಪೂರ್ಣನೆ
ಸತ್ಯ ಭೂಷಣ
ನಿತ್ಯ ಪುರಂದರವಿಠಲರೇಯ

೫೧

ಮನೋವಚನಗಳಲ್ಲಿ ಕಾಯಕರ್ಮಗಳಲ್ಲಿ
ನೀನೇ ನೀನೇ ನೀನೆ ಪುರಂದರವಿಠಲ

೫೨

ಆದಿ ಸೃಷ್ಟಿಯಲಾರು ಮೊದಲೆ ಉದಿಸಿದರೇನು
ಅವರವರೆ ಅಧಿಕರಧಿಕರಯ್ಯ
ಕಾಲಾಜಯಾದಿಗಳು ಮೊದಲೆ ಉದಿಸಿದರೇನು
ಅವರವರೆ ಅಧಿಕರಧಿಕರಯ್ಯ
ಅವರಂತರಂತರ ಅವರ ನೋಡಯ್ಯ
ಅವರವರೆ ಅಧಿಕರಧಿಕರಯ್ಯ
ಪುರಂದರವಿಠಲನ ಸಂತತಿ ನೋಡಯ್ಯ
ಅವರವರೆ ಅಧಿಕರಧಿಕರಯ್ಯ

೫೩

ಸಿರಿ ಚತುರ್ಮುಖ ಸುರರು
ಮನು ಮುನಿಗಳು
ಮನುಜೋತ್ತಮರು
ತಾರತಮ್ಯಯುಕ್ತರು
ಪುರಂದರವಿಠಲನ ಸದಾ ಶರಣರು

೫೪

ಜೀವ ಜೀವಕೆ ಭೇದ
ಜಡ ಜಡಕೆ ಭೇದ
ಜೀವ ಜಡ ಪರಮಾತ್ಮನಿಗೆ ಭೇದ
ಜೀವಾಜೀವ ಮುಕ್ತಾಮುಕ್ತರ ಭೇದ
ಸಂಸಾರದೊಳು ಭೇದ
ಮುಕ್ತರೊಡೆಯ ಹರಿಭಕ್ತರಾಧೀನ ಜಗ
ತ್ಕರ್ತೃ ನೀ ಸಲಹಯ್ಯ ಪುರಂದರವಿಠಲ

(ಪಂಚಭೇದಗಳ ಒಕ್ಕಣೆ)

೫೫

ಚೋರಗೆ ಚಂದ್ರೋದಯ ಸೊಗಸುವುದೆ
ಜಾರೆಗೆ ಸೂರ್ಯೋದಯ ಸೊಗಸುವುದೆ
ಶ್ರೀರಮಣನ ಕಥೆಯು ಹೀನಗೆ ಮೆಚ್ಚುವುದೆ
ನಾರಿಗೆ ನಯವಿಲ್ಲದ ಚೆಲುವಿಕೆಯು
ಹರಿಸ್ಮರಣವಿಲ್ಲದ ಹಾಡಿಕೆಯು
ಅರಣ್ಯರೋದನವೋ ಪುರಂದರವಿಠಲ

೫೬

ನಿನ್ನುಂಗುಟವು ಬೊಮ್ಮಾಂಡವನೊಡೆಯಿತು
ನಿನ್ನ ನಡೆ ಜಗವ ಈರಡಿ ಮಾಡಿತು
ನಿನ್ನ ಪೊಕ್ಕಳು ಸರಸಿಜನಾಭನ ಪಡೆಯಿತು
ನಿನ್ನ ವಕ್ಷಃಸ್ಥಳ ಸಿರಿ ಲಕುಮಿಗೆಡೆಯಾಯಿತು
ನಿನ್ನ ನಳಿದೋಳು ಸಿರಿ ಲಕುಮಿಯು ಬಿಗಿದಪ್ಪಿತು
ನಿನ್ನ ಕುಡಿನೋಟ ಸಕಲ ಜೀವರ ಪೊರೆಯಿತು
ನಿನ್ನ ತೊದಲುನುಡಿ ಸಕಲ ವೇದವ ಸವಿಯಿತು
ನಿನ್ನ ಅವಯವಂಗಳ ಮಹಿಮೆಯನು ಒಂದೊಂದು
ಪೊಗಳಲಳವಲ್ಲ ಸಿರಿ ಪುರಂದರವಿಠಲರೇಯ
ನಿನ್ನ ಅಪಾರ ಮಹಿಮೆಗೆ ನಮೋ ನಮೋ ಎಂಬೆ

ನಿನ್ನುಂಗುಟ...—ತ್ರಿವಿಕ್ರಮಾವತಾರದಲ್ಲಿ ಗಂಗೆಯ ಉತ್ಪತ್ತಿ.
ನಿನ್ನ ನಡೆ—ವಾಮನನಾಗಿ.
ನಿನ್ನ. ಪೊಕ್ಕಳು – ಸೃಷ್ಟಿಯ ಆದಿಯಲ್ಲಿ ಬ್ರಹ್ಮನ ಸಂಭವ.
ನಿನ್ನ ವಕ್ಷಃಸ್ಥಳ—ಸಮುದ್ರ ಮಥನ ಸಂದರ್ಭದಲ್ಲಿ.

೫೭

ನೀನೆ ಕರ್ತನು ಅಕರ್ತರು ಸಿರಿ ಅಜಭವಾದಿ
ಇಂದ್ರಾದ್ಯಮರರು
ನೀನೆ ಸ್ವತಂತ್ರ ಅಸ್ವತಂತ್ರರವರು ನೀನೆ
ಸರ್ವಾತ್ಮಕನಾಗಿ ಸ್ವೀಕರಿಸುವಾ
ಜ್ಞಾನ ನಿನ್ನಾಧೀನ ಕರ್ಮ ನಿನ್ನಾಧೀನ
ಅನಾದಿ ಕಾಲದಿ ಇರುವ ಜೀವರಿಗೆ ನೀನೆ ಸುಖವನೀವೆ
ರುದ್ಧ ಕರ್ಮಗಳಂತೆ
ಅನಾದಿ ಕಾಲದಿ ಜೀವ ಕರ್ಮಜ್ಞಾನ ಅನಾದಿಗಳು
ನಿನ್ನಾಧೀನವಯ್ಯ
ಅನಾದಿ ಕರ್ಮ ನೀನೆ ಪುರಂದರವಿಠಲ
ನೀನೆ ಸಲಹೊ ನಿನ್ನ ಅಡಿಯು ಪೊಂದಿದವರ

೫೮

ಬೆನಕನನೊಲ್ಲೆನವ್ವ
ತುಲಕಿ ಆಡುವನ
ಷಣ್ಮುಖನನೊಲ್ಲೆನವ್ವ
ಬಹು ಬಾಯಿಯುವನ
ಇಂದ್ರನನೊಲ್ಲೆನವ್ವ
ಮೈಯೆಲ್ಲ ಕಣ್ಣಿನವನ
ಚಂದ್ರನನೊಲ್ಲೆನವ್ವ
ಕಳೆಗುಂದುವವನ
ರವಿಯನೊಲ್ಲೆನವ್ವ
ಉರಿದು ಮೂಡುವನ
ಹರನನೊಲ್ಲೆನವ್ವ
ಮರುಳು ಗೊಂಬುವನ
ಚೆನ್ನರಾಯ ಚೆಲುವ
ಜಗಕೆಲ್ಲ ಒಡೆಯನ ಕರೆದು
ತಾರೆ ಎನಗೆ ಪುರಂದರವಿಠಲನ

೫೯

ಹರಿಯು ಭಜಿಸಬೇಕು ಮನಮುಟ್ಟಿ
ಭಜಿಸಿದರೆ ತನ್ನ ಕಾರ್ಯವೆಲ್ಲ ಗಟ್ಟಿ
ಇಲ್ಲದಿರೆ ತಾಪತ್ರಯಗಳು ಬೆನ್ನಟ್ಟಿ
ಯಮದೂತರೆಳೆವರು ಹೆಡೆಮುಡಿಗಟ್ಟಿ
ಪುರಂದರವಿಠಲನ ಕೋಪದ ದೃಷ್ಟಿ
ಹರಿಯು ಭಜಿಸಬೇಕು ಮನಮುಟ್ಟಿ

೬೦

ರಮೆಯ ರಮಣನು ತಾನು ಬೊಮ್ಮಾದಿಗಳನೆಲ್ಲ
ಸುಮನಸರೊಳು ಸೂರ್ಯಗರ್ಘ್ಯವನಿತ್ತು
ನಿಮ್ಮ ಪಾಪಗಳನೆಲ್ಲ ಚಿಮ್ಮಿ ಕಳೆಯಿರೆಂದು
ಬೊಮ್ಮಮೂರುತಿ ತಾ ಗಮ್ಮನೆ ಪೇಳಿರೆ
ನಿಮ್ಮಜ್ಞಾನದಿ ಸಿಲುಕಿ ಸುಮ್ಮನೆ ಕೆಡದಿರಿ
ನಿಮ್ಮ ಶಿಕ್ಷಿಪನು ಪುರಂದರವಿಠಲ

ಸುಮನಸರೊಳು—ದೇವತೆಗಳಲ್ಲಿ.

೬೧

ಇದರಿಂಬಿಟ್ಟಿನ್ನಿಲ್ಲೆಂಬ ಮಹಾವ್ಯಾಧಿ ಬರಲಿ ಮ
ತ್ತಿದರಿಂಬಿಟ್ಟಿನ್ನಿಲ್ಲೆಂಬ ಮಹಾಭೀತಿ ಬರಲಿ ಮ
ತ್ತಿದರಿಂಬಿಟ್ಟಿನ್ನಿಲ್ಲೆಂಬ ಮಹಾಬಾಧೆ ಬರಲಿ ಮ
ತ್ತಿದರಿಂಬಿಟ್ಟಿನ್ನಿಲ್ಲೆಂಬ ಮಹಾ ಆಪತ್ತು ಬರಲಿ ಮ
ತ್ತಿದರಿಂಬಿಟ್ಟಿನ್ನಿಲ್ಲೆಂಬ ಅದಕೊಂದಿದ
ಕೊಂದು ಯೋಚಿಸಬೇಡಿ ಕಾಣಿರೊ ಮ
ತ್ತದಕೊಂದಿದ ಕೊಂದು ಯೋಚಿಸಬೇಡಿ ಕಾಣಿರೊ
ಪುರಂದರವಿಠಲ ತನ್ನ ನಂಬಿದವರ ಹಿಂದ್ವಾಕಿಕೊಂಬ ಕಾಣಿರೋ

ಇದರಿಂಬಿಟ್ಟು—ಇದನ್ನು ಬಿಟ್ಟು.
ಹಿಂದ್ವಾಕಿಕೊಂಬ—ಕಾಪಾಡುವ.

೬೨

ಶ್ರೀರಾಮ ಎಂದರೆ ಭಾಗ್ಯಕ್ಕೆ ಕಾರಣ
ಶ್ರೀಕೃಷ್ಣ ಎಂದರೆ ದುರಿತನಿವಾರಣ
ಎಚ್ಚತ್ತಿರು ಎಲೆ ಮನವೆ ಎಚ್ಚತ್ತಿರೆಲೆ ಮನವೆ
ಏಕೆ ಬಯಲನು ನೆನೆವೆ ಅಚ್ಯುತಾನಂತ
ಗೋವಿಂದನೆಂಬ ನಾಮದಲಿ ಎಚ್ಚತ್ತಿರೆಲೆ ಮನವೆ
ಏಕೆ ಬಯಲ ನೆನೆವೆ ಅಚ್ಯುತನೆ ಆದಿ ಕೇಶವನೆ
ಅನಾಥಬಂಧೋ ಸಲಹೆಂದು
ಅಚ್ಯುತನ ಪಾದವನು ನಂಬು ಗತಿಯೆಂದು
ಅನಂತಾನಂತ ದೇವರ ದೇವ ರಂಗೇಶ
ಅನಂತನೆಂದರೆ ಬಲು ಭಯವಿನಾಶ
ಅನಂತನೆಂದರೆ ತಡೆವ ಯಮಪಾಶ
ಗೋವಿಂದನೆಂದರೆ ಸಕಲ ತೀರ್ಥಸ್ನಾನ
ಗೋವಿಂದನೆಂದರೆ ಸಕಲ ಮೂರ್ತಿ ಧ್ಯಾನ
ಗೋವಿಂದನೆಂದರೆ ಪುರಂದರವಿಠಲ
ಕೊಡುವ ಸಕಲ ಸುಜ್ಞಾನ

೬೩

ತಾಯಿ ಗೋಪಿಯಂತೆ ನಿನ್ನ ಒರಳನೆಳಸಲಿಲ್ಲ
ವಾಲಿಯಂತೆ ಎದುರುವಾದಿಸುತಿರಲಿಲ್ಲ
ಭೃಗುಮುನಿಯಂತೆ ನಿನ್ನ ಎದೆಯ ತುಳಿಯಲಿಲ್ಲ
ಭೀಷ್ಮನಂತೆ ನಿನ್ನ ಹಣೆ ಒಡೆಯಲಿಲ್ಲ
ಕೊಂಕಣದ ಎಮ್ಮೆಗೆ ಕೊಡತಿಯೇ ಮದ್ದೆಂದು
ಅವರೆ ಮದ್ದು ನಿನಗೆ ಪುರಂದರವಿಠಲ

೬೪

ಇಕ್ಕೊ ನಮ್ಮ ಸ್ವಾಮಿ
ಸರ್ವರಂತರ್ಯಾಮಿ
ಪ್ರಕಟ ಸಹಸ್ರನೇಮಿ
ಭಕ್ತಜನ ಪ್ರೇಮಿ
ಒಳನೋಡಿ ನಮ್ಮ ಹೊಳೆವ ಪರಬ್ರಹ್ಮ
ನರಿಯಬೇಕು ಮರ್ಮ
ವಸ್ತುವಿನ ನೋಡಿ ಸ
ಮಸ್ತ ಮನ ಮಾಡಿ
ಅಸ್ತವಸ್ತು ಬೇಡಿ ಸ
ಮಸ್ತ ನಿಚಗೂಡಿ
ಮಾಡು ಗುರುಧ್ಯಾನ
ಮುದ್ದು ಪುರಂದರವಿಠಲನ ಚರಣವ

ಸಹಸ್ರನೇಮಿ—ಸೂರ್ಯ.
ಒಳನೋಡಿ...—ಬಿಂಬರೂಪಿ.

೬೫

ಜಗವ ಸುತ್ತಿಹುದೆಲ್ಲ ನಿನ್ನ ಮಾಯೆಯಯ್ಯ
ನಿನ್ನ ಸುತ್ತಿಹುದೆಲ್ಲ ಎನ್ನ ಮನವಯ್ಯ
ಜಗವು ನಿನ್ನೊಳಗೆ ನೀನು ಎನ್ನೊಳಗೆ
ಜಗಕೆ ಬಲ್ಲಿದ ನೀನು ನಿನಗೆ ಬಲ್ಲಿದ ನಾನು
ಕರಿಯು ಕನ್ನಡಿಯೊಳು ಅಡಗಿಪ್ಪ ತೆರನಂತೆ
ನೀನು ಎನ್ನೊಳಡಗಿಪ್ಪೆ ಪುರಂದರವಿಠಲ

ಕರಿಯು—ಆನೆಯು.

೬೬

ಪರಮಾನಂದವು ಹರಿಗೆ ಪರಮಾನಂದವು ಸಿರಿಗೆ
ಪರಮಾನಂದವು ನಮ್ಮ ಪುರಂದರವಿಠಲರಾಯಗೆ

೬೭

ದೇವ ದೇವರ ದೇವ
ಜಗತ್ರಯಂಗಳ ಕಾವ
ಭಾವಜಪಿತ ನಮ್ಮ ಪುರಂದರವಿಠಲ

೬೮

ಶುಭವಿದು ಶೋಭನ ಹರಿಗೆ
ಶುಭವಿದು ಶೋಭನ ಸಿರಿಗೆ
ಶುಭವಿದು ಪುರಂದರವಿಠ್ಠಲರಾಯಗೆ
ಶುಭವಿದು ಶೋಭನ ಹರಿಗೆ

ಹರಿದಾಸರು

೬೯

ದಾಸನಾಗುವುದಕ್ಕೆ ಏಸು ಜನ್ಮದ ಸುಕೃತ
ಭಾಸುರರವಿಕೋಟಿ ಶ್ರೀಶ ಸುಗುಣವಂತ
ನಾಶರಹಿತ ನಿನ್ನ ದಾಸರ ದಾಸ್ಯ
ಲೇಸಾಗಿ ಕೊಡು ಕಂಡ್ಯ ಪುರಂದರವಿಠಲ

ಏಸು—ಎಷ್ಟು.
ಸುಕೃತ—ಪುಣ್ಯ.
ಭಾಸುರರವಿಕೋಟಿ—ಕೋಟಿ ಸೂರ್ಯರಂತೆ ಕಂಗೊಳಿಸುವ.

೭೦

ದಾಸನಾದವಗೆ ವೈಕುಂಠದಲ್ಲಿ ವಾಸ
ದಾಸನಾಗುವನೆಲ್ಲಿ ಪೋದರೆ ಭಾಸ
ದಾಸನೆಂದೆನಿಸಿದ ಭಾರತಿಯ ಗಂಡ ಸತ್ಯಲೋಕವನಾಳ್ವ ಶೌಂಡ
ದಾಸರ ಹೃದಯದಿ ಮಿನುಗುವ ಶ್ರೀಶ ವಾಸವಾದಿವಂದ್ಯ ದ್ವಿ
ಸಾಸಿರಾಂಬಕ ಶರಣ್ಯ ದಾಸರಿಗೊಲಿವ ಪುರಂದರವಿಠಲ

ಭಾಸ—ತೋರಿಕೆ.
ಭಾರತಿಯ ಗಂಡ—ಮುಖ್ಯಪ್ರಾಣ.

೭೧

ನಿನ್ನ ನಾಮಭಂಡಾರ ಕದ್ದ ಕಳ್ಳನು ನಾನು
ನಿನ್ನ ಭಕುತಿಯೆಂಬ ಸಂಕೋಲೆಯನಿಕ್ಕಿ
ನಿನ್ನ ದಾಸರ ಕೈಯಲ್ಲಿ ಒಪ್ಪಿಸಿಕೊಟ್ಟು
ನಿನ್ನ ಮುದ್ರಿಕೆಯಿಂದ ಕಾಸಿ ಬಡಿಸು ದೇವ
ನಿನ್ನ ವೈಕುಂಠದುರ್ಗದೊಳು
ಎನ್ನ ಸೆರೆಯನಿಟ್ಟು ಸಲಹೊ ಶ್ರೀ ಪುರಂದರವಿಠಲ

ಮುದ್ರಿಕೆ—ಕಳ್ಳರಿಗೆ ಹಾಕುವ ಬರೆ.

೭೨

ದರಿದ್ರರೆನ್ನಬಹುದೆ ಹರಿದಾಸರ
ಸಿರಿವಂತರೆನಬಹುದೆ ಹರಿದ್ರೋಹಿಗಳ
ಹರಿದಾಸರ ಮೇಲಿದ್ದ ಕರುಣವು
ಸಿರಿದೇವಿ ಮೇಲಿಲ್ಲವೊ
ಪುರಂದರವಿಠಲನ ಆಳುಗಳಿಗೆ
ಎಲ್ಲಿಹುದೈ ಮಾನಾಭಿಮಾನ ಜಗದಿ

೭೩

ಲೇಸು ದಾಸರಿಗೆ ಸಿರಿ ಭಾಗವತರಿಗೆ
ದಾರಿದ್ರ್ಯದ್ರೋಹಿಗಳಿಗೆ ಕೀರ್ತಿ ಕಿಂಕರರಿಗೆ
ಅಪಕೀರ್ತಿ ಕ್ರೂರರಿಗೆ ಜಯ ದೇವರಿಗೆ
ಅಪಜಯ ಮಂಕುಗಳಿಗೆ ನಷ್ಟ ಕಪಟರಿಗೆ
ಲಾಭ ಮಹಾತ್ಮರಿಗೆ ಪುರಂದರವಿಠಲನ ಆಳುಗಳಿಗೆ ಮುಕ್ತಿ
ದೈತ್ಯರಿಗೆ ಅಂಧಂತಮಸ್ಸು ಸಂದೇಹವಿಲ್ಲ

ಹರಿದಾಸ್ಯ

೭೪

ಹಂಗಿಸಿ ಹಂಗಿಸಿ ಎನಗೆ ಹರಿನಾಮ ನಿಲಿಸಿದರು
ಭಂಗಿಸಿ ಭಂಗಿಸಿ ಎನಗೆ ಬಯಲಾಸೆ ಕೆಡಿಸಿದರು
ಕಂಗೆಡಿಸಿ ಕಂಗೆಡಿಸಿ ಕಾಮಕ್ರೋಧವ ಬಿಡಿಸಿದರು
ಹಿಂದೆ ನಿಂದಿಸಿದವರೆ ಎನ್ನ ಬಂಧುಬಳಗ
ಬಾಯಬಡುಕರಿಂದ ನಾನು ಬದುಕಿದೆನು ಹರಿಯೆ
ಕಾಡಿ ಕಾಡಿ ಕೈವಲ್ಯಕ್ಕೆ ಪಥವಿತ್ತರು
ಕಾಸು ಹುಟ್ಟದಂತೆ ಪ್ರಾಯಶ್ಚಿತ್ತ ಮಾಡಿದರು
ಏಾಸಲು ಮಾಡಿದರು ಹರಿಯ ಒಡವೆಯೆಂದು
ಲೇಸು ಕೊಡೋ ನಮ್ಮಪ್ಪ ಪುರಂದರವಿಠಲ ನಿನ್ನ
ದಾಸರ ದಾಸರ ದಾಸನೆಂದೆನಿಸಯ್ಯ

೭೫

ಅಣಕದಿಂದಾಗಲಿ ಡಂಭದಿಂದಾಗಲಿ
ಎದ್ದೊಡಾಗಲಿ ಬಿದ್ದೊಡಾಗಲಿ
ತಾಗಿದೊಡಾಗಲಿ ತಾಕಿಲ್ಲದೊಡಾಗಲಿ
ಮರೆದು ಮತ್ತೊಮ್ಮೆಯಾಗಲಿ ಹರಿ ಹರಿಯೆಂದವನಿಗೆ
ನರಕದ ಭಯವೇಕೆ ಯಮಪಟ್ಟಣ ಕಟ್ಟಿದರೇನು
ಯಮಪಟ್ಟಣ ಬಟ್ಟಬಯಲಾದರೇನು
ಹರಿದಾಸರಿಗೆ ಪುರಂದರವಿಠಲ

೭೬

ತಿಂಬಲು ಅನ್ನ ಹುಟ್ಟಲಿ ಬೇಡ
ಅನ್ನ ಹುಟ್ಟಿದರೆ ಬಟ್ಟೆ ದೊರಕಲಿ ಬೇಡ
ಬಟ್ಟೆ ದೊರಕಿದರೆ ಇಂಬು ತೋರಲಿ ಬೇಡ
ಇಂಬು ನಿನ್ನ ಪಾದಾರವಿಂದದಲಿ
ಸಂತೋಷ ತೋರಿಸಯ್ಯ
ಇಂದಿರಾರಾಧ್ಯ ಶ್ರೀ ಪುರಂದರವಿಠಲ

ಇಂಬು—ನೆಲೆ, ತಾಣ.

೭೭

ಎನ್ನ ಕಡೆಹಾಯಿಸುವುದು ನಿನ್ನ ಭಾರ
ನಿನ್ನ ನೆನೆಯುತಲಿಹುದು ಎನ್ನ ವ್ಯಾಪಾರ
ಎನ್ನ ಸತಿಸುತರಿಗೆ ನೀನೆ ಗತಿ
ನಿನ್ನನೊಪ್ಪಿಸುವುದು ನನ್ನ ನೀತಿ
ಎನ್ನ ಪಡಿಯಿಕ್ಕಿ ಸಲಹುವುದು ನಿನ್ನ ಧರ್ಮ
ನಿನ್ನ ಅಡಿಗೆರಗುವುದು ಎನ್ನ ಕರ್ಮ
ಎನ್ನ ತಪ್ಪುಗಳನೆಣಿಸುವುದು ನಿನ್ನದಲ್ಲ
ನಿನ್ನ ಮರೆತು ಬದುಕುವುದು ಎನ್ನದಲ್ಲ
ನೀನಲ್ಲದಿನ್ನಾರಿಗೆ ಮೊರೆಯಿಡುವೆ ಪುರಂದರವಿಠಲ

೭೮

ಹರಿ ನೀನೊಲಿವಂತೆ ಮಾಡು
ಒಲಿದರೆ ತಿರಿವಂತೆ ಮಾಡು
ತಿರಿದರೆ ದಾರು ನೀಡದಂತೆ ಮಾಡು
ದಾರು ನೀಡಿದರು ಪೊಟ್ಟೆ ತುಂಬದಂತೆ ಮಾಡು
ಪೊಟ್ಟೆ ತುಂಬಿದರೆ ಬಟ್ಟೆ ದೊರೆಯದಂತೆ ಮಾಡು
ಬಟ್ಟೆ ದೊರೆತರೆ ಇಂಬು ದೊರೆಯದಂತೆ ಮಾಡು
ಇಂಬು ದೊರೆಯದಿದ್ದರೆ ರಂಗ ನಿನ್ನ ಪಾದಾರವಿಂದದಲ್ಲಿ
ಇಂಬಿಟ್ಟು ಸಲಹೊ ಪುರಂದರವಿಠಲ

ದಾರು—ಯಾರೂ.

೭೯

ಧ್ವಜ ವಜ್ರಾಂಕುಶ ರೇಖಾಂಕಿತವಾದ
ಹರಿಪಾದಾಂಬುಜ ಸೇವಿಪ ಭಾಗವತರ ಭಾಗ್ಯವ ನೋಡೊ
ತ್ರಿಜಗವಂದ್ಯನ ಪಾಡು ಭಕ್ತಿಯನು ಬೇಡು
ಕುಜನ ಮಂತಗಳ ಸುಡು ದುರ್ಜನರ ಸಂಗವ ಬಿಡು
ಗಜೇಂದ್ರನ ಕಾಯ್ದ ಶ್ರೀಕೃಷ್ಣನ ಸ್ಮರಣೆ ಮಾಡು
ಪುರಂದರವಿಟ್ಠಲರಾಯನ ಬಿಡದೆ ಕೊಂಡಾಡು

೮೦

ಮಲಗಿ ಪಾಡಿದರೆ ಕುಳಿತು ಕೇಳುವನು
ಕುಳಿತು ಪಾಡಿದರೆ ನಿಂತು ಕೇಳುವನು
ನಿಂತು ಪಾಡಿದರೆ ನಲಿದು ಕೇಳುವನು
ನಲಿದು ಪಾಡಿದರೆ ಸ್ವರ್ಗ ಸೂರೆಬಿಟ್ಟೆನೆಂಬೆ ಪುರಂದರವಿಠಲ

೮೧

ಕಲಿಯುಗಕೆ ಸಮಯುಗವು ಇಲ್ಲವಯ್ಯ
ಕಲುಷಹರ ಕೈವಲ್ಯವು ಕರಸ್ಥವಯ್ಯ
ಜಲಜಲೋಚನ ನಮ್ಮ ಪುರಂದರವಿಠಲನ್ನ
ಬಲಗೊಂಡು ಸುಖಿಸಿ ಬಾಳುವುದಕೆ

ಕಲುಷಹರ...—ಈ ಯುಗದಲ್ಲಿ ಪಾಪವನ್ನು ತೊಡೆದುಹಾಕುವ ಸುಲಭಸಾಧನೆ, ನಾಮಸಂಕೀರ್ತನೆ; ಇದು ನಮ್ಮ ಕೈಯಲ್ಲೇ ಇದೆ. ಹೀಗಿರುವುದರಿಂದ ಕಾಲಗಳಲ್ಲೆಲ್ಲ ಕಲಿಕಾಲವೇ ಶ್ರೇಷ್ಠವಾದುದೆಂದು ಭಾಗವತದ ಒಕ್ಕಣೆ.

೮೨

ಮಾನವರು ಕೃತಯುಗದಿ ತಪವ ಮಾಡಲಿಬೇಕು
ಜ್ಞಾನ ಸಾಧನವಿರಲಿಬೇಕು ತ್ರೇತಾಯುಗದಲಿ
ಏನೆಂಬೆ ದ್ವಾಪರದಲಿ ಯಜ್ಞವೇ ಸಾಧನವು
ಗಾನ ದಾನಗಳು ಕಲಿಯುಗದಿ ಪುರಂದರವಿಠಲ

ಗಾನ—ನಾಮಸಂಕೀರ್ತನ, ಹರಿಕೀರ್ತನೆ; 'ಕಲೌ ತದ್ ಹರಿ ಕೀರ್ತನಂ' ಎಂದು ಭಾಗವತದ ನಿಲುವು.

೮೩

ತಂಬೂರಿ ಮೀಟಿದವ ಭವಾಬ್ಧಿ ದಾಟಿದವ
ತಾಳವ ತಟ್ಟಿದವ ಸುರರೊಳು ಸೇರಿದವ
ಗೆಜ್ಜೆಯ ಕಟ್ಟಿದವ ಖಳರೆದೆ ಮೆಟ್ಟಿದವ
ಗಾಯನ ಪಾಡಿದವ ಹರಿಮೂರ್ತಿ ನೋಡಿದವ
ಪುರಂದರವಿಠಲನ ನೋಡಿದವ ವೈಕುಂಠಕ್ಕೋಡಿದವ

ಖಳರ—ಕೆಟ್ಟವರ.

೮೪

ಧ್ಯಾನವು ಕೃತಯುಗದಲ್ಲಿ ಯಜ್ಞಯಾಗವು ತ್ರೇತಾಯುಗದಲ್ಲಿ
ಅರ್ಚನೆ ದ್ವಾಪರದಲ್ಲಿ
ಕೀರ್ತನೆ ಮಾತ್ರದಿ ಕಲಿಯುಗದಲ್ಲಿ
ಮುಕುತಿಯನೀವ ಪುರಂದರವಿಠಲ

೮೫

ಮಾರಿಯ ಕೈಯಿಂದ ನೀರ ತರಿಸುವರು
ಮಸಣಿಯ ಕೈಯಿಂದ ಕಸವ ಬಳಿಸುವರು
ಮೃತ್ಯುವಿನ ಕೈಯಿಂದ ಬತ್ತವ ಕುಟ್ಟಿಸುವರು
ಜವನವರ ಕೈಯಿಂದ ಜಂಗಲಿಯ ಕಾಯಿಸುವರು
ಪುರಂದರವಿಠಲನ ದಾಸರು ಸರಿ ಬಂದಹಾಗಿಹರು ಭೂಮಿಯ ಮೇಲೆ

ಜಂಗಲಿ—ಜಂಗುಳಿ ; ಹಳ್ಳಿಯ ದನ.

೮೬

ಹರಿ ಗುರುಗಳಿಗೆರಗದೆ ಹರಿಭಕ್ತಿಪೊದಗುವುದೆ
ಕಿರವ ತಿಂಬ ನಾಯಿಗೆ ತುಪ್ಪವೋಗರ ಸೊಗಸುವುದೆ
ಹರಿನಾಮಕ್ಕೆ ಹರಿದಾಸರು ಕರಗುವರಲ್ಲದೆ
ನರಕಭಾಜನ ಪಾಮರರು ಕರಗುವರೆ
ಚಂದ್ರಕಿರಣಕ್ಕೆ ಚಂದ್ರಕಾಂತಶಿಲೆ ಒಸರುವುದಲ್ಲದೆ
ಗೋರ್ಕಲ್ಲು ಒಸರುವುದೆ ಪುರಂದರವಿಠಲ

[ವ್ಯಾಸರಾಯಸ್ವಾಮಿಗಳ ಹೆಸರಿನಲ್ಲಿರುವ ಒಂದು ಉಗಾಭೋಗದಲ್ಲಿ ಈ ಮಾತುಗಳೇ ಬಂದಿವೆ. ಆದರೆ ಅಲ್ಲಿ ಮುಂದೆ ಐದು ಸಾಲುಗಳಿವೆ.]

ವೋಗರ—ಅನ್ನ.
ಒಸರು—ನೀರುಬಿಡು.

೮೭

ಹುಟ್ಟುವ ಭೀತಿ ಹೊಂದುವ ಭೀತಿ
ವಿಠ್ಠಲನಂಘ್ರಿಯ ನೆನೆಯದವರಿಗೆ
ಕಾಲನ ಭೀತಿ ಕರ್ಮದ ಭೀತಿ ಗೋ
ಪಾಲನ ದಾಸನಾಗದವನಿಗೆ
ಅರಿಷಡ್ವರ್ಗದ ಮಹಾಭೀತಿ ಶ್ರೀ
ಹರಿನಾಮವನುಚ್ಚರಿಸದವಗೆ
ಚೆಲುವ ಪುರಂದರವಿಠಲನ್ನ ಪೂಜಿಸದವಗೆ

೮೮

ನಾರದಮುನಿ ನಿಮ್ಮ ನೆನೆವನಲ್ಲದೆ
ನಾಡುಗಳೆಷ್ಟು ಕೊಟ್ಟನು ಹೇಳೊ
ಪ್ರಹ್ಲಾದನು ನಿನಗೇನ ಕೊಟ್ಟನೊ ಸ್ವಾಮಿ
ನಾನೇನು ಕೊಡದೆ ಹೋದೆನೋ ಹೇಳು
ಅಂದಿನವರಿಗೆ ನೀನು ಏನ ಕೊಟ್ಟೆಯೊ
ಇಂದೇಕೆ ನನಗದು ದೊರಕದೆ ಹೋಯಿತು
ಅಂದು ನೀ ಸಿರಿವಂತನೆ ಇಂದು ಬಡವನೆ
ಇದು ಏನು ವಿಚಿತ್ರ ಪುರಂದರವಿಠಲ

೮೯

ತನುವೆಂಬ ದೊಡ್ಡ ದೋಣಿಯಲಿ
ಹರಿನಾಮವೆಂಬ ಬಂಡವ ತುಂಬಿ
ವ್ಯವಹಾರವನು ಮಾಡುವೆನಯ್ಯ
ಇಂದ್ರಿಯಗಳೆಂಬ ಸುಂಕದವರಡ್ಡಾಗಲು
ಮುಕುಂದನ ಮುದ್ರೆಯನೆ ತೋರಿ
ಹೊಳೆಯ ದಾಟುವೆನಯ್ಯ
ಪುರಂದರವಿಠಲನಲ್ಲಿಗೆ ಪೋಗಿ
ಮುಕುತಿ ಸುಖವೆಂಬ ಲಾಭ ಗಳಿಸುವೆನಯ್ಯ

೯೦

ಮುಟ್ಟದಿರು ಅಚ್ಯುತಗರ್ಪಿತವಲ್ಲದುದನು ಕಂ
ಗೆಟ್ಟು ತುತಿಸದಿರು ಹರಿಯಲ್ಲದನ್ಯತ್ರ
ಕಷ್ಟಬೇಡ ಭೂಸುರರಲ್ಲಿ ದುಷ್ಟಜನರ ಸಂಗ ಬೇಡ
ಕೊಟ್ಟ ಭಾಷೆ ತಪ್ಪಲು ಬೇಡ ಆರಿಗಾದರು
ಶ್ರೀ ಪುರಂದರವಿಠಲನಂಘ್ರಿಯ
ನೆನೆಯದೆ ಬಿಟ್ಟಿರಬೇಡ

ತುತಿಸದಿರು—ಸ್ತುತಿಸಬೇಡ ; ಹರಿಯಲ್ಲದೆ ಇತರರನ್ನು ಹಾಡಿ ಹೊಗಳಬೇಡ.

೯೧

ಸಂತತಿ ಆಗೋದು ರಾಮಾಯಣವ ಕೇಳಲು
ಸಕಲ ಪಾಪಹರವು ಭಾರತ ಕೇಳಲು
ತಂತು ಮಾತ್ರ ವಿಷ್ಣುಪುರಾಣವ ಕೇಳಲು ತತ್ವವಿವೇಕವು ಬಾಹೋದು
ಅಂತರವರಿತು ಭಾಗವತವ ಕೇಳಲು
ಆಹೋದೈ ಜ್ಞಾನಭಕ್ತಿ ವೈರಾಗ್ಯವು
ಸಂತತ ಪುರಂದರವಿಠಲನ ಸಂಕೀರ್ತನೆ ಪಾಡಲು
ಸಕಲವು ಬಾಹೋದು ಸಾಯುಜ್ಯವು

ಸಂತತಿ — ಸಂತಾನ.
ತಂತುಮಾತ್ರ—ಸ್ವಲ್ಪವಾದರೂ.
ಅಂತರವರಿತು—ಗುಟ್ಟನ್ನು ತಿಳಿದು (ಹರಿಸರ್ವೋತ್ತಮತ್ವವೇ ಭಾಗವತರಹಸ್ಯ).

೯೨

ಶ್ರವಣದಿಂದ್ಹೋಯಿತು ಬ್ರಹ್ಮಹತ್ಯಪಾಪವು
ಸ್ಮರಣೆಯಿಂದ್ಹೋಯಿತು ಸೇರಿದ್ದ ಪಾಪವು
ಎಲ್ಲಿದ್ದ ಅಜಮಿಳ ಎಲ್ಲಿತ್ತು ವೈಕುಂಠ
ಕೊಟ್ಟಾತನೆ ಬಲ್ಲ, ಪುರಂದರವಿಠಲ

೯೩

ಆವಿನ ಕೊಂಬಿನ ತುದಿಯಲ್ಲಿ ಸಾಸುವೆ ಕಾಳಿದ್ದಷ್ಟೊತ್ತಾಗಲಿ
ದೇವ ನಿನ್ನ ನೆನೆದವ ಜೀವನ್ಮುಕ್ತನಲ್ಲವೇನೈ
ಸರ್ವಕಾಲದಲ್ಲಿ ನರಳುತ್ತ ಹೊರಳುತ್ತ ವರಲುತ್ತ
ಶ್ರೀಹರಿ ಹರಿಯೆಂದವರು
ಜೀವನ್ಮುಕ್ತರೆಂಬೋದಕ್ಕೆ ಏನು ಆಶ್ಚರ್ಯವಯ್ಯ
ಪುರಂದರವಿಠಲರೇಯ

ಆವಿನ—ಹಸುವಿನ.

೯೪

ಎಲ್ಲಿ ಹರಿಕಥೆಯ ಪ್ರಸಂಗವೋ
ಅಲ್ಲಿ ಗಂಗೆ ಯಮುನೆ ಗೋದಾವರಿ ಸಿಂಧು
ಎಲ್ಲ ತೀರ್ಥವು ಬಂದು ಎಣೆಯಾಗಿ ನಿಂದಿರಲು
ವಲ್ಲಭ ಪುರಂದರವಿಠಲ ಒಪ್ಪಿದನು

೯೫

ಕೂಪದಲ್ಲಾದರು ಕೊಳದಿ ಮುಳುಗಿಯಾದರು
ವಾಪಿಯಲ್ಲಾದರು ಅಶುಚಿಯಲ್ಲಾದರು
ಗೋಪಿಚಂದನದ ಸಂಪರ್ಕವಿದ್ದರೆ ತಾ ಪುನೀತ
ಸಂಧ್ಯಾಕ್ಕೆ ಕಾಲವೇ ಮುಖ್ಯವೆಂದು
ಶ್ರೀಪತಿ ಪುರಂದರವಿಠಲ ಪೇಳ್ದ

ವಾಪಿ—ಬಾವಿ.

೯೬

ಒಂದಕ್ಷರವ ಪೇಳಿದವರು ಉರ್ವಿಯೊಳು ಅವರೆ ಗುರು
ಎಂದು ಇಳೆಯೊಳು ಬಹುಮಾನ ಮಾಡಬೇಕು ಕುಂದದೆ
ಒಂದಿಷ್ಟು ಅವಮಾನ ಮಾಡಿದರೆ ತಪ್ಪದೆ
ಒಂದು ನೂರು ಶ್ವಾನಜನ್ಮ ಕೋಟಿ ಹೊಲೆಜನ್ಮ
ತಂದೀವನು ಪುರಂದರವಿಠಲ

ಉರ್ವಿಯೊಳು— ಭೂಮಿಯ ಮೇಲೆ.

೯೭

ನಿನ್ನ ಭಕ್ತರೆಂದೆನಿಸಿದ ಜನರು ಭಂಗಪಡಲುಬೇಕು
ದಿನಂಪ್ರತಿ ದೀನ ಅನ್ನ ಉದಕ ವಸ್ತ್ರಗಳು ಕಾಣದೆ ಇರಬೇಕು
ಬೆನ್ನಹತ್ತಿ ರೋಗಗಳು ಹತ್ತಿ ಇರಲುಬೇಕು
ತನ್ನವರ ಕೈಯಿಂದ ಛೀ ಎನಿಸಿಕೊಳಬೇಕು
ಪನ್ನಗಶಯನ ಶ್ರೀ ಪುರಂದರವಿಠಲ

೯೮

ಅಂದು ಬಾಹೋದು ನಮಗಿಂದೆ ಬರಲಿ
ಇಂದು ಬಾಹೋದು ನಮಗೀಗಲೆ ಬರಲಿ
ಈಗ ಬಾಹೋದು ಈ ಕ್ಷಣವೆ ಬರಲಿ
ಪುರಂದರವಿಠಲನ ದಯವೊಂದು ನಮಗಿರಲಿ

೯೯

ಒಡೆಯನುಳ್ಳ ತೊತ್ತಿಗೇತರ ಚಿಂತೆ ಎ
ನ್ನೊಡೆಯ ದ್ವಾರಕಿವಾಸ ಎಂಬ ಛತ್ರವಿರೆ
ಇಂದಿಗೆಂಬ ಚಿಂತೆ ನಾಳೆಗೆಂಬ ಚಿಂತೆ ನಾಡಿದಿ
ಗೆಂಬ ಚಿಂತೆ ತೊತ್ತಿಗೇತಕೊ ಅಯ್ಯ
ಅಡಿಗಡಿಗೊಮ್ಮೆ ನೋವ ಕಾವ ಚಿಂತೆಯು
ಒಡೆಯ ಪುರಂದರವಿಠಲ ನೀನಿರುತಿರಲು

೧೦೦

ರಾವಣನು ರಥವೇರಿ ರಣಕೆ ಬಂದಿರಲು
ನೀವು ಪದಚರರಾಗಿ ನೆಲದ ಮೇಲಿರಲು
ನಮ್ಮ ಹನುಮಂತ ನಿಮ್ಮನು ಕಂಡು
ಚಾಲ್ವರಿದು ಬೊಬ್ಬಿರಿದು ಕುಣಿದಾಡಿ
ಸುಖವ ಸೂರೆಯಮಾಡಿ ಎತ್ತಿರಲು
ನಮ್ಮ ಹಿರಿಯರು ನಿಮ್ಮ ವೇಳೆಗೊದಗಿರಲಾಗಿ
ನಮ್ಮ ನೀವು ಮರೆಯುವುದೆ ಪುರಂದರವಿಠಲ

೧೦೧

ಇರುವುದಾದರೆ ಮುಗುಳುತೆನೆ
ಅದಿಲ್ಲದಿರೆ ಚಿಗುರೆಲೆ
ಅದೂ ಇಲ್ಲದಿರೆ ಬರಲು ಕಟ್ಟಿಗೆ
ಇಲ್ಲದಿದ್ದರೆ ಬೇರು ಮಣ್ಣು
ಅದೊಂದು ಇರದಿರೆ
ತುಳಸಿ ತುಳಸಿ ಎಂದೊರಲಿದರೆ ಸಾಕು
ಎಲ್ಲ ವಸ್ತುಗಳನೀಡಾಡುವ ಪುರಂದರವಿಠಲ

ಮುಗುಳುತೆನೆ—ಹೂವು.

೧೦೨

ನಿನ್ನ ದಾಸನಾಗಿ ನಿನ್ನೆಂಜಲುಂಡವನ
ನೀನುದಾಸೀನ ಮಾಡಿದರೆ ಲೋಗರು ನಗರೆ
ನಿನ್ನ ಚರಣಕಮಲವನು ಕೊರಳಲ್ಲಿ
ಕಟ್ಟಿಕೊಂಬುದೆ ಪುರಂದರವಿಠಲ

ಲೋಗರು—ಲೋಕದ ಜನರು.

೧೦೩

ನಿನ್ನಾಳೆಂದಡೆ ಹರಿಯೆ ಇನ್ನೇನಿನ್ನೇನು
ಎನ್ನೊಳಿದ್ದವ ನೀನಾದೆ ನಿನ್ನ ದಾಸ ನಾನಾದೆ
ಇನ್ನು ನೀನು ಸಾಕದಿರಲು ನಿನ್ನ ದಾಸರು ನಗರೆ
ಘನ್ನಮಹಿಮ ಪುರಂದರವಿಠಲರಾಯ

೧೦೪

ನಿನ್ನ ಕಾಲಹೆಜ್ಜೆಯ ಪಿಡಿದು ನಾ ನಿಲುವೆ
ನಿನ್ನ ಪಂಜು ಹಿಡಿದು ಒಡ್ಡಿ ಬೊಬ್ಬಿಡುವೆ
ನಿನ್ನ ಛತ್ರಚಾಮರ ಪಿಡಿದೇಳುವೆ
ನೀರ ನೀವಾಳಿಸಿಕೊಂಡು ಕೊಬ್ಬುವೆನು
ಬಿಡೆನು ಬಿಡೆನು ನಿನ್ನ ಚರಣಕಮಲವ
ಪುರಂದರವಿಠಲ ನಿನ್ನ ಪಾದವ ಬಿಡೆನು

ಆಹ್ನೀಕ–ಆಚಾರ

೧೦೫

ಪ್ರಾತಃಕಾಲದ ನಿದ್ರೆ ಪರಿಹರಿಸಿ
ಹರಿಯ ಆರ್ತಿಯಿಂದಲಿ ಸ್ಮರಿಸಿ
ನಾಥಗೋವಿಂದಗೆ ಪ್ರದಕ್ಷಿಣೆ ಮಾಡಿ
ಪ್ರೀತಿಯೊಳತಿಥಿ ಪೂಜೆಗೈದು
ಪುರಾಣ ಶಾಸ್ತ್ರವ ಕೇಳಿ
ನಾಥ ಶ್ರೀಪುರಂದರವಿಠಲಗೆ ನಮೋ ಎನ್ನು

೧೦೬

ಹರೇ ಗೋವಿಂದ ಎಂದೇಳು
ಹತ್ತಾವತಾರವನು ಪೇಳು
ಮೂಡಲ ದೆಸೆಗೆ ನಡೆ
ಗೋ ವಿಪ್ರ ತುಳಸಿಗೆರಗಿ ಬಂದು
ನೈಋುತಿಯಲ್ಲಿ ತೃಣವನಿಟ್ಟು
ಮಲಮೂತ್ರಗಳ ಬಿಟ್ಟು ಶೌಚಮಾಡು
ಗುರುಪರಂಪರೆಯೆಂದು ಪುರಂದರವಿಠಲನೆನ್ನು

೧೦೭

ಏಳುತ್ತ ಗೋವಿಂದಗೆ ಕೈಯ ಮುಗಿಯುವೆ
ಕಣ್ಣವೆ ತೆಗೆದು ನೋಡುವೆ ಶ್ರೀಹರಿಯ
ನಾಲಿಗೆ ತೆಗೆದು ನಾರಾಯಣ ನರಹರಿ
ಸೋಳ ಸಾಸಿರ ಗೋಪಿಯರರಸ
ಎನ್ನಾಳುವ ಧೊರೆಯೆ ಪುರಂದರವಿಠಲ

ಸೋಳ ಸಾಸಿರ—ಹದಿನಾರು ಸಾವಿರ.

೧೦೮

ನಕ್ಷತ್ರ ಸೂಸಿ ಕಂಡ ನರಗೆ ಉತ್ತಮ ಸಂಧ್ಯಾ
ನಕ್ಷತ್ರ ಒಂದೆರಡು ಕಂಡ ನರಗೆ ಮಧ್ಯಮ ಸಂಧ್ಯಾ
ನಕ್ಷತ್ರ ದೂರ ಕಾಣದ ನರಗೆ ಅಧಮ ಸಂಧ್ಯಾ
ನಕ್ಷತ್ರ ಬಿಟ್ಟರೆ ನಾರಾಯಣ ಪುರಂದರವಿಠಲ ಬಿಡುವ

೧೦೯

ಎರಡು ಘಳಿಗೆ ಇರಲು ಗೃಹಸ್ಥಗೆ ಸ್ನಾನ
ಕರವ ಮುಗಿದು ಮಾಡು ಸಂಕಲ್ಪವನು
ಪರಮಪುಣ್ಯ ಬ್ರಾಹ್ಮಣ ಧರ್ಮವೆಂದು
ಪುರಂದರವಿಠಲನು ಮೆಚ್ಚಿ ಪಾಲಿಸುವ

೧೧೦

ಹತ್ತೈದು ಘಳಿಗೆಯ ಮೇಲೆ ಮತ್ತೈದು ಬರಲೆದ್ದು
ಚಿತ್ತಜನಯ್ಯನ ಚಿತ್ತದಿ ಧ್ಯಾನಿಸಿ
ಅತ್ತಲುದಯಕ್ಕೆ ಘಳಿಗೆ ಎರಡಿರುವಲ್ಲಿ
ನಿತ್ಯ ಸ್ನಾನವ ಮಾಡುತಲೆ ಆದಿತ್ಯಗರ್ಘ್ಯವನೀಯೆ
ಉತ್ತಮಜನಕೆಲ್ಲ ಪೊತ್ತಿದ್ದ ಪಾಪಗಳನು
ಉತ್ತರಿಸುವನೆಂದು ಪುರಂದರವಿಠಲ

ಉತ್ತರಿಸುವನು—ದಾಟಿಸುವನು.

೧೧೧

ಉದಯ ಕಾಲದ ಜಪ ನಾಭಿಗೆ ಸರಿಯಾಗಿ
ಹೃದಯಕ್ಕೆ ಸರಿಯಾಗಿ ಮಧ್ಯಾಹ್ನದಿ
ವದನಕ್ಕೆ ಸಮನಾಗಿ ಸಾಯಂಕಾಲಕೆ ನಿತ್ಯ
ಪದುಮನಾಭ ತಂದೆ ಪುರಂದರವಿಠಲಗೆ
ಇದೆ ಗಾಯತ್ರಿಯಿಂದ ಜಪಿಸಬೇಕೊ

೧೧೨

ಅನಾಮಿಕಾಖ್ಯ ಮಧ್ಯದ ಎರಡನೆಯ ಗೆರೆಯಾದಿ
ಇನಿತು ಮಧ್ಯಾಂಗುಲಿ ಕೊನೆಗೆರೆ ಕೂಡಿಸಿ
ಮನಮೂರ್ತಿ ಪರಿಮಾಣ ಅಂಗುಷ್ಠದಿಂದಲಿ
ಎಣಿಸು ತರ್ಜನಿಮೂಲ ಪರಿಯಂತರ
ಘನ ಹತ್ತುಗೆರೆ ಜಪ ಪುರಂದರವಿಠಲಗೆ
ಮನದಿ ಅರ್ಚಿಸುತ ಗಾಯಿತ್ರಿ ಜಪವ

ಅನಾಮಿಕ—ಕಿರುಬೆರಳಿನ ಪಕ್ಕದ್ದು (ಉಂಗುರದ ಬೆರಳು).
ಮಧ್ಯಾಂಗುಲಿ—ನಡುವಣ ಬೆರಳು.
ಮನಮೂರ್ತಿ—ಮಂತ್ರದೇವತೆ.
ತರ್ಜನಿ—ತೋರು ಬೆರಳು.

೧೧೩

ಮಧ್ಯಾಂಗುಲಿ ಮೇಲೆ ಮಣಿಸರವಿಟ್ಟಿನ್ನು
ಬದ್ಧ ಅಂಗುಟಾಗ್ರ ಎಣಿಸಬೇಕು
ಕಿರಿ ಅಂಗುಲಿ ಪಂಚ ಭೋಗಿಸಿ ಇರಬೇಕು
ಭದ್ರವಾಗಿ ನಿಲ್ಲಿಸಿ ನೀರು ಸೋರದೆ ಗಾಯತ್ರಿ
ಬುದ್ಧಿಪೂರ್ವಕದಿಂದ ಗೆಯ್ಯುತಲಿರಬೇಕು
ಮುದ್ದುಮೂರುತಿ ನಮ್ಮ ಪುರಂದರವಿಠಲನ
ಯಾವದೆಂದು ನೋಡುವಾ ಬಗೆ ಕಾಣಲೆಬೇಕು

ಅಂಗುಟಾಗ್ರ—ಹೆಬ್ಬೆರಳ ಮೇಲೆ.

೧೧೪

ಕಂಡಾನಿಶದಲ್ಲಿ ಅರ್ಘ್ಯವನು
ಪ್ರಾತರದಿ ಮಂಡಲಾಕಾರ
ಮಧ್ಯಾಹ್ನದಲ್ಲಿ ಪುಂಡಗಾರನಾಗಿ
ಚರಿಸದಲೆ ಇದ್ದರೆ ಅವಗೆ
ಪಂಡಿತ ಪುರಂದರವಿಠಲ ಒಲಿಯ

೧೧೫

ಹಲ್ಲು ಬೆಳಗುವಲ್ಲಿ ಬಿಂಬ
ಪ್ಲಕ್ಷ ಪತ್ರೆ ನೆಲ್ಲು ನಿಲ್ಲು
ಮಹಾಲಯ ಪುಣ್ಯದಿವಸದಿ
ಬಲ್ಲಿದೇಕಾದಶಿ ಪಾರ್ವಣ
ಅಮಾವಾಸ್ಯೆ ಇಟ್ಟ ಶಶಿ ರವಿ ಗ್ರಹಣದಲ್ಲಿ
ಅಲ್ಲದೆಯ್ಯ ದಂತ ಕಾಷ್ಠಮಲಿನಗಳಿಗೆ
ರಿಷಿಲ್ಲಿಸಿ ನೀರುಮುಕ್ಕಳಿಸಿ ಹನ್ನೆರಡು
ಬಲ್ಲ ಬುಧರಿಗೆ ಪುರಂದರವಿಠಲ
ಇಲ್ಲಿ ಒಲಿವ ಇದ ಚರಿಸೆ

೧೧೬

ಅಂದವಿಲ್ಲದ ಆಶಕ್ತನಿಗೆ ಒಂದೆ ಅರಿವೆಯ
ಲ್ಲಿಂದ ಮೈದೊಳೆದು ಮಡಿಯುಟ್ಟು ನಾಮಗಳಿಟ್ಟು
ಚಂದದಲಿ ಸಂಧ್ಯಾವಂದನೆ ಮಾಡೆ ಫಲವಹುದು
ನಿಂದೆ ಹೇಗೆ ತಿಂದು ಮಾಡಿದ ಮನುಜಗೆ
ಇಂದ್ರ ಹದಿನಾಲ್ಕು ಮನು ನರಕವೆಂದು
ಅಂದು ಪುರಂದರವಿಠಲ ಪೇಳಿದೆಂದು ಸಿದ್ಧ

೧೧೭

ಒಂದೇ ಒಂದು ಬೆರಳ ಜಪ
ಒಂದೇ ಹತ್ತು ಪುತ್ರಂಜೀವಿ ಮಣಿಯ ಜಪ
ಒಂದೇ ನೂರು ಶಂಖದ ಮಣಿಯ ಜಪ
ಒಂದೇ ಸಹಸ್ರ ಹವಳದ ಜಪ
ಒಂದೇ ಹತ್ತು ಸಾಹಸ್ರ ಮುತ್ತಿನ ಮಣಿಯ ಜಪ
ಒಂದೇ ಲಕ್ಷ ಸ್ವರ್ಣ ಮಣಿಯ ಜಪ
ಒಂದೇ ಕೋಟಿ ದರ್ಭೆ ಗಂಟಿನ ಜಪ
ಒಂದೇ ಅನಂತ ಶ್ರೀ ತುಲಸಿ ಮಣಿಯ ಜಪ
ವೆಂದು ಪೇಳಿದ ಪುರಂದವಿಠಲ

೧೧೮

ಪರರನ್ನ ಉಂಡ ಬ್ರಾಹ್ಮಣರಿಗೆ
ಇರದು ಮಾಡಿದ ಶುಭಕರ್ಮ
ಎರಡು ಮೂರು ಭಾಗ ಅನ್ನವನಿತ್ತವಗೆ ಉ
ದರದಲಿ ಉಂಡ ಅನ್ನದ್ದೊಂದೆ ಭಾಗ
ಇರುವುದೆಂದ ಪುರಂದರವಿಠಲ

೧೧೯

ಅನ್ನಪಾನಾದಿಗಳೀಯೊ ಅಭ್ಯಾಗತರಿಗೆ
ಅನ್ನಪಾನಾದಿಗಳೀಯೊ ಆಚಂಡಾಲಸಪ್ತರಿಗೆ
ಅನ್ನಪಾನಾದಿಗಳೀಯೊ ಅಂಧ ದೀನ ಕೃಪಣರಿಗೆ
ಹಸಿವೆಗೆ ಹಾಗವನ್ನರ್ಪಿಸೊ ಪುರಂದರವಿಠಲಗೆ

ಅಭ್ಯಾಗತರು—ಸಮಯಕ್ಕೆ ಸರಿಯಾಗಿ ತಾವಾಗಿ ಬಂದವರು.
ಆಚಂಡಾಲಸಪ್ತರಿಗೆ—ಚಂಡಾಲರವರೆಗೆ ಏಳು ಜಾತಿಯವರಿಗೆ.
ಅಂಧ ದೀನ ಕೃಪಣಗೆ—ಕುರುಡರು, ಆತಂಕದಲ್ಲಿರುವವರು, ಬಡವರು ಇವರಿಗೆ.
ಹಾಗ—ಪಾಲು.

೧೨೦

ಶತ್ರುವಾಗಲಿ ಚೋರ ಚಂಡಾಲನಾಗಲಿ
ಪಿತೃಘಾತಕಿಯಾಗಲಿ ಪ್ರೀತಿಮಾಡಲು ಬೇಕು
ಅತಿಥಿಯಾಗಿ ಮಧ್ಯಾಹ್ನ ಅವ ಬಂದುಂಡರೆ ಸ
ದ್ಗತಿಯನೀವ ಪುರಂದರವಿಠಲ

ಭಕ್ತಿ

೧೨೧

ಉದಯ ಅಸ್ತಮಾನವೆಂಬೊ ಎರಡು ಕೊಳಗವಿಟ್ಟು
ಆಯುಸ್ಸು ಎಂಬೊ ರಾಸಿ ಅಳೆದು ಹೋಗದ ಮುನ್ನ
ಹರಿಯ ಭಜಿಸಬೇಕು ಮನಮುಟ್ಟಿ
ಭಜಿಸಿದರೆ ತನ್ನ ಕಾರ್ಯವು ಘಟ್ಟಿ
ಹಾಗಲ್ಲದಿದ್ದರೆ ತಾಪತ್ರಯ ಬೆನ್ನಟ್ಟಿ
ವಿಧಿಯೊಳು ಗೆಯ್ವಾಗ ಹೋಗದಯ್ಯ ಕಟ್ಟಿ
ಪುರಂದರವಿಠಲನ ಕರುಣಾದೃಷ್ಟಿ
ಅವನ ಮೇಲಿದ್ದರೆ ಅವ ಜಗಜಟ್ಟಿ

೧೨೨

ಕೆರೆಯ ನೀರನು ಕೆರೆಗೆ ಚೆಲ್ಲಿ
ವರವ ಪಡದವರಂತೆ ಕಾಣಿರೊ
ಹರಿಯ ಕರುಣದೊಳಾದ ಭಾಗ್ಯವ
ಹರಿಸಮರ್ಪಣೆ ಮಾಡಿ ಬದುಕಿರೊ
ಸಿರಿಪುರಂದರವಿಠಲರಾಯನ
ಚರಣ ಕಮಲವ ನಂಬಿ ಬದುಕಿರೊ

೧೨೩

ನಿನ್ನನ್ನೆ ಪಾಡುವೆ ನಿನ್ನನ್ನೆ ಪೊಗಳುವೆ
ನಿನ್ನನ್ನೆ ಬೇಡಿ ಬೇಸರಿಸುವೆ
ನಿನ್ನ ಕಾಲನು ಪಿಡಿವೆ ನಿನ್ನ ಹಾರೈಸುವೆ
ನಿನ್ನ ತೊಂಡರಿಗೆ ಕೈಗೊಡುವೆ
ನಿನ್ನಂತೆ ಸಾಕಬಲ್ಲವರಿನ್ನುಂಟೆ
ಘನ್ನ ಪುರಂದರವಿಠಲ ದೇವರ ದೇವ

೧೨೪

ನವರತ್ನಗಳು ಕಂಡ ಕಂಡ ಠಾವಿನಲಿ ಉಂಟೆ
ನವವಿಧ ಭಕುತಿ ಕಂಡ ಕಂಡವರಿಗುಂಟೆ ದೇವ
ನಿನ್ನ ಭಕುತಿಯನು ಸುರ್‍ರನೆ ಸುರಿದುಕೊಂಡರೆ ಬಾರದು
ಕಲಿತರೆ ಬಾರದು ಪುರಂದರವಿಠಲನ ಒಲುಮೆಯಾಗದನಕ

೧೨೫

ಮನದಭಿಮಾನಿ ಮಹರುದ್ರನ ಭಜಿಸಲು
ಅನವರತ ಶ್ರೀಹರಿಯನಾರಾಧಿಸಲು
ಮನಶುದ್ಧಿಯನೀವ ಮತಿ ಕೊಡುವ
ಮನುಜೋತ್ತಮರೆ ಕೇಳಿ ಮನಕೆ ಪ್ರೇರಕನವನು
ವನಜಾಕ್ಷ ಪುರಂದರವಿಠಲನ ಒಲುಮೆಗೆ
ಮನಸು ಕಾರಣವಲ್ಲದೆ ಮತ್ತಾವುದು

೧೨೬

ಮಾತಾಪಿತರು ನಿನಗಂದೆ ಮಾರಿದರೆನ್ನ
ನಾಥನೆ ನೀನೆನ್ನ ಸಲಹದಿದ್ದರೆ ದೇವ
ಯಾತಕೆ ಭಕ್ತವತ್ಸಲನೆಂದೆನಿಸಿಕೊಂಡೆ
ನಾ ತಡೆಯೆನೊ ನಿನ್ನ ಬಿರುದಿಗಂಜುವವನಲ್ಲ
ಸಾತ್ವಿಕ ದೈವವೆ ಸಲಹೊ ಎನ್ನ ಪ್ರ
ಖ್ಯಾತ ಪುರುಷ ಶ್ರೀ ಪುರಂದರವಿಠಲ

೧೨೭

ನಿನ್ನಂಥ ಸ್ವಾಮಿ ಎನಗುಂಟು ನಿನಗಿಲ್ಲ
ನಿನ್ನಂಥ ತಂದೆಯು ಎನಗುಂಟು ನಿನಗಿಲ್ಲ
ನಿನ್ನಂಥ ಧೊರೆಯು ಎನಗುಂಟು ನಿನಗಿಲ್ಲ
ನೀನೆ ಪರದೇಶಿ ನಾನೆ ಸ್ವದೇಶಿ
ನಿನ್ನರಸಿ ಲಕುಮಿ ಎನ್ನ ತಾಯಿ
ನಿನ್ನ ತಾಯಿ ತೋರೋ ಪುರಂದರವಿಠಲ

೧೨೮

ತಪ್ಪು ಸಾಸಿರಗಳ ಒಪ್ಪಿ ಕಾಯೊ ಕೃಪಾಳು
ಮುಪ್ಪುರವನಳಿದಂಥ ಸುರೇಂದ್ರವಂದ್ಯ
ಅಪ್ರಮೇಯನೆ ನಿನ್ನ ಅದ್ಭುತ ಮಹಿಮೆಗಳ
ಅಪ್ಪುನಿಧಿಯಲ್ಲಿ ಪುಟ್ಟಿದವಳರಿಯಳು
ಕಪ್ಪು ಮೇಘಕಾಂತಿಯೊಪ್ಪುವ ತಿಮ್ಮಪ್ಪ
ಅಪ್ರಾಕೃತ ರೂಪ ಪುರಂದರವಿಠಲ

ಮುಪ್ಪುರವನಳಿದಂಥ—ಬೌದ್ಧಾವತಾರದಲ್ಲಿ.
ಅಪ್ಪುನಿಧಿಯಲ್ಲಿ ಪುಟ್ಟಿದವಳು—ಸಮುದ್ರದಲ್ಲಿ ಹುಟ್ಟಿದ ಲಕ್ಷ್ಮಿ.

೧೨೯

ಆನೆಯನ್ನು ಕಾಯ್ವಾಗ ಜ್ಞಾನವಿದ್ದದ್ದು ಏನು
ನಾನು ವದರಲು ಈಗ ಕೇಳದಿದ್ದುದು ಏನು
ದಾನವಾಂತಕ ಹರಿ ದೀನರಕ್ಷಕನೆಂಬೊ
ಮಾನವುಳಿಸಿಕೊಳ್ಳೊ ಪುರಂದರವಿಠಲ

೧೩೦

ಬಡವರೊಳಗೆ ಎನ್ನಿಂದಾರು ಬಡವರಿಲ್ಲ
ಕೊಡುವರೊಳಗೆ ನಿನ್ನಿಂದಾರು ಕೊಡುವರಿಲ್ಲ
ದೃಢಭಕ್ತಿ ಎನಗೆ ನಿನ್ನಲ್ಲಿ ಕಲ್ಪಿಸಿ
ಬಿಡದೆ ಸಲಹಯ್ಯ ಶ್ರೀ ಪುರಂದರವಿಠಲ

೧೩೧

ಹಗಲು ನಿನ್ನ ನೆನೆಯಲಿಲ್ಲ ಹಸಿವು ತೃಷೆಯಿಂದ
ಇರುಳು ನಿನ್ನ ನೆನೆಯಲಿಲ್ಲ ನಿದ್ರೆ ಭರದಿಂದ
ಈ ಎರಡರ ಬಾಧೆಗೆ ನಾನೊಳಗಾದೆನೊ
ಸಲಹೊ ಪುರಂದರವಿಠಲ

೧೩೨

ಹಗಲು ನಾಲ್ಕು ಝಾವ ಹಸಿವನು ಕಳೆದೆನೊ
ಇರುಳು ನಾಲ್ಕು ಝಾವ ವಿಷಯಕ್ಕೆ ಕೂಡಿದೆನೊ
ವ್ಯರ್ಥವಾಯಿತಲ್ಲ ಈ ಸಂಸಾರ ಸುಖವೆಲ್ಲ
ಕೇಳಯ್ಯ ತಂದೆ ಶ್ರೀ ಪುರಂದರವಿಠಲ

೧೩೩

ನಿನ್ನ ಧ್ಯಾನವ ಕೊಡೊ, ಎನ್ನ ಧನ್ಯನ ಮಾಡೊ
ಪನ್ನಗಶಯನ ಶ್ರೀ ಪುರಂದರವಿಠಲ
ಅಂಬುಜನಯನನೆ ಅಂಬುಜಜನಕನೆ
ಅಂಬುಜನಾಭ ಶ್ರೀ ಪುರಂದರವಿಠಲ
ಭಾಗೀರಥೀಪಿತ ಭಾಗವತರ ಪ್ರಿಯ
ಯೋಗಿಗಳರಸ ಶ್ರೀ ಪುರಂದರವಿಠಲ

೧೩೪

ಬಲಿಯ ಮನೆಗೆ ವಾಮನ ಬಂದಂತೆ
ಭಗೀರಥಗೆ ಶ್ರೀ ಗಂಗೆ ಬಂದಂತೆ
ಮುಚುಕುಂದಗೆ ಶ್ರೀ ಮುಕುಂದ ಬಂದಂತೆ
ಗೋಪಿಯರಿಗೆ ಗೋವಿಂದ ಬಂದಂತೆ
ವಿದುರನ ಮನೆಗೆ ಶ್ರೀಕೃಷ್ಣ ಬಂದಂತೆ
ವಿಭೀಷಣನ ಮನೆಗೆ ಶ್ರೀರಾಮ ಬಂದಂತೆ
ನಿನ್ನ ನಾಮವು ಬಂದು ಎನ್ನ ನಾಲಿಗೆಯಲಿ
ನಿಂದು ಸಲಹಲಿ ಶ್ರೀ ಪುರಂದರವಿಠಲ

೧೩೫

ಗಾಣದೆತ್ತಿನಂತೆ ತಿರುಗಾಡಲಾರೆ
ದಂಡಿಗೆಯ ನೊಗದಂತೆ ನಾ ಬೀಳಲಾರೆ
ನವಿಲಂತೆ ನಾನಿನ್ನು ಕುಣಿದಾಡಲಾರೆ
ಗಿಳಿಯಂತೆ ನಾನಿನ್ನು ಕೂಗಾಡಲಾರೆ
ಪುರಂದರವಿಠಲನ್ನ ಕಾಣದೆಲೆ
ಮಾತನಾವುದನು ಕೇಳಲಾರೆ

೧೩೬

ಮರ್ಕಟನ ಕೈನೂಲ ಕುಕ್ಕಡಿಯ ತೆರನಂತೆ
ಸಿಕ್ಕಿಕೊಂಡು ಕಾಮಕ್ರೋಧಮೋಹಗಳಿನ್ನ
ಹಿಕ್ಕಿ ಹೀರುತಲಿವೆ ಏಕೆ ನೋಡತಲಿರುವೆ
ಅಕ್ಕಟಕ್ಕಟ ನಿನ್ನ ದಾಸನೋ ನಾನು
ಸಿಕ್ಕ ಬಿಡಿಸಿ ನಿನ್ನ ಭಕ್ತಿಯ ತೋರೊ
ಪಕ್ಷಿವಾಹನ ನಮ್ಮ ಪುರಂದರವಿಠಲ

೧೩೭

ಸಂತತ ಹನ್ನೆರಡು ಕೋಟಿ ಸುವರ್ಣ ಪುಷ್ಪ ಸಮರ್ಪಿಸಲು
ಅಂತ್ಯ ಫಲದಿ ಕೋಟಿ ಕೋಟಿ ಅಗಣಿತ ಫಲವು
ಅರ್ಧ ತುಳಸಿ ದಳವ ತಂತುಮಾತ್ರ ಭಕ್ತಿಯಿಂದ ಸಮರ್ಪಿಸಲು
ಶ್ರೀ ಹೇಮಗತ ಪುರಂದರವಿಠಲ ವೈಕುಂಠ ಪದವಿಯನೀವನೊ

ತಂತುಮಂತ್ರ—ದಾರದಷ್ಟು ; ಅಲ್ಪಪ್ರಮಾಣದಲ್ಲಿ.

೧೩೮

ಎನಗೆ ನಿನ್ನಲಿ ಭಕ್ತಿ ಇರಲಿ, ಇಲ್ಲದಿರಲಿ
ಹರಿದಾಸನೆಂದೆನ್ನ ಕರೆವರು ಸಜ್ಜನರು
ಹರಿದಾಸನ್ನ ಯಾಮ್ಯರು ಎಳೆವರೆಂಬ ಅಪಕೀರ್ತಿಯ
ಪರಿಹರಿಸಿಕೊಳ್ಳೊ ಶ್ರೀ ಪುರಂದರವಿಠಲ

೧೩೯

ಸಕಲ ಸಾಧನಕೆಲ್ಲ ಸಿದ್ಧಿಗೊಳಿಸುವುದು
ಭಕುತಿ ಸಾಧನವಲ್ಲದನ್ಯ ಸಾಧನವುಂಟೆ
ಭಕುತಿಗಭಿಮಾನಿ ಭಾರತಿಯ ಕರುಣದಿಂ
ಮುಕುತಿಗೆ ಪಥವೆಂದು ಮನವಿಟ್ಟು ಭಜಿಸಿರೋ
ಅಖಿಲೇಶ ಪುರಂದರವಿಠಲ ತಾನೊಲಿವ

೧೪೦

ಕಣ್ಣಲ್ಲಿ ನೀರಿಲ್ಲ ಮನದಲ್ಲಿ ಕೊರಗಿಲ್ಲ
ಅತ್ತೆ ಸತ್ತರೆ ಸೊಸೆ ಅಳುವಂತೆ
ಅತ್ತೆ ಅತ್ತೆ ಎಂತೆಂದು ನಾನತ್ತೆ
ಅತ್ತೆ ಸತ್ತರೆ ಎದೆ ಎರಡಾಯಿತೆಂದು
ಅತ್ತೆ ಅತ್ತೆ ಎಂದು ಪುರಂದರವಿಠಲನ
ದಾಸರೆಲ್ಲರ ಮುಂದೆ ಹಾಡಿ ಹಾಡಿ ನಾನತ್ತೆ

೧೪೧

ಎರಗಿ ಭಜಿಪೆನು ನಿನ್ನ ಚರಣಸನ್ನಿಧಿಗೆ
ಕರುಣದಿಂದಲಿ ನಿನ್ನ ಸ್ಮರಣೆಯನು ಎನಗಿತ್ತು
ಮರೆಯದೆಲೆ ಸಲಹೋ ಶ್ರೀಪುರಂದರವಿಠಲ

೧೪೨

ಅರ್ಭಕನ ತೊದಲ್ನುಡಿಗೆ ತಾಯ್ತಂದೆಯರು
ಉಬ್ಬಿ ನಲಿವಂದದಲಿ ಉರಗಶಯನನೆ
ಕೊಬ್ಬಿ ನಾನಾಡಿದರೆ ತಾಳಿ ರಕ್ಷಿಸುವ ಎನ್ನ
ಕಬ್ಬುಬಿಲ್ಲನಯ್ಯ ಪುರಂದರವಿಠಲ

೧೪೩

ಹಾ ಕೃಷ್ಣ ದ್ವಾರಕವಾಸ ಎಂದೆನಲು
ಶ್ರೀಪತಿ ಅಕ್ಷಯ ವಸ್ತ್ರವನಿತ್ತ
ದ್ರೌಪದಿಯಭಿಮಾನವ ಕಾಯ್ದ ನಮ್ಮ
ಆಪತ್ತಿಗಾಪಹನೆಂಬ ಶ್ರೀಪತಿ ಪುರಂದರವಿಠಲ
ಅಕ್ಷಯ ವಸ್ತ್ರವನಿತ್ತು ಪಾರ್ಥನ ರಮಣಿಯ ಕಾಯ್ದನು

೧೪೪

ಧ್ವಜ ವಜ್ರಾಂಕುಶ ರೇಖಾಂಕಿತವಾದ
ಹರಿಯ ಪಾದಾಂಬುಜ ಸೇವಿಸುವ
ಅಜ ಭವಾದಿಗಳ ಭಾಗ್ಯ ನೋಡು
ತ್ರಿಜಗವಂದ್ಯನ ಪಾಡು
ಸುಜನ ಸಂಗವ ಮಾಡು
ಕುಜನಮತವ ಸುಡು ಗಜೇಂದ್ರಗೊಲಿದ
ಶ್ರೀ ಕೃಷ್ಣನ ಧ್ಯಾನವ ಮಾಡು
ಪುರಂದರವಿಠಲರಾಯನ ಬಿಡದೆ ಕೊಂಡಾಡು

೧೪೫

ಕಿಚ್ಚಿನೊಳಗೆ ಬಿದ್ದ ಕೀಟಕನು ನಾನಯ್ಯ
ಅಚ್ಯುತನೆ ಕಾಯೋ ಅನಂತನೆ ತೆಗೆಯೊ
ಗೋವಿಂದ ಹರಿ ಪೊರೆಯೊ ಪುರಂದರವಿಠಲ
ನೀ ಕರುಣವುಳ್ಳವನು ಕಾಣೊ

ಕಿಚ್ಚು—ಬೆಂಕಿ.
ಕೀಟಕ—ಹುಳು.

೧೪೬

ಬೆಟ್ಟದಂಥ ದುರಿತವು ಸುತ್ತಮುತ್ತಲೊಟ್ಟಿರೆ
ಕೃಷ್ಣನಾಮದ ಕಿಡಿ ಬಿದ್ದು ಬೆಂದುಹೋದದ್ದು ಕಂಡೆ
ಎಲೆ ಎಲೆ ದುರಿತವೆ ತಿರುಗಿ ನೋಡದೆ ಹೋಗು
ಎಲೆ ಎಲೆ ದುರಿತವೆ ಮರಳಿ ನೋಡದೆ ಹೋಗು
ನಿನ್ನ ಕಂಡರೆ ಶಿಕ್ಷಿಸದೆ ಬಿಡ
ಇನ್ನೊಮ್ಮೆ ಕಂಡರೆ ಶಿರವ ಚೆಂಡಾಡುವನು
ಪುಂಡರೀಕಾಕ್ಷ ನಮ್ಮ ಪುರಂದರವಿಠಲ

೧೪೭

ಯಾರು ಮುನಿದು ನಮಗೇನು ಮಾಡುವರಯ್ಯ
ಯಾರು ಒಲಿದು ನಮಗೇನು ಕೊಡುವರಯ್ಯ
ಕೊಡಬೇಡ ನಮ್ಮೊಡಲಿಗೆ ತುಸುವನು ಇಡಬೇಡ
ಈಯಲು ಬೇಡ ನಮ್ಮ ಶುನಕಗೆ ತಳಗಿಯು
ಆನೆಯ ಮೇಲೆ ಬಪ್ಪನ ಶ್ವಾನ ಕಚ್ಚಬಲ್ಲುದೆ
ದೀನನಾಥ ಪುರಂದರವಿಠಲ ನಮಗುಳ್ಳತನಕ

೧೪೮

ಎನ್ನಮ್ಮ ಸಿರಿದೇವಿ ಇನ್ನು ಅರಿಯಳು ಮಹಿಮೆ
ಕುನ್ನಿ ಮಾನವನು ನಾನೇನು ಬಲ್ಲೆನು
ಪನ್ನಗಾದ್ರಿನಿಲಯನೆ ಪಾವನಮೂರ್ತಿ ಶ್ರೀಕೃಷ್ಣ
ಎನ್ನನುದ್ಧರಿಸಯ್ಯ ಪುರಂದರವಿಠಲ

೧೪೯

ಪ್ರಪನ್ನರಕ್ಷಕ ನೀನು ಪಾಲಿಸು ನಿನ್ನವ ನಾನು
ಉಪಸಾಧನವರಿಯೆನೋ, ಒಮ್ಮೆ ನಿನ್ನ ನೆನೆವೆನು
ಅಪರಾಧಿ ನಾನಾದಡೇನು ಅಭಯಪ್ರದನು ನೀನು
ವಿಪರೀತ ಮಾಡದೆನ್ನನು ಸಲಹೊ ಪುರಂದರವಿಠಲ
ನಂಬಿದೆನೊ ನಿನ್ನನು

೧೫೦

ಕಾಲಮೇಲೆ ಮಲಗಿ ಸಿಂಪಿಲಿ ಹಾಲ ಕುಡಿದು ಬೆಳೆದೆ
ಮೂರು ಲೋಕವು ನಿನ್ನುದರದಲ್ಲಿರಲು
ಈರೇಳು ಲೋಕವನೀರಡಿ ಮಾಡಲು ಮೂರು ಲೋಕದೊಡೆಯ
ಶ್ರೀ ಪುರಂದರವಿಠಲ, ನಿನ್ನ ಬಾಲಕತನದ ಲೀಲೆಗೆ ನಮೋ ನಮೋ

೧೫೧

ಸೂಸಲಾಸೆಗೆ ಪೋಗಿ ಬಡಿಗಲ್ಲಿನೊಳು ಸಿಕ್ಕಿದ
ಮೂಷಕನ ತೆರನಾದೆನೊ ಎಲೆ ದೇವ
ಹೇಸಿಕೆ ವಿಷಯಂಗಳಿಗೆ ಎರಗುತ್ತಿದೆ ಎನ್ನ ಮನ
ಘಾಸಿಯಾದೆನೊ ಹೃಷಿಕೇಶ ನೀ ಸಲಹಯ್ಯ
ವಾಸವಾರ್ಚಿತ ಸಿರಿ ಪುರಂದರವಿಠಲ ನಿನ್ನ
ದಾಸರ ಸಂಗದೊಳು ಇರಿಸೆನ್ನ ಅನವರತ
ಕ್ಲೇಶವ ಕಳೆಯಯ್ಯ ಧೊರೆಯೆ

ಸೂಸಲಾಸೆ—ಸೂಸಲುಕಡಬು (ತಿಂಡಿ), ಅದರ ಆಸೆಗೆ.
ಮೂಷಕ—ಇಲಿ.
ವಾಸವಾರ್ಚಿತ—ಇಂದ್ರನಿಂದ ಪೂಜಿಸಲ್ಪಟ್ಟವನು.

೧೫೨

ನೋಡಿದರೆನ್ನೊಡೆಯುನ ನೋಡುವೆ
ಪಾಡಿದರೆನ್ನೊಡೆಯುನ ಪಾಡುವೆ
ಬೇಡಿದರೆನ್ನೊಡೆಯುನ ಬೇಡುವೆ
ಕಾಡಿದರೆನ್ನೊಡೆಯನ ಕಾಡುವೆ
ಒಡೆಯುಗೆ ಒಡಲನು ತೋರುವೆ
ಎನ್ನ ಬಡತನ ಬಿನ್ನಹ ಮಾಡುವೆ
ಒಡೆಯು ಶ್ರೀ ಪುರಂದರವಿಠಲನ ಅಡಿಗಳ
ಸಾರಿ ಬದುಕುವೆ ಸೇರಿ ಬದುಕುವೆ

ಒಡಲನು—ಹೃದಯವನ್ನು ; ಅಳಲನ್ನು ತೋಡಿಕೊಳ್ಳುವೆ.

೧೫೩

ಇಂದಿನ ದಿನ ಶುಭದಿನ
ಇಂದಿನ ವಾರ ಶುಭವಾರ
ಇಂದಿನ ತಾರೆ ಶುಭ ತಾರೆ
ಇಂದಿನ ಯೋಗ ಶುಭಯೋಗ
ಇಂದಿನ ಕರಣ ಶುಭಕರಣ
ಇಂದಿನ ಲಗ್ನ ಶುಭಲಗ್ನ
ಇಂದು ಪುರಂದರವಿಠಲರಾಯುನಪಾಡಿದ
ದಿನವೇ ಶುಭ ದಿನವು

೧೫೪

ಹೆತ್ತ ಮಕ್ಕಳು ಹುಚ್ಚರಾದರೆ ತಾಯ್ತಂದೆ
ಎತ್ತದೆ ಇಳಿಸದೆ ತಪ್ಪಿ ಹೋಗುವರೆ
ಮತ್ತೆ ನಿನ್ನ ದಾಸ ನಾನಜ್ಞನಾದರೆ
ಕರ್ತೃ ನೀ ಪೊರೆಯುದಿರುವರೇನೋ ಪುರಂದರವಿಠಲ

೧೫೫

ಹೀನ ಮಾನವಯೋನಿಯಲಿ ಜನಿಸಿದೆನೊ ನಾನು
ಏನಾದರೇನು ದೀನದಯಾಸಾಗರನೆ
ಯೋನಿ ಎನ್ನ ದೇವ ಅನ್ನದಂತೆ ಮಾಡೊ
ನ್ಯಾಸವನು ಬೋಧಿಸಿ ಸಾನುರಾಗದಿ ಕಾಯೊ
ವೇಣುಧರ ವೇದಾಂತವೇದ್ಯ ನರಹರಿಯೆ
ಕಾನನದೊಳು ಕಣ್ಣು ಕಾಣದವ ಬಿದ್ದಂತೆ ನಾ ಬಿದ್ದೆ
ನೀ ಕಾಯೊ ಪುರಂದರವಿಠಲ

೧೫೬

ಹರಿ ನಿನ್ನ ಸ್ಮರಣೆಯು ಸ್ಮರಿಸಲು ದುರಿತ ಪೀಡಿಪುದುಂಟೆ
ಅರಿತು ಭಜಿಪರಿಗೆಲ್ಲ ಕೈವಲ್ಯ ಜೋಕೆ
ಕರುಣವರಿತು ತನ್ನ ಮಗನ ಕೂಗಿದವಗೆ
ಮರಣಕಾಲದಿ ಒದಗಿದೆ ಶ್ರೀಪುರಂದರವಿಠಲ

ತನ್ನ ಮಗನ—ಅಜಾಮಿಳನ ಪ್ರಸಂಗ.

೧೫೭

ಮುಳುಗುವಗೆ ಕಲ್ಲುಮೇಲಿದ್ದರೇನು
ಜಗದೊಳಗೆ ವಾರಿಧಿ ಮೇರೆ ತಪ್ಪಿದರೇನು
ಕಡೆಗೆ ಹಾಕುವರು ಯಾರಯ್ಯ
ಬಿಡಿಸೊ ಬಿಡಿಸೊ ನಿನ್ನ ಚರಣ ಕಮಲವನ್ನು
ಎನ್ನೊಡೆಯ ಪುರಂದರವಿಠಲರೇಯ

ಕಡೆಗೆ ಹಾಕುವರು—ದಡವನ್ನು ಮುಟ್ಟಿಸುವವರು.

ಮುಕ್ತಿ

೧೫೮

ನರವೃಂದವೆಂಬೊ ಕಾನನದಲ್ಲಿ ಶ್ರೀ
ಹರಿನಾಮವೆಂಬಂಥಾ ಕಲ್ಪವೃಕ್ಷ ಹುಟ್ಟಿತಯ್ಯ
ನೆರಳು ಸೇರಲುಂಟು ಫಲವು ಮೆಲ್ಲಲುಂಟು
ಒರೆವ ನಾಲಿಗೆಯಲಿ ನಾಮತ್ರಯಂಗಳುಂಟು
ಇದೇ ಮುನಿಜನರ ಮನೆಯು ಕೊನೆಯು ಠಾವೊ
ಇದೇ ಬ್ರಹ್ಮಾದಿಗಳ ಸದಮಲಹೃದಯ ಪೀಠ
ಇದೇ ದ್ವಾರಾವತಿ
ಇದೇ ಕ್ಷೀರಾಂಬುಧಿ
ಇದೇ ಪುರಂದರವಿಠಲನ ವೈಕುಂಠಮಂದಿರ

ಒರೆವ—ಮಾತನಾಡುವ.
ಠಾವು—ತಾಣ, ನೆಲೆ.

೧೫೯

ಇಲ್ಲೆಂಥಾ ಸುಖಗಳುಂಟೋ ಅಲ್ಲಂಥ ಸುಖಗಳುಂಟು
ದುಃಖ ಮಿಶ್ರವಾದ ಸುಖ ಇಹಲೋಕದಲ್ಲಪ್ಪುದು
ನಾಶವುಂಟು ದಿನಕೊಂದು ಬಗೆ ಬಗೆಯಾದಂಥ ಸುಖವಾಗಿ
ನಾಶವಿಲ್ಲದ ಅಪ್ರಾಕೃತವಾದ ಸುಖವನನುಭವಿಸುತ್ತ ಕ್ರಮದಿ ತಿರುಗುವರು
ಆಂದೋಳಿಕ ಛತ್ರಚಾಮರ ಸದಾ ಪೀತಾಂಬರ ಶಂಖ ಚಕ್ರಂಗಳಿಂದೊಪ್ಪುತ
ಪುರಂದರವಿಠಲನ ಭಜಿಸೆಲೆ ಜೀವ

೧೬೦

ಅಲ್ಲಿ ವನಗಳುಂಟು ಅಪ್ರಾಕೃತವಾದ ಫಲ ಪುಷ್ಪಗಳಿಂದೊಪ್ಪುತ್ತಲಿಹುದು
ಪಕ್ಷಿಜಾತಿಗಳುಂಟು ಅತಿ ವಿಲಕ್ಷಣವಾದ ಕಿಲಕಿಲ ಶಬ್ದವು ರಂಜಿಸುವ ನುಡಿಗಳು
ಮುಕುತರು ಬಂದು ಜಲಕ್ರೀಡೆಗಳ ಮಾಡಿ ಕುಳಿತು ಸುಖಿಪರು
ಇಂಥ ಸುಖ ಬೇಕಾದರೆ ನೀಚವೃತ್ತಿಯ ಬಿಟ್ಟು
ಪರಲೋಕ ಸುಖವೀವ ಪುರಂದರವಿಠಲನ ಭಜಿಸು ಜೀವ

ಫಲಶ್ರುತಿ

೧೬೧

ಬಿಡು ಮನುಜ ಈ ಜಪವು ಸಿದ್ಧಿಗೆ ಬಾರದು
ತೊಡೆ ಕೆಳಗೆ ಕೈಹಿಂದೆ ಮುಂದೆ ಕೈಚಾಚಿ ಬಿಡುತ
ಮಂತ್ರಾರ್ಥ ನೋಡದೆಲೆ
ಅಡಿಗಡಿಗೆ ಮಾಡೆ ದೈತ್ಯರಿಗೆ ಅಹುದಯ್ಯ
ಒಡೆಯ ಪುರಂದರವಿಠಲನನೊಲಿಸಬೇಕಾದರೆ
ಹಿಡಿಯೋ ಈ ಪರಿ ತಿಳಿದ ವಚನ ತತ್ತ್ವಗಳ



ಭಾಗ ೪

ಸಂಕೀರ್ಣ ಪ್ರಕರಣ

ಉದಯರಾಗ
ಗಜೇಂದ್ರಮೋಕ್ಷ
ನೂರೆಂಟು ನಾರಾಯಣ
ಕೇಶವನಾಮ
ಮಂಗಳ

೧

ಧನಾಸರಿ ಝಂಪೆ

ಕಾಗೆ ಕಾ ಎನ್ನಲಿ ಹರಿಯೆ
ಹಕ್ಕಿ ಚಿಲಿಪಿಲಿ ಎನ್ನಲಿ
ಕೋಗಿಲೆ ಸ್ವರಗೆಯ್ಯಲಿ ಕೃಷ್ಣ
ನಾಗಸಂಪಿಗೆ ಅರಳಲಿ ರಾಮ ಪ

ಎದ್ದು ಮುಖ ತೊಳೆ ಏಳು ತಿದ್ದು ಕಸ್ತೂರಿತಿಲಕ
ಮುದ್ದೆಬೆಣ್ಣೆಯ ನಿನಗೆ ನಾ ಕೊಡುವೆ
ಹೊದ್ದಿದ ಕತ್ತಲು ಹರಿದು ಬೆಳಗಾಯಿತೊ
ನಿದ್ದೆ ತಿಳಿದೆದ್ದು ಕೂಡಯ್ಯ ಕೃಷ್ಣ ೧

ಬಿಸಿಯ ದೋಸೆಯ ಹೊಯ್ದು ಮೊಸರಗಡ್ಡೆಯ ತೆಗೆದು
ಹೊಸದಾದ ಹಸುವಿನ ತುಪ್ಪವನ್ನು
ಹಸನಾದ ಕಲಸನ್ನ ಹೆಸರುಬೇಳೆಯ ಹುಗ್ಗಿ
ಹಸುಳೆ ನಿನಗಾರೋಗಣೆಯನು ಮಾಡುವೆ ೨

ಎಂದು ಇಲ್ಲದ ಹಟವ ಇಂದೇಕೆ ಮಾಡುವೆಯೊ
ಕಂದರೊಳಗತಿ ನೀನು ಹರಿಯಾದೆಯಾ
ಇಂದು ನೆರವಿಗೆ ನಿನ್ನ ಎತ್ತಿಕೊಳುವರಿಲ್ಲ
ಕಂದ ಅಳಬೇಡವೋ ಶ್ರೀಪುರಂದರವಿಠಲ ೩

ಹೊದ್ದಿದ—ಹರಡಿಕೊಂಡಿದ್ದ.
ಕಲಸನ್ನ—ಚಿತ್ರಾನ್ನ.

೨

భూపాళి | ಝಂಪೆ

ಭೂಪಾಳಿ   ಝಂಪೆ

ಏಳಯ್ಯ ಬೆಳಗಾಯಿತು ಪ

ಏಳು ನಾರಾಯಣ ಏಳು ಲಕ್ಷ್ಮೀರಮಣ
ಏಳು ಶ್ರೀಗಿರಿವಾಸ ಶ್ರೀ ವೆಂಕಟೇಶ ಅ

ದಾಸರೆಲ್ಲರು ಬಂದು ಧೂಳಿದರ್ಶನಗೊಂಡು
ಲೇಸಾಗಿ ತಾಳದಂಡಿಗೆಯ ಪಿಡಿದು
ಕೇಶವನೆ ನಿಮ್ಮ ಸಿರಿನಾಮವನೆ ಸ್ಮರಿಸುತಲಿ
ವಾಸುದೇವನೆ ಉದಯದಲಿ ಪಾಡುತಿಹರು ೧

ಕಾಸಿದ್ದ ಹಾಲುಗಳ ಕಾವಡಿಯ ತುಂಬಿಟ್ಟು
ಲೇಸಾಗಿ ಕೆನೆಮೊಸರು ಬೆಣ್ಣೆಯನು ಮೆದ್ದು
ಶೇಷಶಯನನೆ ಏಳು ಸಮುದ್ರಮಥನವ ಮಾಡು
ದೇಶ ಕೆಂಪಾಯಿತೇಳಯ್ಯ ಹರಿಯೇ ೨

ಅರಳು ಮಲ್ಲಿಗೆ ಜಾಜಿ ಪರಿಮಳದ ಪುಷ್ಪಗಳ
ಸುರರು ತಂದಿಹರಯ್ಯ ಸುಜನರೊಡೆಯ
ಅರವಿಂದಲೋಚನನೆ ಕೋಳಿ ಕೂಗಿತು ಕೇಳು
ಪುರಂದರವಿಠ್ಠಲನೆ ಬೆಳಗಾಯಿತು ೩

ಧೂಳಿದರ್ಶನ—ದಿನದಲ್ಲಿ ಮೊಟ್ಟಮೊದಲ ದರ್ಶನ; ಕ್ಷೇತ್ರಕ್ಕೆ ಬಂದೊಡನೆ ಪಡೆದು ಕೊಳ್ಳುವುದು.

ದೇಶ ಕೆಂಪಾಯಿತು—ದಿಕ್ಕುಗಳು ಅರುಣೋದಯದಿಂದ ಕೆಂಪಡರಿದುವು.

ಬಿಲಹರಿ ಅಟ್ಟ

ಏಳಯ್ಯ ಶ್ರೀಹರಿ ಬೆಳಗಾಯಿತು ಪ

ಏಳು ದೇವಕಿತನಯ ನಂದನ ಕಂದ
ಏಳು ಗೋವರ್ಧನ ಗೋವಳರಾಯ
ಏಳು ಮಂದರಧರ ಗೋವಿಂದ ಫಣಿಶಾಯಿ
ಏಳಯ್ಯ ನಲಿದು ಉಪ್ಪವಡಿಸಯ್ಯ ೧

ಧೀರ ಕ್ಷೀರಸಾಗರವಾಸ ಬೆಳಗಾಯಿತೇಳು
ಮೂರುಲೋಕಗಳ ಒಡೆಯ ಲಕ್ಷ್ಮೀಪತಿಯೆ
ವಾರಿಜನಾಭನೆ ದೇವದೇವೇಶನೇ ನೀನು
ಈರೇಳು ಲೋಕಕಾಧಾರ ಶ್ರೀ ಹರಿಯೆ ೨

ಸಂರರು ಮುನಿಗಳು ಕೂಡಿ ಅವಧಾನವೆನುತಿರಲು
ಸುರವನಿತೆಯರೆಲ್ಲ ನೆರೆದು ಆರತಿಯ ಹಿಡಿದಿರಲು
ಭರದಿ ಊರ್ವಶಿ ರಂಭೆಯರು ನಾಟ್ಯವಾಡುತಿರಲು
ಕರುಣಿಸೋ ಪುರಂದರವಿಠಲ ನೀನೇಳು ೩

ಗೋವಳ—ಗೋಪಾಲ.
ಉಪ್ಪವಡಿಸು—ಮಲಗಿದ್ದವನು ಏಳು.
ಈರೇಳು—ಹದಿನಾಲ್ಕು.
ಅವಧಾನ—ಎಚ್ಚರಿಕೆ ಹೇಳುವುದು.

೪

ಮೋಹನ ಅಟ್ಟ

ರಂಗನಾಯಕ ರಾಜೀವಲೋಚನ
ರಮಣನೆ ಬೆಳಗಾಯಿತೇಳೆನ್ನುತ
ಅಂಗನೆ ಲಕುಮಿ ತಾ ಪತಿಯನೆಬ್ಬಿಸಿದಳು
ಶೃಂಗಾರದ ನಿದ್ರೆ ಸಾಕೆನ್ನುತ ಪ

ಪಕ್ಷಿರಾಜನು ಬಂದು ಬಾಗಿಲೊಳಗೆ ನಿಂದು
ಅಕ್ಷಿ ತೆರೆದು ಬೇಗ ಈಕ್ಷಿಸೆಂದು
ಪಕ್ಷಿಜಾತಿಗಳೆಲ್ಲ ಚಿಲಿಪಿಲಿಗುಟ್ಟುತ್ತ
ಸೂಕ್ಷ್ಮದಲಿ ನಿನ್ನ ಸ್ಮರಿಸುವುವೋ ಕೃಷ್ಣ ೧

ಸನಕ ಸನಂದನ ಸನತ್ಸುಜಾತರು ಬಂದು
ವಿನಯದಿಂ ಕರಮುಗಿದು ಓಲೈಸುವರು
ಘನ ಶುಕ ಶೌನಕ ವ್ಯಾಸ ವಾಲ್ಮೀಕರು
ನೆನೆದು ನೆನೆದು ಕೊಂಡಾಡುವರೊ ಹರಿಯೆ ೨

ಸುರರು ಕಿನ್ನರರು ಕಿಂಪುರುಷರು ಉರಗರು
ಪರಿಪರಿಯಲಿ ನಿನ್ನ ಸ್ಮರಿಸುವರು
ಅರುಣನು ಬಂದುದಯಾಚಲದಲಿ ನಿಂದ
ಕಿರಣದೋರುವನು ಭಾಸ್ಕರನು ಶ್ರೀಹರಿಯೆ ೩

ಪದುಮನಾಭನೆ ನಿನ್ನ ನಾಮಾಮೃತವನ್ನು
ಪದುಮಾಕ್ಷಿಯರು ತಮ್ಮ ಗೃಹದೊಳಗೆ
ಉದಯದೊಳೆದ್ದು ಸವಿದಾಡುತ್ತ ಪಾಡುತ್ತ
ದಧಿಯ ಕಡೆವರೇಳು ಮಧುಸೂದನನೆ ಕೃಷ್ಣ ೪

ಮುರಮಥನನೆ ನಿನ್ನ ಚರಣದ ಸೇವೆಯ
ಕರುಣಿಸಬೇಕೆಂದು ತರುಣಿಯರು
ಪರಿಪರಿಯಿಂದಲೆ ಸ್ಮರಿಸಿ ಹಾರೈಸುವರು
ಪುರಂದರವಿಠಲ ನೀನೇಳೊ ಹರಿಯೆ ೫

ಪಕ್ಷಿರಾಜ—ಗರುಡ.
ಅಕ್ಷಿ—ಕಣ್ಣು.
ಈಕ್ಷಿಸು—ನೋಡು.
ದಧಿಯ —ಮೊಸರನ್ನು.

ಧನಾಸರಿ ಝಂಪೆ

ಕೃಷ್ಣೇತಿ ಮಂಗಳಂ ದಿವ್ಯನಾಮ
ಸೃಷ್ಟಿ ಬಹುಬಂಧನವು ನಷ್ಟವಾಯಿತು ಪೂರ್ಣ
ಕೃಷ್ಣೇತಿ ಮಂಗಳಂ ದಿವ್ಯನಾಮ ಪ

ಅಜಮಿಳನು ಈ ನಾಮ ಅಂತ್ಯಕಾಲದಿ ಸ್ಮರಿಸಿ
ನಿಜಪದವಿಯೈದಿದನು ನಿಮಿಷದಲಿ
ಭುಜಗಭೂಷಣ ಶಿವನು ಶ್ರೀರಾಮನಾಮವನು
ನಿಜವೆಂದು ಕಾಂತೆಗುಪದೇಶವನು ಕೊಟ್ಟ ೧

ನಾರದಮಹಾಮುನಿಯು ನರಕಪಟ್ಟಣಕ್ಹೋಗಿ
ನಾರಾಯಣಾಯೆಂದು ಉಚ್ಚರಿಸಿದಾಗ
ಘೋರ ನರಕವು ಪೂರ್ಣ ಪಾಳಾಗಿ ಹೋಯಿತು
ಸೂರೆಗೊಂಡರು ಪಾಪಜೀವಿಗಳು ಸ್ವರ್ಗವನು ೨

ಹಿರಣ್ಯಕಶಿಪುವು ತನ್ನ ಮಗನ ಬಾಧೆಯುಪಡಿಸಿ
ವರ ಗೃಹಾಂಗಣದೊಳಗೆಳೆದಾಡಲು
ಸಿರಿವರನೆ ರಕ್ಷಿಸೋ ರಕ್ಷಿಸೆಂದಾಕ್ಷಣಕೆ
ನರಸಿಂಹರೂಪದಿಂದವನ ಸಲಹಿದ ನಾಮ ೩

ಧ್ರುವನು ತಂದೆಯ ತೊಡೆಯ ಮೇಲೆ ಕುಳ್ಳಿರಲಾಗಿ
ಅವನ ಮಲತಾಯಿ ವರ್ಜಿಸಿದಳಾಗ
ಭವನವನು ಬಿಟ್ಟಡವಿಯಲಿ ಘೋರ ತಪಗೆಯ್ಯೆ
ಭುವನಸ್ಥಿರಪದವಿಯನು ಕೊಟ್ಟ ಈ ನಾಮ ೪

ಕರಿಯು ನಕ್ರನ ಬಾಧೆಗಳುಕಿ ಶ್ರೀಹರಿಯೆಂದು
ಮೊರೆಯಿಟ್ಟು ನಿನ್ನ ಕರೆದಾಕ್ಷಣದಲಿ
ಸಿರಿಗೆ ಪೇಳದೆ ಬಂದು ಕರಿಯ ಕಾಯ್ದಾ ದೇವ
ಕರಿರಾಜವರದನೆಂದೆನಿಸಿಕೊಂಡಿಹ ನಾಮ ೫

ಪಂಚಪಾಂಡವರನ್ನು ಪರಿಪಾಲಿಸಿದ ನಾಮ
ಪಾಂಚಾಲಿ ಮೊರೆ ಕೇಳಿ ಪೊರೆದ ನಾಮ
ವಂಚನೆಯ ಮಾಡಿ ಕೌರವರನ್ನು ಕೆಡಹಿ ನಿ
ಶ್ಚಿಂತೆಯಲಿ ಭೂಭಾರವಿಳುಹಿದಾ ನಾಮ ೬

ಪರಿಪರಿಯ ಭಕ್ತರನು ಪಾಲಿಸಿದ ಈ ನಾಮ
ಪರಮಪಾವನವು ಮಂಗಳವು ಈ ನಾಮ
ಸಿರಿಯು ಬ್ರಹ್ಮಾದಿಗಳು ಸ್ತೋತ್ರಮಾಡುವ ನಾಮ
ಪುರಂದರವಿಠಲ ಧೊರೆ ನಿಮ್ಮ ನಾಮ ೭

ಕೃಷ್ಣೇತಿ...—ಕೃಷ್ಣ ಎನ್ನುವ ದಿವ್ಯನಾಮವು ಮಂಗಳಪ್ರದವಾದುದು.

ನಿಜಪದವಿ—ಸ್ವರೂಪಜ್ಞಾನ ; ಮುಕ್ತಿ.

ಭುವನಸ್ಥಿರಪದವಿ—ನಕ್ಷತ್ರಲೋಕದಲ್ಲಿ ಸ್ಥಾನ.

ಕರಿಯು...—ಗಜೇಂದ್ರ ಮೋಕ್ಷ.

ಪಾಂಚಾಲಿ—ದ್ರೌಪದಿ.

೬

ದ್ರೌಪದೀ ಮಾನಸಂರಕ್ಷಣ

ಭೂಪಾಳಿ ಝಂಪೆ

ವಾಸುದೇವಾಯ ನಮೋ ವಾಸುಕೀಶಯನಾಯ
ವಾಸವಾದ್ಯಖಿಳಸುರನಮಿತಪಾದಾಂಭೋಜ
ಭೂಸುರಪ್ರಿಯಭಜಕಪೋಷಕನೆ ರಕ್ಷಿಪುದು ಕೇಶವಾನಾಥಬಂಧು ಪ

ಶುಂಡಾಲಪುರದೊಳಗೆ ದುರುಳ ದುರ್ಯೋಧನನು
ಪಾಂಡುನಂದನರೊಡನೆ ಕಪಟ ಜೂಜುಗಳಾಡಿ
ಗಂಡರೈವರ ಮುಂದೆ ದ್ರುಪದಸುತೆಯಳ ಸೆರಗ ಲಂಡ ದುಶ್ಶಾಸನ ಪಿಡಿದು
ಅಂಡಲೆದು ಸೀರೆಯನು ಸೆಳೆಯುತಿರೆ ಸುವ್ರತೆಯು
ಕಂಡು ಮನದಲಿ ಬೆದರಿ ಪರಮಾತ್ಮ ಪರಿಪೂರ್ಣ
ಪುಂಡರೀಕಾಕ್ಷ ರಕ್ಷಿಪುದೆನುತ ಮೊರೆಯಿಟ್ಟಳಂಡಜತುರಂಗಗಾಗ ೧

ಪತಿಗಳೈವರು ಸತ್ಯವ್ರತದಿ ಸುಮ್ಮನೆ ಇಹರು
ಅತಿಕ್ಲೇಶಬಡುತಿಹರು ವಿದುರ ಭೀಷ್ಮಾದಿಗಳು
ಸುತನ ಮೇಲಣ ಮೋಹ ಮಮತೆಯಲಿ ಸುಮ್ಮನಿಹ ಗತಲೋಚನದ ಮಾವನು
ಕೃತಕಕಪಟದಲ್ಲಿಹರು ಶಕುನಿ ಕರ್ಣಾದಿಗಳು
ಹಿತವ ಬಯಸುವರಾರ ಕಾಣೆ ನಾನಿವರೊಳಗೆ
ಗತಿಯಿಲ್ಲದರ್ಗೆ ಸದ್ಗತಿ ನೀನೆಯಾದುದಕೆ ರತಿಪತಿಯ ಪಿತನೆ ಸಲಹೊ ೨

ಪಾವನಕೆ ಉರಿಯೊಳಗೆ ಹೊಕ್ಕು ಹೊರಡಲುಬಹುದು
ಹಾವುಗಳ ಹೆಡೆಪಿಡಿದು ಎಳೆದೆಳೆದು ತರಬಹುದು
ತೀವಿರ್ದ ಮಡು ಧುಮುಕಿ ಏಳಲುಬಹುದು ಗರಳವನು ಕುಡಿದು ಬದುಕಬಹುದು
ಸಾವಿಗಂಜದೆ ಕೊರಳ ಕತ್ತರಿಸಿಕೊಳಬಹುದು
ಜೀವವಿದ್ದಂತೆ ಲಜ್ಜೆಯ ತೊರೆಯಲಾರೆನೈ
ಆವ ಪರಿಯಲಿ ನಿನ್ನ ನಂಬಿದ ಅನಾಥಳನು ದೇವಾಭಿಮಾನವ ಕಾಯೋ ೩

ಅತ್ತೆಯಲ್ಲವೆ ಎನಗೆ ಗಾಂಧಾರಿದೇವಿಯರೆ
ಮೃತ್ಯುವಂತೆಳೆವನಿವನಿಂದ ಬಿಡಿಸಬಾರದೆ ತಾಯೆ
ಉತ್ತಮಳಲಾ ನೀನು ಭಾನುಮತಿ ನೆಗೆಹೆಣ್ಣೆ ಇತ್ತ ದಯಮಾಡೆ ನೋಡೆ
ಸುತ್ತ ನೆರೆದಿದ್ದ ಸಭೆಯ ಪರಿವಾರದವರೆಲ್ಲ
ಪೆತ್ತುದಿಲ್ಲವೆ ಎನ್ನ ಪೋಲ್ವ ಹೆಮ್ಮಕ್ಕಳನು
ಹುತ್ತದೊಳು ಹುದುಗಿರ್ದ ಸರ್ಪ ಸಾಯಲು ಬಹುದೆ ತತ್ವಬಾಹಿರರಾದಿರೇ ೪

ಆರಿಗೊದರಿದರೆನ್ನ ದೂರು ಕೇಳುವರಿಲ್ಲ
ಪಾರುಗಾಣಿಸುವವರ ಕಾಣೆ ನಾನಿದರೊಳಗೆ
ಸಾರಿದರೆ ಪೊರೆವ ಕಂಸಾರಿ ನೀನಲ್ಲದಿನ್ನಾರು ಎನಗಾಪ್ತಬಂಧು
ಮಾರಿದರು ಧರ್ಮದೇವತೆಗೆನ್ನ ವಲ್ಲಭರು
ಭಾರ ನಿನ್ನದು ಎಂದು ನಂಬಿದ ಅನಾಥಳು
ನೀರಿನೊಳಗದ್ದು ಕ್ಷೀರದೊಳದ್ದು ಗತಿ ನೀನೆ ನಾರಾಯಣನೆ ರಕ್ಷಿಸೊ ೫

ಅಸುರ ಬೆನ್ನಟ್ಟಿ ಬರೆ ಪಶುಪತಿಯ ರಕ್ಷಿಸಿದೆ
ಋಷಿಶಾಪವನು ಧರಿಸಿದಂಬರೀಷನ ಕಾಯ್ದೆ
ವಸುಧೆಯೊಳು ಕಲ್ಲಾಗಿ ಬಿದ್ದ ಅಹಲ್ಯೆಯ ಪೊರೆದೆ ಶಿಶು ಪ್ರಹಲ್ಲಾದಗೊಲಿದೆ
ಪಸುಳೆ ಧ್ರುವರಾಯಂಗೆ ಪೆಸರುಳ್ಳ ಪದವಿತ್ತೆ
ದಶಕಂಠದನನುಜಂಗೆ ಸ್ಥಿರಪಟ್ಟವನು ಕೊಟ್ಟೆ
ಹೆಸರುಗೊಂಡರೆ ಮಗನಜಾಮಿಳನ ರಕ್ಷಿಸಿದೆ ವಸುದೇವಸುತನೆ ಸಲಹೊ ೬

ಲಕ್ಷ್ಮೀಮನೋಹರನೆ ಇಕ್ಷುಚಾಪನ ಪಿತನೆ
ಯಕ್ಷಗಂಧರ್ವ ಮುನಿ ಅಮರೇಂದ್ರವಂದಿತನೆ
ಅಕ್ಷಯನೆ ಆಟದೊಳು ಜಗವ ಮೋಹಿಪನೆ ಸ್ಥೂಲಸೂಕ್ಷ್ಮದೊಳು ಪರಿಪೂರ್ಣನೆ
ಕುಕ್ಷಿಯೊಳು ಈರೇಳು ಜಗವ ಪಾಲಿಸುತಿಹನೆ
ಅಕ್ಷಯಸುರಾಂತಕಗೆ ಅಜಪದವನಿತ್ತವನೆ
ದಕ್ಷಸುತೆಪತಿಸಖನೆ ಪಕ್ಷಿವಾಹನ ದೇವ ರಕ್ಷಿಸು ಅನಾಥ ಬಂಧು ೭

ತಂದೆ ತಾಯಿಯು ನೀನೆ ಬಂಧು ಬಳಗವು ನೀನೆ
ಇಂದೆನ್ನ ಕುಲಸ್ವಾಮಿ ಗುರುಪಿತಾಮಹ ನೀನೆ
ಎಂದು ನಂಬಿದೆ ನನ್ನ ಮಾನಾಭಿಮಾನವ ಮುಕುಂದ ನಿನಗೊಪ್ಪಿಸಿದೆನೈ
ಸಂದೇಹವೇಕೆ ಕೊಂದರೆ ಒಳಿತು ಕಾಯ್ದರೆ
ಎಂದು ಕಣ್ಗಳ ಮುಚ್ಚಿ ಕರತಳಂಗಳ ನೆಗಹಿ
ಇಂದು ಪ್ರಾಣವ ಬಿಡುವೆನೆಂದು ನಿಶ್ಚಯಿಸಿ ಗೋವಿಂದ ಎಂದಳು ಮೃಗಾಕ್ಷಿ ೮

ಇಂತೆನುತ ದ್ರೌಪದಿಯು ಮೊರೆಯಿಡುವುದ ಕೇಳಿ
ಅಂತರಾತ್ಮಕ ಕೃಷ್ಣ ದ್ವಾರಕಾಪುರದೊಳಗೆ
ಕಾಂತೆ ರುಕ್ಮಿಣಿ ಸತ್ಯಭಾಮೆಯರೊಡಗೂಡಿ ಏಕಾಂತಭವನದೊಳು ಕುಳಿತು
ಕುಂತಿನಂದನರ ಸತಿಯುಟ್ಟುದಕ್ಷಯವಾಗಿ
ಸಂತೋಷಗೊಳಲೆಂದು ವರವಿತ್ತ ಶ್ರೀಕೃಷ್ಣ
ಎಂತುಂಟೋ ಹರಿಕೃಪೆಯು ಭಕುತರಾ ಮೇಲೆ ಅನಂತ ವಸ್ತ್ರಗಳಾದುವೈ ೯

ಸೆಳೆವುತಿರ್ದನು ಖಳನು ಬೆಳೆಯುತಿರ್ದವು ಸೀರೆ
ಬಿಳಿಯ ಪೊಂಬಟ್ಟೆ ನಾನಾ ವಿಚಿತ್ರದ ಬಣ್ಣ
ಹೊಳಲು ತುಂಬುವ ತೆರದೊಳಿಳೆದೆಳೆದು ಪಾಪಾತ್ಮ ಬಳಲಿ ಇಳೆಯೊಳು ಬಿದ್ದನು
ಕಳೆಯು ಕುಂದಿತು ಮೋರೆ ಶಕುನಿ ದುರ್ಯೋಧನರ
ಬಳಿಯ ನಿಂತಿರ್ದ ಭಟರನು ಕರೆದು ನೇಮಿಸುತ
ತಿಳುಹದೇ ವಸ್ತ್ರಗಳ ಕಳುಹು ಬೊಕ್ಕಸಕೆನಲು ನಳಿನಮುಖಿ ತಿಳಿದಳಲ್ದಳು ೧೦

ಸಿಟ್ಟಿನಲಿ ಸುವ್ರತೆಯು ಕಣ್ದೆರೆದು ನೋಡಿದಳು
ಬೆಟ್ಟದಂತೊಟ್ಟಿರ್ದ ವಸ್ತ್ರರಾಶಿಗಳೆಲ್ಲ
ಸುಟ್ಟಗ್ನಿ ಹೊರಸೂಸೆ ರಾಜಸಭೆ ಮನೆ ಕೆಲವು ಪಟ್ಟಣಾಹುತಿಗೊಂಡವೈ
ಕೊಟ್ಟಳೈ ಶಾಪವನು ಕಮಲಮುಖಿ ಕುರುಪತಿಗೆ
ಕಟ್ಟಾಳು ಭೀಮಸೇನನ ರಣದಿ ಗದೆ ಬಂದು
ಕುಟ್ಟಿ ಬಿಸುಡಲಿ ನಿನ್ನ ತೊಡೆಗಳೆರಡನು ಎಂದು ಇಟ್ಟ ನುಡಿ ತಪ್ಪಲುಂಟೆ ೧೧

ಮೂಡಿದವು ಪ್ರತಿಸೂರ್ಯ ಧೂಮಕೇತುಗಳು ಓ
ಡಾಡಿದವು ಗಗನದೊಳು ಹದ್ದು ಕಾಗೆಗಳು ಕಾ
ದಾಡಿದುವು ಮೃಗಜಾತಿ ಚಲಿಸಿದವು ಶಿಲಾಪ್ರತಿಮೆ ರೂಢಿ ಗಡಗಡ ನಡುಗಿತು
ಮೂಡಿದವು ನಕ್ಷತ್ರರಾಶಿಗಳು ದಿವದಿ ಮಾ
ತಾಡಿದವು ಅಶರೀರವಾಕ್ಯಗಳು ಪುರಜನರು
ಕೇಡು ಕೌರವಗಾಗದಿರದೆಂದು ನಿಶ್ಚಯಿಸಿ ಓಡಿ ಮನೆಗಳ ಹೊಕ್ಕರು ೧೨

ಹರುಷಬಟ್ಟರು ಮನದಿ ವಿದುರಭೀಷ್ಮಾದಿಗಳು
ಸುರರು ನಾರದರ ಕೂಡಿ ನೆರೆದರಭ್ರದ ಮೇಲೆ
ಹರಸಿ ಜಯ ಜಯವೆಂದು ದ್ರೌಪದಿಯ ಸಿರಿಮುಡಿಗೆ ಸುರಿಸಿದರು ಪೂಮಳೆಗಳ
ಹರಿಯ ನಾಮಾವಳಿಯ ಪೊಗಳುತಲೆ ದಿವಿಜೇಂದ್ರ
ತಿರುಗಿ ಪೋದನು ತನ್ನ ಪಟ್ಟಣಕೆ ಧರೆಮೇಲೆ
ಹರಿನಾಮ ನೆನೆವರೇನು ಧನ್ಯರೋ ದ್ರೌಪದಿಯ ಹರಿನಾಮವೆ ಕಾಯಿತು ೧೩

ಆವನಿದನುದಯಕಾಲದಲೆದ್ದು ಭಕುತಿಯಲಿ
ಭಾವಶುದ್ಧಿಯಲಿ ಭಜನೆಯ ಮಾಡುವಂಥವನ
ಸಾವಿರ ಜನ್ಮದಾ ಸಂಚಿತದ ಪಾಪಗಳು ತಾವೆ ಹತವಾಗಲೆಂದು
ಶ್ರೀ ವಾಸುದೇವನಾಜ್ಞಾಪಿಸಿದ ರುಕ್ಮಿಣಿಗೆ
ದೇವಿ ಕೇಳೆಂದ ಭಾಷೆಯ ಮುಂದೆಯರ್ಜುನಗೆ
ನಾವೆ ಸಾರಥಿಯಾಗಿ ಸಲಹುವೆವು ಅವರೆಮ್ಮ ಜೀವ ಪಾಂಡವರೆಂದನು ೧೪

ಮಂಗಳಂ ಝಷ ಕೂರ್ಮ ಘೋಟ ನರಹರಿ ವಟುಗೆ
ಮಂಗಳಂ ಭಾರ್ಗವ ಶ್ರೀರಾಮ ಕೃಷ್ಣ ಬುದ್ಧ
ಮಂಗಳಂ ಕಲ್ಕಿ ಅನಂತ ಅವತಾರನಿಗೆ ಮಂಗಳಂ ಸಿರಿಯರಸಗೆ
ಮಂಗಳಂ ಮುರಹರಗೆ ಮಂಗಳಂ ನಗಧರಗೆ
ಮಂಗಳಂ ದ್ರೌಪದಿಯ ಮಾನವನು ಕಾಯ್ದವಗೆ
ಮಂಗಳಂ ಜಗದೀಶ ಪುರಂದರವಿಠಲಗೆ ಜಯ ಮಂಗಳಂ ನಿತ್ಯ ಶುಭಮಂಗಳಂ ೧೫

ಶುಂಡಾಲಪುರ—ಹಸ್ತಿನಾಪುರ.
ಅಂಡಜತುರಂಗ—ಗರುಡನೇ ವಾಹನವಾಗಿ ಉಳ್ಳವನು.
ಗತಲೋಚನದ ಮಾವ—ಕುರುಡನಾದ ಧೃತರಾಷ್ಟ್ರ.
ಪಾವನಕೆ—ಶುದ್ಧೀಕರಣಕ್ಕಾಗಿ.
ಗರಳ—ವಿಷ.
ತತ್ತ್ವಬಾಹಿರರು—ಧರ್ಮಸೂಕ್ಷ್ಮಕ್ಕೆ ಹೊರಗಾದವರು.
ಅಸುರ ಬೆನ್ನಟ್ಟಿಬರೆ—ಭಸ್ಮಾಸುರನು ಶಿವನನ್ನು ಕಾಡಲು ಬಂದಾಗ.
ಋಷಿಶಾಪವನ್ನು—ದುರ್ವಾಸರ ಶಾಪವನ್ನು.
ವಸುಧೆಯೊಳಗೆ...—ರಾಮಾವತಾರದಲ್ಲಿ.
ದಶಕಂಠನನುಜಂಗೆ—ವಿಭೀಷಣನಿಗೆ.
ಅಕ್ಷಯಸುರಾಂತಕಗೆ—ಲಂಕೆಯಲ್ಲಿ ಅಕ್ಷಯಕುಮಾರನನ್ನು ಸಂಹರಿಸಿದ ಹನುಮಂತನಿಗೆ.
ದಕ್ಷಸುತೆಪತಿ—ದಾಕ್ಷಾಯಣಿ (ಪಾರ್ವತಿ)ಯ ಗಂಡ, ಶಿವ.
ನೆಗಹಿ—ಮೇಲೆತ್ತಿ.
ಮೃಗಾಕ್ಷಿ—ಜಿಂಕೆಯ ಕಣ್ಣುಗಳಂತೆ ಕಣ್ಣುಳ್ಳವಳು.
ಅಂತರಾತ್ಮಕ—ಎಲ್ಲರ ಒಳಗೂ ಅಡಗಿರುವ.
ಕುಂತಿನಂದನರ ಸತಿ—ಪಾಂಡವರ ಹೆಂಡತಿಯಾದ ದ್ರೌಪದಿ.
ಖಳನು—ದುಃಶಾಸನನು.
ರೂಢಿ—ನೆಲವು.
ದಿವಿಜೇಂದ್ರ—ದೇವತೆಗಳ ಒಡೆಯನಾದ ಇಂದ್ರ.
ಅವರೆಮ್ಮ ಜೀವ—'ಮಮ ಪ್ರಾಣಾ ಹಿ ಪಾಂಡವಾಃ' ಎನ್ನುವ ಮಾತಿನ ಛಾಯೆ.
ಝಷ—ಮೀನು.
ಘೋಟ—ವರಾಹ.
ವಟು—ವಾಮನ.

೬

ಗೋಪಿಯರು ಕೃಷ್ಣನ ವಿರಹ ಪ್ರಲಾಪದಿಂದ
ಮಧುರಾಪುರದ ಬಿಲ್ಲ ಹಬ್ಬವ ಜರಿದರು ಪ

ಅಕ್ರೂರನೆಂಬ ಕಲು ಹೃದಯು ಬಂದು ನಮ್ಮನ
ತಿಕ್ರಮಿಸಿ ಕೃಷ್ಣನ ಪುರಕೆ ನಡೆಸಿದ
ವಕ್ರವಾದನು ನಮ್ಮ ಕ್ರೀಡೆಗಳಿಗೆ ಅಕಟ
ಈ ಕ್ರೂರಗಕ್ರೂರ ಪೆಸರೇತಕೆನುತ ೧

ರಥವ ನಿಲ್ಲಿಸದೆ ಮೋಸಹೋದೆವಲ್ಲ ಮನೋ
ರಥ ಸಿದ್ಧಿ ಕೊನೆ ಸಾಗಲಿಲ್ಲ
ರತಿಪತಿಯು ಪಿತನನಗಲಿ ಕೆಟ್ಟೆವಲ್ಲ ಇನ್ನು
ಗತಿ ಯಾರು ನಮ್ಮ ಸಂತೈಪರಾರೆನುತ ೨

ಈ ಪಳ್ಳಿಯೊಳು ನಮಗೆ ಬಂದಂಥ ಪ್ರಳಯದ
ಆಪತ್ತುಗಳನೆಲ್ಲ ಪರಿಹರಿಸುವ
ಗೋಪಾಲನಿಂದ ಬಂದ ಈ ಪ್ರಳಯ
ತಾಪ ಹರಿಸಲಾಪರುಂಟೆ ಪೇಳಿರೆನುತ ೩

ಯುಗವೊಂದು ನಿಮಿಷವಾಗಿದ್ದೆವಲ್ಲ ಅವನ
ನಗೆ ನೋಟ ಕೂಟ ಬೇಟೆಗಳಿಂದ
ಆಗಲಿಪೋದನು ಕೃಷ್ಣ ಇಂದು ನಮಗೆ ನಿಮಿಷ
ಯುಗವಾಗಿ ತೋರಿತಿನ್ನೇನುಪಾಯವೆನುತ ೪

ಯಾಕೆಮ್ಮ ಪುಟ್ಟಿಸಿದೆ ವಿಧಿಯೆ ನಮಗಿನ್ನೇಕೆ
ಶ್ರೀಕೃಷ್ಣನಿಲ್ಲದ ಸಡಗರ ಭ್ರಮರ
ಕೋಕಿಲಾರವದಿ ಕೋಳು ಹೋದೆವಲ್ಲ
ಕಾಕು ಮಾಡಿತು ಕಂದರ್ಪನಸ್ತ್ರವು ಎನುತ ೫

ಕಂಗಳ ಬಿಟ್ಟಗಲಿ ದೂರದಿ ನಮ್ಮ ಮ
ನಂಗಳಲಿ ನೆಲೆಗೊಂಡು ಇರಲೇತಕೆ
ಭಂಗಪಡಿಸುವ ನಾನಾಪರಿಯಲಿ ಗೋವಳ
ಹೆಂಗೊಲೆಗೆಳೆವುದನು ನಾವರಿತುದಿಲ್ಲವೆನುತ ೬

ಕೊಂಬು ಕೊಂಕಳಲಿ ಶಲ್ಯಗೋಳ ಪಿಡಿದು ಹೆಗಲ
ಕಂಬಳಿಯು ಪೂದಳಿರ ಲತೆಯನುಟ್ಟು
ತುಂಬಿಗುರುಳಲಿ ಎಸೆವ ಕೆಂಧೂಳಿ ನೀರ
ಜಾಂಬಕನ ಕಾಣದಿನ್ನೆಂತುಳಿಯುವೆವೆನುತ ೭

ಅವನ ಲಾವಣ್ಯಮೂರುತಿ ನೋಡಿ ಕಂಗಳು
ಅವನ ಜಾಣನುಡಿಗೇಳಿ ಕಿವಿಯು
ಅವನ ಅಧರಾಮೃತವ ಸವಿಸವಿದು ಜಿಹ್ವೆ
ದಿವಸಗಳ ಕಳೆಯಲಿನ್ನೆಂತುಪಾಯವೆನ್ನುತ ೮

ಕೊಳಲ ಧ್ವನಿಯ ಕೇಳಿ ದೂರದಿಂದ ಕೈಯ
ಕೆಲಸಗಳನು ಬಿಟ್ಟು ಬರುವೆವಲ್ಲ
ಕೊಳಲೂದಿ ಸೋಲಿಸುವರಿನ್ನಾರು ಮನದ
ಅಳವರಿತು ನಮ್ಮ ಸಂತೈಪರಾರೆನುತ ೯

ಮೌನಗೌರಿಯ ನೋನೆಯ ಮನೆಯೊಳಗೆ ನಮ್ಮ
ಮಾನಗಳ ಬಯಲು ಮಾಡಿದ ಮೂರ್ತಿಯ
ಧ್ಯಾನಿಸಲು ಕಣ್ಣ ಮುಂದಿದ್ದಂತಿರೆ ನಾವಿ
ನ್ನೇನ ನೆನೆದು ಹಂಬಲಿಸುವೆವೆನುತ ೧೦

ಕಾರ ಮುಗಿಲೊಳು ಹೊಳೆವ ಮಿಂಚಿನಂತೆ ಮಕುಟ
ಹಾರ ಹೀರಾವಳಿಯ ಪದಕವೋ
ವಾರಿಗೆ ಗೋಪಾಲರೊಡನಾಡೊ ನಂದ ಕು
ಮಾರನ ಕಾಣದಿನ್ನೇತುಳಿವೆವೆನುತ ೧೧

ಜ್ಯೋತಿಲ್ಲದಿರುಳಿನ ಗೃಹದಂತಿರೆ ಪರಂ
ಜ್ಯೋತಿಯನಗಲಿದ ಈ ತನುಗಳು
ಯಾತಕ್ಕೆ ಸುಡಲೆನುತ ಕಡುನೊಂದು ಲಕ್ಷ್ಮೀ
ನಾಥ ನಮ್ಮಯ ಮನಕೆ ಗೋಚರಿಸು ಎನುತ ೧೨

ಹಿಮಕರನ ಕಿರಣ ಒಸರುತಿವೆ ಏಕೊ ಅವನ
ಕಮನೀಯ ಪೇರುರವನಾಲಂಗಿಸಿ
ಯಮುನೆ ಮಳಲತಟದಲೊಪ್ಪುವ ಕೃಷ್ಣನ
ರಮಿಸುವಾನಂದ ಸುಖವೆಂತಪ್ಪುದೆನುತ ೧೩

ಮಧುರೆಯಲಿ ಬಿಲ್ಲ ಹಬ್ಬ ಪುಟ್ಟಿಸಿ ಕುಟಿ
ಲದಲಿ ಎಮ್ಮ ಪ್ರಾಣಪತಿಯ ಕರೆಸಿದ
ಸುದತಿಯರ ಮನದಳಲು ತಟ್ಟದಿಹುದೆ ನಮ್ಮ
ಎದೆಗಿಚ್ಚು ಕಂಸನ ತಲೆಗೆ ಮೂಡಲಿ ಎಂದು ೧೪

ಈ ಪರಿ ಹಂಬಲಿಸುವ ನಮ್ಮನತಿ ದ
ಯಾಪರ ಮೂರ್ತಿ ಉದ್ಧವನ ಕಳುಹಿಸಿ
ರೂಪಿಸಿದ ಕುರುಹಿಂದಲೆಮ್ಮ ಪೊರೆವನಕಟ
ಪುರಂದರವಿಠಲನೆಂದಿಗು ಬಿಡೆವೆನುತ ೧೫

ಕಲುಹೃದಯ—ಖಲಹೃದಯ, ಕೆಟ್ಟ ಮನಸ್ಸಿನವರು.
'ಅಕ್ರೂರ'—ಕ್ರೂರನಲ್ಲದವನು ಎಂದು ಹೆಸರಿನ ಅರ್ಥ.
ಕೋಳುಹೋದೆವಲ್ಲ—ನಿಂದೆಗೆ ಗುರಿಯಾದೆವಲ್ಲ.
ಕಾಕುಮಾಡಿತು—ಕೆಡಿಸಿತು.
ಕಂದರ್ಪನಸ್ತ್ರವು—ಕಾಮನ ಬಾಣ; ಸಂಮೋಹ.
ತುಂಬೆಗುರುಳು—ದುಂಬಿಯಂತೆ ಕಪ್ಪಗಿರುವ ಗುಂಗುರುಕೂದಲು.
ನೀರಜಾಂಬಕ—ತಾವರೆಯಂತೆ ಕಣ್ಣುಳ್ಳವ.
ಕಾರಮುಗಿಲೊಳು—ಮೋಡ ಕವಿದು ಕಪ್ಪಾದ ಆಕಾಶದಲ್ಲಿ.
ವಾರಿಗೆ—ಓರಗೆ, ಒಂದೇ ವಯಸ್ಸಿನವರು.

೮

ಗಜೇಂದ್ರಮೋಕ್ಷ

ಭೂಪಾಳಿ ಚಾಪು

ನಾರಾಯಣಾಯ ನಮೋ ನಾಗೇಂದ್ರಶಯನಾಯ
ನಾರದಾದ್ಯಖಿಳ ಮುನಿನಮಿತ ಚರಣಾಂಭೋಜ
ಸಾರಿದರೆ ಪೊರೆವ ಕಂಸಾರಿ ರಕ್ಷಿಪುದಿಂದು ಕಾರುಣ್ಯದಿಂದ ಒಲಿದು ಪ

ಪಾಂಡ್ಯದೇಶದೊಳು ಇಂದ್ರದ್ಯುಮ್ನನೆಂಬ ಭೂ
ಮಂಡಲಾಧಿಪನು ವೈರಾಗ್ಯದಲಿ ಹರಿಪಾದ
ಪುಂಡರೀಕದ ಧ್ಯಾನದಿಂ ಮಹಾತಪದೊಳಿರೆ ಚಂಡತಾಪಸ ಅಗಸ್ತ್ಯ
ಹಿಂಡು ಶಿಷ್ಯರವೆರಸಿ ಬರಲು ಸತ್ಕರಿಸದಿರೆ
ಕಂಡು ಗಜಯೋನಿಯಲಿ ಜನಿಸು ಹೋಗೆನುತ ಉ
ದ್ದಂಡ ಶಾಪವನಿತ್ತು ಮುನಿ ಪೋದನಾಕ್ಷಣದಿ ಶುಂಡಾಲನಾದನರಸ ೧

ಕ್ಷೀರಸಾಗರತಡಿಯ ಐದು ಯೋಜನದ ವಿ
ಸ್ತಾರದಲಿ ವರತ್ರಿಕೂಟಾದ್ರಿ ಶೃಂಗತ್ರಯದ
ರಾರಾಜಿಸುತಲಿಪ್ಪ ರಜತ ತಾಮ್ರಧ್ವಜದ ಮೇರುಸಮ ಗಾಂಭೀರ್ಯದಿ
ಪಾರಿಜಾತಾಂಭೋಜ ತುಳಸಿ ಮಲ್ಲಿಗೆ ಜಾಜಿ
ಸೌರಭದೊಳಶ್ವತ್ಥಪೂಗ ಪುನ್ನಾಗ ಜಂ
ಬೀರಾದಿ ತರುಗುಲ್ಮ ಖಗ ಮೃಗಗಳೆಸೆವಲ್ಲಿ ವಾರಣೇಂದ್ರನು ಮೆರೆದನು ೨

ಆನೆ ಹೆಣ್ಣಾನೆ ಮರಿಯಾನೆಗಳ ಸಹಿತ ಆ
ಕಾನನದಿ ನಲಿಯುತ್ತ ಬೇಸಿಗೆಯ ಬಿಸಿಲಿನಲಿ
ತಾ ನೀರಡಿಸಿ ಬಂದುದೊಂದು ಸರಸಿಗೆ ಸಲಿಲಪಾನಾಭಿಲಾಷೆಯಿಂದ
ನಾನಾ ಪ್ರಕಾರದಲಿ ಜಲಕ್ರೀಡೆಯಾಡುತಿರೆ
ಏನಿದೆತ್ತಣ ರಭಸನೆಂದುಗ್ರಕೋಪದಿಂ
ದಾ ನೆಗಳು ಬಾಯ್ತೆರೆದು ನುಂಗಿಕೊಂಡಂಘ್ರಿಯನು ಏನೆಂಬೆನಾಕ್ಷಣದೊಳು ೩

ಒತ್ತಿ ಹಿಡಿದೆಳೆಯುತಿರೆ ಎತ್ತಣದಿದೇನೆನುತ
ಮತ್ತಗಜರಾಜ ಅವುಡೊತ್ತಿ ಘೀಳಿಡುತಲೆಳ
ದೊತ್ತಿ ತಂದುದು ದಡಕೆ ಮತ್ತೆ ನಡುಮಡುವಿನೊಳಗೆತ್ತೆಳೆದುದಾ ನೆಗಳವು
ಇತ್ತಂಡವಿತ್ತು ಕಾದಿತ್ತು ಸಾವಿರವರುಷ
ವಿಸ್ತರಿಸಿತೇನೆಂಬೆ ಮತ್ತಾ ಗಜೇಂದ್ರಂಗೆ
ಸತ್ವ ತಗ್ಗಿತು ತನ್ನ ಚಿತ್ತದೊಳು ಧ್ಯಾನಿಸುತ ಮತ್ತಾರು ಗತಿಯೆನುತಲಿ ೪

ಬಂದುದಾ ಸಮಯದಲಿ ಹಿಂದೆ ಮಾಡಿದ ಸುಕೃತ
ದಿಂದ ದಿವ್ಯಜ್ಞಾನ ಕಣ್ದೆರದು ಕೈ ಮುಗಿದು
ವಂದಿಸಿದ ಮನದೊಳರವಿಂದನಾಭಾಚ್ಯುತ ಮುಕುಂದ ಮುನಿವೃಂದವಂದ್ಯ
ಇಂದಿರಾರಮಣ ಗೋವಿಂದ ಕೇಶವ ಭಕ್ತ
ಬಂಧು ಕರುಣಾಸಿಂಧು ತಂದೆ ನೀ ಸಲಹೆನ್ನ
ಬಂದು ಸಿಲುಕಿದೆನು ಬಲು ದಂದುಗದ ಮಾಯಾಪ್ರಬಂಧದಿಂ ನೆಗಳಿನಿಂದ ೫

ಪರಮಾತ್ಮ ಪರಿಪೂರ್ಣ ಪರಮೇಶ ಪರತತ್ತ್ವ
ಪರತರ ಪರಂಜ್ಯೋತಿ ಪರಮಪಾವನ ಮೂರ್ತಿ
ಉರುತರಾ ಪರಬ್ರಹ್ಮ ಆನಂದ ಪರಮೇಷ್ಠಿ ಪರಾತ್ಪರ ಪರಮಪುರುಷ
ನಿರುಪಮ ನಿಜಾನಂದ ನಿರ್ಭಯ ನಿರಾವರಣ
ನಿರವಧಿಕ ನಿರ್ಗುಣ ನಿರಂಜನ ನಿರಾಧಾರ
ನಿರವೇದ್ಯ ನಿಸ್ಸಂಗ ನಿಶ್ಚಿಂತ್ಯ ನಿತ್ಯನೇ ನೋಯಿಸದೆ ಸಲಹೆನ್ನನು ೬

ಇಂತೆನುತ ಮೂರ್ಛೆಯಲಿ ಗುಪಿತ ಕಂಠಧ್ವನಿಯೊ
ಳಂತರಾತ್ಮಕನ ನೆನೆಯುತ್ತಳುತ್ತಿರಲಿತ್ತ
ನಂತ ಮಹಿಮನು ಕೇಳಿ ಕರುಣದಿಂದಾಕ್ಷಣಾನಂತಶಯನದಲೆದ್ದನು
ಸಂತಪಿಸಿ ಸಿರಿಮುಡಿಯು ಗರುಡವಾಹನನಾಗಿ
ಚಿಂತೆ ಬೇಡೇಳೆನುತ ಅಭಯಹಸ್ತವನಿತ್ತೇ
ಕಾಂತ ಭಕ್ತನ ಬಳಿಗೆ ಬಂದೆರಡು ಕೈಯಿಂದ ದಂತಿವರನನು ನೆಗಹಿದ ೭

ನೆಗಳ ಬಾಯನು ಚಕ್ರದಲಿ ಸೀಳಿ ಕರಿವರನ
ಉಗುವ ಕರುಣದಲಿ ಮೈದಡಹಲ್ಕೆ ಗಜ ಜನ್ಮ
ತೆಗೆದುದಾಕ್ಷಣದಿ ಮಣಿಮಕರಕುಂಡಲದಿಂದ ಮಿಗೆ ಶೋಭಿಸುತಲೆಸೆದನು
ವಿಗಡ ದೇವಲ ಋಷಿಯ ಶಾಪದಲಿ ಬಿದ್ದಿಳೆಗೆ
ಮಿಗೆ ನಕ್ರನಾಗಿ ಹೂಹೂ ಎಂಬ ಗಂಧರ್ವ
ಅಘಹರನ ಕಂಡು ನಿಜಗತಿಗೈದುದಮರರೋಳ್ ಮಿಗೆ
ಮೆರೆದುದೋಲೈಸುತ ೮

ಮಣಿಮಯ ಕಿರೀಟಕುಂಡಲ ಹಾರಕೌಸ್ತುಭದ
ಮಿನುಗುತಿಹ ವೈಜಯಂತಿಯ ಭೂಷಣಾಂಗದ
ಫಣೆಯ ಕಸ್ತೂರಿ ತಿಲಕ ನಾಮದಿಂದೆಸೆವುತಿಹ ವರ ಶಂಖ ಚಕ್ರದಿಂದ
ಝಣಿರ್ಝಣಿತ ನೂಪುರದ ದಂತ ಪಂಕ್ತಿಯ ಕೃಪೇ
ಕ್ಷಣದ ಸಿರಿಮೊಗದ ಪೀತಾಂಬರಾಲಂಕೃತದ
ಮಣಿದಾ ಜಯ ಜಯವೆಂಬ ಸುರಸಿದ್ಧ ಸಾಧ್ಯ ಸಂದಣಿಯೊಳಗೆ ಹರಿ
ಮೆರೆದನು ೯

ಹರಿಸ್ತುತಿಯು ಗೈದಂಘ್ರಿಗೆರಗಲಾ ಭೂಪನಾ
ದರದಿಂದ ಸತ್ಕರಿಸಿ ಶರಧಿ ಶ್ವೇತದ್ವೀಪ
ಗಿರಿಶೃಂಗ ವಾರಾಶಿ ತರುಶೇಷ ವಾಲ್ಮೀಕಿ ಮುನಿ ಧರಣಿ ಧ್ರುವ ಲಕ್ಷ್ಮಿಯು
ಹರ ಗಿರಿಜೆ ವಿಧಿ ವಾಣಿ ನಾರದ ಪ್ರಹಲ್ಲಾದ
ಗರುಡ ಗೋ ವಿಪ್ರ ಋಷಿ ಗಂಗಾರ್ಕ ಚಂದ್ರಾಗ್ನಿ
ಸಿರಿವತ್ಸ ಶಂಖ ಚಕ್ರಾದಿಯವತಾರಗಳ ಸ್ಮರಿಸುವರ ಕಾಯ್ವೆನೆಂದ ೧೦

ಅವನಿದನುದಯಕಾಲದೊಳೆದ್ದು ನಿಜ ಭಕ್ತಿ
ಭಾವ ಶುದ್ಧಗಳಿಂದ ಪೇಳಿ ಕೇಳುವ ಜನರ
ಘಾವಳಿಯ ಪರಿಹರಿಸಿ ಸುಜ್ಞಾನ ಪದವಿತ್ತು ದೇಹಾವಸಾನದೊಳಗೆ
ಶ್ರೀ ವಾಸುದೇವನಾಜ್ಞಾಪಿಸಿ ಗಜೇಂದ್ರ ಸಹಿ
ತಾ ವಿಹಂಗಾಧಿಪನನೇರಿ ವೈಕುಂಠಕ್ಕೆ
ದೇವ ಬಿಜಯಂಗೈದ ಶ್ರೀಹರಿ ಪುರಂದರವಿಠಲನು ೧೧

ಶುಂಡಾಲ—ಆನೆ.

ವಾರಣೇಂದ್ರ—ಗಜರಾಜ.

ನೆಗಳು—ಮೊಸಳೆ.

ಸತ್ವ—ಬಲ.

ದಂದುಗ—ತೊಂದರೆ.

ಮಾಯಾಪ್ರಬಂಧ—ಮಾಯೆಯಿಂದ ಒದಗಿದುದು.

ನಿರುಪಮ—ಎಣೆಯಿಲ್ಲದವನು.

ನಿರಾವರಣ—ಮಾಯದ ಮುಸುಕಿಲ್ಲದವನು.

ನಿರವಧಿಕ—ತನಗಿಂತ ಮಿಗಿಲು ಯಾರೂ ಇಲ್ಲದವನು.

ನಿರ್ಗುಣ—ಪ್ರಾಕೃತ ಗುಣಗಳಾದ ಸತ್ತ್ವ, ರಜಸ್ಸು, ತಮಸ್ಸುಗಳ ಸಂಬಂಧವಿಲ್ಲ ದವನು.

ನಿರವೇದ್ಯ—ಯಾವ ಪ್ರಮಾಣಗಳಿಂದಲೂ ಅರಿವಿಗೆ ಬಾರದವನು.

ನಿಶ್ಚಿಂತ್ಯ—ಆಲೋಚನೆಗೆ ಒಳಗಾಗದವನು.

ಅಂತರಾತ್ಮಕ—ಒಳಗೇ ಅಡಗಿರುವವನು.

ದಂತಿವರ—ಆನೆ.

ಮಿಗೆ—ಹೆಚ್ಚಾಗಿ.

ಅರ್ಕ—ಸೂರ್ಯ.

ಅಘಾವಳಿ—ಪಾಪಗಳ ಸಮೂಹ.

ವಿಹಂಗಾಧಿಪ—ಗರುಡ ; ಪಕ್ಷಿಗಳ ಒಡೆಯ.

[ಅಗಸ್ತ್ಯ ಋಷಿಯ ಶಾಪದಿಂದ ಇಂದ್ರದ್ಯುಮ್ನನೆಂಬ ರಾಜನು ಆನೆಯಾಗಿಯೂ, ದೇವಲ ಋಷಿಯ ಶಾಪದಿಂದ ಹೂಹೂ ಎಂಬ ಗಂಧರ್ವನು ಮೊಸಳೆಯಾಗಿಯೂ ಜನ್ಮವೆತ್ತಿದರೆಂದೂ, ಅವರಿಬ್ಬರಿಗೂ ಏಕಕಾಲದಲ್ಲಿ ಶಾಪವಿಮೋಚನೆಯಾಯಿತೆಂದೂ ಕಥಾಸಂದರ್ಭ.]

೯

ನೂರೆಂಟು ನಾರಾಯಣ

ಹರಿ ಕೃಷ್ಣ ಶರಣು ದೇವರ ದೇವ ಶರಣು ನಾರಾಯಣ
ಮುರವೈರಿ ಶರಣು ಸಾಗರಶಯನನೆ ಶರಣು ನಾರಾಯಣ ೧

ಕರುಣಾಳುಗಳ ಕೃಷ್ಣ ಶರಣೆಂದು ಮೊರೆಹೊಕ್ಕೆ ನಾರಾಯಣ
ಪರಿಹರಿಸು ಎಮ್ಮ ದುಃಖಸಾಗರವನ್ನು ನಾರಾಯಣ ೧

ಅರಿತೆ ನಾನರಿತೆ ಕರುಣಾಳು ನೀನೆಂಬುದನು ನಾರಾಯಣ
ಅರಿತು ಮರೆಹೊಕ್ಕೆ ನಿನ್ನ ಚರಣಕಮಲವನ್ನು ನಾರಾಯಣ ೨

ಶರಧಿಯೊಳಗೆ ಬೀಳೆ ನೆಗಳು ನುಂಗಲಾ ಕಾಲ ನಾರಾಯಣ
ಹರಿ ನೀನೆ ಗತಿಯೆನೆ ಪರಿಹರಿಸಿದೆ ಬಂದು ನಾರಾಯಣ ೩

ಮುನಿಯ ಶಾಪವ ಹೊಂದಿ ಶಿಲೆಯಾಗಿ ಬಿದ್ದಿರಲು ನಾರಾಯಣ
ಅಹಲ್ಯಾ ಶಾಪವಿಮೋಚನೆಯು ಮಾಡಿದೆಯೊ ನಾರಾಯಣ ೪

ದುರುಳ ದುಶ್ಶಾಸನ ಬಂದು ಸೀರೆಯು ಸೆಳೆವುತಿರೆ ನಾರಾಯಣ
ಭರದಿಂದ ಬಂದು ದ್ರೌಪದಿಗಂದಕ್ಷಯವನಿತ್ತೆ ನಾರಾಯಣ ೫

ಒಂಭತ್ತು ಬಾಗಿಲಾ ಗೊಂಬೆ ಶಾರೀರ ನಾರಾಯಣ
ನಂಬಿ ನೀ ಕೆಡಬೇಡ ಅಂಬುಜನಾಭನ ನೆನೆ ಮನವೆ ನಾರಾಯಣ ೬

ಕಾಲು ಕಂಬಗಳು ದೇಹ ಮಂದಿರವಾಗಿ ನಾರಾಯಣ
ಹೂಲಂತ ಮನವೆ ಹೊನ್ನ ಕಲಶವಾಗಿ ನಾರಾಯಣ ೭

ನಾಲಿಗೆ ಗಂಟೆಯಾಗಿ ಕಣ್ಣು ದೀವಿಗೆ ಬೆಳಕಾಗಿ ನಾರಾಯಣ
ನೀಲ ವರ್ಣನ ನಿತ್ಯ ನೆನೆ ಮನವೆ ನಾರಾಯಣ ೮

ಎಲುವಿನಾ ಯಂತ್ರ ಚರ್ಮದಾ ಹೊದಿಕೆ ನಾರಾಯಣ
ಮಲಮೂತ್ರದಾ ದೇಹ ತನುವೆನ್ನದೆಂತೆಂಬೆಯೋ ನಾರಾಯಣ ೯

ಇಂದು ಬಾಳ್ವೆ ನಾಳೆ ಬಾಳ್ವೆ ಎಂದೆನ್ನ ಮನದಿ ನಾರಾಯಣ
ಮುಂದೆ ಮುಂದೇ ಪೂರ್ನೈಸುತ ನಂದನ ಕಂದನ ಮರೆತೆ ನಾರಾಯಣ ೧೦

ಈಗಲೋ ಇನ್ನ್ಯಾವಾಗಲೋ ಎಂದೆನ್ನ ಮನದಿ ನಾರಾಯಣ
ನಾನ್ಯಾರೆಂದರಿಯೆ ನೀನಾರೆಂತೆಂಬೆಯೋ ನಾರಾಯಣ ೧೧

ಮಾನವರ ನಂಬಿ ನೀ ಕೆಡಬೇಡ ಅಂಬುಜನಾಭನ ನೆನೆ ಮನವೆ ನಾರಾಯಣ
ಕಂಟಕಾ ದೂತರೂ ನಂಟರೆಂಟು ಜನರು ನಾರಾಯಣ ೧೨

ಬಂಟ ದುಡಿದರೆ ಎಂಟು ಹಣ ದೊರಕಿತೆಂಬರು ನಾರಾಯಣ
ಕಂಟಕಾರರು ಬಂದು ಕಾಲ್ವಿಡಿದು ಎಳೆವಾಗ ನಾರಾಯಣ ೧೩

ಟೆಂಟೆಣಿಸುತ್ತ ವೈಕುಂಠನ ನೆನೆ ಮನವೆ ನಾರಾಯಣ
ಆದಿಯಲ್ಲಿ ಮುನ್ನೊಬ್ಬ ತಮನೆಂಬ ದೈತ್ಯನು ನಾರಾಯಣ ೧೪

ವೇದವನು ಕದ್ದೊಯ್ಯೆ ಮತ್ಸ್ಯನಾಗಿಯೆ ಬಂದೆ ನಾರಾಯಣ
ತಮನೆಂಬ ದೈತ್ಯನಾ ಸೀಳಿ ವೇದವ ತಂದೆ ನಾರಾಯಣ ೧೫

ಭೂಸುರರಿಗಮೃತವನಿತ್ತೆ ವರಾಹ ನಮೋ ನಮೋ ನಾರಾಯಣ
ಜನಿಸುತ್ತ ಪ್ರಹಲ್ಲಾದ ಹರಿ ಎಂಬ ನಾಮ ನಾರಾಯಣ ೧೬

ಎಲವೊ ನಿನ್ನ ಹರಿ ಎಲ್ಲಿಹ ತೋರು ತೋರೆನಲು ನಾರಾಯಣ
ಅದ ಕೇಳಿ ಪ್ರಹಲ್ಲಾದ ನಿನ್ನಲ್ಲಿ ನನ್ನಲ್ಲಿ ನಾರಾಯಣ ೧೭

ಆದ ಕೇಳಿ ಪ್ರಹಲ್ಲಾದ ನನ್ನಲ್ಲಿ ನಿನ್ನಲ್ಲಿ ನಾರಾಯಣ
ಅಣು ರೇಣು ತೃಣದಲ್ಲಿ ಪರಿಪೂರ್ಣ ಹರಿಯೆಂದು ನಾರಾಯಣ ೧೮

ಕೋಪಸಾ ಕೇಳಿ ರಕ್ಕಸರು ಸುಟ್ಟೊಂದಾಗಿ ನಾರಾಯಣ
ಆ ಪಿತನ ಕೂಡೆ ಹಲವು ಯುದ್ಧವ ಮಾಡುತಿರೆ ನಾರಾಯಣ ೧೯

ಆ ಪಿತನ ತೆಗೆದು ತೊಡೆಯ ಮೇಲೆ ಮಲಗಿಸಿಕೊಂಡೆ ನಾರಾಯಣ
ನಡು ಹೊಸ್ತಿಲಲಿ ಮೂರು ಸಂಜೆ ಹೊತ್ತಲ್ಲಿ ನಾರಾಯಣ ೨೦

ಉದರ ಬಗೆದು ಕರುಳ ವನಮಾಲೆ ಹಾಕಿಕೊಂಡೆ ನಾರಾಯಣ
ಅಸುರನಾ ರಕ್ತವು ಚೆಲ್ಲಿತು ನಾಲ್ಕು ದಿಕ್ಕಿಗೆ ನಾರಾಯಣ ೨೧

ಅಜ ಭವ ಬ್ರಹ್ಮಾಂಡಲೋಕಪಾಲಕರು ನಾರಾಯಣ
ನಿಜ ಪಾಲಕರು ಲಕ್ಷ್ಮಿಚರಣಕೊಯ್ಯಲು ನಾರಾಯಣ ೨೨

ಜಯಜಯ ಆದಿ ಪರವಸ್ತು ಜಯ ನಮೋ ನಮೋ ನಾರಾಯಣ
ಜಯ ಸರ್ವಜೀವರ ಪೊತ್ತ ಆತ್ಮವೆ ನಾರಾಯಣ ೨೩

ನರಸಿಂಹ ರೋಮ ರೋಮದಲಿ ಬ್ರಹ್ಮಾಂಡ ಕೂಪವು ನಾರಾಯಣ
ಹರಿ ನಿಮ್ಮ ಚರಣವನರಸಿ ಕಾಣರು ನಾಲ್ಕು ವೇದದಲಿ ನಾರಾಯಣ ೨೪

ವರಜನಾರ್ದನ ಶ್ರೀನರಸಿಂಹ ನಮೋ ನಮೋ ನಾರಾಯಣ
ಬಲಿ ಮೂರು ಲೋಕವ ಆಕ್ರಮಿಸಿ ಆಳುತಿರೆ ನಾರಾಯಣ ೨೫

ಆದಿತಿ ಚಿಂತಿಸಿ ಹರಿಗೆ ಶರಣೆಂಬ ವ್ರತಗಳು ನಾರಾಯಣ
ಚರಿಸಿದ ವ್ರತಕೆ ಮುರಹರ ಪ್ರೀತನಾಗಿಯೆ ನಾರಾಯಣ ೨೬

ಉದಿಸಿದನಾಗ ಅದಿತಿದೇವಿಗೆ ಸುತನಾಗಿಯೆ ನಾರಾಯಣ
ಉದಯಿಸಲಾಗ ಸುತಗೆ ನಾಮಕರಣವನು ಮಾಡೆ ಕಶ್ಯಪ ನಾರಾಯಣ ೨೭

ಬಿಡು ಸಂಸ್ಕಾರವೆಲ್ಲ ಕಶ್ಯಪ ಮಾಡುತಿರೆ ನಾರಾಯಣ
ಉತ್ತಮ ಲಗ್ನವಿಟ್ಟು ಬೃಹಸ್ಪತಿಯಾಗ ನಾರಾಯಣ ೨೮

ಉಪನಯನವನ್ನೆ ವಾಮನಗೆ ಕಶ್ಯಪ ಮಾಡೆ ನಾರಾಯಣ
ಕೆಲರುಪವೀತ ಕಮಂಡಲು ಕೊಡೆ ದಂಡ ನಾರಾಯಣ ೨೯

ಕೆಲರು ಹಾವುಗೆ ಕುಳ್ಳಿರುವರೆ ಆಸನಂಗಳು ನಾರಾಯಣ
ಯಜ್ಞೋಪವೀತ ಕಮಂಡಲು ಕೊಡೆ ದಂಡ ನಾರಾಯಣ ೩೦

ಕಡು ಮೌಂಜಿ ಕೌಪೀನ ಕೃಷ್ಣಾಜಿನ ನಾರಾಯಣ
ಗೌರಿ ಮೊದಲಾದ ಸರಸ್ವತಿ ಭೂದೇವಿಯರು ನಾರಾಯಣ ೩೧

ಋಷಿಪತ್ನಿಯರು ತಮತಮಗೆ ಭಿಕ್ಷೆಯ ನೀಡೆ ನಾರಾಯಣ
ಹರುಷದಿಂದಲೆ ಧವಳವಾಡಿ ಭಿಕ್ಷೆಯ ನೀಡೆ ನಾರಾಯಣ ೩೨

ಚೆಲುವ ಮೂರುತಿ ವಾಮನ ಬ್ರಹ್ಮಚಾರಿಯು ನಾರಾಯಣ
ಬರುವ ವಾಮನ ತಾನು ಪ್ರಭೆಗೆ ಸೂರ್ಯನಂತೆ ನಾರಾಯಣ ೩೩

ಅಸುರರು ಬೆದರಿ ಯಜ್ಞಶಾಲೆಯಲಿ ಮರೆಗೊಂಡರು ನಾರಾಯಣ
ಬಲಿ ಕಂಡು ಸಂತೋಷದಿ ಎದುರ್ಗೊಂಡು ನಾರಾಯಣ ೩೪

ದಿವ್ಯಾಸನದಲಿ ದೇವರನು ಕುಳ್ಳಿರಿಸಿ ನಾರಾಯಣ
ಋಷಿಪುತ್ರರೇ ನಿಮಗೆ ನಾವೇನ ಮಾಡುವೆವು ನಾರಾಯಣ ೩೫

ಕಡು ಯಾಗಕಾಲದಲಿ ಬಂದಿರಿ ನಾರಾಯಣ
ನೀನು ದಾನವ ಕೊಡು ಯಾಗಕಾಲದಲಿ ಬಂದೆ ನಾರಾಯಣ ೩೬

ಕೊಡು ಎನ್ನ ಹೆಜ್ಜೆಯು ಮೂರಡಿ ಭೂಮಿಯು ನಾರಾಯಣ
ಕೊಟ್ಟೆಯಾದರೆ ಮೂರು ಮೆಟ್ಟಡಿ ಭೂಮಿಯು ನಾರಾಯಣ ೩೭

ಬಿತ್ತಿ ಶ್ರೀ ತುಲಸಿಯಾ ವ್ರತವನು ಆಚರಿಸುವೆ ನಾರಾಯಣ
ಎನುತಲೇ ದ್ವಿಜನೇನ ಬೇಡಿದೆಂದು ನಾರಾಯಣ ೩೮

ಹಸುಕೂಸು ಏನ ಬೇಡೀತು ನಾರಾಯಣ
ಕಿರಿಯ ಹೆಜ್ಜೆಯಲಿ ಮೂರಡಿ ಭೂಮಿಯಾ ಬೇಡೀತು ನಾರಾಯಣ ೩೯

ಬೇಡು ಮೂರು ಲೋಕದ ಒಳಗೊಂದು ಲೋಕವ ನಾರಾಯಣ
ಬೇಡು ಭಂಡಾರ ಗಜ ಕರಿ ತುರಗವ ನಾರಾಯಣ ೪೦

ಬಲಿ ಮೂರುಲೋಕದ ಒಳಗೊಂದು ಲೋಕವು ನಮಗಿತ್ತವನು ನೀನೆ
ನಾರಾಯಣ
ಕಿರಿಯ ಹೆಜ್ಜೆಯಲಿ ಮೂರಡಿ ಇತ್ತರೆ ಸಾಕೆಂದನು ನಾರಾಯಣ ೪೧

ಅಸುರರಾ ಪತಿ ಕೇಳು ಬ್ರಹ್ಮಶಾಸ್ತ್ರದಲಿ ನಾರಾಯಣ
ಅಸುರರಿಗಂತವೈದೆ ತಡೆಯದೆ ಎದ್ದನಾಗಿ ನಾರಾಯಣ ೪೨

ಧಾರೆಯೆರೆದು ಕೊಡುವೆನೆಂದು ಮನದಿ ನಿಶ್ಚಯಿಸಿ ನಾರಾಯಣ
ಗಿಂಡಿಯಲಿ ಉದಕವ ತರಹೇಳೆ ಮಡದಿಯ ನಾರಾಯಣ ೪೩

ಒಂದು ಪಾದವ ತೊಳೆಯಲು ಗಗನಕ್ಕೆ ಮುಟ್ಟಿತು ನಾರಾಯಣ
ಮತ್ತೊಂದು ಪಾದವ ತೊಳೆಯಲು ಗಂಗೆ ಹುಟ್ಟಿದಳು ನಾರಾಯಣ ೪೪

ಗುಪಿತಗಾಮಿನಿ ಪಾವನಾದಳು ಗಂಗೆ ನಾರಾಯಣ
ತ್ರಿವಿಕ್ರಮ ಆಕ್ರಮಿಸಿಯೇ ಮೂರು ಲೋಕವನು ನಾರಾಯಣ ೪೫

ಧಾರೆಯೆರೆದ ಭೂಮಿಯು ತೋರು ತೋರೆಂದು ನಾರಾಯಣ
ಬಲಿಯ ಮೆಟ್ಟಿ ಕೆಡಹಿದೆ ನಾರಾಯಣ ೪೬

ಕೆಡಹಿ ಪಾತಾಳಕ್ಕೆ ಸುತಳ ಲೋಕವನಿತ್ತೆ ನಾರಾಯಣ
ಬಲಿಯ ಬಾಗಿಲನು ಕಾಯ್ದೆ ಕರುಣಾಳು ಕೃಷ್ಣ ನಮೋ ನಾರಾಯಣ ೪೭

ಭಕ್ತವತ್ಸಲನೆಂಬ ಬಿರುದು ಮೆರೆದೆಯೋ ಸ್ವಾಮಿ ನಾರಾಯಣ
ಹುಟ್ಟಿದಾಗಲೆ ಜಮದಗ್ನಿಗೆ ಸುತನಾಗಿಯೆ ನಾರಾಯಣ ೪೮

ಗಂಡುಗೊಡಲಿಯ ಪಿಡಿದು ಕ್ಷತ್ರಿಯರ ಸವರಿದೆ ನಾರಾಯಣ
ಗಂಡುಗಲಿಯಾಗಿ ವೀರ್ಯ ಮೊದಲಾದವರ ಸವರಿದೆ ನಾರಾಯಣ ೪೯

ಗಂಡುಗಲಿಯಾಗಿ ಜಯತು ಪರಶುರಾಮನು ನಾರಾಯಣ
ಸುತರಿಲ್ಲದೆ ಚಿಂತಿಸಲು ದಶರಥನು ನಾರಾಯಣ ೫೦

ಪುತ್ರಕಾಮೇಷ್ಟಿಯನೆ ಮಾಡೆ ವಶಿಷ್ಠರು ನಾರಾಯಣ
ತುಪ್ಪದಾ ಪಿಂಡ ಪಾಯಸ ಕೊಡಲು ನಾರಾಯಣ ೫೧

ನಾರಿ ಕೌಸಲ್ಯೆ ಕೈಕೆ ಋಷಿಗಳಿಗೆರಗಿ ನಾರಾಯಣ
ಪಾಯಸ ತುಪ್ಪದಿಂದ ಕೊಡಲು ನಾರಾಯಣ ೫೨

ಮಿತ್ರೆ ಕೌಸಲ್ಯೆ ಕೈಕೆ ಋಷಿಗಳಿಗೆರಗಿ ನಾರಾಯಣ
ಬಾರೆನ್ನುತ ಬಳುಕುತ್ತ ಸತಿಯರು ಕೈಗೊಳ್ಳೆ ನಾರಾಯಣ ೫೩

ರಾಣಿವಾಸಿಯರು ಮಂಚದ ಮೇಲೆ ಕುಳ್ಳಿರಲು ನಾರಾಯಣ
ನವಮಿ ಎಂಬ ದಿವಸದಲಿ ರಾಮನು ಹುಟ್ಟೆ ನಾರಾಯಣ ೫೪

ದಶಮಿ ಎಂಬ ದಿವಸದಲಿ ಭರತ ಹುಟ್ಟೆ ನಾರಾಯಣ
ಏಕಾದಶಿಯಲಿ ಲಕ್ಷ್ಮಣ ಶತ್ರುಘ್ನರು ಹುಟ್ಟೆ ನಾರಾಯಣ ೫೫

ಭೂಮಿಯ ಮೇಲೆ ಅವತಾರಗೊಂಡರು ನಾರಾಯಣ
ನೆರೆದೊಸಿಷ್ಠರು ಪುಷ್ಪವೃಷ್ಟಿಯನೆ ಕರೆದರು ನಾರಾಯಣ ೫೬

ಹೆತ್ತ ಮೋಹಕ್ಕೆ ವಸುದೇವರು ನಡೆತರಲು ನಾರಾಯಣ
ಶಿಶುವಿಗೆ ಹಾಸು ಸತ್ತಿಗೆಯಾದ ಶೇಷನು ನಾರಾಯಣ ೫೭

ಎತ್ತಿ ಬರಲು ವಸುದೇವರು ದಾರಿ ಬಿಟ್ಟಳೆಮುನೆ ನಾರಾಯಣ
ಶಿಶುವನೆ ಇಟ್ಟು ದುರ್ಗೆಯ ಕೊಂಡುಕೊಡಲು ನಾರಾಯಣ ೫೮

ಬೆದರಿ ಎಚ್ಚೆತ್ತರಸುರರೆಲ್ಲ ನಾರಾಯಣ
ದುರ್ಗೆಯು ಕಂಡು ಕೊಲ್ಲುವೆನೆಂದು ನಾರಾಯಣ ೫೯

ಸಂಶಯು ಬೇಡವೆಂದಳೆ ಅಂಬರದಲಿ ನಾರಾಯಣ
ಬೆಳೆಯುತ್ತಾನೆ ಹಗೆ ನಿನ್ನ ಧರೆಯು ಮೇಲೆ ನಾರಾಯಣ ೬೦

ದುರ್ಗೆಯಾಡಿದ ಮಾತಿಗೆ ಕಂಸ ಕಳುಹಿದನೆ ಅಸುರರನು ನಾರಾಯಣ
ಬಂದು ಮೊಲೆಯನುಂಡು ಕೊಂದೆ ಪೂತನಿಯ ನಾರಾಯಣ ೬೧

ಅಸುರರ ಕೊಂದಾಪೋಶನೆಯಗೊಂಡೆ ನಾರಾಯಣ
ಶಕಟಾಸುರನ ಕೊಂದು ತೃಣಾವರ್ತನ ಗೆಲಿದೆ ನಾರಾಯಣ ೬೨

ಅಕಟದಾ ಶ್ರೀ ಪೌಂಡ್ರಕನಾಗಿಯೆ ನಾರಾಯಣ
ಅಕಟಾಕ್ಷನ ಗೆಲಿದು ಪಾಂಡವರಿಗೆ ವರವಿತ್ತೆ ನಾರಾಯಣ ೬೩

ಸಹದೇವಗೆ ಸಹಾಯವಾಗಿ ಶಲ್ಯನ್ನ ಗೆಲಿದೆ ನಾರಾಯಣ
ಕಾಡಕಿಚ್ಚನೆ ನುಂಗಿ ಕಾಳಿಂಗನಾ ಹಿಮ್ಮೆಟ್ಟಿಸಿದೆ ನಾರಾಯಣ ೬೪

ಒಂದು ದಿನ ನಂದಗೋಪನ ಮನೆಯಲ್ಲಿ ನಾರಾಯಣ
ಗೋವಿಂದಸಾಲಿಗ್ರಾಮ ಕೊಂಡಾಡುತಿರೆ ನಾರಾಯಣ ೬೫

ಆ ಸಾಲಿಗ್ರಾಮ ಬೀದಿಯೊಳಿಟ್ಟು ನಾರಾಯಣ
ಪೂಜೆಯ ಮಾಡುತ್ತ ನಲಿದಾಡುತ್ತ ಕೃಷ್ಣ ನಾರಾಯಣ ೬೬

ಗಂಡರುಳ್ಳಾ ಹೆಂಗಸಿಗೆ ಪೆಂಗಳ್ಳನಾದೆ ನಾರಾಯಣ
ಆ ಸಾಲಿಗ್ರಾಮ ಬೀದಿಯೊಳಿಟ್ಟು ಪೂಜೆಯ ಮಾಡುತ್ತಿರೆ ನಾರಾಯಣ ೬೭

ಕೊಡುಯೆಂದು ಕೊಂಡುಕೊಂಡರು ನಾರಾಯಣ
ಇಂದು ನಮ್ಮ ಮನೆಗೆ ಗೋವಿಂದ ಬರುತ್ತಾನೆಂದು ನಾರಾಯಣ ೬೮

ಕಾಳಿ ಕಪಿಲೇ ಕಪಿಲೆ ಅಮೃತಗೆರೆದಾವು ನಾರಾಯಣ
ಈಗ ನಮ್ಮ ಮನೆಗೆ ಗೋವಿಂದ ಬರುತ್ತಾನೆಂದು
ಕಾಳಿಗೆಂದೀಗೆಂದೆ ಅಮೃತಗರೆದಾವು ನಾರಾಯಣ ೬೯

ಹೆರಗೆ ಬಾಣವ ಹೊಡೆದು ಪುರವ ಸಂಹರಿಸಿದೆ ನಾರಾಯಣ
ಬೌದ್ಧ ಕಲ್ಕ್ಯವತಾರ ಮುಕ್ತಿದಾಯಕ ಜಯತು ತ್ರಿವಿಕ್ರಮನೆ ನಾರಾಯಣ ೭೦

ಹಾಲು ಕಂದನಾ ಕೈಯಲಿ ನೀಲದಾ ಕಡಗೋಲು ನಾರಾಯಣ
ನೀಲವರ್ಣದ ಕೃಷ್ಣ ನಲಿದಾಡುತ್ತ ಬಂದಾನೆ ನಾರಾಯಣ ೭೧

ಮೊಸರು ಕಂದನಾ ಕೈಯಲ್ಲಿ ಚಿನ್ನದಾ ಕಡಗೋಲು ನಾರಾಯಣ
ಕುಸುಮನಾಭನು ಕೃಷ್ಣ ನಲಿದಾಡುತ್ತ ಬಂದಾನೆ ನಾರಾಯಣ ೭೨

ಬೆಣ್ಣೆ ಕಂದನಾ ಕೈಯಲ್ಲಿ ಚಿನ್ನದಾ ಕಡಗೋಲು ನಾರಾಯಣ
ಪನ್ನಂಗನಗಧರಾ ಕೃಷ್ಣ ನಲಿದಾಡುತ್ತ ಬಂದಾನೆ ನಾರಾಯಣ ೭೩

ಮುತ್ತು ಕಂದನಾ ಕೈಯಲ್ಲಿ ತುಪ್ಪದಾ ಕಡಗೋಲು ನಾರಾಯಣ
ಭಕ್ತವತ್ಸಲ ಸ್ವಾಮಿ ನಲಿದಾಡುತ್ತ ಬಂದಾನೆ ನಾರಾಯಣ ೭೪

ನಿದ್ರ್ಯಾಗಲು ಹಾಳು ಬಿದ್ದಿರಬೇಡ ನಾಲಿಗೆ ನಾರಾಯಣ
ನೀಲವರ್ಣನ ನಿತ್ಯ ನೆನೆ ಮನವೆ ನಾರಾಯಣ ೭೫

ಬಲ್ಲಿದಾ ಪ್ರಾಣಿಗೆ ಬೆಲ್ಲದ ಅಚ್ಚಿನ ಸರಿಯೆ ನಾರಾಯಣ
ಅರಿಯದಾ ಪ್ರಾಣಿಗೆ ಕಡಲೆ ಕಲ್ಲಿನ ಸರಿಯೆ ನಾರಾಯಣ ೭೬

ವಾರಿಜನಾಭ ಶ್ರೀಪುರಂದರವಿಠ್ಠಲ ನಮೋ ನಾರಾಯಣ ೭೭

ವೀರ್ಯ—ಕಾರ್ತವೀರ್ಯ (ಪರಶುರಾಮಾವತಾರದಲ್ಲಿ).
ಮಿತ್ರೆ—ಸುಮಿತ್ರೆ.
ಪೌಂಡ್ರಕ—ಪೌಂಡ್ರಕವಾಸುದೇವ.
ಪುರವ—ತ್ರಿಪುರಗಳನ್ನು (ಬೌದ್ಧಾವತಾರದಲ್ಲಿ).
ಪನ್ನಂಗನಗಧರ—ಮಂದರೋದ್ಧಾರ.

೧೦

ಮಧ್ಯಮಾವತಿ ಅಟ್ಟ

ಅಚ್ಯುತಾನಂತ ಗೋವಿಂದ ಹರಿ
ಸಚ್ಚಿದಾನಂದ ಸ್ವರೂಪ ಮುಕುಂದ ಪ

ಕೇಶವ ಕೃಷ್ಣ ಮುಕುಂದ ಹರಿ
ವಾಸುದೇವ ಗುರು ಜಗದಾದಿವಂದ್ಯ
ಯಶೋದೆಯ ಸುಕೃತದ ಕಂದ ಸ್ವಾಮಿ
ಶೇಷಶಯನ ಭಕ್ತ ಹೃದಯಾನಂದ ೧

ನಾರಾಯಣ ನಿಮ್ಮ ನಾಮ ಯೆನ್ನ
ನಾಲಿಗೆ ಮೇಲಿರಬೇಕೆಂಬ ನೇಮ
ನಾನು ಬೇಡುವೆ ನಿಮ್ಮ ನಾಮ ಪ್ರಾಣ
ಪಯಣ ಸಮಯಕೊದಗಲಿ ಗುಣಧಾಮ ೨

ಮಾಧವ ಮಂಗಳಗಾತ್ರ ಸ್ವಾಮಿ
ಯಾದವ ಕೈಲಾಸವಾಸನ ಮಿತ್ರ
ಮಹಿಮೆ ಕೇಳಿದರೆ ವಿಚಿತ್ರ ನಿನ್ನ
ಮನಮೆಚ್ಚಲಿ ಸತ್ಯಭಾಮಾಕಳತ್ರ ೩

ಗೋವಿಂದ ಗೋಪಾಲಬಾಲ ಸೋಳ
ಸಾಸಿರ ಗೋಪೇರ ಆನಂದ ಲೀಲ
ನೀಲಮಣಿ ಮುಕ್ತಾ ಮಾಲೆ ನಿಮ್ಮ
ನೇನೆಂದು ಕರೆಯಲಿ ಸುಗ್ರೀವಪಾಲಾ ೪

ವಿಷ್ಣುಚಕ್ರವು ಬಂದು ಸುತ್ತಿ ಮೂರು
ಸೃಷ್ಟಿಯನೆಲ್ಲ ತಿರುಗಿ ಬೆನ್ನಟ್ಟಿ
ಕೃಷ್ಣ ಸಲಹೆಂದು ಮೊರೆಯಿಟ್ಟ ಮುನಿ
ಶ್ರೇಷ್ಠಗಿಷ್ಟರ ಮೇಲೆ ಅಭಯವ ಕೊಟ್ಟೆ ೫

ಮಧುಸೂಧನ ಮಾರಜನಕ ಮದ
ಗಜ ಸೀಳಿ ಮಲ್ಲರ ಗೆಲಿದೆ ತವಕ
ಒದಗಿ ಕಂಸನ ಕೊಂದ ಬಳಿಕ ನೀ
ಮುದುಕಗೆ ಪಟ್ಟವ ಕಟ್ಟಿದೆಯೊ. ಧನಿಕ ೬

ತ್ರಿವಿಕ್ರಮ ತ್ರೈಲೋಕ್ಯನಾಥ ದೇವ
ತ್ರಿಪುರದ ಸತಿಯರ ವ್ರತಕೆ ವಿಘಾತ
ಯದುವಂಶ ಪಾಂಡವ ಪ್ರೀತ ಎನ್ನ
ಹೃದಯದೊಳಡಗಿರೋ ಶ್ರೀ ಜಗನ್ನಾಥ ೭

ವಾಮನ ರೂಪಿಲಿ ಬಂದು ಬಲಿಯ
ದಾನವ ಬೇಡಲು ಉಚಿತವು ಎಂದು
ಧಾರೆಯನೆರೆಯಲು ಅಂದು ಬೆಳೆದು
ಧಾರುಣಿಯೆಲ್ಲವನಳೆದೆಯೊ ನೀನಂದು ೮

ಶ್ರೀಧರ ಶೃಂಗಾರ ಹಾರ ದಿವ್ಯ
ಶ್ರೀವತ್ಸಲಾಂಛನ ಶ್ರೀ ರಘುವೀರ
ವಾರಿಧಿ ಸಮಗಂಭೀರ ಧೀರ
ಕ್ರೂರ ರಕ್ಕಸರನೆಲ್ಲರ ಸಂಹಾರ ೯

ಹೃಷೀಕೇಶ ವೃಂದಾವನದಲಿ ನೀ
ಹರುಷದಿ ಕೊಳಲನೂದುತ ಯಮುನೆಯಲಿ
ಸತಿಯರ ಸಮ್ಮೇಳದಲಿ ನೀ
ಧರಿಸಿದೆಯೊ ಮಂದಾರಮಾಲೆ ಕೊರಳಲ್ಲಿ ೧೦

ಪದ್ಮನಾಭ ಕೇಳೊ ಘನ್ನ ಪಾದ
ಪದ್ಮವ ತೋರಿಸೊ ಬೇಗನೆ ನಿನ್ನ
ಮುದ್ದುಮುಖವ ತೋರಿ ಎನ್ನ ಬೇಗ
ಉದ್ಧಾರ ಮಾಡೆಂದು ಬೇಡುವೆ ನಿನ್ನ ೧೧

ದಾಮೋದರ ಗುಣಧಾಮ ಸ್ವಾಮಿ
ದಾನವಾಂತಕ ಯದುಕುಲ ಸಾರ್ವಭೌಮ
ನೀಲಮೇಘನಿಭಶ್ಯಾಮ ಕೃಷ್ಣ
ನೀಳಾಪತಿಯೆಂಬ ಬಹು ಪುಣ್ಯನಾಮ ೧೨

ಸಂಕರ್ಷಣ ದನುಜಹರಣ ದೇವ
ಪಂಕಜಮುಖಿ ದ್ರೌಪದಿ ಮೇಲೆ ಕರುಣ
ಕಂಕುಮಾಂಕಿತ ರೇಖಾಚರಣ ನಿಜ
ಕಂಕಣ ಕೇಯೂರ ಕೌಸ್ತುಭಾಭರಣ ೧೩

ವಾಸುದೇವ ಕೇಳೊ ನಿನ್ನ ದಿವ್ಯ
ಸಾಸಿರನಾಮವ ನೆನೆವನೆ ಧನ್ಯ
ಬೇಸರದೆ ಸಲಹಬೇಕೆನ್ನ ತುಸ
ಘಾಸಿಯ ಮಾಡದೆ ಕರುಣಾಸಂಪನ್ನ ೧೪

ಪ್ರದ್ಯುಮ್ನನೆಂದು ನಾ ಕರೆದೆ ಎನ್ನ
ಬದ್ಧವಾದ ದುಷ್ಕರ್ಮವ ಕಳೆದೆ
ದುರ್ಬುದ್ಧಿ ದುರ್ವಾಕ್ಯ ಮರೆದೆ ಸಾಧು
ಸಜ್ಜನರ ಸಂಗ ನಿನ್ನಿಂದ ಬೆರೆದೆ ೧೫

ಅನಿರುದ್ಧ ಅನುದಿನದಲ್ಲಿ ನೀ
ವಿನಯದಿಂದಿದ್ದು ಗೋಪಿಯರ ಮನೆಯಲ್ಲಿ
ಸನಕಾದಿವಂದ್ಯ ನಿನ್ನನಗಲಿ ಒಂದು
ಕ್ಷಣ ಬಿಟ್ಟಿರಲಾರೆ ನಿಲ್ಲೊ ಮನದಲ್ಲಿ ೧೬

ಪುರುಷೋತ್ತಮಗಾರು ಸಾಟಿ ಪರ
ಬ್ರಹ್ಮಸ್ವರೂಪನೆ ನಿನಗಾರೊ ಪೋಟಿ
ಮಹಿಮೆ ಕೇಳಿದರೊಂದು ಕೋಟಿ ನಿನ್ನ
ಹೃದಯದಿ ಬ್ರಹ್ಮಾಂಡ ಕಂಡ ಕಿರೀಟಿ ೧೭

ಅಧೋಕ್ಷಜ ಅಸುರ ಸಂಹಾರಿ ಕೃಷ್ಣ
ಅದ್ಭುತರೂಪ ಶಿಶುಪಾಲನ ವೈರಿ
ಭಕ್ತರ ಪಾಲಿಪ ಶೌರಿ ಅಜಾ
ಮಿಳ ನಾರಗನೆನ್ನೆ ಕಾಯ್ದೆ ಮುರಾರಿ ೧೮

ನರಸಿಂಹ ರೂಪವ ತಾಳ್ದೆ ಕಂದ
ಕರೆಯೆ ಕಂಭದಿ ಬಂದು ಕರುಣವಿ ಕಾಯ್ದೆ
ದುರುಳ ಹಿರಣ್ಯಕನ ಶೀಳ್ದೆ ಅವನ
ಕರುಳ ಬಗೆದು ವನಮಾಲೆ ಹಾಕಿದೆ ೧೯

ಅಚ್ಯುತ ನೀನತಿ ಮುದ್ದು ಗೋಪಿ
ಬಚ್ಚಿಟ್ಟ ಹಾಲು ಮೊಸರು ಬೆಣ್ಣೆ ಮೆದ್ದು
ತುಚ್ಛ ಶಕಟನ ಕಾಲಿಲೊದ್ದು ಕಾಡು
ಕಿಚ್ಚು ನುಂಗಿ ಪಾಲಿಸಿದೆಯೊ ಗೆದ್ದು ೨೦

ಜನಾರ್ದನ ರೂಪ ನೀನಾಗಿ ಎನ್ನ
ಮನದ ಕರ್ಮವ ತೊಲಗಿಸೊ ಮುಂದಾಗಿ
ಮುನಿಗಳೆಲ್ಲರು ಒಂದಾಗಿ ಈ
ತನು ನಿನ್ನದೆಂಬರೊ ಕೇಳೊ ನಿಜವಾಗಿ ೨೧

ಉಪೇಂದ್ರ ರೂಪದಿ ಬಂದಿ ಅಪ್ರ
ಮೇಯ ಕಾಳಿಂಗನ ಮಡುವ ಧುಮುಕಿದಿ
ನಾಗನ ಹೆಡೆಗಳ ತುಳಿದಿ ನಾಗ
ಪತ್ನಿಯರು ಬೇಡೆ ಪತಿಯ ಪಾಲಿಸಿದಿ ೨೨

ಹರಿ ಹರಿಯೆಂದರೆ ಪಾಪ ರಾಶಿ
ಹರಿದುಹೋಯಿತು ಎನ್ನ ಮನದ ಸಂತಾಪ
ಸರ್ವರೊಳಗೆ ವಿಶ್ವರೂಪ ನಿನ್ನ
ನೆರೆ ನಂಬಿದವರನ್ನು ಸಲುಹುವ ಭೂಪ ೨೩

ಕೃಷ್ಣ ಕೃಷ್ಣನೆಂಬ ಸೊಲ್ಲ ಕೇಳಿ
ನಷ್ಟವಾಯಿತು ಎನ್ನ ಪಾಪಗಳೆಲ್ಲ
ಮುಟ್ಟಿ ಭಜಿಸಿರೊ ನೀವೆಲ್ಲ ಪುರಂದರ
ವಿಠಲನಲ್ಲದೆ ಮತ್ತೆ ಬೇರಿಲ್ಲ ೨೪

ಕೈಲಾಸವಾಸನ ಮಿತ್ರ—ರುದ್ರನಿಗೆ ಸ್ನೇಹಿತ.

ಸೋಳಸಾಸಿರ—ಹದಿನಾರು ಸಾವಿರ (ಷೋಡಶಸಹಸ್ರ).

ಮುನಿಶ್ರೇಷ್ಠಗೆ—ದೂರ್ವಾಸಮುನಿಗೆ (ಅಂಬರೀಷನ ವ್ರತಭಂಗಕ್ಕೆ ಪ್ರಯತ್ನಮಾಡಿದಾಗ).

ಮದಗಜ—ಕಂಸನು ಕೃಷ್ಣನನ್ನು ಕೊಲ್ಲಲೆಂದು ಕಳುಹಿಸಿದ್ದ ಆನೆ, ಕುವಲಯಾಪೀಡವೆಂಬ ಹೆಸರಿನದು.

ಮಲ್ಲರ—ಕಂಸನೇ ಕಳುಹಿಸಿದ್ದ ಚಾಣೂರ, ಮುಷ್ಟಿಕರೆಂಬ ಜಟ್ಟಿಗಳನ್ನು.

ಮುದುಕಗೆ—ಕಂಸನ ತಂದೆಯಾದ ಉಗ್ರಸೇನನಿಗೆ.

ತ್ರಿಪುರದ ಸತಿಯರ ವ್ರತಕೆ ವಿಘಾತ—ಬೌದ್ಧಾವತಾರದಲ್ಲಿ.

ಶ್ರೀವತ್ಸ—ವಿಷ್ಣುವಿನ ಆಭರಣವಿಶೇಷ.

ನೀಲಮೇಘನಿಭಶ್ಯಾಮ—ಕಾರ್ಮೋಡದಂತೆ ಕಪ್ಪಾಗಿರುವವನು.

ನೀಳಾ—ಕೃಷ್ಣನ ಷಣ್ಮಹಿಷಿಯರಲ್ಲಿ ಒಬ್ಬಳು ; ದಕ್ಷಿಣದೇಶದ ವೈಷ್ಣವ ಸಂಪ್ರದಾಯದಲ್ಲಿ ವಿಷ್ಣುವಿಗೆ ಭೂ, ನೀಳಾ ಎಂಬಿಬ್ಬರು ದೇವಿಯರೆಂಬ ಕಲ್ಪನೆಯಿದೆ. ಗೋದಾದೇವಿಯೆಂಬುವಳು ನೀಳಾದೇವಿಯ ಅವತಾರ.

ತುಸ—ಸ್ವಲ್ಪವೂ.

ನಿನ್ನ ಹೃದಯದಿ ಬ್ರಹ್ಮಾಂಡ ಕಂಡ ಕಿರೀಟಿ—ಅರ್ಜುನನಿಗೆ ಕೃಷ್ಣನು ಯುದ್ಧಭೂಮಿಯಲ್ಲಿ ವಿಶ್ವರೂಪದರ್ಶನ ತೋರಿಸಿದ ಸಂದರ್ಭ.

ಕಾಡುಕಿಚ್ಚು ನುಂಗಿ—ಕೃಷ್ಣನ ಬಾಲಲೀಲೆಗಳಲ್ಲಿ ಒಂದು, ಗೋಕುಲದ ಗೋವಳರು ತಮ್ಮ ಹಸುಕರುಗಳನ್ನು ಮೇಯಿಸುತ್ತ ಈಷಿಕವೆಂಬ ಅಡವಿಗೆ ಹೋಗಲು ಇದ್ದಕ್ಕಿದ್ದಂತೆ ಕಾಡುಕಿಚ್ಚು ಎದ್ದು ಗೋವಳರನ್ನೂ ಹಸುಕರುಗಳನ್ನೂ ತೊಂದರೆಗೊಳಿಸಿದಾಗ, ಕೃಷ್ಣನು ತನ್ನ ಯೋಗಶಕ್ತಿಯಿಂದ ಕಾಡುಕಿಚ್ಚನ್ನು ನುಂಗಿ ಅವರೆಲ್ಲರ ಪ್ರಾಣ ಉಳಿಸಿದನೆಂಬ ಕಥೆ ಭಾಗವತದ ದಶಮಸ್ಕಂಧದಲ್ಲಿದೆ.

[ಈ ಪ್ರಬಂಧಕ್ಕೆ 'ಕೇಶವಾದಿ ಚತುರ್ವಿಂಶತಿ ನಾಮ' ಎಂಬ ಹೆಸರಿದೆ. ಸಂಗ್ರಹವಾಗಿ 'ಕೇಶವನಾಮ' ಎಂದೂ ಕರೆಯುವುದುಂಟು].

೧೧

ಮಂಗಳ

ಸೌರಾಷ್ಟ್ರ ಆದಿ

ಮಂಗಳಂ ಜಯ ಮಂಗಳಂ ಪ

ಶಕುತಿಯಿಂದಲಿ ಶಿಶುಪಾಲಾದಿ ಸಕಲ ರಾಯರ ಸಂಗಡ ಕಾದು
ರುಕುಮನ ಗೆಲಿದು ರೂಢಿಯಿಂದಲಿ ತಂದು ರುಕುಮಿಣಿಯಾಳಿದ
ಶ್ರೀಕೃಷ್ಣಗೆ ೧

ಕಾಳಗದಲಿ ನರಕಾಸುರನ ಸೀಳಿ ಬಿಸಾಡಿ ಕೈಸೆರೆ ಪಿಡಿದು
ಸೋಳ ಸಾಸಿರ ಸುದತಿಯರೆಲ್ಲರನಾಳಿದ ವಸುದೇವಾತ್ಮಜಗೆ ೨

ಸುರರು ಅಸುರರೆಲ್ಲರು ಕ್ಷೀರಶರಧಿಯ ಮಥಿಸಲು ಸಂಭ್ರಮದಿ
ಸಿರಿಯು ಜನಿಸಲು ನಿತ್ಯದಿ ವರಿಸಿದ ವರದ ಪುರಂದರವಿಠಲನಿಗೆ ೩

ಶಕುತಿಯಿಂದಲಿ...—ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಟ್ಟು ಮದುವೆ ಮಾಡಬೇಕೆಂದು ರುಕ್ಮಿಯು ನಿರ್ಧರಿಸಿದ್ದ ಸಂದರ್ಭ.

ನರಕಾಸುರ—ಪ್ರಾಗ್ಜ್ಯೋತಿಷಪುರದ ಅರಸ.

ಸುರರು...—ಅಮೃತಕ್ಕಾಗಿ ಸಮುದ್ರಮಂಥನದ ಸಂದರ್ಭ.



ಸುರುಟಿ ಆದಿ

ಗೋಪ ಗೋಪೀಸುತಗೆ ಗೋವಳರಾಯಗೆ
ಗೋವರ್ಧನೋದ್ಧಾರ ಗೋವಿಂದಗೆ
ಗೋಕುಲದಲಿ ಹುಟ್ಟಿ ಗೋವುಗಳನೆ ಕಾಯ್ದ
ಗೋಪಾಲಕೃಷ್ಣನ ಶ್ರೀಪಾದಕೆ ೧

ಭಕ್ತಜನಪಾಲನಿಗೆ ಭವರೋಗವೈದ್ಯನಿಗೆ
ಅಚ್ಯುತಾನಂತನಿಗೆ ಆದಿಪುರುಷನಿಗೆ
ಅಖಿಳಲೋಕೇಶನಿಗೆ ಅಜನ ಪಡೆದಾತಗೆ
ಕ್ಷೀರಸಾಗರಶಯನ ಲಕ್ಷ್ಮೀಶಗೆ ೨

ಪನ್ನಂಗಶಯನಗೆ ಪಾವನಚರಿತ್ರಗೆ
ಸನ್ನುತಾನಂತ ಸದ್ಗುಣ ರಾಶಿಗೆ
ಎನ್ನೊಡೆಯ ಪುರಂದರವಿಠಲರಾಯಗೆ
ತನ್ನ ನಂಬಿದರ ಸಲಹುವ ದೇವಗೆ ೩

ಗೋವಳ—ಗೋಪಾಲ.

ಅಜನ ಪಡೆದಾತ—ಕಲ್ಪಾದಿಯಲ್ಲಿ ; ಸೂಕ್ಷ್ಮಸೃಷ್ಟಿಯ ಮೊದಲಲ್ಲಿ.

ಪನ್ನಂಗಶಯನ—ಹಾವಿನ ಮೇಲೆ ಪವಡಿಸಿರುವವನು (ಶೇಷಶಾಯಿ).



೧೩

ಸೌರಾಷ್ಟ್ರ ಝಂಪೆ

ಜಯತು ಗೋಕುಲವಾಸ ದೈತ್ಯಪೂತನಿನಾಶ
ಜಯತು ಕ್ಲೇಶವಿನಾಶ ಸರ್ವಲೋಕೇಶ ೧

ಜಯತು ರುಗ್ಮಿಣಿನಾಥ ಅನಾಥರಿಗೆ ನಾಥ
ಜಯತು ಮಥುರಾನಾಥ ಪಾಲಿಸೋ ದಾತ ೨

ಜಯತು ಪಾವನಗಾತ್ರ ಚಾರುತರ ಚಾರಿತ್ರ
ಜಯತು ಜಲಜಾನೇತ್ರ ಮುನಿನುತಿಪಾತ್ರ ೩

ಜಯತು ಸಾವಿರ ನಾಮ ನೀಡೆನಗೆ ಪರಂಧಾಮ
ಜಯತು ಸಾರ್ವಭೌಮ ಭಕ್ತಿಯದು ಪರಮ ೪

ಜಯತು ತುಲಸೀಹಾರ ದಿವ್ಯದೊಂದಾಕಾರ
ಜಯತು ನಿನ್ನ ವಿಚಾರ ಅದು ಬಲು ಅಪಾರ ೫

ಜಯತು ಪಾಂಡವಪಕ್ಷ ತುಂಟ ಯೋಧನ ಶಿಕ್ಷ
ಜಯತು ಲೋಕಾಧ್ಯಕ್ಷ ಧರ್ಮಸಂರಕ್ಷ ೬

ಜಯತು ಶ್ರೀಭೂಲೋಲ ಭಕ್ತಜನಪರಿಪಾಲ
ಜಯತು ಪಾವನಶೀಲ ಸಿರಿ ಪುರಂದರವಿಠಲ ೭

ಪಾವನಗಾತ್ರ—ಅಪ್ರಾಕೃತವಾದ, ದಿವ್ಯದೇಹವುಳ್ಳವನು.

ಚಾರುತರ ಚಾರಿತ್ರ—ಲೋಕೋತ್ತರವಾದ, ಮಂಗಳಮಯವಾದ ಲೀಲೆಗಳುಳ್ಳವನು.

ಮುನಿನುತಿ ಪಾತ್ರ—ಮುನಿಗಳ ಸ್ತುತಿಗೆ ಯೋಗ್ಯನಾದವನು.

ಪರಂಧಾಮ—ಮುಕ್ತಿ.

ತುಂಟಯೋಧನ—ದುರ್ಯೋಧನ.

ಭೈರವಿ ಝಂಪೆ

ಜಯಮಂಗಳಂ ನಿತ್ಯಶುಭ ಮಂಗಳಂ ಪ

ದುರುಳತಮ ವೇದವನು ಕದ್ದು ಪಾತಾಳದಲಿ
ಇರಲವನ ಕೊಂದು ವೇದಾವಳಿಗಳ
ಸರಸಿಜೋದ್ಭವಗಿತ್ತು ಸುರಮುನಿಗಳನೆಲ್ಲ
ಪೊರೆವ ಶ್ರೀಮಚ್ಛಾವತಾರ ಹರಿಗೆ ೧

ಸುರರು ದೈತ್ಯರು ಕೂಡಿ ಸಿಂಧುವನು ಮಥಿಸುತಿರೆ
ಗಿರಿ ಮುಣುಗಿ ಪಾತಾಳಕಿಳಿದು ಪೋಗೆ
ಭರದಿಂದಲಿ ಬಂದು ಗಿರಿಯ ಬೆನ್ನಲಿ ಹೊತ್ತು
ಸುರರ ರಕ್ಷಿಸಿದ ಶ್ರೀ ಕೂರ್ಮ ಹರಿಗೆ

ಭೂಮಿಯನು ಹಿರಣ್ಯಾಕ್ಷನೆಂಬೊ ದೈತ್ಯನು ಸುತ್ತಿ
ಭೀಮ ವಿಕ್ರಮನು ಪಾತಾಳಕೊಯ್ಯೆ
ತಾಮರಸಸಂಭವನು ಬಿನ್ನವಿಸಲವನ ಕೊಂದು
ಭೂಮಿಯನು ತಂದ ಶ್ರೀವರಹ ಹರಿಗೆ ೩

ಪರಮ ಭಾಗವತ ಪ್ರಹ್ಲಾದನ ಹಿರಣ್ಯಕನು
ಪರಿಪರಿಯ ಬಾಧೆಯಿಂದಲಿ ಪೀಡಿಸೆ
ಕರುಣಾಳು ಕೋಪದಲಿ ದೈತ್ಯನುದರವ ಬಗೆದ
ಶರಣ ರಕ್ಷಕನಾದ ನರಸಿಂಹಗೆ ೪

ಬಲಿ ಚಕ್ರವರ್ತಿ ಭೂಮಿಯ ಧಾರೆಯೆರೆಯಲು
ಇಳೆಯನಳೆದವನ ಸುತಳಕಿಳುಹಿದೆ
ಸಿಲುಕಿ ಭಕುತಿಗೆ ಮೆಚ್ಚಿ ಬಾಗಿಲ ಕಾಯಿದೆ
ಬಲವಂತ ವಾಮನಾವತಾರ ಹರಿಗೆ ೫

ಕಾರ್ತವೀರ್ಯಾರ್ಜುನನ ಸಂಹರಿಸಿ ಮುದದಿಂದ
ಕೀರ್ತಿಯನು ಲೋಕದೊಳು ವಿಸ್ತರಿಸಿದೆ
ಪಾರ್ಥಿವಾಂತಕ ಬಾಹುಬಲ ಪರಿಪೂರ್ಣನೆ
ಆರ್ತಬಾಂಧವ ಭಾರ್ಗವ ರಾಮಗೆ ೬

ದಶರಥನ ಮನೆಯಲುದ್ಭವಿಸಿ ರಾವಣಾಸುರನ
ದಶಶಿರವನೀಡಾಡಿ ಅವನನುಜಗೆ
ವಸುಧಾಧಿಪತ್ಯವನು ಲಂಕೆಯೊಳಗವಗಿತ್ತ
ಅಸಮ ವಿಕ್ರಮ ರಾಮಚಂದ್ರ ಹರಿಗೆ ೭

ಯದುಕುಲದಲಿ ಬಂದು ಕೊಂದು ಕಂಸನನಂದು
ಮುದದಿ ಪಾಂಡವರನುದ್ಧರಿಸಿದೆ
ಒದಗಿ ಕೌರವ ಬಲವ ಸಂಹರಿಸಿ ಪದವಿತ್ತು
ಮುದದಿ ಮನ್ನಿಸಿದ ಶ್ರೀಕೃಷ್ಣ ಹರಿಗೆ ೮

ತ್ರಿಪುರದಮರಾರಿಯರ ಸತಿಯರ ಪತಿವ್ರತವ
ನಪಹರಿಸಿ ದಿವ್ಯಮೋಹಕರೂಪದೆ
ತ್ರಿಪುರ ಹರಗಂಬಾಗಿ ಶಿವಗೆ ಕೀರ್ತಿಯನಿತ್ತ
ಅಪರಿಮಿತ ಬುದ್ಧಾವತಾರ ಹರಿಗೆ ೯

ಕಲಿಯುಗದ ಕಡೆಯಲ್ಲಿ ಖಳನೃಪರೆಲ್ಲರನು
ತುಳಿಸಿ ಕುದುರೆಯ ಖುರದ ಪುಟಗಳಿಂದ
ಸುಲಭದಿಂ ನಡೆಸುತ್ತ ಕೃತಯುಗದ ಧರ್ಮವನು
ಬಲಿವಂಥ ಕಲ್ಕ್ಯವತಾರ ಹರಿಗೆ ೧೦

ಮಂಗಳ ಪದಂಗಳನು ಭಕುತಿಯಿಂ ಮೋಹನತ
ರಂಗನೇರೆಲ್ಲ ರಾಗದಿ ಪಾಡಲು
ಮಂಗಳಾತ್ಮಕ ಸಿರಿ ಪುರಂದರವಿಠಲಗೆ
ಅಂಗನೇರೆಲ್ಲ ಆರತಿಯೆತ್ತಿರೇ ಜಯಮಂಗಳಂ ೧೧

ಮಚ್ಛಾವತಾರ—ಮತ್ಸ್ಯಾವತಾರ.

ಗಿರಿ—ಮಂದರಪರ್ವತ.

ತಾಮರಸಸಂಭವ—ಬ್ರಹ್ಮ.

ಅವನನುಜಗೆ—ವಿಭೀಷಣನಿಗೆ.

ಭೈರವಿ ಚಾಪು

ಜಯ ಮಂಗಳಂ ನಿತ್ಯ ಶುಭ ಮಂಗಳಂ ಪ

ಆಲ ನಾರಾಯಣಗೆ ಶ್ರೀ ಲಕ್ಷ್ಮಿಯರಸನಿಗೆ
ಕ್ಷೀರ ಸಾಗರದಲ್ಲಿ ನೆಲಸಿಹನಿಗೆ
ಆಲದೆಲೆಯಲಿ ಮಲಗಿ ಲೋಲನಾಗಿದ್ದಂಥ
ಸಾಕ್ಷಾತು ಪತಿಯು ವೇಂಕಟರಮಣಗೆ ೧

ಗೋಕುಲದಲ್ಲಿ ಹುಟ್ಟಿದವಗೆ ಗೋವುಗಳ ಕಾಯ್ದವಗೆ
ಗೋಪಾಲ ಶ್ರಿಕೃಷ್ಣ ಎನಿಸಿಹಗೆ
ಹದಿನಾಲ್ಕು ಲೋಕ ಬಾಯಲಿ ತೋರಿದಾತಗೆ
ಸಾಕ್ಷಾತು ಪತಿಯು ವೇಂಕಟರಮಣಗೆ ೨

ದಶರಥರಾಮನಿಗೆ ಅಸುರ ಸಂಹಾರಿಗೆ
ಹೆಸರು ಸೀತಾಪತಿ ಎನಿಸಿಹಗೆ
ಕುಶಲದಲಿ ಸೇತುವೆಯನು ಕಟ್ಟಿ ಮೆರೆದಾತನಿಗೆ
ಸಾಕ್ಷಾತು ಪತಿಯು ವೇಂಕಟರಮಣಗೆ ೩

ಶುಕ್ರವಾರದ ಪೂಜೆ ಪುನುಗಾಭಿಷೇಕದಾ
ಸ್ವಾಮಿ ಪುಷ್ಕರಿಣಿಯಲಿ ಸ್ನಾನವನೆ ಮಾಡಿ
ಚಂದದಲಿ ತೀರ್ಥಪ್ರಸಾದ ಕಾಣಿಕೆಯಿತ್ತು
ಸುತ್ತಲು ಗರುಡಕಂಭದ ಜ್ಯೋತಿಯ ೪

ಗುತ್ತಿ ಗೊಂದಿಪುರ ಪುಟ್ಟ ಮಾಲಾದೇಶ
ಇಕ್ಕೇರಿ ಶೃಂಗೇರಿ ಉಭಯಪುರ
ಒಪ್ಪುವ ಚೋಳಮಂಡಲ ಶ್ರೀಮಂಡಲ
ಉಚ್ಛಾಹ ಬಂದ ಶ್ರೀ ವೇಂಕಟರಮಣಗೆ ೫

ವಿಜಯನಗರ ಪಿಲುಪಕ್ಷಿಯಾನೆಗೊಂದಿ
ಹರಿಹರ ಮೈಲಾರ ಉರುಯಾಪುರ
ಗದಗ ಲಕ್ಷ್ಮೀಸರ ಹೊಸಭಾನು ಹೊಸಪೇಟೆ
ಉಡುಗರೆ ಉಂಬ ವೇಂಕಟರಮಣಗೆ ೬

ತೆಲುಂಗ ತಿಗಳ ಮಲೆಯಾಳ ಪಾಂಡವದೇಶ
ಗವುಳಿ ಗಜ್ಜಾಳಿ ಕರ್ಣಾಟದೇಶ
ಉಡುಪಿ ಕೊಲ್ಲೂರ ಕೃಷ್ಣವೇಣಿ ಶ್ರೀರಂಗ
ಮುಡುಪುಗಳು ಬಂದ ವೇಂಕಟರಮಣಗೆ ೭

ತೊಟ್ಟಿಚಕ್ರದ ಕಪಿಲತೀರ್ಥ ಸ್ನಾನವ ಮಾಡಿ
ಪಾಪವಿನಾಶಿನಿಯಲ್ಲಿ ಪಾಪವನೆ ಕಳೆದು
ಕೋಟಿದೇವಿಗೆ ಕೋಟಿಪುಷ್ಪಗಳ ಸಮರ್ಪಿಸಿ
ಸಹಸ್ರ ನೈವೇದ್ಯ ವೇಂಕಟರಮಣಗೆ ೮

ಕೊಟ್ಟರೆ ವರಗಳನು ತಪ್ಪಿಲ್ಲವೆನುತಲಿ
ಬೆಟ್ಟದ ಮೇಲೆ ತಾ ನೆಲಸಿಹಗೆ
ಥಟ್ಟನೆ ತಿರುಪತಿಮೇಲೆ ನೆಲಸಿದ
ಬೆಟ್ಟದ ಒಡೆಯ ಪುರಂದರವಿಠಲಗೆ ೯

ಭೈರವಿ ಚಾಪು

ಜಯ ಮಂಗಳಂ ನಿತ್ಯ ಶುಭ ಮಂಗಳಂ ಪ

ಗುರುಭಕ್ತಿಯೆಂತೆಂಬ ಗಮಕದೋಲೆಯನಿಟ್ಟು
ಹರಿಧ್ಯಾನವೆಂಬ ಆಭರಣವಿಟ್ಟು
ಪರತತ್ವವೆಂತೆಂಬ ಪಾರಿಜಾತವ ಮುಡಿದು
ಪರಮಾತ್ಮ ಹರಿಗೆ ಆರತಿಯೆತ್ತಿರೆ ೧

ಆದಿಮೂರುತಿಯೆಂಬ ಅಚ್ಚ ಅರಿಶಿನ ಬಳಿದು
ವೇದಮುಖನೆಂಬ ಕುಂಕುಮವನಿಟ್ಟು
ಸಾಧುಸಜ್ಜನಸೇವೆಯೆಂಬ ಸಂಪಿಗೆ ಮುಡಿದು
ಮೋದದಿಂ ಲಕ್ಷ್ಮಿಗಾರತಿಯೆತ್ತಿರೆ ೨

ತನುವೆಂಬ ತಟ್ಟೆಯಲಿ ಮನಸೊಡಲನು ಇರಿಸಿ
ಘನ ಶಾಂತಿಯೆಂಬ ಆಜ್ಯವನು ತುಂಬಿ
ಆನಂದವೆಂತೆಂಬ ಬತ್ತಿಯನು ಹಚ್ಚಿಟ್ಟು
ಚಿನುಮಯ ಹರಿಗೆ ಆರತಿಯೆತ್ತಿರೆ ೩

ಕಾಮಾಂಧವಳಿದಂಥ ಕಮಲದ ತಟ್ಟೆಯಲಿ
ನೇಮವೆಂತೆಂಬ ಹರಿದ್ರವನು ಕದಡಿ
ಆ ಮಹಾಸುಜ್ಞಾನವೆಂಬ ಸುಣ್ಣವ ಬೆರೆಸಿ
ಸೋಮಧರವಂದ್ಯಗಾರತಿ ಎತ್ತಿರೆ ೪

ನಾರದವಂದ್ಯಗೆ ನವನೀತಚೋರಗೆ
ನಾರಾಯಣಗೆ ಶ್ರೀ ವರಲಕ್ಷ್ಮಿಗೆ
ಸಾರಿದವರನು ಪೊರೆವ ಪುರಂದರವಿಠ್ಠಲಗೆ
ನೀರಜಮುಖಿಯರಾರತಿ ಎತ್ತಿರೆ ೫

ಪರಿಶಿಷ್ಟ

ಪುರಂದರದಾಸರನಂತರ ಹರಿದಾಸಪರಂಪರೆ

ಪುರಂದರದಾಸರಿಗೆ ನಾಲ್ವರು ಮಕ್ಕಳೆಂದೂ, ಅವರೆಲ್ಲ ಹರಿದಾಸರಾದರೆಂದೂ ಪ್ರತೀತಿಯಿದೆ. ಹಿರಿಯ ಮಗನಾದ ವರದಪ್ಪನು 'ವರದಪುರಂದರ'ನೆಂಬ ಅಂಕಿತದಿಂದ ಇಪ್ಪತ್ತೆರಡು ಪದಗಳನ್ನೂ, ಎರಡನೆಯವನಾದ ಗುರುರಾಯನು 'ಗುರುಪುರಂದರ' ನೆಂಬ ಅಂಕಿತದಿಂದ ಮೂವತ್ತೆರಡು ಪದಗಳು, ಹದಿನೇಳು ಸುಳಾದಿಗಳು, ಹನ್ನೆರಡು ಉಗಾಭೋಗಗಳನ್ನೂ, ಮೂರನೆಯ ಮಗ ಅಪ್ಪಣ್ಣನು 'ಅಭಿನವಪುರಂದರ' ನೆಂಬ ಅಂಕಿತದಿಂದ ಒಂದು ಸುಳಾದಿಯನ್ನೂ, ನಾಲ್ಕನೆಯ ಮಧ್ವಪತಿ ಸ್ವನಾಮಾಂಕಿತ ದಿಂದ ಹತ್ತು ಪದಗಳು ಮತ್ತು ಏಳು ಸುಳಾದಿಗಳನ್ನು ರಚಿಸಿದರೆಂದೂ ಹೇಳುತ್ತಾರೆ. ಪುರಂದರದಾಸರು ಬದುಕಿದ್ದಾಗಲೇ ಮೊದಲ ಮೂರೂ ಮಕ್ಕಳು ತೀರಿಕೊಂಡರಂತೆ. ಮಧ್ವಪತಿಯೊಬ್ಬ ಪುರಂದರದಾಸರು ತೀರಿಕೊಂಡ ಮೇಲೆ ಹತ್ತಾರು ವರ್ಷ ಬದುಕಿದ್ದನಂತೆ. ಪುರಂದರದಾಸರಿಗೆ ಇನ್ನಾವ ಹೆಸರಾಂತ ಶಿಷ್ಯನೂ ಇದ್ದ ಉಲ್ಲೇಖವಿಲ್ಲ.

ಆದರೆ ಸುಮಾರು ನೂರಿಪ್ಪತ್ತು ವರ್ಷಗಳ ನಂತರ ಬಂದ ವಿಜಯದಾಸರು (೧೬೮೭–೧೭೫೫) ಪುರಂದರದಾಸರನ್ನು ತಮ್ಮ ಗುರುಗಳೆಂದು ವ್ಯವಹರಿಸಿ ದಾಸ ಪರಂಪರೆಯನ್ನು ಮುಂದುವರಸಿದರು. ಇವರು ತುಂಗಭದ್ರಾ ನದಿಯ ದಂಡೆಯ ಮೇಲಿರುವ ಚೀಕಲಪರವಿ ಎಂಬ ಹಳ್ಳಿಯಲ್ಲಿ ಹುಟ್ಟಿ, ಲೌಕಿಕಕಾರ್ಯದಲ್ಲಿ ಪ್ರಸಕ್ತರಾಗಿದ್ದಾಗ ಒಮ್ಮೆ ಪುರಂದರದಾಸರು ಅವರ ಸ್ವಪ್ನದಲ್ಲಿ ಕಾಣಿಸಿಕೊಂಡು ಅವ ರಿಗೆ ಹರಿದಾಸದೀಕ್ಷೆ ಕೊಟ್ಟರಂತೆ. ಅವರ ಮುಂಚಿನ ಹೆಸರು ದಾಸಪ್ಪನೆಂದು ; ಅವರ ಅಂಕಿತ 'ವಿಜಯವಿಟ್ಠಲ'. ಅವರು ಚಿಪ್ಪಗಿರಿಯಲ್ಲಿ ತೀರಿಕೊಳ್ಳುವ ಮುನ್ನ ದೇಶದಲ್ಲೆಲ್ಲ ತಮ್ಮ ಪ್ರಭಾವವನ್ನು ಬೀರಿ ೮೮೨ ಪದಗಳನ್ನೂ, ೫೨೫ ಸುಳಾದಿ ಗಳನ್ನೂ ರಚಿಸಿದರು. ಇವುಗಳಲ್ಲಿ ಬಹುಭಾಗ ಪ್ರಕಟವಾಗಿದೆ.

ಇವರಿಗೆ ಹಲವಾರು ಮಂದಿ ಶಿಷ್ಯರು ಇದ್ದರು. ಇವರೆಲ್ಲರ ಆಸಕ್ತಿಯಿಂದಲೇ ಹರಿದಾಸಪರಂಪರೆ ವಿಸ್ತೃತವಾದದ್ದು. ಮೋಹನದಾಸರು, ಗೋಪಾಲದಾಸರು, ಪಂಗನಾಮದ ತಿಮ್ಮಣ್ಣದಾಸರು ಈ ಮೂರು ಮಂದಿ ಪ್ರಸಿದ್ಧ ಹರಿದಾಸರು ಅವರ ಶಿಷ್ಯರೇ. ಗದ್ವಾಲ ಸಂಸ್ಥಾನದ ವ್ಯಾಸತತ್ತ್ವಜ್ಞರು (ಐಜಿ ಸ್ವಾಮಿಗಳು) ಎಂಬ ಸಂನ್ಯಾಸಿಗಳೂ ವಿಜಯದಾಸರಿಂದಲೇ ಅಂಕಿತಪಡೆದು ಹಲವಾರು ಕೃತಿಗಳನ್ನು ರಚಿಸಿ ದ್ದಾರೆ. ಇವರ ಮೇಲೆ ಗೋಪಾಲದಾಸರ ಪ್ರಭಾವ ವಿಶೇಷವಾಗಿದ್ದಿತು. ಇವರು

'ಮಾನಸಸ್ಮೃತಿ'ಯೆಂಬ ಸಂಸ್ಕೃತ ಗ್ರಂಥವೊಂದನ್ನು ರಚಿಸಿ ಹರಿದಾಸಪಂಥದ ಮನೋಭಾವವನ್ನು ಸ್ಪಷ್ಟಪಡಿಸಿದರು. ಇವರ ದೇವರನಾಮಗಳಲ್ಲಿ 'ವಾಸುದೇವ ವಿಠಲ' ಎಂಬ ಅಂಕಿತ ಕಾಣಸಿಗುತ್ತದೆ. ಬೇಲೂರು ವೆಂಕಟದಾಸರು (ವೆಂಕಟೇಶ ವಿಟ್ಠಲ), ಹೊನ್ನಾಳಿ ವೆಂಕಪ್ಪಾಚಾರ್ಯರು (ವೆಂಕಟವಿಟ್ಠಲ), ಆನಂದತೀರ್ಥಪ್ಪ (ಹಯವದನವಿಟ್ಠಲ), ಮಾನಪ್ಪ (ಮುದ್ದುವಿಟ್ಠಲ), ಕೂಡಲಿ (ಕೊಂಡಲಗಿ) ಮಧ್ವಾ ಚಾರ್ಯರು (ಮಧ್ವೇಶವಿಟ್ಠಲ), ಶೇಷಗಿರಿದಾಸರು (ಹಯಗ್ರೀವವಿಟ್ಠಲ) ಇವರು ವಿಜಯದಾಸರಿಂದ ಅಂಕಿತ ಪಡೆದು ಹರಿದಾಸರಾದವರು. ಇವರೆಲ್ಲ ದಾಸಕೂಟವು ಜನಪ್ರಿಯವಾಗಲು ಕಾರಣರಾದರು.

ಮೋಹನದಾಸರು ೧೭೮೦ರ ಸುಮಾರಿಗೆ ತೀರಿಕೊಂಡಂತೆ ಕಾಣುತ್ತದೆ. ಇವರು ಬಳ್ಳಾರಿ ಜಿಲ್ಲೆಯಲ್ಲಿ ಚಿಪ್ಪರಗಿಯೆಂಬ ಹಳ್ಳಿಯವರು ; ಪುರಂದರದಾಸರಂತೆ ಇವರೂ ಮುಂಚೆ ಚಿನಿವಾರರಾಗಿದ್ದರು. ಹರಿದಾಸರಾದ ಮೇಲೆ ನಲವತ್ತು ಪದಗಳನ್ನೂ ಎರಡು ಸುಳಾದಿಗಳನ್ನೂ ರಚಿಸಿದರು. ಇವರ ಮಗ ವೆಂಕಪ್ಪನೆಂಬುವನೂ ಹರಿದಾಸ ನಾಗಿ 'ತಂದೆ ಮೋಹನವಿಟ್ಠಲ' ಎಂಬ ಅಂಕಿತದಿಂದ ಪದಗಳನ್ನು ಬರೆದನು ; ವಿಜಯ ದಾಸರ ಕೃತಿಗಳ ಶುದ್ಧ ಹಸ್ತಪ್ರತಿ ಮಾಡಿಟ್ಟ ಪುಣ್ಯ ಈತನದು. ಈ ಮಗನಲ್ಲದೆ ಮೋಹನದಾಸರಿಗೆ 'ಮಧ್ವವರದವಿಟ್ಠಲ', 'ವಿರಜಿ ಪ್ರಾಣೇಶವಿಟ್ಠಲ', ಎಂಬಿಬ್ಬರು ಪ್ರಮುಖ ಶಿಷ್ಯರಿದ್ದರು. 'ಪ್ರಸನ್ನವೆಂಕಟವಿಟ್ಠಲ'ನೆಂಬ ಅಂಕಿತದಿಂದ ಪದಗಳನ್ನು ಬರೆದ ಚಿಕ್ಕೇನಹಳ್ಳಿ ತಿಮ್ಮಣ್ಣದಾಸರೆಂಬುವರೂ ಇವರ ಶಿಷ್ಯರೇ ಎಂದು ಹೇಳುತ್ತಾರೆ.

ವಿಜಯದಾಸರ ಇನ್ನೊಬ್ಬ ಶಿಷ್ಯರಾದ ಗೋಪಾಲದಾಸರು (೧೭೨೨-೧೭೬೫) ಸುಪ್ರಸಿದ್ಧರು, ಅವರ ಪರಂಪರೆ ಇಂದಿನವರೆಗೂ ಉಳಿದುಬಂದಿದೆ. ರಾಯಚೂರು ಜಿಲ್ಲೆಯ ಮೊಸರುಕಲ್ಲು ಎನ್ನುವ ಹಳ್ಳಿ ಇವರ ಸ್ಥಳ ; ಭಾಗಣ್ಣನೆಂಬುದು ಅವರ ಲೌಕಿಕವಾಗಿದ್ದ ಹೆಸರು. ಉತ್ತರಾದಿಮಠದ ಸತ್ಯಬೋಧತೀರ್ಥರಿಂದ ಸನ್ಮಾನಿತರಾದ ಇವರು ೨೩೩ ಪದಗಳನ್ನೂ ೭೦ ಸುಳಾದಿಗಳನ್ನೂ ರಚಿಸಿದ್ದಾರೆ. ಇವರ ಶಿಷ್ಯಕೋಟಿ ದೊಡ್ಡದಾಗಿದ್ದಿತು. ಸುಪ್ರಸಿದ್ಧರಾದ ಜಗನ್ನಾಥದಾಸರು ಇ ವ ರ ಶಿಷ್ಯರೇ. ಗದ್ವಾಲದ ಸುಬ್ಬಣ್ಣದಾಸರು (ಕೇಶವವಿಟ್ಠಲ), ಸೀನಪ್ಪದಾಸರು (ಗುರುಗೋಪಾಲ ವಿಟ್ಠಲ), ದಾಸಪ್ಪದಾಸರು (ವರದಗೋಪಾಲವಿಟ್ಠಲ) ಇವರೂ ಗೋಪಾಲದಾಸರ ಶಿಷ್ಯರಾಗಿ ತಂತಮ್ಮ ಶಿಷ್ಯಪರಂಪರೆಗಳನ್ನು ಬೆಳೆಸಿದರು.

ಗದ್ವಾಲದ ಸುಬ್ಬಣ್ಣದಾಸರ ಶಿಷ್ಯರಲ್ಲಿ ಸುರಪುರದ ಆನಂದದಾಸರು ೧೮೫೦ರ ಸುಮಾರಿಗಿದ್ದವರು ; 'ಕಮಲೇಶವಿಟ್ಠಲ' ಎಂಬ ಅಂಕಿತದಿಂದ ಹಲವಾರು ಪ್ರೌಢ ಪದಗಳನ್ನು ರಚಿಸಿದ್ದಾರೆ. ಇವರಿಗೆ ಸುರಪುರದ ಭೀಮದಾಸರು (ಶ್ರೀಶಕೇಶವ ವಿಟ್ಠಲ) ಮತ್ತು ಸಂತೇಬೆನ್ನೂರಿನ ರಾಮಾಚಾರ್ಯರು (ಕಮಲಾಪತಿವಿಟ್ಠಲ) ಎಂಬ ಇಬ್ಬರು ಹಿರಿಮೆಯ ಶಿಷ್ಯರಿದ್ದರು. ೧೯೨೦ರ ಸುಮಾರಿಗೆ ಜೀವಿಸಿದ್ದ ರಾಮಾ ಚಾರ್ಯರು ಸಂಸ್ಕೃತ ಕನ್ನಡ ಎರಡರಲ್ಲೂ ಪಂಡಿತರಾಗಿದ್ದು ಹೆಸರಾಂತ ಹರಿದಾಸ

ರಾದರು. ಇವರ ಉತ್ಸಾಹದ ಫಲವಾಗಿ ಶ್ರೀಮಂತ, ಸುಸಂಸ್ಕೃತ ಗೃಹಸ್ಥರನೇಕರು ದಾಸಕೂಟಕ್ಕೆ ಸೇರಿದರು. ಇವರ ಪ್ರಭಾವ ಉಟಕೂರು, ಕೊಲ್ಲಾಪುರ, ಕುಂಭಕೋಣ, ಗರ್ಗೇಶ್ವರಿ. ಜಮಖಂಡಿ, ಹಡಗಲಿ, ಕುಡತಿನಿ ಇಲ್ಲೆಲ್ಲ ಇದ್ದಿತು.

ಸೀನಪ್ಪದಾಸರು ರಾಯಚೂರು ಜಿಲ್ಲೆಯ ಮೊಸರಕಲ್ಲಿನವರು. 'ಗುರುಗೋಪಾಲವಿಟ್ಠಲ' ಎಂಬ ಅಂಕಿತದಲ್ಲಿ ಸುಂದರವಾದ ಕೀರ್ತನೆಗಳನ್ನು ರಚಿಸಿದ್ದಾರೆ ; ಇವುಗಳಲ್ಲಿ ೭೫ ಪದಗಳೂ ಒಂದು ಸುಳಾದಿಯೂ ಕೆಲವು ಉಗಾಭೋಗಗಳೂ ಪ್ರಚುರವಾಗಿವೆ. ಇವರಿಗೆ ನಾಲ್ವರು ಶಿಷ್ಯರಿದ್ದು ಇವರ ಪರಂಪರೆಯನ್ನು ಮುಂದುವರಿಸಿದರು.

ದಾಸಪ್ಪದಾಸರು ಗೋಪಾಲದಾಸರ ತಮ್ಮನೆಂದೇ ಹೇಳುತ್ತಾರೆ. ಅವರು ಅಣ್ಣನಿಂದಲೇ ಅಂಕಿತಪಡೆದು ೧೩೮ ಪದಗಳನ್ನೂ ೩೦ ಸುಳಾದಿಗಳನ್ನೂ ಕೆಲವು ಉಗಾಭೋಗಗಳನ್ನೂ ರಚಿಸಿದರು. ಇವರಿಗೆ ಹತ್ತು ಮಂದಿ ಶಿಷ್ಯರಿದ್ದರಂತೆ. ಇವರಲ್ಲಿ ಹಲವರ ಪರಂಪರೆ ಇಂದಿಗೂ ಇದೆಯೆಂದು ಹೇಳುತ್ತಾರೆ.

ಪಂಗನಾಮದ ತಿಮ್ಮಣ್ಣದಾಸರು ವಿಜಯದಾಸರ ಶಿಷ್ಯರಾಗಿ ಗೋಪಾಲದಾಸರ ಸತೀರ್ಥರಾಗಿದ್ದವರು. ಇವರ ಊರು ಬಳ್ಳಾರಿ ಜಿಲ್ಲೆಯ ಆದವಾನಿ ; ಕಾಲ ೧೭೬೮ ಎನ್ನಬಹುದು. 'ವೇಣುಗೋಪಾಲ' ಎಂಬ ಅಂಕಿತದಿಂದ ಇವರು ೩೭ ಪದಗಳನ್ನೂ ಹನ್ನೆರಡು ಸುಳಾದಿಗಳನ್ನೂ ರಚಿಸಿದ್ದಾರೆ. ಇವರ ಶಿಷ್ಯರಲ್ಲಿ ಬ್ಯಾಗವಟ್ಟಿ ನರಸಿಂಹಾಚಾರ್ಯರು (ನರಸಿಂಹವಿಟ್ಠಲ), ಕಲ್ಲೂರು ಸುಬ್ಬಣ್ಣದಾಸರು (ವ್ಯಾಸವಿಟ್ಠಲ) ಮತ್ತು ಜನಾರ್ದನಾಚಾರ್ಯರು (ಜನಾರ್ದನವಿಟ್ಠಲ) ಇವರು ಪ್ರಸಿದ್ಧರು. ನರಸಿಂಹಾಚಾರ್ಯರು ಜಗನ್ನಾಥದಾಸರ ತಂದೆ, ಅವರ ಸ್ಥಳ ರಾಯಚೂರು ಜಿಲ್ಲೆಯ ಬ್ಯಾಗವಟ್ಟಿ. ಅವರು ೧೭೬೫ರಲ್ಲಿ ಕಾಲವಾದರೆಂದು ತಿಳಿದು ಬರುತ್ತದೆ.

ಕಲ್ಲೂರು ಸುಬ್ಬಣ್ಣದಾಸರ ಪರಂಪರೆ ಬಹುಕಾಲ ಉಳಿಯಿತು. ಕಲ್ಲೂರೆಂಬ ಹಳ್ಳಿ ಹೈದರಾಬಾದು ಸೀಮೆಯಲ್ಲಿದೆ. ೧೭೭೫ರ ಸುಮಾರಿಗಿದ್ದ ಇವರು ಪಂಗನಾಮದ ದಾಸರಿಂದ 'ವ್ಯಾಸವಿಟ್ಠಲ' ಎಂಬ ಅಂಕಿತವನ್ನು ಸ್ವೀಕರಿಸಿ ೨೬ ಪದಗಳನ್ನೂ ನಾಲ್ಕು ಸುಳಾದಿಗಳನ್ನೂ ರಚಿಸಿದ್ದಾರೆ. ಇವರ ಶಿಷ್ಯರಲ್ಲಿ ಕಲ್ಲೂರು ಭುಜಂಗದಾಸರು (ಶ್ರೀನಿವಾಸವಿಟ್ಠಲ) ಮತ್ತು ಕಲ್ಲೂರು ವೈರಾಗ್ಯಶಾಲಿ ತಿಮ್ಮಣ್ಣದಾಸರು (ರಘುಪತಿವಿಠ್ಠಲ) ಇವರಿಬ್ಬರು ಪ್ರಸಿದ್ಧರು. ಭುಜಂಗದಾಸರಿಗೆ ಕಲ್ಲೂರು ಶ್ರೀನಿವಾಸದಾಸ (ತಂದೆ ಶ್ರೀನಿವಾಸವಿಟ್ಠಲ) ಎಂಬ ಶಿಷ್ಯನೂ, ಬೆಂಗಳೂರು ಕೃಷ್ಣದಾಸ (ಗುರು ಶ್ರೀನಿವಾಸವಿಟ್ಠಲ)ನೆಂಬ ಪ್ರಶಿಷ್ಯನೂ ಇದ್ದರು. ವೈರಾಗ್ಯಶಾಲಿ ತಿಮ್ಮಣ್ಣದಾಸರು ವ್ಯಾಸವಿಟ್ಠಲರಿಂದ ಅಂಕಿತ ಪಡೆದು ಮೂರು ಪದಗಳನ್ನೂ ೨೨ ಸುಳಾದಿಗಳನ್ನೂ 'ಅಧ್ಯಾತ್ಮಮಾಲೆ'ಯೆಂಬ ಗ್ರಂಥವನ್ನೂ ರಚಿಸಿದರು.

ಇವರ ಪ್ರಶಿಷ್ಯರಾದ ಹರಪನಹಳ್ಳಿ ಶ್ರೀಪತಿದಾಸರು (ಶ್ರೀಪತಿವಿಟ್ಠಲ) ಖ್ಯಾತಿವೆತ್ತ ಹರಿದಾಸರು. ೧೮೦೨ರ ಸುಮಾರಿಗೆ ಗದ್ವಾಲದ ನಿವಾಸಿಗಳಾಗಿದ್ದ ಇವರು ಕೆಂಭಾವಿ ದಾಸಾಚಾರ್ಯರಿಂದ ದೀಕ್ಷೆ ಪಡೆದು ೩೫ ಪದಗಳನ್ನೂ ಮೂರು ಸುಳಾದಿಗಳನ್ನೂ ಬರೆದರು. ಇವರ ಶಿಷ್ಯ ಹರಪನಹಳ್ಳಿ ವೆಂಕಟದಾಸರು 'ತಂದೆ ಶ್ರೀಪತಿವಿಟ್ಠಲ' ಎಂಬ ಅಂಕಿತದಿಂದ ೨೭ ಪದಗಳನ್ನೂ ಒಂದು ಸುಳಾದಿಯನ್ನೂ ಬರೆದಿದ್ದಾರೆ. ಇವರು ೧೮೩೦ರಲ್ಲಿ ತೀರಿಕೊಂಡರೆಂದು ತಿಳಿದುಬರುತ್ತದೆ. ಇವರ ಶಿಷ್ಯ ದೀಪದ ಅಣ್ಣಯ್ಯಾಚಾರ್ಯರು (ಶ್ರೀನಿಧಿವಿಟ್ಠಲ) ಧಾರವಾಡದವರು ; ಇವರ ಮಗ ದೀಪದ ಗೋವಿಂದಾಚಾರ್ಯರು (೧೮೮೫) ಹರಿದಾಸರಾಗಿ ಹೆಸರು ಹೊತ್ತರು. ಅಣ್ಣಯ್ಯಾಚಾರ್ಯರ ಇನ್ನೊಬ್ಬ ಶಿಷ್ಯ ಸೌದಿ ರಾಮಚಂದ್ರಪ್ಪನಿಗೆ ದೊಡ್ಡಬಳ್ಳಾಪುರದ ರಾಘವೇಂದ್ರದಾಸರು (ಮುದ್ದುಮೋಹನವಿಟ್ಠಲ) ಎಂಬ ಶಿಷ್ಯರಿದ್ದರು. ೧೮೯೮ರಲ್ಲಿ ತೀರಿಕೊಂಡ ಇವರ ವಂಶಸ್ಥರು ಇಂದಿಗೂ ಇದ್ದಾರೆ.

ಗೋಪಾಲದಾಸರ ಶಿಷ್ಯರಾದ ಜಗನ್ನಾಥದಾಸರು ಹರಿದಾಸಪಂಥದಲ್ಲಿ ಹೊಸ ಯುಗವೊಂದರ ಪ್ರವರ್ತಕರೆನ್ನಬಹುದು. ರಾಯಚೂರು ಜಿಲ್ಲೆಯ ಬ್ಯಾಗವಟ್ಟಿ ಇವರ ಊರು. ಇವರ ತಂದೆಯೂ ಗೋಪಾಲದಾಸರ ಸತೀರ್ಥರಾದ ಪಂಗನಾಮದ ದಾಸರಿಂದ ಅಂಕಿತ ಪಡೆದ ಹರಿದಾಸರೇ ಎಂದು ಈಗಾಗಲೇ ತಿಳಿದಿದೆಯಷ್ಟೆ. ಇವರ ಮುಂಚಿನ ಹೆಸರು ಸೀನಪ್ಪನೆಂದೂ ಇವರ ಜನ್ಮ ಸಂವತ್ಸರ ೧೭೨೭ ಎಂದೂ ತಿಳಿದು ಬಂದಿದೆ. ಗುರುಗಳಾದ ಗೋಪಾಲದಾಸರೊಂದಿಗೆ ತಿರುಪತಿಗೆ ಹೋಗಿದ್ದಾಗ ಅಲ್ಲಿ ದಿವ್ಯಾನುಭವವಾಗಿ ಇವರ ಹರಿದಾಸದೀಕ್ಷೆ ಬಲಿಯಿತಂತೆ. ಇವರು ರಚಿಸಿರುವ 'ಹರಿಕಥಾಮೃತಸಾರ'ವೆಂಬ ಮೂವತ್ತೆರಡು ಸಂಧಿಗಳ ಗ್ರಂಥ ದಾಸಸಾಹಿತ್ಯದ ಅಪೂರ್ವರತ್ನವೆಂದರೆ ಉತ್ಪ್ರೇಕ್ಷೆಯಲ್ಲ. ಈ ಗ್ರಂಥಕ್ಕೆ ಕಮಲಾಪತಿದಾಸರು, ಸಂಕರ್ಷಣ ಒಡೆಯರು, ಪದ್ಮನಾಭದಾಸರು ಮುಂತಾದವರು ವ್ಯಾಖ್ಯಾನ ಬರೆದು ಉಪಕಾರಮಾಡಿದ್ದಾರೆ. ಈ ಗ್ರಂಥವಲ್ಲದೆ ಇವರು 'ತತ್ತ್ವಸುವ್ವಾಲಿ' ಯೆಂಬ ಸುದೀರ್ಘವಾದ ಕಾವ್ಯವನ್ನೂ ರಚಿಸಿದ್ದಾರೆ. ಇವರು ರಚಿಸಿದ ೨೨೫ ಪದಗಳೂ, ಮೂರು ಸುಳಾದಿಗಳೂ, ಹಲವಾರು ಉಗಾಭೋಗಗಳೂ ಪ್ರಚುರವಾಗಿವೆ. ಇವರು ರಾಯಚೂರಿನ ಮಾನವಿಯೆಂಬಲ್ಲಿ ೧೮೦೯ರಲ್ಲಿ ತೀರಿಕೊಂಡಂತೆ ತೋರುತ್ತದೆ.

ಇವರ ಶಿಷ್ಯಸಂಪತ್ತು ವಿಪುಲವಾಗಿದ್ದಿತು. ಅವರ ಹತ್ತಾರು ಶಿಷ್ಯರ ಪರಂಪರೆ ಇಂದಿನವರೆಗೂ ಉಳಿದುಬಂದಿದೆ. ಲಿಂಗಸೂಗೂರಿನ ಯೋಗೀಂದ್ರಪ್ಪ (ಪ್ರಾಣೇಶ ವಿಟ್ಠಲ) ಮತ್ತು ಸುರಪುರದ ಪ್ರೇಮದಾಸರು (ಅಭಿನವ ಜನಾರ್ದನವಿಟ್ಠಲ) ಇವರ ಶಿಷ್ಯಪ್ರಶಿಷ್ಯರು ; ಹರಿದಾಸ ಪ್ರಪಂಚದಲ್ಲಿ ಹೆಸರು ಮಾಡಿದ್ದಾರೆ. ಯೋಗೀಂದ್ರಪ್ಪನು ಬಡತನದಲ್ಲಿ ಇದ್ದು ತೊನ್ನುಹಿಡಿದು ಸಂಕಟಪಡುತ್ತಿದ್ದಾಗ ಜಗನ್ನಾಥದಾಸರು ಅವನ ಮೇಲೆ ಕೃಪೆಮಾಡಿ ಅಂಕಿತವಿತ್ತು ಅವನಿಗೆ ಶಾಸ್ತ್ರಾಭ್ಯಾಸದ ವ್ಯವಸ್ಥೆ ಮಾಡಿಸಿದರಂತೆ. ರಾಘವೇಂದ್ರಸ್ವಾಮಿಮಠದ ವರದೇಂದ್ರಸ್ವಾಮಿಗಳು ಲಿಂಗಸೂಗೂರಿಗೆ ಬಂದಾಗ

ಇವರನ್ನು ಅನುಗ್ರಹಿಸಿದರಂತೆ. ಇವರು ಸಂಸ್ಕೃತದಲ್ಲಿ ಹಲವಾರು ಪ್ರೌಢವಾದ ಶಾಸ್ತ್ರಗ್ರಂಥಗಳನ್ನೂ ಕನ್ನಡದಲ್ಲಿ ಹದಿನಾರು ಪದ್ಯಗ್ರಂಥಗಳನ್ನೂ ಬರೆದಿದ್ದಾರೆ; ಇಷ್ಟಲ್ಲದೆ ೨೫೨ ಪದಗಳನ್ನೂ ಮೂರು ಸುಳಾದಿಗಳನ್ನೂ ಎಂಟು ಉಗಾಭೋಗಗಳನ್ನೂ ಬರೆದಿದ್ದಾರೆ. ಇವರು ೧೮೨೨ರಲ್ಲಿ ತೀರಿಕೊಂಡರು. ಇವರ ಮೊಮ್ಮಗ ರಾಮದಾಸರೆಂಬುವರು ತಮ್ಮ ಸೋದರಮಾವನಿಂದ 'ಶ್ರೀಶಪ್ರಾಣೇಶವಿಟ್ಠಲ' ಎಂಬ ಅಂಕಿತಪಡೆದು ೨೪ ಪದಗಳನ್ನು ರಚಿಸಿ ಹಲವಾರು ಶಿಷ್ಯರನ್ನು ಸಂಗ್ರಹಿಸಿ ೧೮೯೦ರಲ್ಲಿ ಸ್ವರ್ಗಸ್ಥರಾದರು. ಇವರ ಪರಂಪರೆ ಇಂದಿನವರೆಗೂ ಬಂದಿದೆ.

ಜಗನ್ನಾಥದಾಸರ ಇನ್ನೊಬ್ಬ ಶಿಷ್ಯರಾಗಿದ್ದ ಪ್ರೇಮದಾಸರು ಬಾಲ್ಯದಿಂದ ಹೆಳವರಾಗಿದ್ದು ರಾಘವೇಂದ್ರಸ್ವಾಮಿಗಳನ್ನು ಮಂತ್ರಾಲಯದಲ್ಲಿ ಸೇವಿಸಿ ಸ್ವಸ್ಥರಾದರಂತೆ. ಇವರು 'ಅಭಿನವ ಜನಾರ್ದನವಿಟ್ಠಲ' ಎಂಬ ಅಂಕಿತದಿಂದ ೮೨ ಪದಗಳನ್ನೂ ಒಂಬತ್ತು ಸುಳಾದಿಗಳನ್ನೂ ರಚಿಸಿದ್ದಾರೆ. ರಾಘವೇಂದ್ರಸ್ವಾಮಿಗಳ ಮೇಲೆ ಅವರು ಮಾಡಿರುವ ಸ್ತೋತ್ರಕೃತಿಗಳು ಇಂದಿಗೂ ಮನೆಮನೆಗಳಲ್ಲಿ ಬಳಕೆಯಲ್ಲಿವೆ. ಇವರ ಕಾಲ ೧೮೨೫ರ ಸುಮಾರು ಎಂದು ಹೇಳುತ್ತಾರೆ. ಇವರ ಶಿಷ್ಯಪರಂಪರೆಯಲ್ಲಿ ಬಂದ ಬಾಗೇಪಲ್ಲಿ ಸುಬ್ಬರಾಯದಾಸರು (ಗುರುರಾಮವಿಟ್ಠಲ) ಸುಮಾರು ಐವತ್ತು ವರ್ಷಗಳ ಕೆಳಗೆ ಪ್ರಸಿದ್ಧರಾಗಿದ್ದರು.

ಸಾಂಪ್ರದಾಯಿಕವಾಗಿ ಗುರುಗಳಿಂದ ಅಂಕಿತವಾಗಿ ಹರಿದಾಸದೀಕ್ಷೆ ದೊರೆತ ಮೇಲೆ ಹರಿದಾಸರೆನ್ನಿಸಿಕೊಳ್ಳುವುದು ಸಾಧಾರಣ ನಿಯಮ. ಆದರೆ ಇದಕ್ಕೆ ಅಪವಾದವಾಗಿ ಅಂತರ್ವಾಣಿಯ ಪ್ರೇರಣೆಯಿಂದ ಸ್ವತಂತ್ರವಾಗಿ ತಾವೇ ಅಂಕಿತವನ್ನು ಪರಿಗ್ರಹಿಸಿ ದೀಕ್ಷೆ ತಳೆದು ಹರಿದಾಸರಾಗಿರುವ ನಿದರ್ಶನಗಳು ಹಲವಾರು ಉಂಟು. ಹೆಳವನಕಟ್ಟೆ ಗಿರಿಯಮ್ಮನೆಂಬಾಕೆ ಯಾವ ಗುರುವಿನಿಂದಲೂ ಅಂಕಿತ ಪಡೆಯದೆ ತಾನೇ ಹರಿದಾಸ್ಯವನ್ನು ಕೈಕೊಂಡು ಹಲವಾರು ಕೃತಿಗಳನ್ನು ರಚಿಸಿ ಅಪರೋಕ್ಷ ಜ್ಞಾನಿಯೆಂದು ದಾಸಕೂಟದಲ್ಲಿ ಪ್ರಖ್ಯಾತಳಾದಳು. ೧೭೫೦ರ ಸುಮಾರಿಗಿದ್ದ ಈಕೆ ಧಾರವಾಡ ಜಿಲ್ಲೆಯ ರಾಣೇಬೆನ್ನೂರಿನವಳು. ಈಕೆಯನ್ನು 'ಹೆತ್ತೋರ ಮನದೈವ ಶ್ರೀ ಮೈಲಾರ'ನಂತೆ. ಈಕೆಯ ಗಂಡನ ಮನೆ ಹರಿಹರ ತಾಲ್ಲೂಕಿನ ಮಲೇಬೆನ್ನೂರೆಂಬ ಹಳ್ಳಿ. ಗೃಹಸುಖ ಅಷ್ಟಾಗಿ ಇದ್ದಂತೆ ತೋರುವುದಿಲ್ಲ. ತನ್ನ ಇಡೀ ಬಾಳನ್ನೆಲ್ಲ ಈಕೆ ನಾಮಸಂಕೀರ್ತನೆ, ಕವಿತೆ, ಪೂಜೆಗಳಲ್ಲೇ ಕಳೆದಳು. 'ಹೆಳವನಕಟ್ಟೆರಂಗ' ಎಂಬ ಅಂಕಿತದಿಂದ ಈಕೆ 'ಸೀತಾಸ್ವಯಂವರ' ಮತ್ತು 'ಚಂದ್ರಹಾಸಚರಿತ್ರೆ' ಎಂಬೆರಡು ಕನ್ನಡ ಖಂಡಕಾವ್ಯಗಳನ್ನೂ ಸಾಂಗತ್ಯದ ಶೈಲಿಯಲ್ಲಿ ರಚಿಸಿದ್ದಾಳೆ. 'ಗಜೇಂದ್ರಮೋಕ್ಷ', 'ಶಂಕರಗಂಡನ ಕಥೆ', 'ಗಿಳಿಪಾರಿಜಾತ' ಮುಂತಾದ ಇತರ ಗ್ರಂಥಗಳನ್ನೂ ರಚಿಸಿದ್ದಾಳೆಂದು ತಿಳಿದು ಬಂದಿದೆ. "ಅರಿಯೆನು ಕವಿತಾ ಚಾತುರ್ಯದ ಮಹಿಮೆಯ, ಗುರುಮುಖದಲ್ಲಿ ಕೇಳಲಿಲ್ಲ, ಹೆಚ್ಚಾಗಿ ಅರಿಯೆನು, ಹೆಣ್ಣು

ಬಾಲೆಯು ನಾನು, ಅಚ್ಚ ಚಾತುರ್ಯದ ಪದನ ನೆಚ್ಚಿ ನಿನ್ನನು ಹೇಳವನಕಟ್ಟೆ ರಂಗಯ್ಯ, ಉಚ್ಚರಿಸಿದೆ ಕ್ಷಮಿಸುವುದು" ಎಂದು ಆಕೆ ನಿವೇದಿಸಿಕೊಂಡಿರುವುದು ಹೃದ್ಯವಾಗಿದೆ.

ಉಡುಪಿಯ ಪೆರಂಪಳ್ಳಿಯವನಾದ ನೆಕ್ಕಾರೆ ಕೃಷ್ಣರಾಯನೆಂಬ ಕವಿ ಈಕೆಯ ಸಮಕಾಲಿಕನಾಗಿದ್ದವನು. ಮಧುರವಾಗಿ, ಮನೋಜ್ಞವಾಗಿ ಬರೆಯಬಲ್ಲ ಈತನಿಗೂ ಸಾಂಪ್ರದಾಯಿಕವಾದ ಅಂಕಿತ ದೊರೆಯಲಿಲ್ಲ. ತಿರುಪತಿಯ ವರಾಹಸ್ವಾಮಿ ಮತ್ತು ವೆಂಕಟೇಶ್ವರರ ಭಕ್ತನಾಗಿದ್ದ ಈತ 'ವರಾಹತಿಮ್ಮಪ್ಪ'ನೆಂಬ ಅಂಕಿತವನ್ನು ಗ್ರಹಿಸಿ ಹಲವಾರು ಕೀರ್ತನೆಗಳನ್ನು ರಚಿಸಿದ್ದಾನೆ. ನಾಲ್ಕು ಸಂಧಿಗಳಲ್ಲಿ ಉಡುಪಿಯ ಕೃಷ್ಣನ ಚರಿತ್ರೆ ಸಾಂಗತ್ಯ ಶೈಲಿಯಲ್ಲಿರುವುದು ಈತನ ಕೃತಿ.

ಕದರಮುಂಡಲಗಿಯ ದಾಸರೆಂದು ಪ್ರಸಿದ್ಧರಾದ ಹೀರೇ ಭೀಮಾಚಾರ್ಯರು ಕೂಡ ಈ ಕಾಲದಲ್ಲೇ ಇದ್ದವರು. ಇವರು ಮುಂಚಿನ ಮೈಸೂರು ಸೀಮೆಯ ಹರಿಹರದವರಾದರೂ ಧಾರವಾಡ ಪ್ರಾಂತ್ಯದ ಕದರಮುಂಡಲಗಿಯಲ್ಲಿ ನೆಲೆಸಿ ಅಲ್ಲಿನ ಹನುಮಂತದೇವರ ಪೂಜೆಯಿಂದ ಪ್ರಶಸ್ತಿಗಳಿಸಿದರು. ಈ ಹನುಮಂತನ ಸ್ಫೂರ್ತಿಯಿಂದಲೇ ಇವರು ಉತ್ತೇಜಿತರಾಗಿ 'ಕದರಮುಂಡಲಗಿ ಹನುಮಯ್ಯ'ನೆಂಬ ಅಂಕಿತದಿಂದ ಹಲವಾರು ಪದಗಳನ್ನು ರಚಿಸಿದರು. "ಬಂದ ಕಾರ್ಯವ ಬಿಟ್ಟು ಮಂದಮತಿತನದಿಂದ, ಬೆಂದ ದುರ್ವಿಷಯದಲಿ ತೊಳಲುತಲಿದ್ದೆ, ತಂದೆ ಕದರಮುಂಡಲಗಿ ಹನುಮಯ್ಯನಾ ಪಾದ, ಹೊಂದಿದಾ ದಿನದಿಂದ ಹೊಸಪರಿಯ ಕಂಡೆ" ಎಂಬುದು ಅವರು ಬರೆದ ಮೊದಲ ಕೃತಿಯ ಕಡೆಯ ಸಾಲುಗಳು.

ಕದರಮುಂಡಲಗಿಯ ಹನುಮಂತನಿಂದಲೇ ಸ್ಫೂರ್ತಿ ಪಡೆದ ಇನ್ನೊಬ್ಬ ಪ್ರಸಿದ್ಧ ದಾಸರೆಂದರೆ ಶೀನಪ್ಪದಾಸರು, ೧೮೬೦ರ ಸುಮಾರಿಗೆ ಜೀವಿಸಿದ್ದವರು. 'ಕದರ ಮುಂಡಲಗಿಯ ಶ್ರೀ ಪಾಂಡುರಂಗ' ಎಂಬ ಅಂಕಿತದಿಂದ ಇವರು ಹಲವಾರು ಕೃತಿಗಳನ್ನು ರಚಿಸಿದ್ದಾರೆ.

೧೮೫೦ರ ಸುಮಾರಿನಲ್ಲಿದ್ದ ಏರಿ ಶೇಷಾಚಾರ್ಯರು ಕೋಲಾರ ಜಿಲ್ಲೆಯ ಚಿಂತಾಮಣಿಯವರು. ಇವರು 'ಏರಿ ವೆಂಕಟೇಶ' ಎಂಬ ಅಂಕಿತದಲ್ಲಿ ರಚಿಸಿರುವ 'ಶ್ರೀನಿವಾಸಕಲ್ಯಾಣ'ವೆಂಬ ಕನ್ನಡದ ಚಂಪೂಗ್ರಂಥ ಮಾಧ್ವರ ಮನೆಗಳಲ್ಲಿ ಇಂದಿಗೂ ವಾಡಿಕೆಯಲ್ಲಿದೆ ; ಹಿರಿಯ ಹೆಂಗಸರು ಹಬ್ಬಹರಿದಿನದಲ್ಲಿ ಇದನ್ನು ಹಾಡಿಕೊಳ್ಳುತ್ತಾರೆ. ಇವರಿಗೂ ಸಾಂಪ್ರದಾಯಿಕವಾದ ಹರಿದಾಸದೀಕ್ಷೆ ಆಗಿರಲಿಲ್ಲ.

ಜೀವಂತರಾದ ಯಾವ ಗುರುಗಳಿಂದಲೂ ಹರಿದಾಸದೀಕ್ಷೆಯಾಗದೆ ಕನಸಿನಲ್ಲಿ ಹಿಂದಿನ ಹರಿದಾಸರೊಬ್ಬರು ಕಾಣಿಸಿಕೊಂಡು ಅಂಕಿತ ಕೊಡುವ ಉಲ್ಲೇಖ ಬಹಳ ಉಂಟು. ವಿಜಯದಾಸರಿಗೇ ಯಾವ ಪ್ರತ್ಯಕ್ಷ ಗುರುವೂ ಇರಲಿಲ್ಲವಷ್ಟೆ ; ಪುರಂದರ ದಾಸರು ಸ್ವಪ್ನದಲ್ಲಿ ಅವರಿಗೆ ಅಂಕಿತವನ್ನಿತ್ತರೆಂದೇ ವಿವರವಿರುವುದು. ಹೀಗೆಯೇ ೧೮೬೦ರ ಸುಮಾರಿನಲ್ಲಿದ್ದ ಚಿನ್ನಪಲ್ಲಿ ಶೇಷದಾಸರಿಗೆ ವಿಜಯದಾಸರು ಸ್ವಪ್ನದಲ್ಲಿ ದರ್ಶನ ಕೊಟ್ಟು 'ಗುರು ವಿಜಯವಿಟ್ಠಲ' ಎಂಬ ಅಂಕಿತವನ್ನಿತ್ತರಂತೆ. ವಿಜಯ

ದಾಸರೇ ಮೊದಲಕಲ್ಲು ಶೇಷಪ್ಪನೆಂಬ ಪ್ರತಿಭಾಶಾಲಿಯಾಗಿದ್ದ ಗೃಹಸ್ಥನಿಗೂ ಸ್ವಪ್ನದಲ್ಲಿ ಕಾಣಿಸಿಕೊಂಡು ಹರಿದಾಸದೀಕ್ಷೆ ಕೊಟ್ಟರಂತೆ. ಇವರು ೧೮೧೦ರ ಸುಮಾರಿಗೆ ಗದ್ವಾಲದಲ್ಲಿ ದರೂರು ಎಂಬಲ್ಲಿ ಹುಟ್ಟಿ ನಂತರ ಮೊದಲುಕಲ್ಲೆಂಬ ಗ್ರಾಮದ ಶಾನುಭೋಗ–ಕುಲಕರ್ಣಿಯಾದರು; ಸ್ವಪ್ನಾಂಕಿತವಾದ ಮೇಲೆ ಲೌಕಿಕ ವ್ಯವಹಾರವನ್ನು ಬಿಟ್ಟು ಹರಿದಾಸರಾಗಿ ಮೂರು ಪದಗಳನ್ನೂ, ೪೩ ಸುಳಾದಿಗಳನ್ನೂ ಹನ್ನೊಂದು ಉಗಾಭೋಗಗಳನ್ನೂ ರಚಿಸಿದರು. ಇವರ ಸುಳಾದಿಗಳು ತತ್ತ್ವ ಪ್ರಯೋಗಗಳಿಂದ ತುಂಬಿ ಗಂಭೀರವಾಗಿವೆ ; ಅವುಗಳಲ್ಲಿ ಹದಿನೆಂಟು ತಾಳಗಳ ಸುಳಾದಿಯೊಂದು ಸ್ವಾರಸ್ಯವಾಗಿದೆ. ಐಹೊಳೆಯ ವೆಂಕಟದಾಸರೆಂಬುವರಿಗೂ (೧೯೦೦ರ ಸುಮಾರಿಗೆ) ಸ್ವಪ್ನದಲ್ಲೇ ಅಂಕಿತವಾಯಿತು.

ಸುರಪುರದ ಆನಂದದಾಸರೆಂಬುವರು ಮೈಸೂರಿನ ಅರಸು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿದ್ದವರು. ರಾಯಚೂರು ಜಿಲ್ಲೆಯ ಸುರಪುರ ಅವರ ಊರು. ಅವರು ಶಾಸ್ತ್ರದಲ್ಲಿ ಎತ್ತಿದ ಕೈ; ಹಾಗೆಯೇ ಮಧುರವಾದ ಶಾರೀರ ಇದ್ದ ಕಾರಣ ಸಂಗೀತ ಕಲೆಯಲ್ಲಿ ಸಿದ್ಧಿ ಪಡೆದರು. ಅವರು ಹಾಡುವುದನ್ನು ಕೇಳಿ ಮೈಸೂರು ಸದಾಶಿವರಾಯರೂ ಮುಗ್ಧರಾದರಂತೆ. ಅವರು ವೀಣೆಯನ್ನೂ ಚೆನ್ನಾಗಿ ನುಡಿಸುತ್ತಿದ್ದರು. ಸರ್ಕಾರದಲ್ಲಿ ದೊಡ್ಡ ಕೆಲಸವೂ ಇದ್ದಿತು. ತಮ್ಮ ೫೩ನೆಯ ವಯಸ್ಸಿನಲ್ಲಿ ಲೌಕಿಕ ಜೀವನದಲ್ಲಿ ಜುಗುಪ್ಸೆ ತಾಳಿ ಹರಿದಾಸರಾಗಿ ಹೊರಟರು. 'ಕಮಲೇಶವಿಟ್ಠಲ' ಎಂಬ ಅಂಕಿತದಿಂದ ಇವರು ಹಲವಾರು ಪದಗಳನ್ನು ರಚಿಸಿದ್ದಾರೆ. ಮುಮ್ಮಡಿ ಕೃಷ್ಣರಾಜ ಒಡೆಯರು ಇವರನ್ನು ಬಹುವಾಗಿ ಸನ್ಮಾನಿಸುತ್ತಿದ್ದರು.

ಹೀಗೆ ವಿಜಯದಾಸರಿಂದ ಬಲಗೊಂಡ ದಾಸಕೂಟದಲ್ಲಿ ಹಲವಾರು ಪರಂಪರೆ ಬಂದುವು ; ಹರಿದಾಸಪ್ರವಾಹದ ಹೊನಲುಗಳಲ್ಲಿ ಉತ್ತಮರಾದ ವ್ಯಕ್ತಿಗಳು ಉತ್ತಮವಾದ ಕೃತಿಗಳನ್ನು ರಚಿಸಿದರು. ಕನ್ನಡ ದೇಶದಲ್ಲಿ ನೂರಾರು ಮಂದಿ ಭಕ್ತರು, ಭಾವುಕರು, ಭಾಗವತರು, ವಾಗ್ಗೇಯಕಾರರು ಹರಿದಾಸಪಂಥದ ಆಸರೆಯಿಂದ ಕಾಣಿಸಿಕೊಂಡರು. ಇವರೆಲ್ಲರ ಎಲ್ಲ ವಿವರಗಳೂ ಉಪಲಬ್ಧವಿಲ್ಲವಾಗಿ ಮೇಲಿನ ಪಟ್ಟಿ ಸಮಗ್ರವಾಗುವುದು ಸಾಧ್ಯವಾಗಿಲ್ಲ. ಲಿಂಗಸೂಗೂರಿನ ವರದೇಂದ್ರ ಸಾಹಿತ್ಯಮಂಡಲದವರು ಸುಮಾರು ಮುನ್ನೂರ ಒಂಬತ್ತು ಹರಿದಾಸರ ಪಟ್ಟಿಯನ್ನು ಸಿದ್ಧಮಾಡಿ ಅದರಲ್ಲಿ ಹಲವರ ವಿವರಗಳನ್ನು ಸಂಗ್ರಹಿಸಿದ್ದಾರೆ.

ಪದಾರಂಭದ ಅಕಾರಾದಿ

'ಪದ'ಗಳು		ಪದಸಂಖ್ಯೆ	ಪುಟಸಂಖ್ಯೆ
ಅಂಗನೆಯರೆಲ್ಲರು ನೆರೆದು ಚಪ್ಪಾಳಿಕ್ಕುತ	—	೧	47
ಅಕ್ಕ ಎತ್ತಣ ಬಿಲ್ಲಹಬ್ಬ ಬಂತೆಮಗೆ	—	೩೦	88
ಅಕ್ಕ ನಂದಗೋಪನ ಅರಮನೆಯೊಳಗೊಬ್ಬ	—	೨೮	85
ಅಮ್ಮಾ ಎನ್ನ ಕೂಡಾಡುವ ಮಕ್ಕಳು...	—	೮೩	150
ಅಮ್ಮಾ ನಿಮ್ಮ ಮನೆಗಳಲ್ಲಿ ನಮ್ಮ...	—	೫೬	117
ಆಡಹೋಗಲಿ ಬೇಡವೋ ರಂಗಯ್ಯ	—	೬೨	124
ಆಡಹೋದಲ್ಲೆ ಮಕ್ಕಳು ಆಡಿಕೊಂಬುವರು...	—	೮೫	152
ಆಡಿದ, ರಂಗನಾಡಿದ ರೂಢಿಯೊಳಗೆ...	—	೬೭	132
ಆಡಿದನೋ ರಂಗ ಅದ್ಭುತದಿಂದಲಿ	—	೮೮	157
ಆವ ಕುಲವು ತಿಳಿಯಲಾಗದು	—	೨೩	77
ಇಕ್ಕೋ ನವನೀತಚೋರ ಸಿಕ್ಕಿದನಮ್ಮ	—	೬	53
ಇದು ಏನು ನೋಡೆ, ಇದು ರಂಗನ ಮುಖ	—	೨೬	82
ಉಣಲೊಲ್ಲೆ ಯಾಕೊ ಕಂದ	—	೬೫	129
ಊರಿಗೆ ಬಂದರೆ ದಾಸಯ್ಯ...	—	೧೦	59
ಎಂಥವನೆ ಗೋಪಿ ನಿನ್ನ ಕಂದ...	—	೪೬	107
ಎಂಥ ಗಾಡಿಕಾರನೆ ಕೃಷ್ಣಯ್ಯ ಇನ್ನೆಂಥ	—	೫೦	111
ಎಂಥಾ ಪುಣ್ಯವೆ ಗೋಪಿ, ಎಂಥಾ ಭಾಗ್ಯವೆ	—	೩೫	95
ಎಲ್ಲಿ ಬೆಣ್ಣೆಯ ಬಚ್ಚಿಡಲಿ ನಾ	—	೬೯	134
ಎಲ್ಲ್ಯಾಡಿ ಬಂದೆ ಗೋವಿಂದ	—	೬೧	123
ಎಷ್ಟು ದುಷ್ಟನೆ ಯಶೋದೆ ನಿನ್ನ ಮಗ	—	೪೫	106
ಏತರ ಚೆಲುವ ರಂಗಯ್ಯ	—	೧೪	65
ಏನ ಪೇಳಲೆ ಗೋಪಿ ನಿನ್ನ ಮಗನ ಜಾಲ	—	೫೪	115
ಏನ ಹೇಳಲೆ ನಾನು ಕೃಷ್ಣನ ಮಹಿಮೆ	—	೩೯	99
ಏನಾಯಿತೋ ನಿನಗೆ ಶ್ರೀಹರಿ ಹರಿ	—	೬೩	126
ಏನು ಬೇಡಲಿ ಹರಿಯ ಜಾಹ್ನವೀ ಜನಕನ	—	೨೪	78
ಏನು ಮಾಡಲೊ ಮಗನೆ ಯಾಕೆ ಬೆಳಗಾಯಿತೊ	—	೬೬	131
ಏನು ಮಾಡುವುದಿಲ್ಲವಮ್ಮ, ನಾನಂತು...	—	೮೨	149
ಓಡಿ ಬಾರೊ ಶ್ರೀ ವೈಕುಂಠಪತಿ	—	೩	49
ಕಂದಾ ಬೇಡವೊ ಮಣ್ಣು ತಿನ್ನಬೇಡವೊ	—	೭೨	138
ಕರೆದು ಮುದ್ದಿಸುವ ಗೋಪಿಯ ಭಾಗ್ಯಕೆ...	—	೩೮	98
ಕುಣಿದಾಡೊ ಕೃಷ್ಣ ಕುಣಿದಾಡೊ	—	೯೨	166
ಕೂಡಿ ಆಡಲೊಲ್ಲರೆ, ಅಮ್ಮಯ್ಯ ಎನ್ನ...	—	೮೪	151
ಕೃಷ್ಣ ಬಾರೊ ಕೃಷ್ಣ ಬಾರೊ	—	೫೯	121

'ಪದ'ಗಳು		ಪದಸಂಖ್ಯೆ	ಪುಟಸಂಖ್ಯೆ
ಕೇಳನೋ ಹರಿ ತಾಳನೋ...	—	೯೫	169
ಕೈಯ ತೋರೋ ಕರುಣೆಗಳರಸನೆ	—	೬೪	127
ಕೊಡಬಹುದೆ ಮಗಳ....ಸಮುದ್ರರಾಯ	—	೧೮	71
ಕೊಳಲನೂದುತ ಬಂದ	—	೬	52
ಗಜುಗವನಾಡುತಲಿರ್ದನು	—	೩೨	91
ಗರುಡಗಮನ ಬಂದನೊ	—	೫೭	119
ಗುಮ್ಮನ ಕರೆಯದಿರೆ ಅಮ್ಮ ನೀನು	—	೮೭	156
ಗುಮ್ಮನೆಲ್ಲಿಹ ತೋರಮ್ಮಾ....	—	೮೬	154
ಗೋಕುಲದಲಿ ನಾನಿರಲಾರೆ ಗೋಪ್ಯಮ್ಮ....	—	೭೯	146
ಗೋಪಗೋಪನೆಂಬೊ ಕೋಕಿಲ, ನಮ್ಮ...	—	೧೨	63
ಗೋಪಿಯ ಭಾಗ್ಯವಿದು, ಶ್ರೀಪತಿ ತಾ...	—	೩೪	94
ಚಿಕ್ಕವನೇ ಇವನು ನಮ್ಮ ಕೈಗೆ ಸಿಕ್ಕದೆ...	—	೫೨	113
ಜಗನ್ಮೋಹನನೆ ಕೃಷ್ಣ, ಜಗವ ಪಾಲಿಪನೆ	—	೧೧	60
ಜೋ ಜೋ ಯಶೋದೆಯ ನಂದ ಮುಕುಂದನೆ	—	೧೦೦	174
ಜೋ ಜೋ ಶ್ರೀಕೃಷ್ಣ ಪರಮಾನಂದ	—	೯೯	173
ಜೋ ಜೋ ಜೋ ಜೋ ಜೋ ಸಾಧುವಂತ	—	೧೦೧	175
ತಂಗಾಳಿ ವಶವಲ್ಲವೆ, ಅಂಗಳದೊಳಗೆ...	—	೧೯	73
ತಾಂಬೂಲವ ಕೊಳ್ಳೋ ತಮನ ಮರ್ದನನೆ	—	೭೫	142
ತಾಳಬೇಕು ತಕ್ಕ ಮೇಳಬೇಕು	—	೯೪	168
ತಾಳು ತಾಳೆಲೋ ರಂಗಯ್ಯ	—	೫೩	114
ತೂಗಿರೆ ರಂಗನ ತೂಗಿರೆ ಕೃಷ್ಣನ....	—	೯೮	172
ತೆಗೆ ನಿನ್ನ ಮುಸುಕವನು...	—	೮೧	148
ದಯಮಾಡೊ ರಂಗ ದಯಮಾಡೊ	—	೧೩	64
ದೂರು ಮಾಡುವರೇನೆ, ರಂಗಯ್ಯನ	—	೫೫	116
ನಂದನಂದನ ಬಾರೊ ಎನಗೆ ನಿನ್ನ	—	೫	51
ನಳಿನಜಾಂಡ ತಲೆಯದೂಗಿ ಮೋಹಿಸುತ್ತಿರಲು	—	೮೯	159
ನಾ ಡೊಂಕಾದರೇನೊ ನಿನ್ನ ನಾಮ ಡೊಂಕೆ...	—	೧೭	70
ನಿನ್ನ ಮಗನ ಬಾಧೆ ಬಹಳವಾಗಿದೆ	—	೪೪	105
ನಿನ್ನ ಮಗನ ಲೂಟಿ ಘನವಮ್ಮ....	—	೪೨	103
ನೆಂಟನು ಸಣ್ಣವನೆಂದು ನಂಬಿದೆ	—	೪೯	110
ನೈವೇದ್ಯವ ಕೊಳ್ಳೊ ನಾರಾಯಣಸ್ವಾಮಿ	—	೭೪	141
ನೋಡುವುದೇ ಕಣ್ಣು ಕೇಳುವುದೇ ಕಿವಿ...	—	೯೩	167
ಪಿಳ್ಳಂಗೋವಿಯ ಚೆಲ್ವ ಕೃಷ್ಣನ	—	೨	48
ಪೋಗದಿರೆಲೊ ರಂಗ ಬಾಗಿಲಿಂದಾಚೆಗೆ	—	೭೭	144
ಪೋಗಬೇಡವೊ ನಿಗಮನುತ, ಮಥುರೆಗೆ	—	೨೯	88
ಬಂದನೇನೆ ರಂಗ ಬಂದನೇನೆ	—	೬೦	122
ಬಣ್ಣಿಸಿ ಗೋಪಿ ಹರಸಿದಳು ..	—	೬೮	133
ಬವ್ವ ಬಂದಿತಲ್ಲ, ರಂಗಯ್ಯ	—	೭೦	135

'ಪದ'ಗಳು		ಪದಸಂಖ್ಯೆ	ಪುಟಸಂಖ್ಯೆ
ಬಾರೆ ಗೋಪಮ್ಮ ನಿಮ್ಮ ಬಾಲಯ್ಯನಳುತಾನೆ	—	೩೭	97
ಬಾಲಕೃಷ್ಣನೆ ಬಾರೊ ಬೇಗ ಬಾರೊ	—	೫೮	120
ಬುದ್ಧಿವಂತನಲ್ಲ ರಂಗನು	—	೪೭	108
ಬೂಚಿ ಬಂದಿದೆ ರಂಗ....	—	೭೧	136
ಮಂದಗಮನೆ ಇವನ್ಯಾರೆ ಪೇಳಮ್ಮ	—	೨೧	75
ಮಕ್ಕಳ ಮಾಣಿಕವೆ ಮನೋಹರ ನಿಧಿಯೆ	—	೮	55
ಮಗನೆಂದಾಡಿಸುವಳು ಜಗದುದರನ್ನ	—	೩೩	92
ಮನೆಯೊಳಗಾಡೊ ಗೋವಿಂದ	—	೭೬	143
ಯಶೋದೆ ನಿನ್ನ ಕಂದಗೆ ಏನು ರೂಪವೆ	—	೩೬	96
ಯಾದವ ನೀ ಬಾ ಯದುಕುಲ ನಂದನ	—	೪	50
ಯಾರ ಮಗನಮ್ಮ ರಂಗಯ್ಯ...	—	೪೦	100
ಯಾರೇ ರಂಗನ ಯಾರೇ ಕೃಷ್ಣನ...	—	೭೮	145
ರಂಗ ಕೊಳಲನೂದಲಾಗಿ ಮಂಗಮಾಯವಾಯ್ತು ಧರೆ...	—	೯೦	161
ರಾಮಕೃಷ್ಣರು ಮನೆಗೆ ಬಂದರು ಬಾಗಿಲ ತೆರೆಯಿರೇ	—	೨೨	76
ಲಾಲಿ ಲಾಲಿ ನಮ್ಮ ಹರಿಯೆ ಲಾಲಿ	—	೯೭	171
ಲಾಲಿಸಿದಳು ಮಗನ, ಯಶೋದೆ ..	—	೯೬	170
ವಾಸಕೆ ಯೋಗ್ಯವಲ್ಲ ಗೋಕುಲವಿನ್ನು....	—	೩೧	89
ವಿದುರನ ಭಾಗ್ಯವಿದು, ಪದುಮಜಾಂಡ...	—	೨೮	83
ವೃಂದಾವನದೊಳಗಾಡುವನ್ಯಾರೇ ...	—	೧೫	67
ಶೋಭಾನ ಶೋಭಾನವೆ	—	೧೦೨	177
ಶ್ರೀ ಕೃಷ್ಣರಾಯನ ತೋರಿಸೆ, ಮಾತನಾಡಿಸೆ	—	೧೬	68
ಸೈಸಲಾರೆನೆ ಗೋಪಿ ನಿನ್ನ ಮಗನ ಲೂಟಿ	—	೪೧	101
ಹಣ್ಣು ಕೊಂಡನು ಬಾಲಕೃಷ್ಣನು	—	೨೦	74
ಹಣ್ಣು ತಾ ಬೆಣ್ಣೆ ತಾ ಗೋಪ್ಯಮ್ಮ	—	೨೫	80
ಹರಿ ಕುಣಿದ ನಮ್ಮ ಹರಿ ಕುಣಿದ	—	೯೧	164
ಹಸಿವೆಯಾಗುತಿದೆ ಅಮ್ಮ ಕೇಳೆ	—	೮೦	147
ಹಿಡಕೋ ಬಿಡಬ್ಯಾಡ, ರಂಗಯ್ಯನ ಪಾದ	—	೯	56
ಹಾಲು ಮಾರಲು ಬಂದೆವಮ್ಮ	—	೫೧	112
ಹೇಳಬಾರದೆ ಬುದ್ಧಿಯ, ನಿನ್ನ ಮಗನ ..	—	೪೮	109
ಹೇಳಿದರೆ ನಮ್ಮ ಮೇಲೆ ಯಾಕಮ್ಮ ಸಿಟ್ಟು	—	೪೩	104
ಹೊರಗ್ಹೋಗಿ ಆಡದಿರ್ದರಿಯೋ	—	೭೩	401